prajavani.net prajavani
ಗುರುವಾರ, ಫೆಬ್ರುವರಿ 12, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 43 | ಪುಟ 18
www.prajavani.net

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಮಿಂಚಿದ ಜಂಪಾ
ಆಸ್ಟ್ರೇಲಿಯಾದ ಸ್ಪಿನ್ನರ್ ಆ್ಯಡಂ ಜಂಪಾ ಅವರು ಟಿ20 ವಿಶ್ವಕಪ್ ಪಂದ್ಯದಲ್ಲಿ ಐರ್ಲೆಂಡ್ ವಿರುದ್ಧ ನಾಲ್ಕು ವಿಕೆಟ್ ಪಡೆದರು. ಆಸ್ಟ್ರೇಲಿಯಾ 67 ರನ್‌ಗಳಿಂದ ಜಯ ಸಾಧಿಸಿತು

ಸೆನ್ಸೆಕ್ಸ್ 84,233 | ನಿಫ್ಟಿ 25,953 | $/₹ 90.78 | ಚಿನ್ನ (Std. 10g) ₹1,63,250 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,77,000 (ಬೆಂಗಳೂರು)

ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧವಿಲ್ಲ

ಉಗ್ರಾಣಗಳಲ್ಲೂ ದಾಸ್ತಾನಿಲ್ಲ • 120–180 ಮಾದರಿ ಔಷಧಗಳಷ್ಟೇ ಲಭ್ಯ

• ನಾಗರಾಜ್ ಬಿ.ಎನ್./ ಬಸವರಾಜ ಹವಾಲ್ದಾರ

ಹುಬ್ಬಳ್ಳಿ/ಬಾಗಲಕೋಟೆ: ರಾಜ್ಯ ಔಷಧ ಉಗ್ರಾಣದಲ್ಲಿ(ವೇರ್ ಹೌಸ್) ಜೀವರಕ್ಷಕ ಔಷಧಗಳ ಕೊರತೆಯು ತೀವ್ರವಾಗಿದೆ. ಸರ್ಕಾರಿ ಆರೋಗ್ಯ ಸಂಸ್ಥೆಗಳಿಗೆ ಬೇಡಿಕೆಗೆ ತಕ್ಕಷ್ಟು ಔಷಧಗಳು ಪೂರೈಕೆ ಆಗುತ್ತಿಲ್ಲ. ಔಷಧಗಳು ಸಿಗದೇ, ರೋಗಿಗಳು ತೊಂದರೆ ಅನುಭವಿಸುತ್ತಿದ್ದಾರೆ.

ಕಲ್ಯಾಣ ಕರ್ನಾಟಕ, ಮಧ್ಯ ಕರ್ನಾಟಕ, ಉತ್ತರ ಕರ್ನಾಟಕ, ಹಳೇ ಮೈಸೂರು ಭಾಗ ಸೇರಿದಂತೆ ಎಲ್ಲ ಜಿಲ್ಲೆಗಳಲ್ಲಿ ಔಷಧಗಳ ಕೊರತೆ ಇದೆ. ಕೆಲ ಜಿಲ್ಲೆಗಳಲ್ಲಿ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ (ಎಬಿಆರ್‌ಕೆ) ಯೋಜನೆಯಡಿ ಸ್ಥಳೀಯವಾಗಿ ಔಷಧ ಖರೀದಿಸಿ ತೊಂದರೆ ನೀಗಿಸುವ ಪ್ರಯತ್ನ ನಡೆದಿದೆ. 800ಕ್ಕೂ ಹೆಚ್ಚು ಮಾದರಿಯ ಔಷಧಗಳ ಸಂಗ್ರಹ ಜಿಲ್ಲಾ ಔಷಧ ಉಗ್ರಾಣಗಳಲ್ಲಿ ಇರಬೇಕು. ಆದರೆ, ಕೆಲ ಜಿಲ್ಲೆಗಳಲ್ಲಿ ಕೇವಲ 120 ರಿಂದ 180 ಮಾದರಿಯ ಔಷಧಗಳ ದಾಸ್ತಾನು ಮಾತ್ರ ಇದೆ. ಹೆಚ್ಚಿನ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಅಗತ್ಯ ಪ್ರಮಾಣದಲ್ಲಿ ಔಷಧಗಳ ದಾಸ್ತಾನು ಇಲ್ಲವಾಗಿದೆ.

ಬಾಗಲಕೋಟೆ, ಹುಬ್ಬಳ್ಳಿ ಭಾಗದ ಕೆಲ ಆಸ್ಪತ್ರೆಗಳಲ್ಲಿ ಸಾಮಾನ್ಯ ಜ್ವರಕ್ಕೆ ನೀಡಲಾಗುವ ಪ್ಯಾರಾಸೆಟಮಲ್ ಮಾತ್ರೆಗಳೂ ಸಿಗುತ್ತಿಲ್ಲ. ಐವಿ ದ್ರಾವಣವಂತೂ ಜಿಲ್ಲಾ ಕೇಂದ್ರದ ಔಷಧ ಉಗ್ರಾಣಗಳಲ್ಲೂ ಖಾಲಿ ಆಗಿದೆ. ಕೆಲ ಆಸ್ಪತ್ರೆಗಳಲ್ಲಿ ತುರ್ತಾಗಿ ನಡೆಸಬೇಕಾದ ಶಸ್ತ್ರಚಿಕಿತ್ಸೆಗಳನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ.

ಐ.ವಿ ದ್ರಾವಣ (ಗ್ಲುಕೋಸ್), ಆ್ಯಂಟಿ ಬಯೋಟಿಕ್ ಇಂಜೆಕ್ಷನ್‌ಗಳು ಅಗತ್ಯಕ್ಕೆ ತಕ್ಕಂತೆ ಪೂರೈಕೆ ಆಗುತ್ತಿಲ್ಲ. ಆಸ್ಪತ್ರೆಗಳಲ್ಲಿ ಲಭ್ಯವಾಗದ ಔಷಧಗಳನ್ನು ತುರ್ತು ಅಗತ್ಯ ಆಧರಿಸಿ ರೋಗಿಗಳ ಸಂಬಂಧಿಕರೇ ಹಣ ತೆತ್ತು ಖರೀದಿಸುವ ಸ್ಥಿತಿ ಉದ್ಭವಿಸಿದೆ.

‘ಬಾಗಲಕೋಟೆ ಜಿಲ್ಲಾ ಆಸ್ಪತ್ರೆ 400 ಹಾಸಿಗೆ ಸಾಮರ್ಥ್ಯದ್ದಾಗಿದೆ. ತಿಂಗಳಿಗೆ 350 ಹೆರಿಗೆ, 400 ರಿಂದ 500 ಶಸ್ತ್ರ-ಚಿಕಿತ್ಸೆಗಳು ಆಗುತ್ತವೆ. ಹೊಲಿಗೆ, ಬ್ಯಾಂಡೇಜ್‌ಗೂ ಔಷಧಗಳ ಕೊರತೆ ಇದೆ’ ಎಂದು ವೈದ್ಯರು ತಿಳಿಸಿದರು.

‘ಆಸ್ಪತ್ರೆಯಿಂದ ಶೇ 20ರಷ್ಟು ಔಷಧ ಖರೀದಿಗೆ ಅವಕಾಶವಿದೆ. ಆದರೆ, ಈ ವ್ಯವಸ್ಥೆಯಿಂದ ಕೊರತೆಯನ್ನು ನೀಗಿಸಲು ಸಾಧ್ಯವಾಗುತ್ತಿಲ್ಲ. ಹೆಚ್ಚಿನ ಔಷಧಗಳಿಗೆ ಪ್ರಸ್ತಾವ ಸಲ್ಲಿಸಲಾಗಿದೆ’ ಎಂದು ಬಾಗಲಕೋಟೆ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಮಹೇಶ ಕೋಣಿ ಹೇಳಿದರು.

ಔಷಧಗಳ ಪೂರೈಕೆ ಆಗುತ್ತಿಲ್ಲ. ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ ಯೋಜನೆ ಅನುದಾನದಡಿ ಕೆಲ ಔಷಧ ಖರೀದಿಸುತ್ತಿದ್ದೇವೆ
ಡಾ. ಮಂಜುನಾಥ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಬಾಗಲಕೋಟೆ

ಅದ್ಯತೆ ಮೇರೆಗೆ ಜಿಲ್ಲೆಯ ಆರೋಗ್ಯ ಸಂಸ್ಥೆಗಳಿಗೆ ಔಷಧಗಳನ್ನು ಪೂರೈಸಲಾಗುತ್ತಿದೆ. ಸ್ಥಳೀಯವಾಗಿ ಆರೋಗ್ಯ ನಿಧಿಯಿಂದ ಔಷಧಿ ಖರೀದಿಸಲು ಸೂಚಿಸಲಾಗಿದೆ
ಡಾ. ಎಂ.ಎಸ್. ಹೊನಕೇರಿ, ಜಿಲ್ಲಾ ಆರೋಗ್ಯ ಅಧಿಕಾರಿ, ಧಾರವಾಡ

ಇನ್ನಷ್ಟು ಸುದ್ದಿಗಳು 6

‘496 ಮಾದರಿ ಔಷಧ ಖರೀದಿ ಪ್ರಕ್ರಿಯೆ ಶುರು’

ಬೆಂಗಳೂರು: ‘ಔಷಧಗಳ ಕೊರತೆ ನಿವಾರಣೆಗೆ ಸಂಬಂಧಿಸಿದಂತೆ 496 ಔಷಧಗಳ ಖರೀದಿ ಪ್ರಕ್ರಿಯೆ ನಡೆದಿದೆ’ ಎಂದು ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ (ಕೆಎಸ್‌ಎಂಎಸ್‌ಸಿಎಲ್) ತಿಳಿಸಿದೆ.

‘ಈಗಾಗಲೇ 99 ಔಷಧಗಳಿಗೆ ಸಂಬಂಧಿಸಿದಂತೆ ಅರ್ಹ ಬಿಡ್‌ದಾರರಿಗೆ ದೃಢೀಕರಣ ಪತ್ರ ನೀಡಲಾಗಿದೆ. ಉಳಿದ 327 ಔಷಧಗಳ ಖರೀದಿಗೆ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ಈ ಟೆಂಡರ್ ಪ್ರಕ್ರಿಯೆಯನ್ನು ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು. ಮಾರ್ಚ್ ತಿಂಗಳಲ್ಲಿ ಪೂರೈಸುವ ಔಷಧಗಳಲ್ಲಿ ಚಿಕಿತ್ಸೆಗೆ ಅಗತ್ಯವಾಗಿರುವ, 25 ಪ್ರಮುಖ ‘ಆ್ಯಂಟಿಬಯೋಟಿಕ್’ಗಳು, ಐವಿ ದ್ರಾವಣಗಳು ಸೇರಿವೆ’ ಎಂದು ಹೇಳಿದೆ.

‘ಖರೀದಿ ಪ್ರಕ್ರಿಯೆ ಪ್ರಗತಿಯಲ್ಲಿರುವ ಅವಧಿಯಲ್ಲಿ, ತುರ್ತು ಅಥವಾ ಅಗತ್ಯ ಔಷಧಗಳು ಕೊರತೆಯಾದಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿನ ರೋಗಿಗಳಿಗೆ ತೊಂದರೆಯಾಗಬಾರದು. ಈ ಉದ್ದೇಶದಿಂದಲೇ ‘ಪ್ರಧಾನಮಂತ್ರಿ ಭಾರತೀಯ ಜನೌಷಧಿ ಯೋಜನೆ’ಯಡಿ ಅಧಿಕೃತ ವಿತರಕರ ಮೂಲಕ ಜೆನೆರಿಕ್ ಔಷಧಗಳನ್ನು ಆರೋಗ್ಯ ಸಂಸ್ಥೆಗಳು ತಾತ್ಕಾಲಿಕವಾಗಿ ಖರೀದಿಸುವ ವ್ಯವಸ್ಥೆ ಕಲ್ಪಿಸಲು, ‘ಫಾರ್ಮಾ ಆ್ಯಂಡ್ ಮೆಡಿಕಲ್ ಬ್ಯೂರೊ ಆಫ್ ಇಂಡಿಯಾ’ಗೆ ಪ್ರಸ್ತಾವ ಸಲ್ಲಿಸಲಾಗಿದೆ. ಈ ಸಂಬಂಧ ₹ 50 ಕೋಟಿ ನಿಧಿ ಮೀಸಲಿಡಲು ತೀರ್ಮಾನಿಸಲಾಗಿದೆ. ಆರೋಗ್ಯ ಸಂಸ್ಥೆಗಳು ಅಗತ್ಯವಿದ್ದಲ್ಲಿ ‘ಗವರ್ನಮೆಂಟ್ ಇ ಮಾರ್ಕೆಟ್‌ಪ್ಲೇಸ್’ ಪೋರ್ಟಲ್ ಮೂಲಕ ನೇರವಾಗಿ ಔಷಧಗಳನ್ನು ಖರೀದಿಸಲು ಅವಕಾಶ ಕಲ್ಪಿಸಲಾಗಿದೆ’ ಎಂದು ಸ್ಪಷ್ಟಪಡಿಸಿದೆ.

‘ಅಗತ್ಯ ಔಷಧಗಳ ಕೊರತೆ ನೀಗಿಸಲು 4ಜಿ ವಿನಾಯಿತಿಯಡಿ ಈಗಾಗಲೇ 49 ಪ್ರಮುಖ ಔಷಧಗಳನ್ನು ಖರೀದಿ ಮಾಡಿ, ಸರ್ಕಾರಿ ಆರೋಗ್ಯ ಸಂಸ್ಥೆಗಳಿಗೆ ಸರಬರಾಜು ಮಾಡಲಾಗಿದೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಖರ್ಗೆ ಭೇಟಿಯಾದ ಡಿಕೆ ಸಹೋದರರು

ನವದೆಹಲಿ: ಕರ್ನಾಟಕ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ನಾಯಕತ್ವ ಜಟಾಪಟಿ ನಡುವೆಯೇ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಬುಧವಾರ ಭೇಟಿ ಮಾಡಿದರು. 5

ಸದನದ ಕಾವೇರಿಸಿದ ‘ಶರಣಾಗತಿ’

ಭಾರತ–ಅಮೆರಿಕ ವ್ಯಾಪಾರ ಒಪ್ಪಂದದ ವಿಷಯ ಲೋಕಸಭೆಯಲ್ಲಿ ಬುಧವಾರ ಭಾರಿ ಜಟಾಪಟಿಗೆ ಕಾರಣವಾಯಿತು. ‘ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕಕ್ಕೆ ಸಂಪೂರ್ಣವಾಗಿ ಶರಣಾಗಿದ್ದಾರೆ’ ಎಂದು ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆರೋಪಿಸಿದರೆ, ‘ಈ ಹಿಂದೆ ವಿಶ್ವ ವ್ಯಾಪಾರ ಸಂಘಟನೆ (ಡಬ್ಲುಟಿಒ) ಮುಂದೆ ಶರಣಾಗಿದ್ದುದು ಕಾಂಗ್ರೆಸ್ ನೇತೃತ್ವದ ಸರ್ಕಾರ. ದೇಶದ ಹಿತ ಕಾಪಾಡಿದ್ದು ಮೋದಿ ಸರ್ಕಾರ’ ಎಂದು ಸಚಿವೆ ನಿರ್ಮಲಾ ಮಾರುತ್ತರ ನೀಡಿದರು

‘ಭಾರತ ಮಾತೆಯ ಮಾರಿದ್ದೀರಿ’

ನವದೆಹಲಿ: ಭಾರತ–ಅಮೆರಿಕ ವ್ಯಾಪಾರ ಒಪ್ಪಂದದ ವಿಷಯದಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಸರ್ಕಾರವನ್ನು ಗುರಿಯಾಗಿಸಿಕೊಂಡು ಟೀಕಾ ಪ್ರಹಾರ ನಡೆಸಿದ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ‘ಈ ಒಪ್ಪಂದದ ಮೂಲಕ ಸರ್ಕಾರವು ಭಾರತ ಮಾತೆಯನ್ನು ಮಾರಾಟ ಮಾಡಿದೆ. ಅಮೆರಿಕಕ್ಕೆ ಮೋದಿ ಸಂಪೂರ್ಣ ಶರಣಾಗಿದ್ದಾರೆ’ ಎಂದು ಆರೋಪಿಸಿದರು.

ಕೇಂದ್ರ ಬಜೆಟ್ ಕುರಿತು ಲೋಕಸಭೆಯಲ್ಲಿ ಬುಧವಾರ ನಡೆದ ಚರ್ಚೆಯಲ್ಲಿ ಪಾಲ್ಗೊಂಡು ಸುಮಾರು 50 ನಿಮಿಷ ಮಾತನಾಡಿದ ಅವರು, ‘ಈ ಒಪ್ಪಂದವು ಭಾರತದ ಇಂಧನ ಮತ್ತು ದತ್ತಾಂಶ ಸುರಕ್ಷತೆಗೆ, ಜವಳಿ ಮತ್ತು ಕೃಷಿ ಕ್ಷೇತ್ರಗಳಿಗೆ ಹಾನಿ ಮಾಡುತ್ತದೆ. ಭಾರತವನ್ನು ಮಾರಲು ನಿಮಗೆ ನಾಚಿಕೆಯಾಗುವುದಿಲ್ಲವೇ’ ಎಂದು ಕಟುವಾಗಿ ಪ್ರಶ್ನಿಸಿದರು.



‘ಸಾಮಾನ್ಯ ಸಂದರ್ಭಗಳಲ್ಲಿ ಪ್ರಧಾನಿಯವರು ದೇಶವನ್ನು ಮಾರುವುದಿಲ್ಲ ಎಂದು ನನಗೆ ತಿಳಿದಿದೆ. ಅವರು ಭಾರತವನ್ನು ಏಕೆ ಮಾರಿದ್ದಾರೆ ಎಂಬುದು ನಿಮಗೆ ತಿಳಿದಿದೆಯೇ? ಅವರ ಮಿತ್ರ ಗೌತಮ್ ಅದಾನಿ ವಿರುದ್ಧ ಅಮೆರಿಕದ ನ್ಯಾಯಾಲಯದಲ್ಲಿ ಪ್ರಕರಣವಿದೆ. ಪ್ರಧಾನಿಯ ಕತ್ತಿನ ಮೇಲೆ ಅವರ (ಅಮೆರಿಕದವರ) ಹಿಡಿತ ಬಿಗಿಯಾಗಿದೆ. ಪ್ರಧಾನಿ ಕಣ್ಣಿನಲ್ಲಿ ಭಯ ಕಾಣಬಹುದು’ ಎಂದು ವ್ಯಂಗ್ಯವಾಡಿದರು. 9

‘ಡಬ್ಲುಟಿಒಗೆ ಶರಣಾದವರು ನೀವು’

ನವದೆಹಲಿ: ‘2013ರಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ವಿಶ್ವ ವ್ಯಾಪಾರ ಸಂಘಟನೆ (ಡಬ್ಲುಟಿಒ) ಮುಂದೆ ಶರಣಾಗಿ ರೈತರು, ಬಡವರು ಹಾಗೂ ದೇಶವನ್ನೇ ಮಾರಾಟ ಮಾಡಿತ್ತು. ಈಗ ನೋಡಿದರೆ, ವ್ಯಾಪಾರ ಒಪ್ಪಂದ ಕುರಿತು ಹೇಗೆ ಮಾತುಕತೆ ನಡೆಸಬೇಕು ಎಂಬ ಬಗ್ಗೆ ಇವರು (ರಾಹುಲ್ ಗಾಂಧಿ) ನಮಗೆ ಉಪದೇಶ ಮಾಡುತ್ತಿದ್ದಾರೆ’ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಲೋಕಸಭೆಯಲ್ಲಿ ವಿಪಕ್ಷ ನಾಯಕ ರಾಹುಲ್ ಗಾಂಧಿ ವಿರುದ್ಧ ಬುಧವಾರ ವಾಗ್ದಾಳಿ ನಡೆಸಿದರು.

ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು, ಒಂದೂವರೆ ಗಂಟೆ ಮಾತನಾಡಿ ಉತ್ತರ ನೀಡಿದ ಅವರು, ಪಶ್ಚಿಮ ಬಂಗಾಳದಲ್ಲಿನ ಟಿಎಂಸಿ ಹಾಗೂ ಕೇರಳದಲ್ಲಿನ ಸಿಪಿಎಂ ನೇತೃತ್ವದ ಸರ್ಕಾರದ ವಿರುದ್ಧವೂ ವಾಗ್ದಾಳಿ ನಡೆಸಿದರು.



‘ಈ ಎರಡೂ ರಾಜ್ಯ ಸರ್ಕಾರಗಳು ದುರಾಡಳಿತ ನಡೆಸುತ್ತಿವೆ. ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಹಿತಾಸಕ್ತಿ ಪರವಾಗಿಯೇ ಯಾವಾಗಲೂ ಮಾತನಾಡುತ್ತಾರೆ’ ಎಂದರು.

‘ಒಂದು ವೇಳೆ ರಾಹುಲ್ ಗಾಂಧಿ ಅವರು ಬಜೆಟ್‌ಅನ್ನು ಓದಿದ್ದರೆ ಡೇಟಾ, ಆಹಾರ ಮತ್ತು ಇಂಧನ ಭದ್ರತೆಗೆ ವ್ಯಾಪಾರ ಒಪ್ಪಂದದಲ್ಲಿ ಅವಕಾಶವೇ ಇಲ್ಲ ಎಂಬಂತಹ ಹೇಳಿಕೆಗಳನ್ನು ನೀಡುತ್ತಿರಲಿಲ್ಲ’ ಎಂದರು. 9

ಎನ್‌ಎಂಡಿಸಿ ಅಕ್ರಮ ಅದಿರು ರವಾನೆ ತನಿಖೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ಅಡಿಯಲ್ಲಿರುವ ಎನ್‌ಎಂಡಿಸಿಯಿಂದ ಅಕ್ರಮ ಅದಿರು ಸಾಗಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿ ವರದಿ ನೀಡುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಅಕ್ರಮವಾಗಿ ಅದಿರು ಸಾಗಣೆ ಮಾಡಿದ ವಿಷಯಕ್ಕೆ ಸಂಬಂಧಿಸಿದಂತೆ ‘ಪ್ರಜಾವಾಣಿ’ ವಿಶೇಷ ವರದಿ ಪ್ರಕಟಿಸಿತ್ತು. 5

ಚಿನಕುರುಳಿ ಪ್ರಕಾಶ್ ಶೆಟ್ಟಿ

ಬಸ್, ಬ್ಯಾಂಕ್‌ಗಳು ಬಂದ್ ಇಲ್ಲ • ಜನರಿಗೆ ಅಡಚಣೆಯಿಲ್ಲ

ಸಾರ್ವತ್ರಿಕ ಮುಷ್ಕರ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಲ್ಕು ಕಾರ್ಮಿಕ ಕಾಯ್ದೆಗಳನ್ನು ವಿರೋಧಿಸಿ, ನರೇಗಾ ಉಳಿಸಲು ಆಗ್ರಹಿಸಿ ಕಾರ್ಮಿಕ ಸಂಘಟನೆಗಳು ಫೆ.12ರಂದು ಸಾರ್ವತ್ರಿಕ ಮುಷ್ಕರ ನಡೆಸಲಿದ್ದು, ಜನಜೀವನ, ಸಾರ್ವಜನಿಕ ಸಂಚಾರ ಯಥಾಸ್ಥಿತಿಯಲ್ಲಿರಲಿವೆ. ಕೈಗಾರಿಕಾ ಸಂಸ್ಥೆಗಳಲ್ಲಿ ಉತ್ಪಾದನೆ ಸ್ಥಗಿತಗೊಳ್ಳಲಿದೆ.

ಬಿಡದಿ, ಕುಂಬಳಗೋಡು, ಜಿಗಣಿ, ಬೊಮ್ಮಸಂದ್ರ, ನರಸೀಪುರ, ಪೀಣ್ಯ, ವೇಮಗಲ್, ದಾಬಸ್‌ಪೇಟೆ, ಎಲೆಕ್ಟ್ರಾನಿಕ್ಸ್ ಸಿಟಿ, ವೈಟ್‌ಫೀಲ್ಡ್ ಸೇರಿದಂತೆ ಎಲ್ಲ ಕೈಗಾರಿಕಾ ವಲಯಗಳಲ್ಲಿ ಕಾರ್ಮಿಕರು ಕೆಲಸ ನಿರ್ವಹಿಸದೇ ಮುಷ್ಕರವನ್ನು ಬೆಂಬಲಿಸಲಿದ್ದಾರೆ. ಆಯಾ ವಲಯ ಗಳಲ್ಲಿ ಪ್ರತಿಭಟನಾ ಸಭೆಗಳೂ ನಡೆಯಲಿವೆ ಎಂದು ಕಾರ್ಮಿಕ ಸಂಘಟನೆಗಳು ಹೇಳಿವೆ.

ಸರ್ಕಾರಿ ಸ್ವಾಮ್ಯದ ಬಿಎಸ್‌ಎನ್‌ಎಲ್ ಮತ್ತು ಎಲ್‌ಐಸಿ ಕಾರ್ಮಿಕರು ಪ್ರತಿಭಟನೆಯಲ್ಲಿ ಭಾಗವಹಿಸಲಿದ್ದಾರೆ. ಸಾರಿಗೆ ನಿಗಮಗಳು, ಬ್ಯಾಂಕ್‌ಗಳು ಸೇರಿದಂತೆ ಉಳಿದ ಸಾರ್ವಜನಿಕ ವಲಯಗಳ ಸಂಸ್ಥೆಗಳು ಎಂದಿನಂತೆ ಕಾರ್ಯ ನಿರ್ವಹಿಸಲಿವೆ ಎಂದು ತಿಳಿಸಿವೆ.

ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (ಜೆಸಿಟಿಯು) ನೇತೃತ್ವದಲ್ಲಿ ವಿವಿಧ ಸಂಘಟನೆಗಳು ಫೆ.12ರಂದು ಬೆಳಿಗ್ಗೆ 11.30ಕ್ಕೆ ಪುರಭವನದಲ್ಲಿ ಪ್ರತಿಭಟನೆ ನಡೆಸಿ ಬಂಧನಕ್ಕೆ ಒಳಗಾಗಲು ನಿರ್ಧರಿಸಲಾಗಿದೆ. ವಿವಿಧ ವಿಭಾಗದ ಕಾರ್ಮಿಕರು ಭಾಗವಹಿಸಲಿದ್ದಾರೆ ಎಂದು ಜೆಸಿಟಿಯು ಸಮನ್ವಯಕಾರ ಕೆ.ವಿ. ಭಟ್ ತಿಳಿಸಿದ್ದಾರೆ. 8

ರೌಡಿ ಶೀಟರ್ ಬಿಕ್ಲು ಶಿವು ಕೊಲೆ ಪ್ರಕರಣ • ಮಹಾರಾಷ್ಟ್ರಕ್ಕೆ ತೆರಳಿದ ಸಿಐಡಿ ತಂಡ

ಬೈರತಿಗೆ ‘ಲುಕ್‌ಔಟ್ ನೋಟಿಸ್’

ಪ್ರಜಾವಾಣಿ ವಾರ್ತೆ

ಬೈರತಿ ಬಸವರಾಜ

ಬೆಂಗಳೂರು: ರೌಡಿ ಶೀಟರ್ ಬಿಕ್ಲು ಶಿವು ಅಲಿಯಾಸ್ ಶಿವಕುಮಾರ್ ಕೊಲೆ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದ ಬೆನ್ನಲ್ಲೇ ಕೆ.ಆರ್.ಪುರ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ ಅವರು ಬಂಧನ ಭೀತಿಯಿಂದ ತಲೆಮರೆಸಿಕೊಂಡಿದ್ದಾರೆ.

ಶಾಸಕರ ಬಂಧನಕ್ಕೆ ಸಿಐಡಿ ವಿಶೇಷ ತಂಡಗಳನ್ನು ರಚಿಸಿದೆ. ಆ ತಂಡಗಳು ಮಹಾರಾಷ್ಟ್ರಕ್ಕೆ ತೆರಳಿ, ಆರೋಪಿಗಾಗಿ ವಿವಿಧೆಡೆ ಹುಡುಕಾಟ ನಡೆಸುತ್ತಿವೆ.

‘ಬೈರತಿ ಅವರು ಮಹಾರಾಷ್ಟ್ರದ ಸ್ಟಾರ್ ಹೋಟೆಲ್‌ವೊಂದರಲ್ಲಿ ವಾಸ್ತವ್ಯ ಹೂಡಿರುವ ಮಾಹಿತಿ ಇದೆ. ವಿಶೇಷ ತಂಡ ಗಳು ಅಲ್ಲಿಗೆ ತೆರಳಿವೆ. ಅವರು ವಿದೇಶಕ್ಕೆ ಪರಾರಿ ಯಾಗದಂತೆ ತಡೆಯಲು ‘ಲುಕ್‌ಔಟ್ ನೋಟಿಸ್’ ಜಾರಿ ಮಾಡಲಾಗಿದೆ’ ಎಂದು ಸಿಐಡಿ ಮೂಲಗಳು ತಿಳಿಸಿವೆ.

ಕಳೆದ ಡಿಸೆಂಬರ್‌ನಲ್ಲೂ ಬೈರತಿ ಅವರು ನಿರೀಕ್ಷಣಾ ಜಾಮೀನು ಕೋರಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಆಗಲೂ ಅರ್ಜಿಯನ್ನು ಹೈಕೋರ್ಟ್ ತಿರಸ್ಕರಿಸಿತ್ತು. ಇದಾದ ಬೆನ್ನಲ್ಲೇ ಶಾಸಕರನ್ನು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಲು ಸಿಐಡಿ ಪೊಲೀಸರು ಸಿದ್ಧತೆ ನಡೆಸಿದ್ದರು. ಆ ಸಂದರ್ಭದಲ್ಲೂ ಶಾಸಕರು ತಲೆಮರೆಸಿಕೊಂಡಿದ್ದರು.

ಮತ್ತೊಮ್ಮೆ ಮೇಲ್ಮನವಿ ಸಲ್ಲಿಸಿದಾಗ ‘ಶಾಸಕರ ವಿರುದ್ಧ ಬಲವಂತದ ಕ್ರಮ ಬೇಡ’ ಎಂದು ಹೈಕೋರ್ಟ್ ಸೂಚಿಸಿ, ಆದೇಶ ಕಾಯ್ದಿರಿಸಿತ್ತು. ‘ಪ್ರಕರಣದಲ್ಲಿ ತನಿಖೆಯ ವಿಧಾನದ ನಿರ್ಧಾರವನ್ನು ತನಿಖಾ ಪ್ರಾಧಿಕಾರದ ವಿವೇಚನೆಗೆ ಬಿಡಲಾಗಿದೆ. ಹೀಗಾಗಿ, ಬೈರತಿ ಅವರಿಗೆ ನಿರೀಕ್ಷಣಾ ಜಾಮೀನು ನೀಡಲಾಗದು’ ಎಂದು ಹೈಕೋರ್ಟ್ ಪುನರುಚ್ಚರಿಸಿದ್ದು, ಶಾಸಕರಿಗೆ ಬಂಧನದ ಭೀತಿ ಎದುರಾಗಿದೆ.

2025ರ ಜುಲೈ 15ರಂದು ಬಿಕ್ಲು ಶಿವು ಅವರನ್ನು ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ್ದರು. ಭಾರತಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಭಾರತಿನಗರ ಠಾಣೆಯ ಪೊಲೀಸರು, ಬಸವರಾಜ ಅವರಿಗೆ ನೋಟಿಸ್ ಜಾರಿ ಮಾಡಿ ವಿಚಾರಣೆ ನಡೆಸಿದ್ದರು. ಬಳಿಕ ಪ್ರಕರಣದ ತನಿಖೆಯನ್ನು ರಾಜ್ಯ ಸರ್ಕಾರವು ಸಿಐಡಿಗೆ ವಹಿಸಿತ್ತು.

ಬಸವರಾಜ ಅವರ ಕುಮ್ಮಕ್ಕಿನಿಂದ ಕೊಲೆ ನಡೆದಿದೆ ಎಂದು ಬಿಕ್ಲು ಶಿವು ಅವರ ತಾಯಿ ವಿಜಯಲಕ್ಷ್ಮಿ ನೀಡಿದ ದೂರು ಆಧರಿಸಿ ಎಫ್‌ಐಆರ್ ದಾಖಲಿಸಲಾಗಿತ್ತು. ಬಸವರಾಜ ಅವರು ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಗುರುವಾರ ವಿಚಾರಣೆಗೆ ಬರಲಿದೆ.

ಕೊಲೆ ಪ್ರಕರಣದ ಸಂಬಂಧ ಬೈರತಿ ಬಸವರಾಜ ಅವರೇ ಬಂದು ಸಿಐಡಿ ಎದುರು ಶರಣಾದರೆ ಒಳ್ಳೆಯದು. ಇಲ್ಲದಿದ್ದರೆ ಪೊಲೀಸರೇ ಅವರನ್ನು ಪತ್ತೆ ಹಚ್ಚಿ ಬಂಧಿಸುತ್ತಾರೆ
ಜಿ.ಪರಮೇಶ್ವರ, ಗೃಹ ಸಚಿವ

ಸೂರ್ಯೋದಯ: 6:44 ಸೂರ್ಯಾಸ್ತ : 6:24 ಚಂದ್ರೋದಯ: ರಾ. 1:36 ಚಂದ್ರಾಸ್ತ: ಮ. 1:05 | ಬುಧವಾರದ ಉಷ್ಣಾಂಶ : ಗರಿಷ್ಠ 29° ಕನಿಷ್ಠ 15°

ಗುರುವಾರದ ಉಷ್ಣಾಂಶ 29° ಗರಿಷ್ಠ | 15° ಕನಿಷ್ಠ | ಶುಕ್ರವಾರ 30° : 16° | ಶನಿವಾರ 31° : 17° | ಭಾನುವಾರ 31° : 17°

ಹವಾಮಾನ ಮುನ್ಸೂಚನೆ: ನಗರದಲ್ಲಿ ಶುಭ್ರ ಆಕಾಶ ಇರಲಿದೆ.

ಸಮ್ಮತಿ ಪತ್ರ ಸಲ್ಲಿಕೆಗೆ ಗಡುವು

ಬಿಬಿಸಿ: ದಾಖಲೆ ನೀಡಿದರೆ ಭೂ ಮಾಲೀಕರಿಗೆ ಪರಿಹಾರ

• ಕೆ.ಎಸ್.ಸುನಿಲ್

ಬೆಂಗಳೂರು: ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಪೆರಿಫೆರಲ್ ರಿಂಗ್ ರಸ್ತೆ- 1, ಬಿಬಿಸಿ) ಯೋಜನೆಗೆ ಸ್ವಾಧೀನಪಡಿಸಿಕೊಳ್ಳುವ ಭೂಮಿಗೆ ನಿಗದಿಪಡಿಸಿರುವ 'ಸಂಧಾನಿತ ಪರಿಹಾರ ದರ'ಕ್ಕೆ ಒಪ್ಪಿಗೆ ಸೂಚಿಸಿ, ಹದಿನೈದು ದಿನದೊಳಗೆ ಅಗತ್ಯ ದಾಖಲೆ ಸಲ್ಲಿಸುವಂತೆ ಭೂ ಮಾಲೀಕರಿಗೆ ಬಿಡಿಎ ಸೂಚನೆ ನೀಡಿದೆ.

ಅಲ್ಲದೇ ಭೂ ಮಾಲೀಕರೊಂದಿಗೆ ಸಮನ್ವಯ ಸಾಧಿಸಲು ಒಂಬತ್ತು ವಿಶೇಷ ಭೂ ಸ್ವಾಧೀನಾಧಿಕಾರಿಗಳನ್ನು ನೇಮಕ ಮಾಡಲಾಗಿದೆ.

ಯೋಜನೆಗೆ 2,418 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ. ಮೊದಲ ಹಂತದಲ್ಲಿ 1,810 ಎಕರೆಗೆ ಅಧಿಸೂಚನೆ ಹೊರಡಿಸಲಾಗಿದ್ದು, 3,586 ರೈತರ ಪೈಕಿ ಈವರೆಗೂ 650ಕ್ಕೂ ಅಧಿಕ ರೈತರು ಸಂಧಾನಿತ ಪರಿಹಾರ ದರಕ್ಕೆ ಒಪ್ಪಿಗೆ ಸೂಚಿಸಿದ್ದಾರೆ.

ಈಗಾಗಲೇ ಭೂಸ್ವಾಧೀನಕ್ಕೆ ಸಂಬಂಧಿಸಿ ಹಲವು ಭೂ ಮಾಲೀಕರಿಗೆ ಅಂತಿಮ ನೋಟಿಸ್‌ಗಳನ್ನು ಬಿಡಿಎ ನೀಡಿದ್ದು, 15 ದಿನದೊಳಗೆ ಸಮ್ಮತಿ ಪತ್ರಗಳನ್ನು ಸಲ್ಲಿಸುವಂತೆ ಸೂಚಿಸಿದೆ. ದಾಖಲೆಗಳನ್ನು ಸಲ್ಲಿಸಿದ ನಂತರ ಹದಿನೈದು ದಿನದೊಳಗೆ ಪರಿಹಾರ ನೀಡಲಾಗುತ್ತದೆ.

ಈ ಯೋಜನೆಯಲ್ಲಿ ಭೂಮಿ ಕಳೆದುಕೊಳ್ಳುವ ರೈತರಿಗೆ ಐದು ರೀತಿಯಲ್ಲಿ ಪರಿಹಾರ ನೀಡಲು ಸರ್ಕಾರ ನಿರ್ಧರಿಸಿದೆ. ಈ ಆಯ್ಕೆಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಂಡು ಸಂಬಂಧಪಟ್ಟ ವಿಶೇಷ ಭೂ ಸ್ವಾಧೀನಾಧಿಕಾರಿ ಕಚೇರಿಗೆ ಖುದ್ದು ಅಥವಾ ರಿಜಿಸ್ಟರ್ ಪೋಸ್ಟ್ ಮೂಲಕ ಸೂಕ್ತ ದಾಖಲೆಗಳೊಂದಿಗೆ ಪರಿಹಾರಕ್ಕೆ ಅರ್ಜಿ ಸಲ್ಲಿಸಬಹುದು.

ಬಿಡಿಎ ನಿಗದಿ ನಿಗದಿಪಡಿಸಿರುವ ಭೂಮಿ ದರವು ಕಡಿಮೆಯಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿರುವ ಭೂ ಮಾಲೀಕರು, ಹೆಚ್ಚಿನ ಬೆಲೆ ನೀಡುವಂತೆ ಬೇಡಿಕೆ ಇಟ್ಟಿದ್ದಾರೆ. ಹಾಗಾಗಿ ಸಮ್ಮತಿ ಪತ್ರ ಸಲ್ಲಿಸುವವರ ಸಂಖ್ಯೆ ತೀರಾ ಕಡಿಮೆ ಆಗಿದೆ.

'ಯೋಜನೆಗೆ ಸಂಬಂಧಿಸಿದಂತೆ ದಾಖಲೆ ಸಲ್ಲಿಸಿದ ಭೂಮಿ ಮಾಲೀಕರಿಗೆ ಪರಿಹಾರದ ಚೆಕ್, ಪ್ರಮಾಣಪತ್ರ, ಟಿಡಿಆರ್ ನೀಡಲಾಗಿದೆ. ಕೆಲವರು ಶೇಕಡ 35ರಷ್ಟು ವಾಣಿಜ್ಯ ಭೂಮಿಯನ್ನು ಪರಿಹಾರವಾಗಿ ಪಡೆದರೆ, ಮತ್ತೆ ಕೆಲವರು ಟಿಡಿಆರ್, ಚೆಕ್ ಮೂಲಕ ಹಣ ಪಡೆದಿದ್ದಾರೆ. ಕಂದಾಯ ಭೂಮಿ ಇದ್ದ ಕಡೆ ಮಾರುಕಟ್ಟೆ ಮೌಲ್ಯದ ಮೂರು ಪಟ್ಟು ಹಣ ನೀಡಲಾಗಿದೆ. ಜಿಬಿಎ ವ್ಯಾಪ್ತಿಯಲ್ಲಿ ಎರಡು ಪಟ್ಟು ನೀಡಲಾಗಿದೆ' ಎಂದು ಬಿಡಿಎ ಅಧಿಕಾರಿಗಳು ತಿಳಿಸಿದರು.

'ಸ್ವಾಧೀನಪಡಿಸಿಕೊಂಡ ಜಮೀನು ಕೃಷಿ ಭೂಮಿಯಾಗಿದ್ದರೂ ಟಿಡಿಆರ್ (ಅಭಿವೃದ್ಧಿ ಹಕ್ಕುಗಳ ವರ್ಗಾವಣೆ) ಅನ್ನು ನಗರ ಭೂ ಪರಿವರ್ತಿತ ಮೌಲ್ಯದ ಆಧಾರದ ಮೇಲೆ (ಪ್ರತಿ ಚದರ ಅಡಿ ಲೆಕ್ಕಾಚಾರದಂತೆ) ನೀಡಲು ತೀರ್ಮಾನಿಸಲಾಗಿದೆ. ಸ್ವಾಧೀನಪಡಿಸಿಕೊಂಡ ಜಮೀನಿಗೆ ನಿವೇಶನಗಳನ್ನು ಆಯ್ಕೆ ಮಾಡಿಕೊಳ್ಳುವವರಿಗೆ ವಸತಿ ನಿವೇಶನದ ವಿಸ್ತೀರ್ಣವು ಕೇವಲ 60:40 ಅನುಪಾತಕ್ಕೆ ಸೀಮಿತವಾಗಿರುವುದಿಲ್ಲ. ಭೂಮಿಯ ಮಾರ್ಗಸೂಚಿ ದರ ಆಧರಿಸಿ ಪರಿಹಾರ ನೀಡಲು ಉದ್ದೇಶಿಸಲಾಗಿದೆ. ಎಲ್ಲಿ ಮಾರ್ಗಸೂಚಿ ದರ ಹೆಚ್ಚಿದೆಯೋ, ಅಲ್ಲಿ ಭೂ ಮಾಲೀಕರು ಶೇಕಡ 40ಕ್ಕಿಂತ ಹೆಚ್ಚಿನ ವಿಸ್ತೀರ್ಣದ ನಿವೇಶನಗಳನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ' ಎಂದು ಮಾಹಿತಿ ನೀಡಿದರು.

'ಬಿಬಿಸಿ ಯೋಜನೆಗಾಗಿ ಸ್ವಾಧೀನಪಡಿಸಿಕೊಳ್ಳುತ್ತಿರುವ ಭೂಮಿಗೆ ನಿಗದಿಪಡಿಸಿರುವ ದರ ಕಡಿಮೆ ಎಂಬುದು ಭೂ ಮಾಲೀಕರ ವಾದ. ಆದರೆ, ರೈತರ ಭೂಮಿಗೆ ಉತ್ತಮ ಬೆಲೆಯನ್ನು ನೀಡಲಾಗುತ್ತಿದೆ. ನಿತ್ಯವೂ ದಿನಕ್ಕೆ 20ರಿಂದ 25 ರೈತರು ಪರಿಹಾರ ಕೋರಿ ಹೆಸರು ನೋಂದಾಯಿಸುತ್ತಿದ್ದು, ಅಗತ್ಯ ದಾಖಲೆ ಸಲ್ಲಿಸಿದ ಭೂ ಮಾಲೀಕರಿಗೆ ಹದಿನೈದೊಳಗೆ ಪರಿಹಾರ ನೀಡಲಾಗುತ್ತದೆ' ಎಂದು ಬಿಡಿಎ ಅಧಿಕಾರಿಗಳು ಹೇಳಿದರು.

'ಬಿಡಿಎ ಅಧಿಕಾರಿಗಳು ಹಳ್ಳಿಗಳಿಗೆ ಪೊಲೀಸರನ್ನು ಕರೆದುಕೊಂಡು ಬಂದು, ಕಂದಾಯ ಇಲಾಖೆ ಕಚೇರಿಗಳಿಗೆ ರೈತರನ್ನು ಕರೆಸಿ, ರೈತರಿಂದ ಸಮ್ಮತಿ ಪತ್ರಕ್ಕೆ ಸಹಿ ಹಾಕಿಸಿಕೊಳ್ಳುತ್ತಿದ್ದಾರೆ. ಭಯದ ವಾತಾವರಣ ನಿರ್ಮಿಸಿದ್ದಾರೆ. ಮುಖ್ಯಮಂತ್ರಿ ಅವರು ಮಧ್ಯಪ್ರವೇಶಿಸಿ, ರೈತರೊಂದಿಗೆ ಚರ್ಚಿಸಿ ಭೂಮಿಗೆ ನ್ಯಾಯಯುತ ಪರಿಹಾರ ಘೋಷಿಸಬೇಕು' ಎಂದು ರೈತ ಮುಖಂಡ ರಘು ಆಗ್ರಹಿಸಿದ್ದಾರೆ.

'ತೇವಣಿ ಇಟ್ಟು ಯೋಜನೆ ಮುಂದುವರಿಕೆ'

'ಬೆಂಗಳೂರು ಬ್ಯುಸಿನೆಸ್ ಕಾರಿಡಾರ್' ಯೋಜನೆಯನ್ನು ಎರಡು ವರ್ಷಗಳಲ್ಲಿ ಪೂರ್ಣಗೊಳಿಸುವ ಉದ್ದೇಶ ಇದೆ. ಒಂದು ವೇಳೆ ಯಾರಾದರೂ ಭೂಮಿ ನೀಡಲು ನಿರಾಕರಿಸಿದರೆ, ಸಹಜ ಸ್ವಾಧೀನ ಪ್ರಕ್ರಿಯೆ ಪರಿಹಾರದ ಹಣವನ್ನು ನ್ಯಾಯಾಲಯದಲ್ಲಿ ಠೇವಣಿ ಇಟ್ಟು ಯೋಜನೆ ಮುಂದುವರಿಸಲಾಗುವುದು. ಟಿಡಿಆರ್ ವಿನಿಮಯ ಪ್ರಾರಂಭಿಸುವಂತೆ ಸರ್ಕಾರ ಸೂಚಿಸಿದೆ. ಭೂಮಿ ಕಳೆದುಕೊಳ್ಳುವವರು ನೋಂದಣಿ ಮಾಡಿಕೊಂಡು, ಈ ಟಿಡಿಆರ್ ವಿನಿಮಯ ಮಾಡಿಕೊಳ್ಳಬಹುದಾಗಿದೆ' ಎಂದು ಬಿಬಿಸಿ ವಿಶೇಷ ಉದ್ದೇಶದ ಘಟಕ (ಎಸ್‌ಪಿವಿ) ಅಧ್ಯಕ್ಷ ಎಲ್.ಕೆ.ಅತೀಕ್ ತಿಳಿಸಿದರು.

ಗ್ರಾಮಸಭೆಯಲ್ಲಿ ಮಕ್ಕಳಿಂದ ಬೇಡಿಕೆಗಳ ಮಹಾಪೂರ

ಯಲಹಂಕ: ಶಾಲಾ ಕಾಂಪೌಂಡ್ ಸ್ವಚ್ಛತೆ, ಎಲ್‌ಕೆಜಿ ಕೊಠಡಿ ದುರಸ್ತಿ, ಅತಿಥಿ ಶಿಕ್ಷಕರು ಬೇಕು, ಸರ್ಕಾರಿ ಪ್ರೌಢಶಾಲೆಯ ಆವರಣದಲ್ಲಿ ಒಳಾಂಗಣ ಕ್ರೀಡೆಗಳಿಗೆ ವ್ಯವಸ್ಥೆ ಕಲ್ಪಿಸಬೇಕು, ಶೈಕ್ಷಣಿಕ ಪ್ರವಾಸಕ್ಕೆ ಕಳುಹಿಸಬೇಕು, ಶಾಲೆಯ ಮುಂಭಾಗದ ಮುಖ್ಯ ರಸ್ತೆಯ ಪಾದಚಾರಿ ಮಾರ್ಗವನ್ನು ಸರಿಪಡಿಸುವುದೂ ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸಬೇಕು ಎಂದು ಮಕ್ಕಳು ಮನವಿ ಮಾಡಿದರು.

ರಾಜಾನುಕುಂಟೆ ಗ್ರಾಮ ಪಂಚಾಯಿತಿ ವತಿಯಿಂದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಆಯೋಜಿಸಿದ್ದ 2025-26ನೇ ಸಾಲಿನ ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ ಅಭಿಯಾನ ಹಾಗೂ ಮಕ್ಕಳ ವಿಶೇಷ ಗ್ರಾಮಸಭೆಯಲ್ಲಿ ಮಕ್ಕಳಿಂದ ಬೇಡಿಕೆಗಳ ಮಹಾಪೂರವೇ ಹರಿದುಬಂದಿತು.

ಮಕ್ಕಳ ಬೇಡಿಕೆಗಳನ್ನು ಆಲಿಸಿ ಪ್ರತಿಕ್ರಿಯಿಸಿದ ಪಿಡಿಒ ನಾಗರಾಜ್, 'ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳ ಅನುಕೂಲಕ್ಕಾಗಿ ಸ್ಮಾರ್ಟ್ ಕ್ಲಾಸ್‌ಗಳಿಗೆ ಪ್ರೊಜೆಕ್ಟರ್, ಟ್ರ್ಯಾಕ್ ಸೂಟ್, ಕ್ರೀಡಾ ಸಾಮಗ್ರಿ ಹಾಗೂ ಸಮವಸ್ತ್ರ ವಿತರಿಸಲಾಗಿದೆ. ಪ್ರತಿಭಾ ಕಾರಂಜಿ, ಕಲಿಕಾ ಹಬ್ಬ ಹಾಗೂ ಕ್ರೀಡಾ ಕೂಟಗಳಲ್ಲಿ ಪಾಲ್ಗೊಂಡ ಮಕ್ಕಳಿಗೆ ಬಹುಮಾನ ವಿತರಿಸಲಾಗಿದೆ. ಅಲ್ಲದೆ ಒಳಾಂಗಣ ಕ್ರೀಡಾಂಗಣದ ವ್ಯವಸ್ಥೆ ಕಲ್ಪಿಸಿ, ತೆರೆದ ಜಿಮ್ ಸೇರಿ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಲಾಗಿದೆ' ಎಂದು ತಿಳಿಸಿದರು.

'ಉಪಶಮನ ಆರೈಕೆಗೆ ಬೇಡಿಕೆ'

ಬೆಂಗಳೂರು: 'ರೋಗಿಗಳ ನೋವು ನಿರ್ವಹಣೆಗೆ ಸಹಕಾರಿಯಾದ ಉಪಶಮನ ಆರೈಕೆಗೆ ಹೆಚ್ಚಿನ ಬೇಡಿಕೆಯಿದ್ದು, ಈ ಆರೈಕೆ ಬಗ್ಗೆ ಜಾಗೃತಿ ಮೂಡಿಸಬೇಕಿದೆ' ಎಂದು ಬ್ರಿಟಿಷ್ ಕೊಲಂಬಿಯಾ ವಿಶ್ವವಿದ್ಯಾಲಯದ ಔಷಧ ಮತ್ತು ವೈದ್ಯಕೀಯ ಚಿಕಿತ್ಸಾ ವಿಭಾಗದ ಪ್ರಾಧ್ಯಾಪಕಿ ಕ್ಯಾಮರಾ ವಾನ್ ಬ್ರೀಮನ್ ಅಭಿಪ್ರಾಯಪಟ್ಟರು.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯು ನಗರದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಕ್ಯಾನ್ಸರ್ ಹಾಗೂ ಮಕ್ಕಳ ಉಪಶಮನ ಆರೈಕೆ ಕುರಿತ ಕಾರ್ಯಾಗಾರದಲ್ಲಿ ಭಾಗವಹಿಸಿ, ಮಾತನಾಡಿದರು.

'ಕಲಾವಿದರ ನೆರವಿಗೆ ಸರ್ಕಾರ ಮುಂದಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಕಷ್ಟದಲ್ಲಿರುವ ಕಲಾವಿದರ ಜೀವನ ರಕ್ಷಣೆಗೆ ಸರ್ಕಾರ ಮುಂದಾಗಬೇಕು ಎಂದು ಪತ್ರಕರ್ತ ಜಿ.ಎನ್.ಮೋಹನ್ ಹೇಳಿದರು.

ತೊ.ನಂಜುಂಡಸ್ವಾಮಿ ಗೆಳೆಯರ ಬಳಗ ಹಮ್ಮಿಕೊಂಡಿದ್ದ ತೊ.ನಂಜುಂಡಸ್ವಾಮಿ ನೆನಪಿನ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ನಂಜುಂಡಸ್ವಾಮಿ ಅವರ ಹೆಸರಿನಲ್ಲಿ ಎಲ್ಲ ಕಲಾವಿದರಿಗೆ ಆಸರೆಯಾಗುವ ರೀತಿಯಲ್ಲಿ ಕಾರ್ಯಕ್ರಮ ರೂಪಿಸಿರುವುದು ಉತ್ತಮ ಕಾರ್ಯ. ಮುಂದಿನ ದಿನಗಳಲ್ಲಿಯೂ ಮುಂದುವರಿಯಬೇಕು ಎಂದು ಆಶಿಸಿದರು.

'ತೊ.ನಂಜುಂಡಸ್ವಾಮಿಯವರನ್ನು ನೆನಪಿಸಿಕೊಳ್ಳುವುದು ಎಂದರೆ ಕನ್ನಡ ರಂಗಭೂಮಿ ಮತ್ತು ಸಿಜಿಕೆ ಅವರನ್ನು ನೆನಪಿಸಿಕೊಂಡಂತೆ. ಜೊತೆಗೆ ಇವತ್ತಿನ ರಂಗಭೂಮಿಯ ಪರಿಸ್ಥಿತಿಯನ್ನು ಅವಲೋಕನ ಮಾಡುವುದು ಆಗಿರುತ್ತದೆ. ಎಲ್ಲ ಕಲಾವಿದರನ್ನು ನುರಿತ ವೈದ್ಯರ ಹಾಗೆ ಒಂದು ನೋಟದಲ್ಲೇ ಅವರ ಆರೋಗ್ಯದ ಪರಿಸ್ಥಿತಿಯನ್ನು ತಿಳಿದುಕೊಂಡು ಚಿಕಿತ್ಸೆ ಮಾಡಿಸುತ್ತಿದ್ದ ನಂಜುಂಡಸ್ವಾಮಿಯಂಥವರು ಇಲ್ಲದೇ ಇದ್ದರೆ ಕನ್ನಡ ರಂಗಭೂಮಿಯ ಆರೋಗ್ಯ ಬಡವಾಗುತ್ತದೆ ಎಂದರು.

ಕಿರುತೆರೆ ನಿರ್ದೇಶಕ ಟಿ.ಎನ್. ಸೀತಾರಾಂ ಮಾತನಾಡಿ, 'ತೊಟ್ಟುವಾಡಿ ನಂಜುಂಡಸ್ವಾಮಿ ಅವರು ಹಿಂದೆ ಗೌರಿಬಿದನೂರಿನಲ್ಲಿ ಚುನಾವಣೆಗೆ ನಿಂತಿದ್ದರೆ ಶಾಸಕರಾಗುತ್ತಿದ್ದರು. ಅವರಲ್ಲಿ ಸೇವಾ ಮನೋಭಾವವಿತ್ತು. ಕಲಾವಿದರು ಆರೋಗ್ಯದಿಂದ ಇದ್ದರೆ, ರಂಗಭೂಮಿ ಹಾಗೂ ಇಡೀ ಸಮಾಜ ಆರೋಗ್ಯಪೂರ್ಣವಾಗಿರುತ್ತದೆ ಎಂಬ ನಂಬಿಕೆ ಅವರಿಗೆ ಇತ್ತು' ಎಂದು ತಿಳಿಸಿದರು.

ಕಲಾ ನಿರ್ದೇಶಕ ಬಿ.ವಿಠ್ಠಲ ರಾವ್ ಅವರಿಗೆ ತೊ.ನಂಜುಂಡಸ್ವಾಮಿ ನೆನಪಿನ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮುಖ್ಯಮಂತ್ರಿ ಚಂದ್ರು, ಕರ್ನಾಟಕ ನಾಟಕ ಅಕಾಡೆಮಿಯ ಮಾಜಿ ಅಧ್ಯಕ್ಷ ಶ್ರೀನಿವಾಸ ಜಿ.ಕಪ್ಪಣ್ಣ, ರಂಗಕರ್ಮಿ ಸಿ.ಕೆ. ಗುಂಡಣ್ಣ, ಪ್ರಭು ಗುರಪ್ಪನವರ ಉಪಸ್ಥಿತರಿದ್ದರು.

ಕಾಯಕಯೋಗಿ ಸಹಕಾರ ಸಂಘಕ್ಕೆ ಆಯ್ಕೆ

ಪೀಣ್ಯ ದಾಸರಹಳ್ಳಿ: ಭುವನೇಶ್ವರಿ ನಗರದ ಕಾಯಕಯೋಗಿ ಸಹಕಾರ ಸಂಘಕ್ಕೆ ಅಧ್ಯಕ್ಷರಾಗಿ ಬಸವರಾಜಣ್ಣ ಮತ್ತು ಉಪಾಧ್ಯಕ್ಷರಾಗಿ ಬಿ.ಟಿ. ಸುರೇಶ್ ಅವರು ಅವಿರೋಧವಾಗಿ ಆಯ್ಕೆಯಾದರು.

ಬಸವರಾಜಣ್ಣ

ಬಸವರಾಜಣ್ಣ ಮಾತನಾಡಿ, 'ನಮ್ಮ ಸಹಕಾರಿ ಬಂಧುಗಳು ನನ್ನನ್ನು ಮೂರನೇ ಬಾರಿ ಅವಿರೋಧವಾಗಿ ಆಯ್ಕೆ ಮಾಡಿದ್ದಾರೆ. ಸಹಕಾರಿ ವತಿಯಿಂದ ಇನ್ನೂ ಹೆಚ್ಚಿನ ಸೇವೆ ಮಾಡಲು ಅವಕಾಶ ಕಲ್ಪಿಸಿದ್ದಾರೆ' ಎಂದರು.

ನಿರ್ದೇಶಕರಾಗಿ ಮೇಲಪ್ಪ ಟಿ.ಎಸ್, ಮೋಹನ್ ಬಿ, ಮನೋಹರ್ ಜಿ, ಸುಬ್ಬಯ್ಯ ಸಿ, ಜಗದೀಶ್ ಎಚ್, ಶಿವಶಂಕರ್ ಎ.ಆರ್, ಕುಮಾರಸ್ವಾಮಿ, ರಾಧಿಕಾ ಜಿ, ಲತಾ ಸಾವುಕಾರ್ ಅವರೂ ಅವಿರೋಧವಾಗಿ ಆಯ್ಕೆಯಾದರು.

ಸಾಂಸ್ಕೃತಿಕ ಮುನ್ನೋಟ

'ಸುರ್ ಸಂಧ್ಯಾ' ಸಂಗೀತ

ಕವಿತಾ ಕೃಷ್ಣಮೂರ್ತಿ

ಬೆಂಗಳೂರು: ಕ್ಯಾನ್ಸರ್‌ಪೀಡಿತ ಬಡ ರೋಗಿಗಳ ಚಿಕಿತ್ಸೆಗೆ ನೆರವಾಗಲು ಎಚ್‌ಸಿಜಿ ಫೌಂಡೇಷನ್ ಸಹಯೋಗದಲ್ಲಿ ಸಂಧ್ಯಾ ಎಸ್. ಕುಮಾರ್ ಅವರು ಇದೇ 14ರಂದು ಸಂಜೆ 6 ಗಂಟೆಯಿಂದ ಕೋಣನಕುಂಟೆಯ ಪ್ರೆಸ್ಟೀಜ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್‌ನಲ್ಲಿ 'ಸುರ್ ಸಂಧ್ಯಾ' ಸಂಗೀತ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.

ಬಾಲಿವುಡ್ ಗಾಯಕಿ ಕವಿತಾ ಕೃಷ್ಣಮೂರ್ತಿ ಪಾಲ್ಗೊಳ್ಳಲಿದ್ದಾರೆ. ಜನಪ್ರಿಯ ಹಳೆಯ ಚಿತ್ರಗೀತೆಗಳನ್ನು ಅವರು ಹಾಡಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಅವರು ತಮ್ಮ ಸಂಗೀತ ಪಯಣವನ್ನೂ ಸ್ಮರಿಸಿಕೊಳ್ಳಲಿದ್ದು, ಅವರೊಂದಿಗೆ ಧ್ವನಿ ಕಲಾವಿದ ಹರೀಶ್ ಭಿಮಾನಿ ಸಂವಾದ ನಡೆಸಲಿದ್ದಾರೆ. ಮೂರು ಗಂಟೆಗೂ ಹೆಚ್ಚು ನಡೆಯುವ ಈ ಕಾರ್ಯಕ್ರಮದಲ್ಲಿ ಗಾಯಕರಾದ ನಾಗಚಂದ್ರಿಕಾ ಭಟ್, ಸಮನ್ವಿತಾ ಶರ್ಮಾ, ಶ್ರುತಿ ಭಿಡೆ, ಆರೋಹ್ ಶಂಕರ್ ಹಾಗೂ ಸುರೋಜಿತ್ ಗುಹಾ ಅವರು ಭಾಗವಹಿಸಲಿದ್ದು, ವಿವಿಧ ಚಿತ್ರಗೀತೆಗಳನ್ನು ಹಾಡುವ ಮೂಲಕ ರಂಜಿಸಲಿದ್ದಾರೆ.

ಈ ಕಾರ್ಯಕ್ರಮದಿಂದ ಸಂಗ್ರಹವಾದ ಹಣವನ್ನು ಎಚ್‌ಸಿಜಿ ಫೌಂಡೇಷನ್‌ಗೆ ಒದಗಿಸಿ, ಕ್ಯಾನ್ಸರ್‌ಪೀಡಿತ ಬಡ ರೋಗಿಗಳಿಗೆ ರಿಯಾಯಿತಿ ದರದಲ್ಲಿ ಅಥವಾ ಉಚಿತವಾಗಿ ಚಿಕಿತ್ಸೆ ಒದಗಿಸಲು ಬಳಸಲಾಗುತ್ತದೆ. ಕಾರ್ಯಕ್ರಮದ ಟಿಕೆಟ್‌ಗಳು 'ಬುಕ್ ಮೈ ಶೋ'ದಲ್ಲಿ ಲಭ್ಯ.

'ತಾರ' ನಾಟಕ ಪ್ರದರ್ಶನ

ಬೆಂಗಳೂರು: ಅಭಿನಯ ತರಂಗ ತಂಡವು ಇದೇ 13ರಂದು ಸಂಜೆ 7.30ಕ್ಕೆ ರಂಗಶಂಕರದಲ್ಲಿ 'ತಾರ' ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಮಹೇಶ್ ದತ್ತಾನಿ ಅವರ ಈ ನಾಟಕವನ್ನು ರಾಘವೇಂದ್ರ ಜಿ. ಅವರು ಕನ್ನಡಕ್ಕೆ ಅನುವಾದಿಸಿ, ನಿರ್ದೇಶಿಸಿದ್ದಾರೆ. ಈ ನಾಟಕದ ಟಿಕೆಟ್‌ಗಳು 'ಬುಕ್ ಮೈ ಶೋ'ದಲ್ಲಿ ಲಭ್ಯ.

ಸ್ವರ ಉತ್ಸವ

ಬೆಂಗಳೂರು: ಸಪ್ತಕ ಬೆಂಗಳೂರು ಹಾಗೂ ಪುಣೆಯ ಮಿತ್ರಾ ಫೌಂಡೇಷನ್ ಜಂಟಿಯಾಗಿ ಇದೇ 15ರಂದು ಸಂಜೆ 5 ಗಂಟೆಗೆ ಭಾರತೀಯ ವಿದ್ಯಾಭವನದ ಖಿಂಚ ಸಭಾಂಗಣದಲ್ಲಿ 'ಸ್ವರ ಉತ್ಸವ' ಹಮ್ಮಿಕೊಂಡಿದೆ.

ಪುಣೆಯ ಸಂತೂರ್ ವಾದಕ ಶಶಾಂಕ ಗೋಖಲೆ ಅವರಿಂದ ಸಂತೂರ್ ವಾದನ ನಡೆಯಲಿದೆ. ಸಂಜೀವ್ ಅಭ್ಯಂಕರ್ ಅವರಿಂದ ಗಾಯನ ನಡೆಯಲಿದ್ದು, ತಬಲಾದಲ್ಲಿ ಅಜಿಂಕ್ಯಾ ಜೋಶಿ, ಹಾರ್ಮೋನಿಯಂನಲ್ಲಿ ವ್ಯಾಸಮೂರ್ತಿ ಕಟ್ಟಿ ಸಾಥ್ ನೀಡಲಿದ್ದಾರೆ. ಪ್ರವೇಶ ಉಚಿತ ಇರಲಿದೆ.

ಶಿವರಾತ್ರಿ ಸಂಗೀತ–ನೃತ್ಯ ಉತ್ಸವ

ಐಶ್ವರ್ಯಾ ನಿತ್ಯಾನಂದ

ಬೆಂಗಳೂರು: ಶೃಂಗೇರಿ ಶಂಕರಮಠ, ಸೃಷ್ಟಿ ಕೇಂದ್ರ ಮತ್ತು ರೋಟರಿ ಡಿಸ್ಟ್ರಿಕ್ಟ್ 3191 ಜಂಟಿಯಾಗಿ ಇದೇ 15ರಂದು ಸಂಜೆ 6 ಗಂಟೆಯಿಂದ ಶಂಕರಪುರದ ಶೃಂಗೇರಿ ಮಠದಲ್ಲಿ ಅಹೋರಾತ್ರಿ ಶಿವರಾತ್ರಿ ಸಂಗೀತ–ನೃತ್ಯ ಉತ್ಸವ ಹಮ್ಮಿಕೊಂಡಿದೆ.

ರಾಜ ಅವರಿಂದ ವೃಂದ ನಾದಸ್ವರ, ಆರ್.ಕೆ. ಪದ್ಮನಾಭ, ನಾಗಮಣಿ ಶ್ರೀನಾಥ್, ಸುಮಾ ಸುಧೀಂದ್ರ, ವೇಣುಗೋಪಾಲ್, ಶಿವಶ್ರೀ ಸ್ಕಂದಪ್ರಸಾದ್ ಅವರಿಂದ ಶಾಸ್ತ್ರೀಯ ಸಂಗೀತ ನಡೆಯಲಿದೆ.

ಸೃಷ್ಟಿ ಕೇಂದ್ರ, ಶಿವಪ್ರಿಯ ನೃತ್ಯ ಶಾಲೆಯಿಂದ ನೃತ್ಯ ನಾಟಕ, ಸೌಮ್ಯ ಅವರಿಂದ ಒಡಿಸ್ಸಿ ನೃತ್ಯ, ನಾಟ್ಯತರಂಗ್ ತಂಡದಿಂದ ಕಥಕ್, ಮಧುರಾ ಮುಖರ್ಜಿ, ಮನೋಜ, ಐಶ್ವರ್ಯಾ ನಿತ್ಯಾನಂದ, ಸೃಷ್ಟಿ, ಅಕ್ಷತಾ ಮತ್ತು ಎ.ವಿ. ಸತ್ಯನಾರಾಯಣ ಅವರಿಂದ ಭರತನಾಟ್ಯ ಹಮ್ಮಿಕೊಳ್ಳಲಾಗಿದೆ.

ಪ್ರತಿ ಗುರುವಾರ ಪ್ರಕಟವಾಗುವ 'ಸಾಂಸ್ಕೃತಿಕ ಮುನ್ನೋಟ' ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

ನಗರದಲ್ಲಿ ಇಂದು

ಆಹಾರ ಮತ್ತು ಆಹಾರ ಸಂಸ್ಕೃತಿ ಕುರಿತ ವಾರ್ಷಿಕ ಅಂತರರಾಷ್ಟ್ರೀಯ ಸಮ್ಮೇಳನ: ಅತಿಥಿಗಳು: ಅನಿತಾ ಮಣ್ಣೂರ್, ಎಸ್.ಎಂ. ಜಯಕರ, ಕೆ.ಟಿ. ಶಾಂತಲಾ, ಎಂ. ಅಸಾದುದ್ದೀನ್, ಆಯೋಜನೆ: ಇಂಗ್ಲಿಷ್ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಯೂನಿವರ್ಸಿಟಿ, ಜ್ಞಾನಭಾರತಿ ಆವರಣ, ಬೆಳಿಗ್ಗೆ 9ರಿಂದ

ಹಸಿರು ಕೌಶಲ, ಕೃತಕ ಬುದ್ಧಿಮತ್ತೆ, ಹವಾಮಾನ ಕ್ರಿಯಾಶೀಲತಾ ಕೇಂದ್ರದ ಉದ್ಘಾಟನೆ: ಡಾ.ಎಂ.ಸಿ. ಸುಧಾಕರ್, ಆಯೋಜನೆ: ಉನ್ನತ ಶಿಕ್ಷಣ ಇಲಾಖೆ, ಸ್ಥಳ: ಎಸ್.ಜೆ. ಪಾಲಿಟೆಕ್ನಿಕ್ ಆವರಣ, ಕೆ.ಆರ್. ವೃತ್ತ, ಬೆಳಿಗ್ಗೆ 11

ಅಂಗಳದಲ್ಲಿ ತಿಂಗಳ ಪುಸ್ತಕ, ಗಿರೀಶ್ ಕಾರ್ನಾಡ್ ಅವರ 88ನೇ ಜಯಂತಿ ಅಂಗವಾಗಿ 'ತಲೆದಂಡ' ನಾಟಕದ ಕುರಿತು ಚರ್ಚೆ: ಮಾತನಾಡುವವರು: ಸಿ. ಬಸವಲಿಂಗಯ್ಯ, ಉಪಸ್ಥಿತಿ: ರೇಖಾ ಸಿನ್ಹಾ, ಅಧ್ಯಕ್ಷತೆ: ಮಾನಸ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ಜೈನ್ (ಡೀಮ್ಡ್ ಟು ಬಿ ಯೂನಿವರ್ಸಿಟಿ), ಜೆಜಿಐ ನಾಲೇಜ್ ಕ್ಯಾಂಪಸ್, ಒಂಬತ್ತನೇ ಬಡಾವಣೆ ಜಯನಗರ, ಮಧ್ಯಾಹ್ನ 2

ಗಿರೀಶ್ ಕಾರ್ನಾಡ್

ದಾಸವಾಣಿ: ಗಾಯನ: ಎಸ್.ಎಸ್. ವಿಠಲ್, ತಬಲಾ: ಆರ್.ಎಸ್. ಪ್ರಶಾಂತ್, ರಿದಂ ಪ್ಯಾಡ್: ಆದಿತ್ಯ ರಾಮ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಐದನೇ ಬಡಾವಣೆ, ಜಯನಗರ, ಸಂಜೆ 5.15

'ಹನುಮಾನ' ನಾಟಕ ಪ್ರದರ್ಶನ: ರಚನೆ ಮತ್ತು ನಿರ್ದೇಶನ: ವಿಶ್ವನಾಥ ಮಂಡಿ, ಆಯೋಜನೆ: ಸಂಗ್ರಹ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30

ಹರಿನಾಮ ಘೋಷ: ಗಾಯನ: ಡಿ.ಆರ್. ಗಗನ, ಕೀ-ಬೋರ್ಡ್: ಅಮಿತ್ ಶರ್ಮಾ, ತಬಲಾ: ಸರ್ವೋತ್ತಮ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಆರನೇ ಹಂತ ಬನಶಂಕರಿ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

ಫಾರಂ ನಂ. ಐಎನ್‌ಸಿ–26
[ಕಂಪನಿಗಳ (ಇನ್ಕಾರ್ಪೊರೇಶನ್) ನಿಯಮಗಳು, 2014ರ ನಿಯಮ 30ರ ಪ್ರಕಾರ]
ಕೇಂದ್ರ ಸರ್ಕಾರ, ಆಗ್ನೇಯ ವಲಯ ಪೀಠ, ಹೈದರಾಬಾದ್ ಇವರ ಸಮ್ಮುಖದಲ್ಲಿ ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 13ರ ಸಬ್ ಸೆಕ್ಷನ್ 4 ಮತ್ತು ಕಂಪನಿಗಳ (ಇನ್ಕಾರ್ಪೊರೇಶನ್) ನಿಯಮಗಳು, 2014ರ ನಿಯಮ 30ರ ಸಬ್ ಸೆಕ್ಷನ್ (5)ರ ಕ್ಲಾಜ್ (ಎ) ವಿಷಯದಲ್ಲಿ
ಮತ್ತು
ಮೆ. ಝುನ್‌ಸ್ಕಾರ್ ಸೆಕ್ಯೂರಿಟೀಸ್ ಪ್ರೈವೇಟ್ ಲಿಮಿಟೆಡ್ ನೋಂದಾಯಿತ ಕಚೇರಿ ಕ್ಯಾಬಿನ್ 1, 4ನೇ ಮಹಡಿ (ಲೆಫ್ಟ್ ವಿಂಗ್), ರಹೇಜಾ ಪಾಯಿಂಟ್, 17/2, ಮ್ಯಾಗ್ರಾಥ್ ರಸ್ತೆ, ಅಶೋಕನಗರ, ಗರುಡಾ ಮಾಲ್ ಎದುರು, ಸಿಎಂಪಿ ಸೆಂಟರ್ ಮತ್ತು ಸ್ಕೂಲ್, ಬೆಂಗಳೂರು, ಬೆಂಗಳೂರು ಉತ್ತರ, ಕರ್ನಾಟಕ, ಭಾರತ – 560025
ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ಉಲ್ಲೇಖಿತ ಕಂಪನಿಯು ಕೇಂದ್ರ ಸರ್ಕಾರ/ವಲಯ ನಿರ್ದೇಶಕರು, ಆಗ್ನೇಯ ವಲಯ, ಹೈದರಾಬಾದ್ ಇವರಿಗೆ, ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 13ರ ಅಡಿಯಲ್ಲಿ ಒಂದು ಅರ್ಜಿ ಸಲ್ಲಿಸಲು ಉದ್ದೇಶಿಸಿದ್ದು, ಸದರಿ ಅರ್ಜಿಯಲ್ಲಿ, 29ನೇ ಜನವರಿ, 2026 ರಂದು ಏರ್ಪಡಿಸಲಾಗಿದ್ದ ಕಂಪನಿಯ ಅಸಾಧಾರಣ ಮಹಾಸಭೆಯಲ್ಲಿ ಹೊರಡಿಸಲಾಗಿರುವ ವಿಶೇಷ ಠರಾವಿನ ಮೇರೆಗೆ, ಕಂಪನಿಯ ಮೆಮೊರಾಂಡಮ್ ಆಫ್ ಅಸೋಸಿಯೇಶನ್ ಮಾರ್ಪಡಿಸುವಿಕೆಯನ್ನು ಖಚಿತಪಡಿಸಿ, ಕಂಪನಿಯು ತನ್ನ ನೋಂದಾಯಿತ ಕಚೇರಿಯನ್ನು "ಕರ್ನಾಟಕ ರಾಜ್ಯ" ದಿಂದ "ಗುಜರಾತ್ ರಾಜ್ಯ" ಕ್ಕೆ ಬದಲಾಯಿಸುವಿಕೆಯನ್ನು ಅನುಮೋದಿಸಬೇಕೆಂದು ಕೋರಲಾಗುತ್ತದೆ.
ಉದ್ದೇಶಿತ ಬದಲಾವಣೆಯಿಂದಾಗಿ, ಯಾವುದೇ ವ್ಯಕ್ತಿಯ ಹಿತಾಸಕ್ತಿಗೆ ಧಕ್ಕೆ ಉಂಟಾಗುವಂತಿದ್ದಲ್ಲಿ, ಅಂತಹವರು, ಈ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 14 ದಿನಗಳೊಳಗೆ, ಎಂಸಿಎ–21 ಪೋರ್ಟಲ್‌ನಲ್ಲಿರುವ (www.mca.gov.in) ಹೂಡಿಕೆದಾರರ ನಮೂನೆ ಭರ್ತಿ ಮಾಡುವ ಮೂಲಕವಾಗಲಿ ಅಥವಾ ಕಾಜ್ ಟು ಬಿ ಡೆಲಿವರ್ಡ್ ಮೂಲಕವಾಗಲಿ ಅಥವಾ ತಮ್ಮ ಆಕ್ಷೇಪಣೆಗಳನ್ನು, ತಮ್ಮ ಹಿತಾಸಕ್ತಿ ಮತ್ತು ವಿರೋಧದ ಹಿನ್ನಲೆಗಳನ್ನು ನಮೂದಿಸಿರುವ ಒಂದು ಪೂರಕ ಅಫಿಡವಿಟ್ ಸಮೇತ, ವಲಯ ನಿರ್ದೇಶಕರು, 3ನೇ ಮಹಡಿ, ಕಾರ್ಪೊರೇಟ್ ಭವನ, ಬಂಡ್ಲಗುಡ, ನಾಗೊಳೆ, ತಟ್ಟಿನ್ನರಂ ಗ್ರಾಮ, ಹಯಾತ್‌ನಗರ ಮಂಡಲ, ರಂಗಾರೆಡ್ಡಿ ಜಿಲ್ಲೆ, ಹೈದರಾಬಾದ್ – 500068, ತೆಲಂಗಾಣ ವಿಳಾಸಕ್ಕೆ ಸಲ್ಲಿಸತಕ್ಕದ್ದು, ಜೊತೆಗೆ ಒಂದು ಪ್ರತಿಯನ್ನು, ಅರ್ಜಿದಾರ ಕಂಪನಿಯ ಕೆಳಕಂಡ ನೋಂದಾಯಿತ ಕಚೇರಿ ವಿಳಾಸಕ್ಕೆ ಕೂಡ ರವಾನಿಸುವುದು.
ನೋಂದಾಯಿತ ಕಚೇರಿ: ಕ್ಯಾಬಿನ್ 1, 4ನೇ ಮಹಡಿ (ಲೆಫ್ಟ್ ವಿಂಗ್), ರಹೇಜಾ ಪಾಯಿಂಟ್, 17/2, ಮ್ಯಾಗ್ರಾಥ್ ರಸ್ತೆ, ಅಶೋಕನಗರ, ಗರುಡಾ ಮಾಲ್ ಎದುರು, ಸಿಎಂಪಿ ಸೆಂಟರ್ & ಸ್ಕೂಲ್, ಬೆಂಗಳೂರು, ಬೆಂಗಳೂರು ಉತ್ತರ, ಕರ್ನಾಟಕ, ಭಾರತ – 560025.
ಅರ್ಜಿದಾರರ ಪರವಾಗಿ
ಸಹಿ/–
ವಂದನಾ ಜೈನ್
ನಿರ್ದೇಶಕರು
ಡಿಐಎನ್: 10021030

CONNECT ಕ್ಲಾಸಿಫೈಡ್ಸ್

CLASSROOM TRAINING
AI ARTIFICIAL INTELLIGENCE
TOOLS & AUTOMATIONS PROGRAM
LEARN TO BUILD WITH AI
Websites & Web Apps | AI Receptionists | Assistants | Chatbots | Automation Systems | Videos & Reels AI Tools for Productivity | Content Creation
WITHOUT ANY CODING KNOWLEDGE | IT SKILLS
MASTER 30+ AI TOOLS & GROW YOUR INCOME
CHATGPT | GEMINI | LEONARDO.AI | N8N | MIDJOURNEY | LOVABLE | GAMMA
HEYGEN | ELEVENLABS | HIGGSFIELD | NANO BANANA | VEO 3 |
COPILOT | CLAUDE | AND MANY MORE

WHO SHOULD ATTEND?
BUSINESS OWNERS
EMPLOYEES
FREELANCERS
STUDENTS
HOMEMAKERS
Whatever you do, do it better with AI. Whether you run abusiness, have a job, or want part-time income.
LAST 2 DAYS OF FREE INTRO SEMINAR
ATTEND ANYONE DEMO TODAY OR TOMORROW 6:20 PM
HOTEL PARAAG, RAJ BHAVAN ROAD, BENGALURU
Register: 7680990163 | 7680990168 | bootcampsindia.com

JOB OPPORTUNITIES

Factory

HIRING MALE CANDIDATES BELOW 30, for a Pvt Ltd Co. Qualification:10TH & PUC Pass, ITI or any Diploma. Contact: 9108458798/ 9845579620 Location: In and Around Rajajinagar

BUSINESS

Business to Business

Business

VALID ARMS License owner has .32 MPF Revolver and 'Lyon & Lyon' DBBL Gun. Both items Rs. One Laksh. Genuine Arms Licence Holders call:- 9342819739.

Business Offers

Agents Wanted

WANTED MARKETING Executives For A Toiletry Company For Selling Products at Bangalore. 8618825981

PERSONAL

Change of Name

I, SNEHA H. KUMAR D/o Sri Hanumesh Kumar, aged 29 years, #408, Shivayoga, 18th Main, 4th 'T' Block, 32nd Cross, Jayanagar, Bengaluru- 560041 have changed my name from Sneha to Sneha H. Kumar vide Affidavit dated 11-02-2026 sworn before Notary Mr. C. Venkatapathy, Bengaluru

JOB
To Place your Classified Ads Contact: 9886213331

CHANGE OF NAME
I, Veena Bhoj and Veena M Bhoj Residing at Flat No. 3288, Building-1 Tower-3, Prestige Jindal City, Manjunatha Nagar, Bengaluru-560073, declare that the above names pertain to me only & henceforth I shall be known as VEENA M BHOJ vide affidavit dated 10.02.2026 before notary G.B. Turamari, Bengaluru.

CHANGE OF NAME
I, VANI GIRISH KOTHA, residing at No.E-117, Prestige Ozone, Whitefield, Bangalore-66, have changed my name to K S VANI vide affidavit dated 10-02-2026 before notary B. Hanumantharaya, Bengaluru. Henceforth I shall be called K S VANI only

I, SILPALEKHYA LINGAM. W/o. Ravindranath Reddy Lingam,R/a#A163 16th Floor, A.Block Disha Pursuit of Sunshine, Budigere Road,Mandur Bangalore 560049 have changed my Name to SILPALEKHYA DUTTA vide affidavit dated:05.2.2026 before Notary C.Sasikala Bangalore.

ನೈಋತ್ಯ ರೈಲ್ವೆ
ಇ–ಟೆಂಡರ್ ಪ್ರಕಟಣೆ ಸಂಖ್ಯೆ 26/2026/ಎಸ್‌ಬಿಸಿ ದಿನಾಂಕ: 06.02.2026
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಕ್ಕಾಗಿ ಇ–ಟೆಂಡರ್ ಆಹ್ವಾನಿಸಿದ್ದಾರೆ.

ಕ್ರ. ಸಂ	ಟೆಂಡರ್ ಸಂಖ್ಯೆ	ಸಂಕ್ಷಿಪ್ತ ವಿವರಣೆ (ಇ–ಓಪನ್ ಟೆಂಡರ್)	ಸಲ್ಲಿಕೆ/ಟೆಂಡರ್‌ನ ಕೊನೆಯ ದಿನಾಂಕದಂದು ಮುಕ್ತಾಯ ದಿನಾಂಕ	ಪ್ರಮಾಣ	ಘಟಕ
1	ಎಲ್ 8256428ಎ	ವಿಭಿನ್ನ ಗಾತ್ರದ ಎರಡೂ ತುದಿಗಳಲ್ಲಿ ಕ್ಲಾಂಪ್‌ಗಳನ್ನು ಹೊಂದಿರುವ ಲಾಂಗ್ ರೈಲ್ ಜಂಪರ್‌ನ ಪೂರೈಕೆ.	09–03–2026 10.30 ಗಂಟೆಗಳು	1300	ಸಂಖ್ಯೆಗಳು
2	ಎಲ್ 8257104	ಆರ್‌ಸಿಎಫ್ ನಿರ್ದಿಷ್ಟತೆಯ ಪ್ರಕಾರ 6 ಕೆಜಿ ಸಾಮರ್ಥ್ಯವಿರುವ ಎಬಿಸಿ ಪ್ರಕಾರದ ಡಿಸಿಪಿ ಅಗ್ನಿಶಾಮಕ ಯಂತ್ರ ಎಂಡಿಟಿಎಸ್–46270 (ಆರ್‌ಇವಿ–03)	02–03–2026 10.30 ಗಂಟೆಗಳು	800	ಸಂಖ್ಯೆಗಳು
3	ಎಲ್ 8265097	ಫಿಯಟ್ ಟೈರ್ ಬೋಗಿಗಾಗಿ 160 ಕೆಎನ್ ಏರ್ ಸ್ಪ್ರಿಂಗ್ ಅಸೆಂಬ್ಲಿಯ ಒಂದು ಕೋಚ್ ಸೆಟ್ ಸರಬರಾಜು	06–03–2026 10.30 ಗಂಟೆಗಳು	10	ಜೋಡಿಗಳು

ಹೆಚ್ಚಿನ ಮಾಹಿತಿಗಾಗಿ ಲಾಗಿನ್ ಆಗಿ www.ireps.gov.in
ಹಿರಿಯ ವಿಭಾಗೀಯ ಸಾಮಗ್ರಿಗಳ ವ್ಯವಸ್ಥಾಪಕರು, ಬೆಂಗಳೂರು
ಪಿಯುಬಿ/885/ಎಎಡಿ360/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2025–26
RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ. RailOne ಭಾರತೀಯ ರೈಲ್ವೆಯ ಆಲ್–ಇನ್–ಒನ್ ರೈಲ್ವೆ ಅಪ್ಲಿಕೇಶನ್ ಆಗಿದೆ. ಪ್ರಯಾಣಿಕರು ಕಾಯ್ದಿರಿಸಿದ ಟಿಕೆಟ್‌ಗಳು, ಕಾಯ್ದಿರಿಸದ ಟಿಕೆಟ್‌ಗಳು, ಪ್ಲಾಟ್‌ಫಾರ್ಮ್ ಟಿಕೆಟ್‌ಗಳು ಮತ್ತು ಸೀಸನ್ ಪಾಸ್‌ಗಳನ್ನು ಬುಕ್ ಮಾಡಬಹುದು, PNR ಸ್ಥಿತಿಯನ್ನು ಪರಿಶೀಲಿಸಬಹುದು, ಆಹಾರವನ್ನು ಬುಕ್ ಮಾಡಬಹುದು ಮತ್ತು ಇನ್ನೂ ಅನೇಕ ಸೇವೆಗಳನ್ನು ತಮ್ಮ ಬೆರಳ ತುದಿಯಲ್ಲಿ ಪಡೆಯಬಹುದು. RailOne ಅಪ್ಲಿಕೇಶನ್ ಮೂಲಕ ಕಾಯ್ದಿರಿಸದ ಟಿಕೆಟ್‌ಗಳನ್ನು ಬುಕ್ ಮಾಡಲು ಡಿಜಿಟಲ್ ಪಾವತಿಯನ್ನು ಬಳಸಿ ಮತ್ತು ಶೇ3ವರೆಗೆ ರಿಯಾಯಿತಿಯನ್ನು ಪಡೆದು ಆನಂದಿಸಿ.
South Western Railway - SWR | SWRRLY | @SWRAILWAYHQ | @sw_railways

ನಗರಸಭಾ ಕಾರ್ಯಾಲಯ, ರಾಮನಗರ
ಬೆಂಗಳೂರು ದಕ್ಷಿಣ ಜಿಲ್ಲೆ – 562159
ದೂರವಾಣಿ ಸಂ. : 080–27271286 e-mail: itstaff_ulb_ramanagaram@yahoo.com
ಸಂ.: ನಸರಾ/ತಾ.ವಿ./ಟೆಂ./ಸಿ.ಆರ್./21/2025–26 ದಿನಾಂಕ: 10.02.2026
ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ರಾಮನಗರ ನಗರಸಭೆಯ ವಿವಿಧ ಅನುದಾನದಡಿಯಲ್ಲಿ ಈ ಕೆಳಕಂಡ ಸೇವೆಯ ಟೆಂಡರ್‌ನ್ನು ಈ ಕೆಳಗೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಅರ್ಹ ಬಿಡ್‌ದಾರರು ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮುಖಾಂತರ ಟೆಂಡರ್ ದಾಖಲೆಗಳಲ್ಲಿ ತಿಳಿಸಿರುವಂತೆ (Technical qualification criteria) ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ಅಭಿಯಂತರರ ಶಾಖೆಯಿಂದ ಪಡೆಯಬಹುದು. ಈ ಕೆಳಕಂಡಂತೆ ನಿಗಧಿಪಡಿಸಿದ ಇ.ಎಂ.ಡಿ.ಯನ್ನು ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಯಾವುದಾದರೂ ಒಂದು ರೀತಿಯಲ್ಲಿ ಸಲ್ಲಿಸತಕ್ಕದ್ದು. ಇ.ಎಂ.ಡಿ.ಯು ಟೆಂಡರ್‌ನ ನ್ಯಾಯ ಸಮ್ಮತಾ ಮಾನ್ಯತಾ ಅವಧಿಗಿಂತ (Validity period) 90 ದಿನಗಳವರೆಗೆ ಮಾನ್ಯತೆ ಇರತಕ್ಕದ್ದು.

ಕ್ರ. ಸಂ.	ಇಂಡೆಂಟ್ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ ಗಳಲ್ಲಿ)	ಟೆಂಡರ್ ಫಾರಂ ಶುಲ್ಕ (ರೂ. ಗಳಲ್ಲಿ)
1	DMA/2025-26/OW/ WORK_INDENT52411	38.17	90,100/-	As per KPPP
2	DMA/2025-26/RD/ WORK_INDENT54959	16.09	47,500/-	
3	DMA/2025-26/OW/ WORK_INDENT54350	4.69	13,850/-	
4	DMA/2025-26/OW/ WORK_INDENT55122	34.85	82,260/-	

1) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 25.02.2026 ರಂದು ಸಂಜೆ 4:30 ಗಂಟೆವರೆಗೆ. 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 26.02.2026 ರಂದು ಸಂಜೆ 5:30 ಗಂಟೆಗೆ. 3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 27.02.2026 ರಂದು ಸಂಜೆ 5.30 ಗಂಟೆಗೆ.
Note: ಮೇಲಿನ ದಿನಾಂಕಗಳಲ್ಲಿ ಯಾವುದೇ ವ್ಯತ್ಯಾಸವಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್ ಮುಖಾಂತರ ತಿಳಿಸಲಾಗುವುದು.
ಸಹಿ/– ಪೌರಾಯುಕ್ತರು
ನಗರಸಭೆ, ರಾಮನಗರ
DIPR/BSD/632/SA/2025-26

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ಸಂ.: ಅಇಂವಿ/ಪ್ರ(ಕಾ)/ವೃ–(ದ)/ಕಾನಿಇಂ(ಕ)/ಸಕಾನಿಇಂ–1/ಕ–281(87)/25–26/5428–29 ದಿ.: 09.02.2026
ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಕವಿಪ್ರನಿನಿಯು ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅಇಂ(ವಿ)/ಪ್ರ(ಕಾ)/ವೃತ್ತ–ದಕ್ಷಿಣ/ಕಾನಿಇಂ(ಕ)/ಸಕಾನಿಇಂ–1/25–26/ಇ.ಪಿ.ಆರ್–16/ಕರೆ–4, ದಿನಾಂಕ: 31.10.2025ರ ಅನ್ವಯ ದಕ್ಷಿಣ ಕಾರ್ಯಾಚರಣೆ ವೃತ್ತದ ಟಿ.ಎಲ್.ಎಂ ಉಪವಿಭಾಗ ಹೂಡಿ ವ್ಯಾಪ್ತಿಯ ಅಡಿಯಲ್ಲಿ ಬರುವ ಚನ್ನಸಂದ್ರ (CSDR)–ಯಲಹಂಕ (YNK) ರೈಲು ನಿಲ್ದಾಣದ ನಡುವಿನ ರೈಲ್ವೆ ಕಿ.ಮೀ. ಸಂಖ್ಯೆ 03/800–900 ಡಬಲ್ ಸರ್ಕ್ಯೂಟ್‌ನಲ್ಲಿ ಅಸ್ತಿತ್ವದಲ್ಲಿರುವ 66ಕೆವಿ ಓವರ್‌ಹೆಡ್ ಇಹೆಚ್‌ಟಿ ಲೈನ್ ಕ್ರಾಸಿಂಗ್‌ಗಳ ಲಂಭಾಂತರವನ್ನು ಹೆಚ್ಚಿಸುವ ಕಾಮಗಾರಿ ನಿರ್ವಹಿಸುವುದಕ್ಕೆ ಬಿಡ್‌ಗಳನ್ನು ಆಹ್ವಾನಿಸಿದೆ. (on TTK on Percentage basis)
ಟೆಂಡರ್‌ಗೆ ಸಂಬಂಧಿಸಿದ ವಿವರವಾದ ಪ್ರಕಟಣೆಯನ್ನು ಕವಿಪ್ರನಿನಿ ವೆಬ್‌ಸೈಟ್ https://kptcl.karnataka.gov.in ಗೆ ಹೈಪರ್ ಲಿಂಕ್ 'E Procurement KPTCL' ನಲ್ಲಿ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ದಿನಾಂಕ: 12.02.2026 ರಂದು ಅಥವಾ ತದನಂತರ ಲಾಗಿನ್ ಮಾಡುವ ಮೂಲಕ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದಾಗಿದೆ.
ಸಹಿ/– ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ಕಾರ್ಯಾಚರಣೆ) ವೃತ್ತ–ದಕ್ಷಿಣ, ಕವಿಪ್ರನಿನಿ, ಕಛೇರಿ ಸಂಕೀರ್ಣ, ನೆಲ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು–09.

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ
(ಜಿಲ್ಲಾ ನಗರಾಭಿವೃದ್ಧಿ ಕೋಶ)
ಜಿಲ್ಲಾ ಸಂಕೀರ್ಣ, ಬೀರಸಂದ್ರ ಗ್ರಾಮ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು–562110,
ಇ–ಮೇಲ್: : dudc_blr@yahoo.co.in, dudc.blrrural@gmail.com
ಸಂಖ್ಯೆ: ಜಿನಕೋ/ಬೆಂ.ಗ್ರಾ/ಅಮೃತ–ನ–4/ನೆ.ನ/ಸಿ.ಆರ್/01/2022–23 ದಿನಾಂಕ: 04.02.2026
ಅಲ್ಪಾವಧಿ ಟೆಂಡರ್ ಪ್ರಕಟಣೆ
ಮುಖ್ಯ ಮಂತ್ರಿಗಳ ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ)ಹಂತ 4 ರ ಯೋಜನೆಯಡಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ನಗರಸಭೆಗೆ ಸಂಬಂಧಿಸಿದಂತೆ ರಸ್ತೆ ಮತ್ತು ಚರಂಡಿ ಕಾಮಗಾರಿಗಳ ಹಾಗೂ ವಿಶೇಷ ಚೇತನರ ಶೌಚಾಲಯ ಮತ್ತು ಮೂಲಭೂತ ಸೌಕರ್ಯ ನಿರ್ಮಾಣ ಕಾಮಗಾರಿಗಳ ಅನುಷ್ಠಾನಗೊಳಿಸಲು ಅರ್ಹನೊಂದಾಯಿತ ಸಂಸ್ಥೆ/ಗುತ್ತಿಗೆದಾರರು ಗಳಿಂದ 'ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnatakagov.in/ ಮೂಲಕ 90 ದಿನಗಳ ಟೆಂಡರ್‌ನ ಸಿಂಧುತ್ವ ಅವಧಿಯುಳ್ಳ ಅಲ್ಪಾವಧಿ ಟೆಂಡರ್‌ನ್ನು ನಿಗಧಿತ ಟೆಂಡರ್ ದಸ್ತಾವೇಜು ಮೂಲಕ ಆಹ್ವಾನಿಸಲಾಗಿದೆ.

ಕ್ರ. ಸಂ	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ.ಲಕ್ಷ ಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಪೂರ್ವಬಾವಿ ಬಿಡ್ ಸಭೆಯ ದಿನಾಂಕ	ಪ್ರಶ್ನೆ ಸ್ವೀಕರಿಸಲು ಕೊನೆಯ ದಿನಾಂಕ	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ
01	DMA/2025-26/ OW/WORK_ INDENT44950/ CALL2	795.14	10,10,000/–	16.02.2026 ಮಧ್ಯಾಹ್ನ 03.30 ಗಂಟೆಗೆ	19.02.2026 ಸಂಜೆ 05.00 ಗಂಟೆಗೆ	20.02.2026 ಸಂಜೆ 05.00 ಗಂಟೆಗೆ

ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛೆಯುಳ್ಳ ಅರ್ಹ ನೊಂದಾಯಿತ ಗುತ್ತಿಗೆದಾರರು ಹೆಚ್ಚಿನ ಮಾಹಿತಿಯನ್ನು KPPP Procurement Portal ನಲ್ಲಿ ಹಾಗೂ ಪೂರ್ವಬಾವಿ ಬಿಡ್ ಸಭೆಯನ್ನು ನಿಗಧಿಪಡಿಸಲಾಗಿರುವ ಜಿಲ್ಲಾ ನಗರಾಭಿವೃದ್ಧಿ ಕೋಶ ಕಛೇರಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಕಛೇರಿಯಲ್ಲಿ ಪಡೆಯಬಹುದು, ಟೆಂಡರ್‌ಗಳ ತಾಂತ್ರಿಕ ಬಿಡ್ ಮತ್ತು ತಾಂತ್ರಿಕವಾಗಿ ಅರ್ಹಗೊಂಡ ಆರ್ಥಿಕ ಬಿಡ್ ಗಳನ್ನು ಕೆ.ಟಿ.ಪಿ.ಪಿ ನಿಯಮದಂತೆ ತೆರೆಯಲಾಗುವುದು. ಸದರಿ ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ಬದಲಾವಣೆಗಳಿದ್ದಲ್ಲಿ Kppp Procurement Portal ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/–
ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ
ಬೆಂಗಳೂರು ಗ್ರಾಮಾಂತರ ಜಿಲ್ಲೆ
ವಾಸಾಸಂಇ/ವಾಪ್ರ/5439/ಶಿರಡಿ ಸಾಯಿ/2025–26

‘ರಾಜಕಾಲುವೆ ಬದಲಿಸಲು ಅವಕಾಶ ಬೇಡ’

ಕೆ.ಆರ್.ಪುರ: ಚಿಕ್ಕಬನಹಳ್ಳಿ ಗ್ರಾಮದ ಹಲವು ಸರ್ಕಾರಿ ಸರ್ವೆ ನಂಬರ್‌ಗಳ ಜಮೀನುಗಳಲ್ಲಿ ಹಾದು ಹೋಗುವ ರಾಜಕಾಲುವೆ, ಬಂಡಿದಾರಿಗಳ ಪಥ ಬದಲಾವಣೆಗೆ ಅವಕಾಶ ನೀಡಬಾರದೆಂದು ಜೈ ಭೀಮ್ ಕರ್ನಾಟಕ ಸಂಘದ ರಾಜ್ಯ ಘಟಕದ ಅಧ್ಯಕ್ಷ ಎಂ.ಅಣ್ಣಯ್ಯ ಅವರು ಪೂರ್ವ ತಾಲ್ಲೂಕು ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು.

‘ಬಿದರಹಳ್ಳಿ ಹೋಬಳಿ ಚಿಕ್ಕಬನಹಳ್ಳಿ ಹಲವು ಸರ್ವೆ ನಂಬರ್‌ಗಳಿಗೆ ಸೇರಿದ ಜಮೀನುಗಳಲ್ಲಿರುವ ರಾಜಕಾಲುವೆ, ಬಂಡಿದಾರಿಯನ್ನು ಸ್ಟರ್ಲಿಂಗ್ ಅರ್ಬನ್ ಇನ್-ಫ್ರಾ ಪ್ರಾಜೆಕ್ಟ್ ಮತ್ತು ಗೋಪಾಲನ್, ಪ್ರೆಸ್ಟೀಜ್ ಪ್ರಾಜೆಕ್ಟ್ ಅವರು ಪಥ ಬದಲಾವಣೆಗೆ ಕಚೇರಿಗೆ ಮಾಡಿರುವ ಮನವಿಯನ್ನು ತಿರಸ್ಕರಿಸಬೇಕು’ ಎಂದರು.

‘ಹಗದೂರು, ಸೋರಹುಣಸಿ ಗ್ರಾಮ, ಶೀಗೇಹಳ್ಳಿ, ಗುಂಜೂರು, ವೈಟ್‌ಫೀಲ್ಡ್ ಮತ್ತು ಪಟ್ಟಂದೂರು ಅಗ್ರಹಾರ ಗ್ರಾಮಗಳಲ್ಲಿ ಹಲವಾರು ರಸ್ತೆಗಳು, ರಾಜಕಾಲುವೆಗಳು, ಗೋಮಾಳ, ಗುಂಡು ತೋಪುಗಳನ್ನು ಈ ಹಿಂದೆಯೇ ಹಲವರು ಒತ್ತುವರಿ ಮಾಡಿಕೊಂಡಿದ್ದಾರೆ. ಈ ಪಥ ಬದಲಾವಣೆಗೆ ಅವಕಾಶ ಮಾಡಿಕೊಡಬಾರದು. ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ನೋಂದಣಿಗೂ ತಡೆ ನೀಡಬೇಕು. ವಿದ್ಯುತ್ ಹಾಗೂ ನೀರಿನ ಸಂಪರ್ಕವನ್ನೂ ಕಲ್ಪಿಸಬಾರದು’ ಎಂದು ಒತ್ತಾಯಿಸಿದರು.

ಜೈ ಭೀಮ್ ಕರ್ನಾಟಕ ಸಂಘದ ಎಂ.ಅಣ್ಣಯ್ಯ ಅವರು ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು

₹25 ಕೋಟಿ ತೆರಿಗೆ ವಂಚನೆ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಣಿಜ್ಯ ಇಲಾಖೆಯ ಬೆಂಗಳೂರು ದಕ್ಷಿಣ ವಲಯದ ಜಾರಿ ವಿಭಾಗದ ಅಧಿಕಾರಿಗಳು ವಿವಿಧ ಅಂಗಡಿಗಳ ಮೇಲೆ ದಾಳಿ ನಡೆಸಿ ₹25 ಕೋಟಿ ಮೊತ್ತದ ತೆರಿಗೆ ವಂಚನೆಯನ್ನು ಪತ್ತೆ ಮಾಡಿದ್ದಾರೆ.

ನಗರದ ಯಲಹಂಕ, ಕಲ್ಯಾಣನಗರ, ಹೆಬ್ಬಾಳ, ಬಾಣಸವಾಡಿ, ಇಂದಿರಾನಗರ ವ್ಯಾಪ್ತಿಯಲ್ಲಿರುವ ಕಟ್ಟಡ ನಿರ್ಮಾಣ ಸಾಮಗ್ರಿ ಮತ್ತು ಎಲೆಕ್ಟ್ರಿಕಲ್ ಉತ್ಪನ್ನಗಳ ಪೂರೈಕೆದಾರರು, ವಾಹನಗಳ ಬಿಡಿಭಾಗಗಳ ವ್ಯಾಪಾರಿಗಳು ಮತ್ತು ಹೋಟೆಲ್‌ಗಳ ಮೇಲೆ ವಾಣಿಜ್ಯ ಇಲಾಖೆ ಅಧಿಕಾರಿಗಳು ದಾಳಿ ನಡೆಸಿದರು.

ಈ ವರ್ತಕರು ನಕಲಿ ಇನ್ವಾಯ್ಸ್ ಮತ್ತು ನಕಲಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ (ಐಟಿಸಿ) ಕ್ಲೇಮುಗಳನ್ನು ಬಳಸಿಕೊಂಡು, ತೆರಿಗೆ ಪಾವತಿಯಿಂದ ತಪ್ಪಿಸಿಕೊಂಡಿದ್ದಾರೆ. ಈ ವರ್ತಕರ ಐಟಿಸಿ ಕ್ಲೇಮು ಮತ್ತು ಜಿಎಸ್‌ಟಿ ಪಾವತಿಯಲ್ಲಿ ವ್ಯತ್ಯಾಸವಿರುವುದು ಪತ್ತೆಯಾಗಿದೆ. ಈವರೆಗೆ ₹25 ಕೋಟಿಯಷ್ಟು ತೆರಿಗೆ ವಂಚನೆ ಮಾಡಿರುವುದು ಗೊತ್ತಾಗಿದ್ದು, ತಡರಾತ್ರಿಯವರೆಗೂ ಪರಿಶೀಲನೆ ಮುಂದುವರಿದಿತ್ತು ಎಂದು ವಾಣಿಜ್ಯ ತೆರಿಗೆ ಇಲಾಖೆಯ ಪ್ರಕಟಣೆ ತಿಳಿಸಿದೆ.

ಬಾಲಕನ ಮೇಲೆ ಚಿರತೆ ದಾಳಿ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ಮಲೆ ಮಹದೇಶ್ವರ ಬೆಟ್ಟಕ್ಕೆ ಪಾದಯಾತ್ರೆ ಕೈಗೊಂಡಿದ್ದ ತಾಲ್ಲೂಕಿನ ಭೂಹಳ್ಳಿ ಗ್ರಾಮದ ಬಾಲಕ ಶ್ರೇಯಸ್ (8) ಮೇಲೆ ಮಂಗಳವಾರ ಬೆಳಗ್ಗೆ ಚಿರತೆ ದಾಳಿ ನಡೆಸಿದ್ದು, ಬಾಲಕ ತೀವ್ರವಾಗಿ ಗಾಯಗೊಂಡಿದ್ದಾನೆ.

ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಮಲೆ ಮಹದೇಶ್ವರ ಬೆಟ್ಟಕ್ಕೆ ಶಿವರಾತ್ರಿ ಪ್ರಯುಕ್ತ ಪಾದಯಾತ್ರೆ ಭೂಹಳ್ಳಿ ಗ್ರಾಮಸ್ಥರು ಪಾದಯಾತ್ರೆ ಕೈಗೊಂಡಿದ್ದರು. ತಾಯಿ ಚಿಕ್ಕತಾಯಮ್ಮ ಜೊತೆ ಬಾಲಕ ಕೂಡ ಪಾದಯಾತ್ರೆಯಲ್ಲಿ ತೆರಳಿದ್ದ.



‘ವಿದ್ಯಾಭ್ಯಾಸದ ಕಡೆ ಗಮನಕೊಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭವಿಷ್ಯವನ್ನು ಉತ್ತಮವಾಗಿಸಿಕೊಳ್ಳಲು ಸಣ್ಣ ವಯಸ್ಸಿನಿಂದಲೇ ವಿದ್ಯಾಭ್ಯಾಸದ ಕಡೆ ಗಮನ ನೀಡಿ ಉನ್ನತ ಸಾಧನೆ ಮಾಡಿ’ ಎಂದು ಎಂದು ನಿರ್ಮಾಪಕಿ ಅಶ್ವಿನಿ ಪುನೀತ್ ರಾಜಕುಮಾರ್ ಕಿವಿಮಾತು ಹೇಳಿದರು.

ಶ್ರೀ ನಾರಾಯಣಗುರು ಸೇವಾ ಚಾರಿಟಬಲ್ ಟ್ರಸ್ಟ್ ತಮ್ಮ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಪುನೀತ್ ಪುಸ್ತಕ ಯೋಜನೆಯಡಿ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಪ್ರಶ್ನೋತ್ತರ ಕೋಶ ವಿತರಿಸಿ ಅವರು ಮಾತನಾಡಿದರು.

‘ಪುಸ್ತಕ ಯೋಜನೆ ವಿದ್ಯಾರ್ಥಿಗಳಿಗೆ ಅವಶ್ಯಕವಾಗಿದೆ. ಪುನೀತ್ ಅವರ ಹೆಸರಿನಲ್ಲಿ ಈ ಯೋಜನೆ ಮಾಡುತ್ತಿರುವುದು ಹೆಮ್ಮೆ’ ಎಂದರು.

ಶ್ರೀ ನಾರಾಯಣಗುರು ಸೇವಾ ಚಾರಿಟಬಲ್ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಮಾಸ್ತಿ ಟಿ.ಸಿ.ರಮೇಶ್ ಮಾತನಾಡಿ, ‘ಬಾಲ್ಯದಲ್ಲಿ ವಿದ್ಯಾಭ್ಯಾಸಕ್ಕೆ ತೊಂದರೆಯಿತ್ತು. ಈಗ ಚೆನ್ನಾಗಿ ದುಡಿಯುತ್ತಿರುವುದರಿಂದ ಶಿಕ್ಷಣ ಕ್ಷೇತ್ರಕ್ಕೆ ಏನನ್ನಾದರೂ ನೀಡಬೇಕು ಎಂಬ ಸದಾಶಯದೊಂದಿಗೆ ಈ ಯೋಜನೆ ಕೈಗೆತ್ತಿಕೊಂಡಿದ್ದೇನೆ. ಈ ಮೂಲಕ ಪುನೀತ್ ರಾಜಕುಮಾರ್ ಸ್ಮರಿಸಲು ಹೆಸರಿಟ್ಟಿದ್ದೇನೆ’ ಎಂದರು.

ಕರ್ನಾಟಕ ರಾಜ್ಯ ಆರ್ಯ ಈಡಿಗರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಟಿ.ವಾಸನ್ ಮಾತನಾಡಿದರು.

ರಂಗ ವಿಜಯಾ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷ ಮಾಲೂರು ವಿಜಿ, ನಾರಾಯಣ ಗುರು ಮಹಾ ಸಂಸ್ಥಾನದ ಸಂಸ್ಥಾಪಕ ಅಂಬರೀಶ್, ವ್ಯವಸ್ಥಾಪಕ ಪಿ.ಶ್ರೀನಿವಾಸ್, ಮಂಜುನಾಥ್, ಆರ್ ರಘು, ಕೆ. ರಮೇಶ್ ಬಾಬು, ಕಿರುತರೆ ನಟಿ ಗೀತಾ ರಾಘವೇಂದ್ರ, ಚೈತ್ರಾ ಲಕ್ಷ್ಮಣ್ ಮೂರ್ತಿ, ಶಶಿಕಲಾ, ಹರೀಶ್ ಚಿಕ್ಕ ತಿರುಪತಿ, ಹಸಾಂಡಹಳ್ಳಿ ವಿಜಯ್ ಕುಮಾರ್, ಸುನೀಲ್ ದೊಡ್ಡಮನೆ, ಕೃಷ್ಣಮೂರ್ತಿ ಚಿಕ್ಕತಿರುಪತಿ ಉಪಸ್ಥಿತರಿದ್ದರು.

ಪ್ರಶ್ನೋತ್ತರ ಕೋಶವನ್ನು ಅಶ್ವಿನಿ ಪುನೀತ್ ರಾಜಕುಮಾರ್ ಜನಾರ್ಪಣೆಗೊಳಿಸಿದರು

‘ಮೂಲಸೌಕರ್ಯವಿಲ್ಲದಿದ್ದರೆ ಪಾಲಿಕೆ ಚುನಾವಣೆ ಅಸಾಧ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರ ಪಾಲಿಕೆಗಳ ಆಡಳಿತ ವ್ಯವಸ್ಥೆಗೆ ಅವಶ್ಯವಿರುವ ಎಲ್ಲ ಮೂಲಸೌಕರ್ಯಗಳನ್ನು ಕಲ್ಪಿಸಿಕೊಟ್ಟ ನಂತರವೇ ಐದು ನಗರ ಪಾಲಿಕೆಗಳಿಗೆ ಚುನಾವಣೆ ನಡೆಸಲು ಸಾಧ್ಯ’ ಎಂದು ಬಿಜೆಪಿ ಮುಖಂಡ ಎನ್.ಆರ್. ರಮೇಶ್ ಹೇಳಿದ್ದಾರೆ.

‘ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳ ಪೈಕಿ, ಕೇಂದ್ರ ನಗರ ಪಾಲಿಕೆಯನ್ನು ಹೊರತುಪಡಿಸಿದರೆ ಇನ್ನುಳಿದ ನಾಲ್ಕು ನಗರ ಪಾಲಿಕೆಗಳಿಗೆ ಕೇಂದ್ರ ಕಚೇರಿ ಕಟ್ಟಡಗಳನ್ನು ನಿರ್ಮಿಸಿದ ಮೇಲಷ್ಟೇ ಚುನಾವಣೆ ನಡೆಸಲು ಸಾಧ್ಯ. ನಾಲ್ಕು ನಗರ ಪಾಲಿಕೆಗಳಿಗೆ ಕಟ್ಟಡ ನಿರ್ಮಿಸಲು ಸ್ಥಳ ನಿಗದಿಪಡಿಸಿದ್ದರೂ, ಆ ಸ್ಥಳಗಳನ್ನು ಕಂದಾಯ ಇಲಾಖೆ ಮೂಲಕ ಜಿಬಿಎಗೆ ಹಸ್ತಾಂತರ ಮಾಡುವ ಪ್ರಕ್ರಿಯೆ ಆರಂಭ ಆಗಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

‘ನಾಲ್ಕು ನಗರ ಪಾಲಿಕೆಗಳಿಗೆ ಕಟ್ಟಡ ನಿರ್ಮಿಸಲು ಗುರುತಿಸಿರುವ ಸ್ಥಳಗಳನ್ನು ಜಿಬಿಎಗೆ ಹಸ್ತಾಂತರಿಸಿ, ಆಯಾ ನಗರ ಪಾಲಿಕೆಗಳ ಕಟ್ಟಡ ನಿರ್ಮಾಣಕ್ಕೆ ಕಾಯ್ದೆಯಂತೆ ಟೆಂಡರ್ ಕರೆದು, ಕಾರ್ಯಾದೇಶ ನೀಡಲು ಕನಿಷ್ಠ ಮೂರು ತಿಂಗಳು ಬೇಕಾಗುತ್ತದೆ. ಈ ಕಟ್ಟಡ ನಿರ್ಮಾಣ ಮಾಡಲು ಕನಿಷ್ಠ ಎರಡು ವರ್ಷಗಳ ಅಗತ್ಯವಿದೆ. ನಂತರ ಅವುಗಳಿಗೆ ಪೀಠೋಪಕರಣ ಹಾಗೂ ಅಗತ್ಯ ಉಪಕರಣಗಳನ್ನು ಅಳವಡಿಸಲು ಆರು ತಿಂಗಳಾದರೂ ಬೇಕು’ ಎಂದು ವಿವರಿಸಿದ್ದಾರೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿ–1, ಕೆ.ಐ.ಎ.ಡಿ.ಬಿ (ಮೆಟ್ರೋ ರೈಲು ಯೋಜನೆ & ಬೆಂಗಳೂರು ಗ್ರಾಮಾಂತರ ಜಿಲ್ಲೆ)
ನಂ.14/3, 1ನೇ ಮಹಡಿ, ಮಹರ್ಷಿ ಅರವಿಂದ ಭವನ, ನೃಪತುಂಗ ರಸ್ತೆ, ಬೆಂಗಳೂರು–560001. E-mail: slaometro@kiadb.in

ನಂ. ಕೆಐಎಡಿಬಿ/ಭೂಸ್ವಾ–1/ಎಲ್‌ಎಕ್ಯೂ/221/2025–26 ದಿನಾಂಕ : 10.02.2026

ಸಾರ್ವಜನಿಕ ನೋಟೀಸು

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ನಂದಗುಡಿ ಹೋಬಳಿ, ಅಗಸರಹಳ್ಳಿ, ದೊಡ್ಡರಾಮನಹಳ್ಳಿ, ಮಾರಸಂಡನಹಳ್ಳಿ ಗ್ರಾಮಗಳಲ್ಲಿ ಈ ಕೆಳಕಂಡ ಸರ್ವೆ ನಂಬರ್ ಜಮೀನುಗಳನ್ನು ಕೈಗಾರಿಕಾ ಪ್ರದೇಶ ಸ್ಥಾಪನೆಗಾಗಿ ಕೆಐಎಡಿ ಕಾಯ್ದೆ ಕಲಂ 28(4) ರಡಿ ಸರ್ಕಾರದ ಅಂತಿಮ ಅಧಿಸೂಚನೆ ಸಂಖ್ಯೆ : ಸಿಐ 162 ಎಸ್‌ಪಿಕ್ಯೂ (ಇ) 2024 ದಿನಾಂಕ: 22–01–2026 ರ ಪ್ರಕಾರ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಾಥಮಿಕ ಅಧಿಸೂಚನೆ ದಿನಾಂಕ: 23–01–2026 ರಂದು ಹೊರಡಿಸಲಾಗಿರುತ್ತದೆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 ರ ಕಲಂ 28(4) ರ ಪ್ರಕಾರ ಈ ಕೆಳಗೆ ವಿವರಿಸಿರುವ ಸ್ವತ್ತುಗಳು ಕರ್ನಾಟಕ ರಾಜ್ಯ ಸರ್ಕಾರಕ್ಕೆ ಎಲ್ಲಾ ರೀತಿಯ ಋಣಭಾರಗಳಿಂದ ವಿಮುಕ್ತಗೊಂಡು ಸರ್ಕಾರಕ್ಕೆ ನಿಹಿತಗೊಂಡಿರುತ್ತದೆ.

–: ಭೂಸ್ವಾಧೀನಕ್ಕೆ ಒಳಪಟ್ಟ ಜಮೀನುಗಳ ಸರ್ವೆ ನಂಬರುಗಳ ವಿವರಗಳು:– ಷೆಡ್ಯೂಲ್ ಸ್ವತ್ತುಗಳು

ಕ್ರ.ಸಂ.	ಖಾತಾದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ	ಒಟ್ಟು ಎ–ಗುಂ	ಖರಾಬು ಎ–ಗುಂ	ಬಾಕಿ ಎ–ಗುಂ
ಗ್ರಾಮ: ಅಗಸರಹಳ್ಳಿ	ಹೋಬಳಿ: ನಂದಗುಡಿ	ತಾಲ್ಲೂಕು: ಹೊಸಕೋಟೆ		ಜಿಲ್ಲೆ: ಬೆಂಗಳೂರು ಗ್ರಾಮಾಂತರ ಜಿಲ್ಲೆ		
1.	ಸರ್ಕಾರಿ ಖರಾಬ್ ಗೋಮಾಳ, ಹೆಚ್.ಕೆ. ಕೃಷ್ಣಪ್ಪ ಬಿನ್ ಲೇಟ್ ಹೋಡಿ ಕೆಂಪಯ್ಯ ಹೆಚ್.ಕೆ.ನಾಗರಾಜು ಬಿನ್ ಹೋಡಿ ಕೆಂಪಯ್ಯ, ಹೆಚ್.ಕೆ ಕೃಷ್ಣಪ್ಪ ಬಿನ್ ಹೋಡಿ ಕೆಂಪಯ್ಯ, ಹೆಚ್.ಕೆ ಕೃಷ್ಣಪ್ಪ ಬಿನ್ ಹೋಡಿ ಕೆಂಪಯ್ಯ, ಜಿ.ಕೆ. ಜಿ.ಕೆ ಸುಮಿತ್ರಮ್ಮ ಕೋಂ ವೆಂಕಟೇಶಪ್ಪ	ಸರ್ಕಾರಿ ಖರಾಬ್ ಗೋಮಾಳ, ಹೆಚ್.ಕೆ. ಕೃಷ್ಣಪ್ಪ ಬಿನ್ ಲೇಟ್ ಹೋಡಿ ಕೆಂಪಯ್ಯ ಹೆಚ್.ಕೆ.ನಾಗರಾಜು ಬಿನ್ ಹೋಡಿ ಕೆಂಪಯ್ಯ, ಹೆಚ್.ಕೆ ಕೃಷ್ಣಪ್ಪ ಬಿನ್ ಹೋಡಿ ಕೆಂಪಯ್ಯ, ಹೆಚ್.ಕೆ ಕೃಷ್ಣಪ್ಪ ಬಿನ್ ಹೋಡಿ ಕೆಂಪಯ್ಯ, ಜಿ.ಕೆ. ಜಿ.ಕೆ ಸುಮಿತ್ರಮ್ಮ ಕೋಂ ವೆಂಕಟೇಶಪ್ಪ	7	8–31	8–31	–
2.	ಎನ್.ನೇತ್ರಾವತಿ ಕೋಂ ಗಿರೀಶ್–ಭೂ.ಪ	ಎನ್.ನೇತ್ರಾವತಿ ಕೋಂ ಗಿರೀಶ್–ಭೂ.ಪ	8/1	0–23	–	0–23
3.	ಎನ್.ನೇತ್ರಾವತಿ ಕೋಂ ಗಿರೀಶ್ ಪರವಾಗಿ ಜಿಪಿಎ ಹೋಲ್ಡರ್ ಆಗಿ ಆರ್ ಪ್ರಸನ್ನಕುಮಾರ್–ಭೂ.ಪ	ಎನ್.ನೇತ್ರಾವತಿ ಕೋಂ ಗಿರೀಶ್ ಪರವಾಗಿ ಜಿಪಿಎ ಹೋಲ್ಡರ್ ಆಗಿ ಆರ್ ಪ್ರಸನ್ನಕುಮಾರ್–ಭೂ.ಪ	8/2	4–15	0–03	4–12
4.	ನಿತೀಶ್ ಪುರುಶೋತ್ತಮ ಬಿ.ಎನ್ ಬಿನ್ ಬಿ. ನಾಗರಾಜ್–ಭೂ.ಪ	ನಿತೀಶ್ ಪುರುಶೋತ್ತಮ ಬಿ.ಎನ್ ಬಿನ್ ಬಿ. ನಾಗರಾಜ್–ಭೂ.ಪ	8/3	0–10	–	0–10
5.	ಎನ್.ನೇತ್ರಾವತಿ ಪರವಾಗಿ ಜಿಪಿಎ ಹೋಲ್ಡರ್ ಆಗಿ ಆರ್ ಪ್ರಸನ್ನಕುಮಾರ್ –ಭೂ.ಪ	ಎನ್.ನೇತ್ರಾವತಿ ಪರವಾಗಿ ಜಿಪಿಎ ಹೋಲ್ಡರ್ ಆಗಿ ಆರ್ ಪ್ರಸನ್ನಕುಮಾರ್ –ಭೂ.ಪ	16	3–20	0–10	3–10
6.	ಗಂಗಮ್ಮ ಕೋಂ ಲೇಟ್ ಚನ್ನಪ್ಪ ಹೆಚ್.ಕೆ. ಮುಂಗಪ್ಪ ಬಿನ್ ಲೇಟ್ ಕೆಂಪಯ್ಯ ಉರುಫ್ ಹೋಡಿ ಕೆಂಪಯ್ಯ, ಕೆಂಪಮ್ಮ ಕೋಂ ಬೈರಪ್ಪ	ಗಂಗಮ್ಮ ಕೋಂ ಲೇಟ್ ಚನ್ನಪ್ಪ ಹೆಚ್.ಕೆ. ಮುಂಗಪ್ಪ ಬಿನ್ ಲೇಟ್ ಕೆಂಪಯ್ಯ ಉರುಫ್ ಹೋಡಿ ಕೆಂಪಯ್ಯ, ಕೆಂಪಮ್ಮ ಕೋಂ ಬೈರಪ್ಪ	17/1	1–21	0–01	1–20
7.	ನಿತೀಶ್ ಪುರುಶೋತ್ತಮ್ ಬಿ.ಎನ್. ಹೆಚ್ ಯು ಎಫ್ ಇದರ ಪರವಾಗಿ ಕರ್ತ. ನಿತೀಶ್ ಪುರುಶೋತ್ತಮ ಬಿ.ಎನ್.ಬಿನ್ ಎನ್.ನಾಗರಾಜ–ಭೂ.ಪ	ನಿತೀಶ್ ಪುರುಶೋತ್ತಮ್ ಬಿ.ಎನ್. ಹೆಚ್ ಯು ಎಫ್ ಇದರ ಪರವಾಗಿ ಕರ್ತ. ನಿತೀಶ್ ಪುರುಶೋತ್ತಮ ಬಿ.ಎನ್.ಬಿನ್ ಎನ್.ನಾಗರಾಜ–ಭೂ.ಪ	17/2	2–00	–	2–00
8.	ನಿತೀಶ್ ಪುರುಶೋತ್ತಮ್ ಬಿ. ಎನ್. ಹೆಚ್ ಯು ಎಫ್ ಇದರ ಪರವಾಗಿ ಕರ್ತ, ನಿತೀಶ್ ಪುರುಶೋತ್ತಮ ಬಿ.ಎನ್.ಬಿನ್ ಎನ್.ನಾಗರಾಜ–ಭೂ.ಪ	ನಿತೀಶ್ ಪುರುಶೋತ್ತಮ್ ಬಿ. ಎನ್. ಹೆಚ್ ಯು ಎಫ್ ಇದರ ಪರವಾಗಿ ಕರ್ತ, ನಿತೀಶ್ ಪುರುಶೋತ್ತಮ ಬಿ.ಎನ್.ಬಿನ್ ಎನ್.ನಾಗರಾಜ–ಭೂ.ಪ	17/3	2–01	–	2–01
9.	ಪಿ.ಬಿ.ಎಸ್. ಹೆತ್ತಕ್ಕಿ	ಪಿ.ಬಿ.ಎಸ್. ಹೆತ್ತಕ್ಕಿ	18	4–17	0–02	4–15
10.	ಎನ್. ನೇತ್ರಾವತಿ ಪರವಾಗಿ ಜಿಪಿಎ ಹೋಲ್ಡರ್ ಆಗಿ ಆರ್ ಪ್ರಸನ್ನಕುಮಾರ್ –––ಭೂ.ಪ	ಎನ್. ನೇತ್ರಾವತಿ ಪರವಾಗಿ ಜಿಪಿಎ ಹೋಲ್ಡರ್ ಆಗಿ ಆರ್ ಪ್ರಸನ್ನಕುಮಾರ್ –––ಭೂ.ಪ	26/1	2.39.08	–	2.39.08
11.	ನಿತೀನ್ ಪುರುಷೋತ್ತಮ ಬಿ. ಎನ್. ಬಿನ್ ಎನ್, ನಾಗರಾಜ್ – ಭೂ.ಪ	ನಿತೀನ್ ಪುರುಷೋತ್ತಮ ಬಿ. ಎನ್. ಬಿನ್ ಎನ್, ನಾಗರಾಜ್ – ಭೂ.ಪ	26/2	1–00	–	1–00
12.	ಡಿ.ಸಿ. ತಿಮ್ಮೇಗೌಡ ಬಿನ್ ಲೇಟ್ ಡಿ.ಟಿ. ಚನ್ನರಾಯಪ್ಪ ಡಿ.ಸಿ. ಮನೋಹರ್ ಬಿನ್ ಲೇಟ್ ಡಿ. ಟಿ.ಚನ್ನರಾಯಪ್ಪ	ಡಿ.ಸಿ. ತಿಮ್ಮೇಗೌಡ ಬಿನ್ ಲೇಟ್ ಡಿ.ಟಿ. ಚನ್ನರಾಯಪ್ಪ ಡಿ.ಸಿ. ಮನೋಹರ್ ಬಿನ್ ಲೇಟ್ ಡಿ. ಟಿ.ಚನ್ನರಾಯಪ್ಪ	26/3	1–39.08	–	1–39.08
13.	ಬಿ.ಎನ್. ನಿತೀಶ್ ಪುರುಶೋತ್ತಮ ಹೆಚ್ ಯು ಎಫ್ ರೆಪ್ರಸೆಂಟೆಡ್ ಬೈ ಇಟ್ಸ್ ಕರ್ತ ಶ್ರೀ. ಬಿ.ಎನ್. ನಿತೀಶ್ ಪುರುಶೋತ್ತಮ ಬಿನ್ ಎನ್ ನಾಗರಾಜು	ಬಿ.ಎನ್. ನಿತೀಶ್ ಪುರುಶೋತ್ತಮ ಹೆಚ್ ಯು ಎಫ್ ರೆಪ್ರಸೆಂಟೆಡ್ ಬೈ ಇಟ್ಸ್ ಕರ್ತ ಶ್ರೀ. ಬಿ.ಎನ್. ನಿತೀಶ್ ಪುರುಶೋತ್ತಮ ಬಿನ್ ಎನ್ ನಾಗರಾಜು	28/1	2–06	0–06	1–19 0–21
14.	ಅಕ್ಕಯ್ಯಮ್ಮ ಕೋಂ ಲೇಟ್ ಲಕ್ಷಯ್ಯ	ಅಕ್ಕಯ್ಯಮ್ಮ ಕೋಂ ಲೇಟ್ ಲಕ್ಷಯ್ಯ	28/2	4–00	0–20	3–20
15.	Mr. ನಿತೀಶ್ ಪುರುಶೋತ್ತಮ .ಬಿ.ಎನ್. ಬಿನ್ ಎನ್ ನಾಗರಾಜ	Mr. ನಿತೀಶ್ ಪುರುಶೋತ್ತಮ .ಬಿ.ಎನ್. ಬಿನ್ ಎನ್ ನಾಗರಾಜ	28/3	1–29	0–09	1–20
16.	ನಿತೀಶ್ ಪುರುಶೋತ್ತಮ .ಬಿ.ಎನ್. ಹೆಚ್ ಯು ಎಫ್ ಪರವಾಗಿ ಕರ್ತ ನಿತೀಶ್ ಪುರುಶೋತ್ತಮ .ಬಿ.ಎನ್.	ನಿತೀಶ್ ಪುರುಶೋತ್ತಮ .ಬಿ.ಎನ್. ಹೆಚ್ ಯು ಎಫ್ ಪರವಾಗಿ ಕರ್ತ ನಿತೀಶ್ ಪುರುಶೋತ್ತಮ .ಬಿ.ಎನ್.	28/4	1–09	0–09	1–00
17.	ಮಂಜುನಾಥ ಬಿನ್ ನಾಗಣ್ಣ	ಮಂಜುನಾಥ ಬಿನ್ ನಾಗಣ್ಣ	29/1	1–20	–	1–20
18.	ಮುನಿಯಪ್ಪ ಬಿನ್ ಚಿಕ್ಕಪಿಳ್ಳಪ್ಪ	ಮುನಿಯಪ್ಪ ಬಿನ್ ಚಿಕ್ಕಪಿಳ್ಳಪ್ಪ	29/2	1–24	–	1–24
19.	ಸಾಕಮ್ಮ ಕೋ ಲೇಟ್ ವೆಂಕಟಪ್ಪ ಕೃಷ್ಣಪ್ಪ ಮುನಿವೆಂಕಟಪ್ಪ ಚಿಕ್ಕ ಕೃಷ್ಣಪ್ಪ ವೆಂಕಟರಾಮಯ್ಯ	ಸಾಕಮ್ಮ ಕೋ ಲೇಟ್ ವೆಂಕಟಪ್ಪ ಕೃಷ್ಣಪ್ಪ ಮುನಿವೆಂಕಟಪ್ಪ ಚಿಕ್ಕ ಕೃಷ್ಣಪ್ಪ ವೆಂಕಟರಾಮಯ್ಯ	29/3	1–24	–	1–24
20.	ನಿತೀಶ್ ಪುರುಷೋತ್ತಮ ಬಿ. ಎನ್. ಬಿನ್ ಎನ್ ನಾಗರಾಜ್	ನಿತೀಶ್ ಪುರುಷೋತ್ತಮ ಬಿ. ಎನ್. ಬಿನ್ ಎನ್ ನಾಗರಾಜ್	29/4	1–22	–	1–22
21.	ಪಾಪನ ಬೋಯಿ, ರಾಮಪ್ಪ ಬಿನ್ ರಾಮಣ್ಣ,	ಪಾಪನ ಬೋಯಿ, ರಾಮಪ್ಪ ಬಿನ್ ರಾಮಣ್ಣ,	30/1	2–00	–	2–00
22.	ರಾಘವೇಂದ್ರ ಸಂಜೀವ ರಾವ್ ಬಿನ್ ನೀಲವರ ಸಂಜೀವ ರಾವ್, ಎಸ್. ರವೀಂದ್ರ ಬಿನ್ ನೀಲವರ ಸಂಜೀವ್ ರಾವ್,	ರಾಘವೇಂದ್ರ ಸಂಜೀವ ರಾವ್ ಬಿನ್ ನೀಲವರ ಸಂಜೀವ ರಾವ್, ಎಸ್. ರವೀಂದ್ರ ಬಿನ್ ನೀಲವರ ಸಂಜೀವ್ ರಾವ್,	30/2	2–20	–	2–20
23.	ಮಂಜುನಾಥ ಬಿನ್ ನಾಗಣ್ಣ, ಮಂಜುನಾಥ ಬಿನ್ ನಾಗಣ್ಣ,	ಮಂಜುನಾಥ ಬಿನ್ ನಾಗಣ್ಣ, ಮಂಜುನಾಥ ಬಿನ್ ನಾಗಣ್ಣ,	30/3	1–01	–	1–01
24.	ಬಸವರಾಜು ಬಿನ್ ರುದ್ರಯ್ಯ	ಬಸವರಾಜು ಬಿನ್ ರುದ್ರಯ್ಯ	76/1	1–38	0–11	1–27
25.	ಚಿಕ್ಕಮ್ಮಯ್ಯ ಕೋಂ ಎ.ಚಂದ್ರಪ್ಪ	ಚಿಕ್ಕಮ್ಮಯ್ಯ ಕೋಂ ಎ.ಚಂದ್ರಪ್ಪ	76/2	2–02	0–06	1–36
26.	ಪದ್ಮಮ್ಮ ಎಂ. ಕೋಂ ಲೇಟ್ ಗಂಗಾಧರಯ್ಯ	ಪದ್ಮಮ್ಮ ಎಂ. ಕೋಂ ಲೇಟ್ ಗಂಗಾಧರಯ್ಯ	77/1	0–23.12	–	0–23.12
27.	ಲಕ್ಷ್ಮಮ್ಮ ಕೋಂ ಎಂ.ಸುಬ್ರಮಣಿ	ಲಕ್ಷ್ಮಮ್ಮ ಕೋಂ ಎಂ.ಸುಬ್ರಮಣಿ	77/2	2–06	–	2–06
28.	ಶ್ರೀನಿವಾಸ ಎಂ ಬಿನ್ ಲೇಟ್ ಎ.ಮುನಿಯಪ್ಪ	ಶ್ರೀನಿವಾಸ ಎಂ ಬಿನ್ ಲೇಟ್ ಎ.ಮುನಿಯಪ್ಪ	77/3	1–10.04	–	1–10.04
29.	ಪದ್ಮಮ್ಮ ಎಂ. ಕೋಂ ಲೇಟ್ ಗಂಗಾಧರಯ್ಯ	ಪದ್ಮಮ್ಮ ಎಂ. ಕೋಂ ಲೇಟ್ ಗಂಗಾಧರಯ್ಯ	78/1	0–16.04	–	0–16.04
30.	ಹೆಚ್.ಕೆ. ನಾಗರಾಜಪ್ಪ ಬಿನ್ ಲೇಟ್ ಹೂಡಿ ಕೆಂಪಯ್ಯ,	ಹೆಚ್.ಕೆ. ನಾಗರಾಜಪ್ಪ ಬಿನ್ ಲೇಟ್ ಹೂಡಿ ಕೆಂಪಯ್ಯ,	78/2	0–26.04	0–00.04	0–26
	ಜಿ.ಕೆ. ಸುಮಿತ್ರಮ್ಮ ಕೋಂ ಲೇಟ್ ಹೆಚ್.ಕೆ.ವೆಂಕಟೇಶಪ್ಪ	ಜಿ.ಕೆ. ಸುಮಿತ್ರಮ್ಮ ಕೋಂ ಲೇಟ್ ಹೆಚ್.ಕೆ.ವೆಂಕಟೇಶಪ್ಪ	78/5	0–26.04	0–00.04	0–26
	ಹೆಚ್.ಕೆ. ಕೃಷ್ಣಪ್ಪ ಬಿನ್ ಲೇಟ್ ಹೂಡಿ ಕೆಂಪಯ್ಯ	ಹೆಚ್.ಕೆ. ಕೃಷ್ಣಪ್ಪ ಬಿನ್ ಲೇಟ್ ಹೂಡಿ ಕೆಂಪಯ್ಯ	78/6	0–27.08	0–00.08	0–27
31.	ವಿ.ಲಕ್ಷ್ಮಮ್ಮ ಕೋಂ ಎಂ.ಸುಬ್ರಮಣಿ	ವಿ.ಲಕ್ಷ್ಮಮ್ಮ ಕೋಂ ಎಂ.ಸುಬ್ರಮಣಿ	78/3	1–01	–	1–01
32	ಶ್ರೀನಿವಾಸ ಎಂ ಬಿನ್ ಲೇಟ್ ಎ.ಮುನಿಯಪ್ಪ	ಶ್ರೀನಿವಾಸ ಎಂ ಬಿನ್ ಲೇಟ್ ಎ.ಮುನಿಯಪ್ಪ	78/4	0–22.12	–	0–22.12
33	ಗೋಮಾಳ	ಗೋಮಾಳ	79	3–20	3–20	–
34	ಎಮ್.ಟಿ.ಬಿ. ಪ್ರಾಪರ್ಟೀಸ್ ಪ್ರೈವೆಟ್ ಲಿಮಿಟೆಡ್	ಎಮ್.ಟಿ.ಬಿ. ಪ್ರಾಪರ್ಟೀಸ್ ಪ್ರೈವೆಟ್ ಲಿಮಿಟೆಡ್	80	2–00	–	2–00
35	ನಿತೀಶ್ ಪುರುಷೋತ್ತಮ ಬಿ.ಎನ್. ಹೆಚ್.ಯು.ಎಫ್. ಇದರ ಪರವಾಗಿ ಕರ್ತ ನಿತೀಶ್ ಪುರುಷೋತ್ತಮ ಬಿ.ಎನ್. ಬಿನ್ ಎನ್.ನಾಗರಾಜ	ನಿತೀಶ್ ಪುರುಷೋತ್ತಮ ಬಿ.ಎನ್. ಹೆಚ್.ಯು.ಎಫ್. ಇದರ ಪರವಾಗಿ ಕರ್ತ ನಿತೀಶ್ ಪುರುಷೋತ್ತಮ ಬಿ.ಎನ್. ಬಿನ್ ಎನ್.ನಾಗರಾಜ	81	2–00	–	2–00
36	ನಿತೀಶ್ ಪುರುಷೋತ್ತಮ ಬಿ.ಎನ್. ಬಿನ್ ಎನ್.ನಾಗರಾಜ್ ಎನ್.ನಾಗರಾಜ	ನಿತೀಶ್ ಪುರುಷೋತ್ತಮ ಬಿ.ಎನ್. ಬಿನ್ ಎನ್.ನಾಗರಾಜ್ ಎನ್.ನಾಗರಾಜ	82	2–00	0–03	1–37
37	ಎಮ್.ಟಿ.ಬಿ. ಪ್ರಾಪರ್ಟೀಸ್ ಪ್ರೈವೆಟ್ ಲಿಮಿಟೆಡ್	ಎಮ್.ಟಿ.ಬಿ. ಪ್ರಾಪರ್ಟೀಸ್ ಪ್ರೈವೆಟ್ ಲಿಮಿಟೆಡ್	83/1	1–00	–	1–00
	ಎಮ್.ಟಿ.ಬಿ. ಪ್ರಾಪರ್ಟೀಸ್ ಪ್ರೈವೆಟ್ ಲಿಮಿಟೆಡ್	ಎಮ್.ಟಿ.ಬಿ. ಪ್ರಾಪರ್ಟೀಸ್ ಪ್ರೈವೆಟ್ ಲಿಮಿಟೆಡ್				
38	ಎಮ್.ಟಿ.ಬಿ. ಪ್ರಾಪರ್ಟೀಸ್ ಪ್ರೈವೆಟ್ ಲಿಮಿಟೆಡ್	ಎಮ್.ಟಿ.ಬಿ. ಪ್ರಾಪರ್ಟೀಸ್ ಪ್ರೈವೆಟ್ ಲಿಮಿಟೆಡ್	83/2	1–00	–	1–00
39	ನಿತೀಶ್ ಪುರುಷೋತ್ತಮ ಬಿ.ಎನ್. ಬಿನ್ ಎನ್.ನಾಗರಾಜ – ಭೂ.ಪ	ನಿತೀಶ್ ಪುರುಷೋತ್ತಮ ಬಿ.ಎನ್. ಬಿನ್ ಎನ್.ನಾಗರಾಜ – ಭೂ.ಪ	84/1	0–11	–	0–11
40	ನಿತೀಶ್ ಪುರುಷೋತ್ತಮ ಬಿ.ಎನ್. ಹೆಚ್.ಯು.ಎಫ್. ಇದರ ಪರವಾಗಿ ಕರ್ತ ನಿತೀಶ್ ಪುರುಷೋತ್ತಮ ಬಿ.ಎನ್. ಬಿನ್ ಎನ್.ನಾಗರಾಜ– ಭೂ.ಪ	ನಿತೀಶ್ ಪುರುಷೋತ್ತಮ ಬಿ.ಎನ್. ಹೆಚ್.ಯು.ಎಫ್. ಇದರ ಪರವಾಗಿ ಕರ್ತ ನಿತೀಶ್ ಪುರುಷೋತ್ತಮ ಬಿ.ಎನ್. ಬಿನ್ ಎನ್.ನಾಗರಾಜ– ಭೂ.ಪ	84/2	0–11	–	0–11
41	ನಿತೀಶ್ ಪುರುಷೋತ್ತಮ ಬಿ.ಎನ್. ಬಿನ್ ಎನ್.ನಾಗರಾಜ – ಭೂ.ಪ	ನಿತೀಶ್ ಪುರುಷೋತ್ತಮ ಬಿ.ಎನ್. ಬಿನ್ ಎನ್.ನಾಗರಾಜ – ಭೂ.ಪ	85/1	0–31	0–02	0–29
42	ನಿತೀಶ್ ಪುರುಷೋತ್ತಮ ಬಿ.ಎನ್. ಬಿನ್ ಎನ್.ನಾಗರಾಜ – ಭೂ.ಪ	ನಿತೀಶ್ ಪುರುಷೋತ್ತಮ ಬಿ.ಎನ್. ಬಿನ್ ಎನ್.ನಾಗರಾಜ – ಭೂ.ಪ	85/2	0–32	0–03	0–29
43	ಎಮ್.ಟಿ.ಬಿ ಪ್ರಾಪರ್ಟೀಸ್ ಪ್ರೈವೆಟ್ ಲಿಮಿಟೆಡ್ ರೆಪ್ರೆಸೆಂಟೆಡ್ ಬೈ ಇಟ್ಸ್ ಮ್ಯಾನೇಜಿಂಗ್ ಡೈರೆಕ್ಟರ್ ಬಿ.ಎನ್. ನಿತೀಶ್ ಪುರುಷೋತ್ತಮ ಬಿನ್ ಎನ್.ನಾಗರಾಜ – ಭೂ.ಪ	ಎಮ್.ಟಿ.ಬಿ ಪ್ರಾಪರ್ಟೀಸ್ ಪ್ರೈವೆಟ್ ಲಿಮಿಟೆಡ್ ರೆಪ್ರೆಸೆಂಟೆಡ್ ಬೈ ಇಟ್ಸ್ ಮ್ಯಾನೇಜಿಂಗ್ ಡೈರೆಕ್ಟರ್ ಬಿ.ಎನ್. ನಿತೀಶ್ ಪುರುಷೋತ್ತಮ ಬಿನ್ ಎನ್.ನಾಗರಾಜ – ಭೂ.ಪ	92	2–20	0–10	2–10
	ಒಟ್ಟು (ಎ)			**82–16½**	**14–27**	**67–29½**
ಗ್ರಾಮ: ದೊಡ್ಡರಾಮನಹಳ್ಳಿ	ಹೋಬಳಿ: ನಂದಗುಡಿ	ತಾಲ್ಲೂಕು: ಹೊಸಕೋಟೆ		ಜಿಲ್ಲೆ: ಬೆಂಗಳೂರು ಗ್ರಾಮಾಂತರ		
1	ಎನ್. ನಾಗರಾಜ್ ಬಿನ್ ನಾರಾಯಣಪ್ಪ	ಎನ್. ನಾಗರಾಜ್ ಬಿನ್ ನಾರಾಯಣಪ್ಪ	1	1–28	–	1–28
2	ಗೋಮಾಳ, ಕುಚೇಲ ಬಿನ್ ಮುನಿಸ್ವಾಮಪ್ಪ, ನಂದೀಶ ಬಿನ್ ಮುನಿಸ್ವಾಮಪ್ಪ, ಅಣ್ಣಯ್ಯಪ್ಪ ಬಿನ್ ಚಿನ್ನಪ್ಪ, ಕೆ.ವಿ.ಸುರೇಶ ಬಿನ್ ಕೃಷ್ಣಪ್ಪ, ಮುನಿರಾಜಪ್ಪ ಬಿನ್ ಮುನಿಯಪ್ಪ, ಕುಚೇಲ ಬಿನ್ ಮುನಿಸ್ವಾಮಪ್ಪ,	ಗೋಮಾಳ, ಕುಚೇಲ ಬಿನ್ ಮುನಿಸ್ವಾಮಪ್ಪ, ನಂದೀಶ ಬಿನ್ ಮುನಿಸ್ವಾಮಪ್ಪ, ಅಣ್ಣಯ್ಯಪ್ಪ ಬಿನ್ ಚಿನ್ನಪ್ಪ, ಕೆ.ವಿ.ಸುರೇಶ ಬಿನ್ ಕೃಷ್ಣಪ್ಪ, ಮುನಿರಾಜಪ್ಪ ಬಿನ್ ಮುನಿಯಪ್ಪ, ಕುಚೇಲ ಬಿನ್ ಮುನಿಸ್ವಾಮಪ್ಪ,	2 ರ ಪೈಕಿ	116–22	116–22	–
	ಒಟ್ಟು (ಬಿ)			**116–22**	**1–28**	**118–10**
ಗ್ರಾಮ: ಮಾರಸಂಡಹಳ್ಳಿ	ಹೋಬಳಿ: ನಂದಗುಡಿ	ತಾಲ್ಲೂಕು: ಹೊಸಕೋಟೆ		ಜಿಲ್ಲೆ: ಬೆಂಗಳೂರು ಗ್ರಾಮಾಂತರ		
1	ದೊಡ್ಡಪ್ಪಯ್ಯ ಉರುಫ್: ಮುನಿಯಪ್ಪ, ಚಿಕ್ಕತಾಯಪ್ಪ ಚಿಕ್ಕೇರಣ್ಣ, ಮುನಿವೆಂಕಟಪ್ಪ ಚಿಕ್ಕಪ್ಪಯ್ಯ ಉರುಫ್: ಮುನಿಯಪ್ಪ ಬಿನ್ ಚನ್ನವೀರಪ್ಪ	ದೊಡ್ಡಪ್ಪಯ್ಯ ಉರುಫ್: ಮುನಿಯಪ್ಪ, ಚಿಕ್ಕತಾಯಪ್ಪ ಚಿಕ್ಕೇರಣ್ಣ, ಮುನಿವೆಂಕಟಪ್ಪ ಚಿಕ್ಕಪ್ಪಯ್ಯ ಉರುಫ್: ಮುನಿಯಪ್ಪ ಬಿನ್ ಚನ್ನವೀರಪ್ಪ	34	4–08	0–08	4–00
2	ಕೆಂಪಣ್ಣ, ಚಿನ್ನಪ್ಪ ಬಿನ್ ಸೊಣ್ಣಪ್ಪ, ಚೌಡಪ್ಪ ಬಿನ್ ಸೊಣ್ಣಪ್ಪ, ಕೆಂಪಣ್ಣ ಬಿನ್ ಲೇಟ್ ಮಠದಪ್ಪ, ದೊಡ್ಡಮುನಿಯಪ್ಪ, ನಾರಾಯಣಸ್ವಾಮಿ ಬಿನ್ ಸೊಣ್ಣಪ್ಪ, ಗೋವಿಂದಪ್ಪ ಬಿನ್ ಸೊಣ್ಣಪ್ಪ, ಶಾರದಮ್ಮ ಕೋಂ ಶ್ರೀನಿವಾಸಾಚಾರಿ, ಚಿನ್ನಪ್ಪ, ಕೆಂಪಣ್ಣ ಬಿನ್ ಲೇಟ್ ಬೈರಪ್ಪ, ಮುನಿಯಮ್ಮ ಕೋಂ ಚಿನ್ನಪ್ಪ, ಮುನಿಯಮ್ಮ ಕೋಂ ಚಿಕ್ಕಪ್ಪಯ್ಯ, ದ್ಯಾವಣ್ಣ ಬಿನ್ ಮುನಿಯಪ್ಪ, ರವಿ ಬಿನ್ ಲೇಟ್ ಮುನಿಯಪ್ಪ, ಅಪ್ಪಾಲಪ್ಪ ಬಿನ್ ವೆಂಕಟರಮಣಪ್ಪ, ಮುನಿಯಪ್ಪ ಬಿನ್ ಸೊಣ್ಣಪ್ಪ, ಮಂಗಮ್ಮ ಕೋಂ ಸುಲಾಲಪ್ಪ, ಮುನಿಯಪ್ಪ ಬಿನ್ ಹೊಟ್ಟೆಪ್ಪ, ರಾಜಣ್ಣ ಬಿನ್ ಚಿಕ್ಕತಾಯಪ್ಪ, ಕೆಂಪಣ್ಣ ಬಿನ್ ಮಠದಪ್ಪ, ಮಂಜುನಾಥ ಬಿನ್ ನಂಜುಂಡಪ್ಪ, ಮುನಿಯಮ್ಮ ಕೋಂ ಚಿನ್ನಪ್ಪ, ಗೋಮಾಳ, ಮಂಗಮ್ಮ ಕೋಂ ಮುನಿಯಪ್ಪ, ಮುನಿಯಪ್ಪ ಬಿನ್ ಸೊಣ್ಣಪ್ಪ, ವೆಂಕಟೇಶಪ್ಪ ಬಿನ್ ಮರಿಯಪ್ಪ, ಅಶ್ವಥಮ್ಮ ಕೋಂ ಎಂ.ವಿ.ಬೈಚಪ್ಪ, ರತ್ನಮ್ಮ ಕೋಂ ಮುನಿಯಪ್ಪ, ಮುನಿಯಪ್ಪ ಬಿನ್ ಲೇಟ್ ಕೆಂಪಣ್ಣ, ಮುನಿಸೊಣ್ಣಪ್ಪ ಬಿನ್ ಲೇಟ್ ಕೆಂಪಣ್ಣ, ಸೊಣ್ಣಪ್ಪ ಬಿನ್ ಲೇಟ್ ಕೆಂಪಣ್ಣ, ಚಿಕ್ಕತಾಯಮ್ಮ ಬಿನ್ ಲೇಟ್ ಕೆಂಪಣ್ಣ, ಕೆಂಪಮ್ಮ ಬಿನ್ ಲೇಟ್ ಕೆಂಪಣ್ಣ, ಮುನಿಯಪ್ಪ ಬಿನ್ ಲೇಟ್ ಹೊಟ್ಟೆಪ್ಪ, ವೆಂಕಟರಾಯಪ್ಪ ಬಿನ್ ಲೇಟ್ ಹೊಟ್ಟೆಪ್ಪ, ಸೊಣ್ಣಪ್ಪ ಬಿನ್ ಬೈರಪ್ಪ, ಮುನಿಯಮ್ಮ ಕೋಂ ಲೇಟ್ ಚೌಡಪ್ಪ,	ಕೆಂಪಣ್ಣ, ಚಿನ್ನಪ್ಪ ಬಿನ್ ಸೊಣ್ಣಪ್ಪ, ಚೌಡಪ್ಪ ಬಿನ್ ಸೊಣ್ಣಪ್ಪ, ಕೆಂಪಣ್ಣ ಬಿನ್ ಲೇಟ್ ಮಠದಪ್ಪ, ದೊಡ್ಡಮುನಿಯಪ್ಪ, ನಾರಾಯಣಸ್ವಾಮಿ ಬಿನ್ ಸೊಣ್ಣಪ್ಪ, ಗೋವಿಂದಪ್ಪ ಬಿನ್ ಸೊಣ್ಣಪ್ಪ, ಶಾರದಮ್ಮ ಕೋಂ ಶ್ರೀನಿವಾಸಾಚಾರಿ, ಚಿನ್ನಪ್ಪ, ಕೆಂಪಣ್ಣ ಬಿನ್ ಲೇಟ್ ಬೈರಪ್ಪ, ಮುನಿಯಮ್ಮ ಕೋಂ ಚಿನ್ನಪ್ಪ, ಮುನಿಯಮ್ಮ ಕೋಂ ಚಿಕ್ಕಪ್ಪಯ್ಯ, ದ್ಯಾವಣ್ಣ ಬಿನ್ ಮುನಿಯಪ್ಪ, ರವಿ ಬಿನ್ ಲೇಟ್ ಮುನಿಯಪ್ಪ, ಅಪ್ಪಾಲಪ್ಪ ಬಿನ್ ವೆಂಕಟರಮಣಪ್ಪ, ಮುನಿಯಪ್ಪ ಬಿನ್ ಸೊಣ್ಣಪ್ಪ, ಮಂಗಮ್ಮ ಕೋಂ ಸುಲಾಲಪ್ಪ, ಮುನಿಯಪ್ಪ ಬಿನ್ ಹೊಟ್ಟೆಪ್ಪ, ರಾಜಣ್ಣ ಬಿನ್ ಚಿಕ್ಕತಾಯಪ್ಪ, ಕೆಂಪಣ್ಣ ಬಿನ್ ಮಠದಪ್ಪ, ಮಂಜುನಾಥ ಬಿನ್ ನಂಜುಂಡಪ್ಪ, ಮುನಿಯಮ್ಮ ಕೋಂ ಚಿನ್ನಪ್ಪ, ಗೋಮಾಳ, ಮಂಗಮ್ಮ ಕೋಂ ಮುನಿಯಪ್ಪ, ಮುನಿಯಪ್ಪ ಬಿನ್ ಸೊಣ್ಣಪ್ಪ, ವೆಂಕಟೇಶಪ್ಪ ಬಿನ್ ಮರಿಯಪ್ಪ, ಅಶ್ವಥಮ್ಮ ಕೋಂ ಎಂ.ವಿ. ಬೈಚಪ್ಪ, ರತ್ನಮ್ಮ ಕೋಂ ಮುನಿಯಪ್ಪ, ಮುನಿಯಪ್ಪ ಬಿನ್ ಲೇಟ್ ಕೆಂಪಣ್ಣ, ಮುನಿಸೊಣ್ಣಪ್ಪ ಬಿನ್ ಲೇಟ್ ಕೆಂಪಣ್ಣ, ಸೊಣ್ಣಪ್ಪ ಬಿನ್ ಲೇಟ್ ಕೆಂಪಣ್ಣ, ಚಿಕ್ಕತಾಯಮ್ಮ ಬಿನ್ ಲೇಟ್ ಕೆಂಪಣ್ಣ, ಕೆಂಪಮ್ಮ ಬಿನ್ ಲೇಟ್ ಕೆಂಪಣ್ಣ, ಮುನಿಯಪ್ಪ ಬಿನ್ ಲೇಟ್ ಹೊಟ್ಟೆಪ್ಪ, ವೆಂಕಟರಾಯಪ್ಪ ಬಿನ್ ಲೇಟ್ ಹೊಟ್ಟೆಪ್ಪ, ಸೊಣ್ಣಪ್ಪ ಬಿನ್ ಬೈರಪ್ಪ, ಮುನಿಯಮ್ಮ ಕೋಂ ಲೇಟ್ ಚೌಡಪ್ಪ,	35	60–38	60–38	–
3	ಚಿನ್ನಪ್ಪ ಬಿನ್ ಸೊಣ್ಣಪ್ಪ, ನಂಜುಡಪ್ಪ ಬಿನ್ ಭೈರಪ್ಪ	ಚಿನ್ನಪ್ಪ ಬಿನ್ ಸೊಣ್ಣಪ್ಪ, ನಂಜುಡಪ್ಪ ಬಿನ್ ಭೈರಪ್ಪ	37	1–35	0–05	1–30
4	ಸಿದ್ದರಾಜು ಬಿನ್ ಚಿಕ್ಕಶಿವಪ್ಪ, ಗುರುದೇವ ಬಿನ್ ಚಿಕ್ಕಶಿವಪ್ಪ, ರಾಮಕ್ಕ ಕೋಂ ಲೇಟ್ ಮುನಿರಾಜು.ಸಿ.	ಸಿದ್ದರಾಜು ಬಿನ್ ಚಿಕ್ಕಶಿವಪ್ಪ, ಗುರುದೇವ ಬಿನ್ ಚಿಕ್ಕಶಿವಪ್ಪ, ರಾಮಕ್ಕ ಕೋಂ ಲೇಟ್ ಮುನಿರಾಜು.ಸಿ.	38/1	0–35	–	0–35
5	ನಿತೀಶ್ ಪುರುಷೋತ್ತಮ .ಬಿ.ಎನ್, ಹೆಚ್.ಯು.ಎಫ್ ಪರವಾಗಿ ಕರ್ತಾ ನಿತೀಶ್ ಪುರುಷೋತ್ತಮ .ಬಿ.ಎನ್. ಬಿನ್ ಎನ್. ನಾಗರಾಜ್	ನಿತೀಶ್ ಪುರುಷೋತ್ತಮ .ಬಿ.ಎನ್, ಹೆಚ್.ಯು.ಎಫ್ ಪರವಾಗಿ ಕರ್ತಾ ನಿತೀಶ್ ಪುರುಷೋತ್ತಮ .ಬಿ.ಎನ್. ಬಿನ್ ಎನ್. ನಾಗರಾಜ್	38/2	1–14	0–09	1–05
6	ಎಂ.ವಿ. ಬೈಚಪ್ಪ ಬಿನ್ ವೆಂಕಟಪ್ಪ, ಎಂ.ವಿ. ವೆಂಕಟರಮಣಪ್ಪ ಬಿನ್ ವೆಂಕಟಪ್ಪ, ನಾರಾಯಣಪ್ಪ ಬಿನ್ ವೆಂಕಟಪ್ಪ, ಲಕ್ಷ್ಮೀನಾರಾಯಣ ಬಿನ್ ಲೇಟ್ ಬೈಚಪ್ಪ, ಚೌಡಪ್ಪ ಬಿನ್ ಲೇಟ್ ಬೈಚಪ್ಪ, ಶಂಕರ ಬಿನ್ ಲೇಟ್ ಬೈಚಪ್ಪ, ಮುನಿರಾಜ ಬಿನ್ ಲೇಟ್ ಬೈಚಪ್ಪ, ನಾಗೇಶ್ ಬಿನ್ ಲೇಟ್ ಬೈಚಪ್ಪ, ವೆಂಕಟೇಶ್ ಪ್ರಸಾದ್ ಬಿನ್ ಲೇಟ್ ಬೈಚಪ್ಪ, ಇಂದ್ರಮ್ಮ ಬಿನ್ ಲೇಟ್ ಬೈಚಪ್ಪ, ಕವಿತ ಬಿನ್ ಲೇಟ್ ಬೈಚಪ್ಪ, ನಿರ್ಮಲ ಬಿನ್ ಲೇಟ್ ಬೈಚಪ್ಪ, ಲಕ್ಷ್ಮಮ್ಮ ಬಿನ್ ಮರಿಯಪ್ಪ, ಶಿವಕುಮಾರ ಬಿನ್ ಲೇಟ್ ನಾಗರಾಜಪ್ಪ, ವರಲಕ್ಷ್ಮೀ ಬಿನ್ ಲೇಟ್ ನಾಗರಾಜಪ್ಪ	ಎಂ.ವಿ. ಬೈಚಪ್ಪ ಬಿನ್ ವೆಂಕಟಪ್ಪ, ಎಂ.ವಿ. ವೆಂಕಟರಮಣಪ್ಪ ಬಿನ್ ವೆಂಕಟಪ್ಪ, ನಾರಾಯಣಪ್ಪ ಬಿನ್ ವೆಂಕಟಪ್ಪ, ಲಕ್ಷ್ಮೀನಾರಾಯಣ ಬಿನ್ ಲೇಟ್ ಬೈಚಪ್ಪ, ಚೌಡಪ್ಪ ಬಿನ್ ಲೇಟ್ ಬೈಚಪ್ಪ, ಶಂಕರ ಬಿನ್ ಲೇಟ್ ಬೈಚಪ್ಪ, ಮುನಿರಾಜ ಬಿನ್ ಲೇಟ್ ಬೈಚಪ್ಪ, ನಾಗೇಶ್ ಬಿನ್ ಲೇಟ್ ಬೈಚಪ್ಪ, ವೆಂಕಟೇಶ್ ಪ್ರಸಾದ್ ಬಿನ್ ಲೇಟ್ ಬೈಚಪ್ಪ, ಇಂದ್ರಮ್ಮ ಬಿನ್ ಲೇಟ್ ಬೈಚಪ್ಪ, ಕವಿತ ಬಿನ್ ಲೇಟ್ ಬೈಚಪ್ಪ, ನಿರ್ಮಲ ಬಿನ್ ಲೇಟ್ ಬೈಚಪ್ಪ, ಲಕ್ಷ್ಮಮ್ಮ ಬಿನ್ ಮರಿಯಪ್ಪ, ಶಿವಕುಮಾರ ಬಿನ್ ಲೇಟ್ ನಾಗರಾಜಪ್ಪ, ವರಲಕ್ಷ್ಮೀ ಬಿನ್ ಲೇಟ್ ನಾಗರಾಜಪ್ಪ	39	0–15	–	0–15
7	ಚಿನ್ನಪ್ಪ ಬಿನ್ ಸೊಣ್ಣಪ್ಪ, ರಾಮಕ್ಕ ಕೋಂ ಲೇಟ್ ಮುನಿರಾಜು .ಎಂ.ಸಿ.	ಚಿನ್ನಪ್ಪ ಬಿನ್ ಸೊಣ್ಣಪ್ಪ, ರಾಮಕ್ಕ ಕೋಂ ಲೇಟ್ ಮುನಿರಾಜು .ಎಂ.ಸಿ.	40	1–18	0–02	1–16
8	ಚಿನ್ನಪ್ಪ ಬಿನ್ ಸೊಣ್ಣಪ್ಪ, ಕೆಂಪಣ್ಣ ಬಿನ್ ಲೇಟ್ ಮಠದಪ್ಪ	ಚಿನ್ನಪ್ಪ ಬಿನ್ ಸೊಣ್ಣಪ್ಪ, ಕೆಂಪಣ್ಣ ಬಿನ್ ಲೇಟ್ ಮಠದಪ್ಪ	41	1–23	–	1–23
9	ಚನ್ನವೀರಪ್ಪ ಬಿನ್ ದೊಡ್ಡಪ್ಪಯ್ಯ, ಚಿಕ್ಕಪ್ಪಯ್ಯ ಬಿನ್ ಚನ್ನವೀರಪ್ಪ, ಚಂದ್ರಪ್ಪ ಬಿನ್ ಲೇಟ್ ಮುನಿಯಪ್ಪ, ಮುನಿಯಪ್ಪ ಬಿನ್ ಲೇಟ್ ಹೊಟ್ಟೆಪ್ಪ, ವೆಂಕಟರಾಯಪ್ಪ ಬಿನ್ ಲೇಟ್ ಹೊಟ್ಟೆಪ್ಪ. ವಿಜಯಮ್ಮ ಬಿನ್ ಲೇಟ್ ಚಿಕ್ಕಚನ್ನವೀರಪ್ಪ, ವೇಧ ಬಿನ್ ಲೇಟ್ ಚಿಕ್ಕಚನ್ನವೀರಪ್ಪ,	ಚನ್ನವೀರಪ್ಪ ಬಿನ್ ದೊಡ್ಡಪ್ಪಯ್ಯ, ಚಿಕ್ಕಪ್ಪಯ್ಯ ಬಿನ್ ಚನ್ನವೀರಪ್ಪ, ಚಂದ್ರಪ್ಪ ಬಿನ್ ಲೇಟ್ ಮುನಿಯಪ್ಪ, ಮುನಿಯಪ್ಪ ಬಿನ್ ಲೇಟ್ ಹೊಟ್ಟೆಪ್ಪ, ವೆಂಕಟರಾಯಪ್ಪ ಬಿನ್ ಲೇಟ್ ಹೊಟ್ಟೆಪ್ಪ. ವಿಜಯಮ್ಮ ಬಿನ್ ಲೇಟ್ ಚಿಕ್ಕಚನ್ನವೀರಪ್ಪ, ವೇಧ ಬಿನ್ ಲೇಟ್ ಚಿಕ್ಕಚನ್ನವೀರಪ್ಪ,	42	0–31	0–01	0–30
10	ಕೆಂಪಣ್ಣ ಬಿನ್ ಲೇಟ್ ಮಠದಪ್ಪ	ಕೆಂಪಣ್ಣ ಬಿನ್ ಲೇಟ್ ಮಠದಪ್ಪ	43/1	0–15.08	0–01.08	0–14
11	ಕೆಂಪಣ್ಣ ಬಿನ್ ಲೇಟ್ ಮಠದಪ್ಪ	ಕೆಂಪಣ್ಣ ಬಿನ್ ಲೇಟ್ ಮಠದಪ್ಪ	43/2	0–22	0–02	0–20
12	ಲಕ್ಷ್ಮಮ್ಮ ಕೋಂ ಲೇಟ್ ನಾರಾಯಣಪ್ಪ	ಲಕ್ಷ್ಮಮ್ಮ ಕೋಂ ಲೇಟ್ ನಾರಾಯಣಪ್ಪ	43/3	0–22	0–02	0–20
13	ಕೃಷ್ಣಪ್ಪ ಬಿನ್ ನಂಜಪ್ಪ	ಕೃಷ್ಣಪ್ಪ ಬಿನ್ ನಂಜಪ್ಪ	43/4	0–22.08	0–02.08	0–20
14	ಅಬ್ದುಲ್ ಗಮೀದ್ ಉ:ಪ್ಯಾರೇಜಾನ್ ಬಿನ್ ಅಬ್ದುಲ್ ಸತ್ತಾರ್, ಮುನಿಕೃಷ್ಣಪ್ಪ ಬಿನ್ ನರಸಿಂಹಯ್ಯ, ನಾರಾಯಣಸ್ವಾಮಿ ಬಿನ್ ಚಿಕ್ಕತಾಯಪ್ಪ	ಅಬ್ದುಲ್ ಗಮೀದ್ ಉ:ಪ್ಯಾರೇಜಾನ್ ಬಿನ್ ಅಬ್ದುಲ್ ಸತ್ತಾರ್, ಮುನಿಕೃಷ್ಣಪ್ಪ ಬಿನ್ ನರಸಿಂಹಯ್ಯ, ನಾರಾಯಣಸ್ವಾಮಿ ಬಿನ್ ಚಿಕ್ಕತಾಯಪ್ಪ	44/1	1–26	0–06	1–20
15	ಮುನಿರಾಜ ಬಿನ್ ಲೇಟ್ ಚಿಕ್ಕೀರಣ್ಣ	ಮುನಿರಾಜ ಬಿನ್ ಲೇಟ್ ಚಿಕ್ಕೀರಣ್ಣ	44/2	0–16	–	0–16
16	ಎನ್.ನೇತ್ರಾವತಿ ಕೋಂ ಗಿರೀಶ್ ಪರವಾಗಿ ಜಿಪಿಎ ಹೋಲ್ಡರ್ ಆಗಿ ಆರ್. ಪ್ರಸನ್ನಕುಮಾರ್	ಎನ್.ನೇತ್ರಾವತಿ ಕೋಂ ಗಿರೀಶ್ ಪರವಾಗಿ ಜಿಪಿಎ ಹೋಲ್ಡರ್ ಆಗಿ ಆರ್. ಪ್ರಸನ್ನಕುಮಾರ್	45	4–27	0–02	4–25
17	ಮುನಿಯಪ್ಪ ಬಿನ್ ಹೊಟ್ಟಪ್ಪ, ಮುನಿಯಮ್ಮ ಕೋಂ ಚೌಡಪ್ಪ, ಕೆಂಪಣ್ಣ ಬಿನ್ ಸೊಣ್ಣಪ್ಪ, ಮುನಿರಾಜ ಬಿನ್ ಲೇಟ್ ಚಿಕ್ಕೀರಣ್ಣ.	ಮುನಿಯಪ್ಪ ಬಿನ್ ಹೊಟ್ಟಪ್ಪ, ಮುನಿಯಮ್ಮ ಕೋಂ ಚೌಡಪ್ಪ, ಕೆಂಪಣ್ಣ ಬಿನ್ ಸೊಣ್ಣಪ್ಪ, ಮುನಿರಾಜ ಬಿನ್ ಲೇಟ್ ಚಿಕ್ಕೀರಣ್ಣ.	46	2–12	–	2–12
18	ಮುನಿಯಪ್ಪ ಬಿನ್ ಹೊಟ್ಟಪ್ಪ	ಮುನಿಯಪ್ಪ ಬಿನ್ ಹೊಟ್ಟಪ್ಪ	47/1	0–32.08	0–00.08	0–32
19	ಮುನಿಯಮ್ಮ ಕೋಂ ಚೌಡಪ್ಪ	ಮುನಿಯಮ್ಮ ಕೋಂ ಚೌಡಪ್ಪ	47/2	0–16.08	0–00.08	0–16
20	ಕೆಂಪಣ್ಣ ಬಿನ್ ಸೊಣ್ಣಪ್ಪ	ಕೆಂಪಣ್ಣ ಬಿನ್ ಸೊಣ್ಣಪ್ಪ	47/3	0–10.08	0–00.08	0–10
21	ಮುನಿರಾಜ ಬಿನ್ ಲೇಟ್ ಚಿಕ್ಕೀರಣ್ಣ	ಮುನಿರಾಜ ಬಿನ್ ಲೇಟ್ ಚಿಕ್ಕೀರಣ್ಣ	47/4	0–14.08	0–00.08	0–14
22	ಆಣೆ	ಆಣೆ	48	0–09	0–09	–
23	ತಳವಾರಿ ನೌಕರಿ	ತಳವಾರಿ ನೌಕರಿ	49	0–34	0–02	0–32
24	ಎನ್. ಕೃಷ್ಣಪ್ಪ ಬಿನ್ ನಂಜಪ್ಪ	ಎನ್. ಕೃಷ್ಣಪ್ಪ ಬಿನ್ ನಂಜಪ್ಪ	50/1	0–18	–	0–18
25	ರತ್ನಮ್ಮ ಕೋಂ ಲೇಟ್ ಶೇಖರಪ್ಪ, ಗಿರೀಶ ಬಿನ್ ಲೇಟ್ ಶೇಖರಪ್ಪ, ವೆಂಕಟೇಶ್ ಬಿನ್ ಲೇಟ್ ಶೇಖರಪ್ಪ, ಗುರಮ್ಮ ಕೋಂ ಲೇಟ್ ಕೃಷ್ಣಪ್ಪ, ಮುನಿರಾಜು ಬಿನ್ ಲೇಟ್ ಕೃಷ್ಣಪ್ಪ, ವೆಂಕಟೇಶ್ ಬಿನ್ ಲೇಟ್ ಕೃಷ್ಣಪ್ಪ.	ರತ್ನಮ್ಮ ಕೋಂ ಲೇಟ್ ಶೇಖರಪ್ಪ, ಗಿರೀಶ ಬಿನ್ ಲೇಟ್ ಶೇಖರಪ್ಪ, ವೆಂಕಟೇಶ್ ಬಿನ್ ಲೇಟ್ ಶೇಖರಪ್ಪ, ಗುರಮ್ಮ ಕೋಂ ಲೇಟ್ ಕೃಷ್ಣಪ್ಪ, ಮುನಿರಾಜು ಬಿನ್ ಲೇಟ್ ಕೃಷ್ಣಪ್ಪ, ವೆಂಕಟೇಶ್ ಬಿನ್ ಲೇಟ್ ಕೃಷ್ಣಪ್ಪ.	50/2	0–37	0–01	0–36
26	ಎನ್.ನಾಗರಾಜ ಬಿನ್ ಲೇಟ್ ನಾರಾಯಣಪ್ಪ	ಎನ್.ನಾಗರಾಜ ಬಿನ್ ಲೇಟ್ ನಾರಾಯಣಪ್ಪ	50/3	0–09	–	0–09
27	ರತ್ನಮ್ಮ ಕೋಂ ರಾಮಮೂರ್ತಿ	ರತ್ನಮ್ಮ ಕೋಂ ರಾಮಮೂರ್ತಿ	50/4	0–09	–	0–09
28	ಚಿನ್ನಕ್ಕಮ್ಮ ಕೋಂ ಲೇಟ್ ಬೈರಪ್ಪ, ಚಂದ್ರಮ್ಮ ಬಿನ್ ಲೇಟ್ ನಾರಾಯಣಪ್ಪ, ರಾಮಪ್ಪ ಬಿನ್ ಲೇಟ್ ನಾರಾಯಣಪ್ಪ	ಚಿನ್ನಕ್ಕಮ್ಮ ಕೋಂ ಲೇಟ್ ಬೈರಪ್ಪ, ಚಂದ್ರಮ್ಮ ಬಿನ್ ಲೇಟ್ ನಾರಾಯಣಪ್ಪ, ರಾಮಪ್ಪ ಬಿನ್ ಲೇಟ್ ನಾರಾಯಣಪ್ಪ	52/1	0–11	–	0–11
29	ದೊಡ್ಡಪ್ಪಯ್ಯ ಉರುಫ್ ಮುನಿಯಪ್ಪ ಚಿಕ್ಕತಾಯಪ್ಪ ಚಿಕ್ಕೀರಣ್ಣ, ಮುನಿವೆಂಕಟಪ್ಪ, ಚಿಕ್ಕಪ್ಪಯ್ಯ ಉರುಫ್ ಮುನಿಯಪ್ಪ ಬಿನ್ ಚನ್ನವೀರಪ್ಪ	ದೊಡ್ಡಪ್ಪಯ್ಯ ಉರುಫ್ ಮುನಿಯಪ್ಪ ಚಿಕ್ಕತಾಯಪ್ಪ ಚಿಕ್ಕೀರಣ್ಣ, ಮುನಿವೆಂಕಟಪ್ಪ, ಚಿಕ್ಕಪ್ಪಯ್ಯ ಉರುಫ್ ಮುನಿಯಪ್ಪ ಬಿನ್ ಚನ್ನವೀರಪ್ಪ	52/2	0–15	0–01	0–14
30	ಎನ್. ಕೃಷ್ಣಪ್ಪ ಬಿನ್ ಲೇಟ್ ನಂಜಪ್ಪ	ಎನ್. ಕೃಷ್ಣಪ್ಪ ಬಿನ್ ಲೇಟ್ ನಂಜಪ್ಪ	52/3	0–17	0–01	0–16
31	ದಾಸೇಗೌಡ ಎನ್.ಕೃಷ್ಣಪ್ಪ ಬಿನ್ ಲೇಟ್ ನಂಜಪ್ಪ	ದಾಸೇಗೌಡ ಎನ್.ಕೃಷ್ಣಪ್ಪ ಬಿನ್ ಲೇಟ್ ನಂಜಪ್ಪ	52/4	1–00	0–01	0–39
32	ಎಂ.ವಿ. ಮುನಿಯಪ್ಪ, ರಾಮಕ್ಕ ಕೋಂ ಲೇಟ್ ನಂಜಪ್ಪ ಜಯಮ್ಮ ಕೋಂ ಲೇಟ್ ಮೊಗವಪ್ಪ	ಎಂ.ವಿ. ಮುನಿಯಪ್ಪ, ರಾಮಕ್ಕ ಕೋಂ ಲೇಟ್ ನಂಜಪ್ಪ ಜಯಮ್ಮ ಕೋಂ ಲೇಟ್ ಮೊಗವಪ್ಪ	53/1	0–37	0–07.08	0–19 0–10.08
33	ಜಯಮ್ಮ ಕೋಂ ಲೇಟ್ ಮೊಗವಪ್ಪ	ಜಯಮ್ಮ ಕೋಂ ಲೇಟ್ ಮೊಗವಪ್ಪ	53/2	0–15.04	0–01.12	0–13.08
34	ನಾರಾಯಣಸ್ವಾಮಿ ಬಿನ್ ಚಿಕ್ಕತಾಯಪ್ಪ	ನಾರಾಯಣಸ್ವಾಮಿ ಬಿನ್ ಚಿಕ್ಕತಾಯಪ್ಪ	54	1–11	–	1–11
35	ಗೋಮಾಳ ಲಕ್ಷ್ಮೀನಾರಾಯಣ ಬಿನ್ ಬೈಚಪ್ಪ, ಮುನಿಯಪ್ಪ ಬಿನ್ ದಾಸೇಗೌಡ, ವೆಂಕಟೇಶಪ್ಪ ಬಿನ್ ದಾಸೇಗೌಡ, ರೇಣುಕಮ್ಮ ಕೋಂ ನಾರಾಯಣಸ್ವಾಮಿ, ಕೆ. ಶ್ರೀನಿವಾಸ ಬಿನ್ ಕೃಷ್ಣಪ್ಪ, ಈರೇಗೌಡ ಬಿನ್ ದಾಸಪ್ಪ, ಭಾರತಿ ಕೋಂ ಮಾಳಿಗಪ್ಪ, ಶಾರದಮ್ಮ ಕೋಂ ಚಂದ್ರಪ್ಪ, ಈರೇಗೌಡ ಬಿನ್ ನಾರಾಯಣಪ್ಪ, ಎನ್.ವಿ. ಬೈಚಪ್ಪ ಬಿನ್ ವೆಂಕಟಪ್ಪ, ಕರಗಮ್ಮ ಕೋಂ ವೆಂಕಟರಮಣಪ್ಪ, ಕರಗಮ್ಮ ಕೋಂ ವೆಂಕಟರಮಣಪ್ಪ, ವೆಂಕಟೇಶಪ್ಪ ಬಿನ್ ಲೇಟ್ ಶೇಖರಪ್ಪ, ನಾಗರಾಜು ಬಿನ್ ನಾರಾಯಣಪ್ಪ, ನಂಜೇದೇವರು ಬಿನ್ ಲೇಟ್ ಲಿಂಗಪ್ಪ, ಹೆಚ್.ಆರ್. ವಿಶ್ವನಾಥ ಬಿನ್ ಲೇಟ್ ಎಲ್. ರುದ್ರಯ್ಯ, ಮರಿಯಪ್ಪ ಬಿನ್ ಲಕ್ಷ್ಮಯ್ಯ, ಜಯಮ್ಮ ಬಿನ್ ಬಿ.ಮುನಿರೆಡ್ಡಿ, ವೆಂಕಟರಮಣಪ್ಪ ಬಿನ್ ವೆಂಕಟಪ್ಪ, ಜಿ, ಮುನಿಯಪ್ಪ ಬಿನ್ ಗುಳ್ಳಪ್ಪ, ಶಂಕರಮ್ಮ ಕೋಂ ಲೇಟ್ ಹೆಚ್. ಎಸ್. ನಾಗರಾಜಯ್ಯ, ಹೆಚ್.ಎಸ್. ಬಸವರಾಜು ಬಿನ್ ಲೇಟ್ ಸಿದ್ದಲಿಂಗದೇವರು, ಮುನಿಯಮ್ಮ ಕೋಂ ಲೇಟ್ ಚಿಕ್ಕಪ್ಪಯ್ಯ, ಡಿ. ಚನ್ನವೀರಪ್ಪ ಬಿನ್ ಲೇಟ್ ದೊಡ್ಡಪ್ಪಯ್ಯ, ಜಯಮ್ಮ ಕೋಂ ಲೇಟ್ ಮೊಗವಪ್ಪ, ಎಂ. ಜಗದೀಶ್ ಬಿನ್ ಮುನೇಶ್ವರ ಚಾರಿ, ಕೆಂಪಣ್ಣ ಬಿನ್ ಲೇಟ್ ಮಠದಪ್ಪ, ರತ್ನಮ್ಮ ಬಿನ್ ಲೇಟ್ ಎಂ. ನಾಗಪ್ಪ, ಜಿ. ಮುನಿಯಪ್ಪ ಉರುಫ್ ಚಿಕ್ಕಣ್ಣ, ನಿತೀಶ್ ಪುರುಷೋತ್ತಮ ಬಿ.ಎನ್. ಹೆಚ್.ಯು.ಎಫ್. ಇದರ ಪರವಾಗಿ ಕರ್ತ ನಿತೀಶ್ ಪುರುಷೋತ್ತಮ ಬಿ.ಎನ್.ಬಿ ಚನ್ನವೀರಪ್ಪ ಬಿನ್ ದೊಡ್ಡಪ್ಪಯ್ಯ. ಲಕ್ಷ್ಮಪ್ಪ ಬಿನ್ ಮರಿಯಪ್ಪ ಮುನಿರಾಜ ಎಂ. ಬಿನ್ ಮರಿಯಪ್ಪ, ಬಾಲಾಂಜಿ ಎಂ. ಬಿನ್ ಮರಿಯಪ್ಪ, ವೆಂಕಟೇಶಪ್ಪ ಬಿನ್ ಮರಿಯಪ್ಪ,	ಗೋಮಾಳ ಲಕ್ಷ್ಮೀನಾರಾಯಣ ಬಿನ್ ಬೈಚಪ್ಪ, ಮುನಿಯಪ್ಪ ಬಿನ್ ದಾಸೇಗೌಡ, ವೆಂಕಟೇಶಪ್ಪ ಬಿನ್ ದಾಸೇಗೌಡ, ರೇಣುಕಮ್ಮ ಕೋಂ ನಾರಾಯಣಸ್ವಾಮಿ, ಕೆ. ಶ್ರೀನಿವಾಸ ಬಿನ್ ಕೃಷ್ಣಪ್ಪ, ಈರೇಗೌಡ ಬಿನ್ ದಾಸಪ್ಪ, ಭಾರತಿ ಕೋಂ ಮಾಳಿಗಪ್ಪ, ಶಾರದಮ್ಮ ಕೋಂ ಚಂದ್ರಪ್ಪ, ಈರೇಗೌಡ ಬಿನ್ ನಾರಾಯಣಪ್ಪ, ಎನ್.ವಿ. ಬೈಚಪ್ಪ ಬಿನ್ ವೆಂಕಟಪ್ಪ, ಕರಗಮ್ಮ ಕೋಂ ವೆಂಕಟರಮಣಪ್ಪ, ಕರಗಮ್ಮ ಕೋಂ ವೆಂಕಟರಮಣಪ್ಪ, ವೆಂಕಟೇಶಪ್ಪ ಬಿನ್ ಲೇಟ್ ಶೇಖರಪ್ಪ, ನಾಗರಾಜು ಬಿನ್ ನಾರಾಯಣಪ್ಪ, ನಂಜೇದೇವರು ಬಿನ್ ಲೇಟ್ ಲಿಂಗಪ್ಪ, ಹೆಚ್.ಆರ್. ವಿಶ್ವನಾಥ ಬಿನ್ ಲೇಟ್ ಎಲ್. ರುದ್ರಯ್ಯ, ಮರಿಯಪ್ಪ ಬಿನ್ ಲಕ್ಷ್ಮಯ್ಯ, ಜಯಮ್ಮ ಬಿನ್ ಬಿ.ಮುನಿರೆಡ್ಡಿ, ವೆಂಕಟರಮಣಪ್ಪ ಬಿನ್ ವೆಂಕಟಪ್ಪ, ಜಿ, ಮುನಿಯಪ್ಪ ಬಿನ್ ಗುಳ್ಳಪ್ಪ, ಶಂಕರಮ್ಮ ಕೋಂ ಲೇಟ್ ಹೆಚ್. ಎಸ್. ನಾಗರಾಜಯ್ಯ, ಹೆಚ್.ಎಸ್. ಬಸವರಾಜು ಬಿನ್ ಲೇಟ್ ಸಿದ್ದಲಿಂಗದೇವರು, ಮುನಿಯಮ್ಮ ಕೋಂ ಲೇಟ್ ಚಿಕ್ಕಪ್ಪಯ್ಯ, ಡಿ. ಚನ್ನವೀರಪ್ಪ ಬಿನ್ ಲೇಟ್ ದೊಡ್ಡಪ್ಪಯ್ಯ, ಜಯಮ್ಮ ಕೋಂ ಲೇಟ್ ಮೊಗವಪ್ಪ, ಎಂ. ಜಗದೀಶ್ ಬಿನ್ ಮುನೇಶ್ವರ ಚಾರಿ, ಕೆಂಪಣ್ಣ ಬಿನ್ ಲೇಟ್ ಮಠದಪ್ಪ, ರತ್ನಮ್ಮ ಬಿನ್ ಲೇಟ್ ಎಂ. ನಾಗಪ್ಪ, ಜಿ. ಮುನಿಯಪ್ಪ ಉರುಫ್ ಚಿಕ್ಕಣ್ಣ, ನಿತೀಶ್ ಪುರುಷೋತ್ತಮ ಬಿ.ಎನ್. ಹೆಚ್.ಯು.ಎಫ್. ಇದರ ಪರವಾಗಿ ಕರ್ತ ನಿತೀಶ್ ಪುರುಷೋತ್ತಮ ಬಿ.ಎನ್.ಬಿ ಚನ್ನವೀರಪ್ಪ ಬಿನ್ ದೊಡ್ಡಪ್ಪಯ್ಯ. ಲಕ್ಷ್ಮಪ್ಪ ಬಿನ್ ಮರಿಯಪ್ಪ ಮುನಿರಾಜ ಎಂ. ಬಿನ್ ಮರಿಯಪ್ಪ, ಬಾಲಾಂಜಿ ಎಂ. ಬಿನ್ ಮರಿಯಪ್ಪ, ವೆಂಕಟೇಶಪ್ಪ ಬಿನ್ ಮರಿಯಪ್ಪ,	76	46–32	46–32	–
			ಒಟ್ಟು (ಸಿ)	**140–28¼**	**109–17¼**	**31–11**
	ಒಟ್ಟು ಎ+ಬಿ+ಸಿ			**341–14¾**	**240–26¼**	**100–28½**

–:: ಘೋಷ್ವಾರೆ ::–

ಕ್ರ.ಸಂ.	ತಾಲ್ಲೂಕು	ಹೋಬಳಿ	ಗ್ರಾಮದ ಹೆಸರು	ಭೂ ಸ್ವಾಧೀನ ವಿಸ್ತೀರ್ಣ ಎ–ಗು		
				ಐನು	ಖರಾಬು	ಬಾಕಿ
1	ಹೊಸಕೋಟೆ	ನಂದಗುಡಿ	ಅಗಸರಹಳ್ಳಿ	82–16½	14–27	67–29½
2	ಹೊಸಕೋಟೆ	ನಂದಗುಡಿ	ದೊಡ್ಡ ರಾಮನಹಳ್ಳಿ	118–10	116–22	1–28
3	ಹೊಸಕೋಟೆ	ನಂದಗುಡಿ	ಮಾರಸಂಡಹಳ್ಳಿ	140–28¼	109–17¼	31–11
	ಒಟ್ಟು ವಿಸ್ತೀರ್ಣ			341–14¾	240–26¼	100–28½

ಸಹಿ/–
ವಿಶೇಷ ಭೂಸ್ವಾಧೀನಾಧಿಕಾರಿ–1,
ಕೆ.ಐ.ಎ.ಡಿ.ಬಿ., (ಬೆಂ.ಗ್ರಾ. ಹೊಸಕೋಟೆ ತಾಲ್ಲೂಕು)
ನೃಪತುಂಗ ರಸ್ತೆ, ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/5581/ಶಿರಡಿ ಸಾಯಿ/2025–26

GOVERNMENT OF INDIA
CBC 35101/13/0114/2526

ಆಧುನಿಕ ವಿತರಣಾ ವ್ಯವಸ್ಥೆ ಮೂಲಕ ಎಲ್ಲಾ ಗದ್ದೆಗಳಿಗೂ ನಾಲೆ, ಭಾವಿ ಮತ್ತು ನೀರಾವರಿ ವಿಸ್ತರಣೆ.

ಪ್ರತಿ ಹನಿಯೂ ಬೆಳೆಗಳನ್ನು ಪೋಷಿಸುತ್ತದೆ ಮತ್ತು ಕೃಷಿಕರ ಸಮೃದ್ಧಿಯನ್ನು ಖಚಿತಪಡಿಸುತ್ತದೆ.

ವಿಕಸಿತ ಭಾರತ – ಉದ್ಯೋಗ ಖಾತರಿ ಮತ್ತು ಆಜೀವಿಕ ಮಿಷನ್ (ಗ್ರಾಮೀಣ): ವಿಬಿ ಜಿ ರಾಮ್ ಜಿ

(ವಿಕಸಿತ ಭಾರತ-ಜಿ ರಾಮ್ ಜಿ) ಕಾಯ್ದೆ, 2025

125 ದಿನಗಳ
ವೇತನ ಖಾತರಿ ಉದ್ಯೋಗ

ಅಪಘಾತ: ಕಾರು ಚಾಲಕ ಸಾವು

ಬೆಂಗಳೂರು: ತಲಘಟ್ಟಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಾರು ಹಾಗೂ ಸರಕು ಸಾಗಣೆ ಆಟೊದ ನಡುವೆ ಸಂಭವಿಸಿದ ಅಪಘಾತದಲ್ಲಿ ಕಾರು ಚಾಲಕ ಮೃತಪಟ್ಟಿದ್ದಾರೆ.

ಪಾವಗಡದ ರಘುಪ್ರಸಾದ್ (28) ಮೃತಪಟ್ಟ ಕಾರು ಚಾಲಕ. ರಘುಪ್ರಸಾದ್ ಅವರು ಲಗ್ಗೆರೆಯಲ್ಲಿ ನೆಲಸಿದ್ದರು ಎಂದು ಸಂಚಾರ ಪೊಲೀಸರು ಹೇಳಿದರು.

ನೈಸ್ ರಸ್ತೆಯ ಇನ್ವಿಟೆಕ್ ಗೇಟ್ ಸಮೀಪ ಮಂಗಳವಾರ ರಾತ್ರಿ, ಸರಕು ಸಾಗಣೆಯ ವಾಹನವು ಮುಂದೆ ಚಲಿಸುತ್ತಿತ್ತು. ರಘು ಪ್ರಸಾದ್ ಅವರು ಕಾರು ಚಾಲನೆ ಮಾಡಿಕೊಂಡು ತೆರಳುತ್ತಿದ್ದರು. ಸರಕು ಸಾಗಣೆಯ ವಾಹನವನ್ನು ಹಿಂದಿಕ್ಕುವಾಗ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದೆ. ಗಂಭೀರವಾಗಿ ಗಾಯಗೊಂಡ ರಘು ಪ್ರಸಾದ್ ಅವರನ್ನು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯದಲ್ಲಿ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

ಅತಿ ವೇಗವಾಗಿ ಕಾರನ್ನು ಚಾಲನೆ ಮಾಡಿದ್ದರಿಂದ ನಿಯಂತ್ರಣ ತಪ್ಪಿ ಅಪಘಾತ ಸಂಭವಿಸಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಬಸ್ ಚಕ್ರ ಹರಿದು ಇಬ್ಬರು ಮಕ್ಕಳ ಸಾವು

ಹೆಣ್ಣೂರು ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಥಣಿಸಂದ್ರದ ರಸ್ತೆಯಲ್ಲಿ ದುರಂತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಣ್ಣೂರು ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಥಣಿಸಂದ್ರದಲ್ಲಿ ಬುಧವಾರ ಬೆಳಿಗ್ಗೆ ಶಾಲಾ ಬಸ್‌ನ ಚಕ್ರಗಳು ಹರಿದು, ಇಬ್ಬರು ಮಕ್ಕಳು ಮೃತಪಟ್ಟಿದ್ದಾರೆ.

ವರ್ಷಾ(2) ಹಾಗೂ ಭಾನು(4) ಮೃತ ಮಕ್ಕಳು.

ರಾಯಚೂರಿನ ನಾಗನಗೌಡ ಅವರು ಸಶಸ್ತ್ರ ಮೀಸಲು ಪಡೆಯ (ಸಿಎಆರ್) ಕಾನ್‌ಸ್ಟೆಬಲ್ ಆಗಿ ನಗರದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ತಮ್ಮ ಪುತ್ರಿ ವರ್ಷಾ ಮತ್ತು ಅಣ್ಣನ ಮಗಳಾದ ಭಾನುಳನ್ನು ಸ್ಕೂಟರ್‌ನ ಮುಂಬದಿಯಲ್ಲಿ ಕೂರಿಸಿಕೊಂಡು ಹಾಲು ತರಲು ಬುಧವಾರ ಬೆಳಿಗ್ಗೆ ತೆರಳುತ್ತಿದ್ದರು. ಥಣಿಸಂದ್ರದ ಜಂಕ್ಷನ್‌ನಲ್ಲಿ ಶಾಲಾ ಬಸ್ ಬರುತ್ತಿರುವುದನ್ನು ಗಮನಿಸಿದ್ದ ನಾಗನಗೌಡ ಅವರು ಸ್ಕೂಟರ್ ನಿಲುಗಡೆ ಮಾಡಿದ್ದರು. ಟರ್ನ್ ತೆಗೆದುಕೊಳ್ಳುವ ಸಂದರ್ಭದಲ್ಲಿ ಬಸ್, ಸ್ಕೂಟರ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಇಬ್ಬರು ಮಕ್ಕಳು ರಸ್ತೆಗೆ ಬಿದ್ದಿದ್ದರು. ಅವರ ಮೇಲೆಯೇ ಶಾಲಾ ಬಸ್‌ನ ಚಕ್ರಗಳು

ಸಿ.ಸಿ.ಟಿ.ವಿ.ಯಲ್ಲಿ ಸೆರೆಯಾದ ಅಪಘಾತದ ದೃಶ್ಯ

ವರ್ಷಾ

ಭಾನು

ಹರಿದ ಪರಿಣಾಮ ಮಕ್ಕಳು ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

ನಾಗನಗೌಡ ಅವರಿಗೂ ಗಾಯ: ಗಂಭೀರವಾಗಿ ಗಾಯಗೊಂಡಿದ್ದ ಮಕ್ಕಳನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿ ಮೃತಪಟ್ಟಿದ್ದಾರೆ.

ನಾಗನಗೌಡ ಅವರಿಗೂ ಸಣ್ಣಪುಟ್ಟ ಗಾಯವಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಉತ್ತರ ಸಂಚಾರ ವಿಭಾಗದ ಡಿಸಿಪಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಹೆಣ್ಣೂರು ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯಲಹಂಕ ಸರ್ಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ, ಮೃತದೇಹಗಳನ್ನು ಕುಟುಂಬದವರಿಗೆ ಹಸ್ತಾಂತರ ಮಾಡಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ನಾಗನಗೌಡ ಅವರು ಥಣಿಸಂದ್ರದ ಪೊಲೀಸ್ ವಸತಿಗೃಹದಲ್ಲಿ ಪತ್ನಿ ಈರಮ್ಮ ಹಾಗೂ ಇಬ್ಬರು ಮಕ್ಕಳ ಜತೆಗೆ ವಾಸವಾಗಿದ್ದಾರೆ. ದಂಪತಿಗೆ ವಿವಾಹವಾಗಿ 10 ವರ್ಷವಾಗಿದೆ. ಮದುವೆಯಾಗಿ ಐದು ವರ್ಷದ ಬಳಿಕ ಗಂಡು ಮಗು ಜನಿಸಿತ್ತು. ಎರಡು ವರ್ಷದ ಹಿಂದೆ ವರ್ಷಾ ಜನಿಸಿದ್ದಳು. ಅಪಘಾತದಲ್ಲಿ ಮೃತಪಟ್ಟ ಅಣ್ಣನ ಮಗಳಾದ ಭಾನುಳನ್ನು ಎರಡು ತಿಂಗಳ ಹಿಂದಷ್ಟೇ ರಾಯಚೂರಿನಿಂದ ನಾಗನಗೌಡ ಅವರು ಮನೆಗೆ ಕರೆದುಕೊಂಡು ಬಂದಿದ್ದರು ಎಂದು ಮೂಲಗಳು ಹೇಳಿವೆ.

ಎಂದಿನಂತೆ ಬುಧವಾರ ಬೆಳಿಗ್ಗೆಯೂ ಪೊಲೀಸ್ ವಸತಿಗೃಹದಿಂದ ಹಾಲು ತರಲು ಅಂಗಡಿಗೆ ತೆರಳುತ್ತಿದ್ದರು. ಬೆಳಿಗ್ಗೆ 8.15ರ ಸುಮಾರಿಗೆ ಎದುರಾದ ಶಾಲಾ ಬಸ್, ಯು-ಟರ್ನ್ ಮಾಡಿಕೊಳ್ಳಲು ಮುಂದಾಗಿತ್ತು. ಈ ವೇಳೆ ನಿಲ್ಲಿಸಿದ್ದ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದು ಚಾಲಕ ಅಪಘಾತ ಎಸಗಿದ್ದಾನೆ. ಅಪಘಾತದ ದೃಶ್ಯ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಚಾಲಕನ ನಿರ್ಲಕ್ಷ್ಯದಿಂದಲೇ ಅಪಘಾತ: ‘ಹಾಲು ತರಲು ಮಕ್ಕಳೊಂದಿಗೆ ಸ್ಕೂಟರ್‌ನಲ್ಲಿ ಮನೆಯ ಸಮೀಪದ ಅಂಗಡಿಗೆ ಹೋಗುತ್ತಿದ್ದೆ. ರಸ್ತೆ ತಿರುವಿನಲ್ಲಿ ಶಾಲಾ ಬಸ್ ಕಂಡೊಡನೆ ವಾಹನ ನಿಲ್ಲಿಸಿದೆ. ಆದರೆ, ಶಾಲಾ ಬಸ್ ಚಾಲಕ ವೇಗವಾಗಿ ವಾಹನ ನುಗ್ಗಿಸಿದ. ಆಗ ಬಸ್, ಸ್ಕೂಟರ್ ಡಿಕ್ಕಿಯಾಗಿ ಮಕ್ಕಳಿಬ್ಬರು ನಿಯಂತ್ರಣ ತಪ್ಪಿ ಕೆಳಗೆ ಬಿದ್ದರು. ನಾನು ಬಸ್ ನಿಲ್ಲಿಸುವಂತೆ ಕೂಗಿದರೂ ಚಾಲಕ ಮುಂದಕ್ಕೆ ವಾಹನ ಚಲಾಯಿಸಿದ. ಕಣ್ಣೆದುರೇ ಬಸ್‌ನ ಚಕ್ರ ಮಕ್ಕಳ ಮೇಲೆ ಹರಿಯಿತು’ ಎಂದು ನಾಗನಗೌಡ ಕಣ್ಣೀರಿಟ್ಟರು.

ಥಣಿಸಂದ್ರದ ಖಾಸಗಿ ಶಾಲೆಯ ಬಸ್, ಮಕ್ಕಳನ್ನು ಶಾಲೆಗೆ ಕರೆದೊಯ್ಯಲು ಸೆಂಟ್ರಲ್ ರೆವಿನ್ಯೂ ಲೇಔಟ್‌ಗೆ ಬರುತ್ತಿದ್ದಾಗ ಅಪಘಾತ ಸಂಭವಿಸಿದೆ. ಬಸ್, ದ್ವಿಚಕ್ರ ವಾಹನಕ್ಕೆ ಗುದ್ದಿದ ನಂತರವೂ ಮಾರೆಪ್ಪ ವಾಹನ ನಿಲ್ಲಿಸಿಲ್ಲ. ಆತನ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣ ಎಂದು ಸಂಚಾರ ಪೊಲೀಸರು ಹೇಳಿದರು.

ಶಾಲಾ ಬಸ್ ಚಾಲಕನ ಬಂಧನ

ಬಂಧಿತ ಚಾಲಕ ಮಾರೆಪ್ಪ

ಅಪಘಾತಕ್ಕೆ ಕಾರಣವಾದ ಬಸ್ ಚಾಲಕ ಮಾರೆಪ್ಪ ಅವರನ್ನು ಹೆಣ್ಣೂರು ಸಂಚಾರ ಠಾಣೆಯ ಪೊಲೀಸರು ಬಂಧಿಸಿ, ಬಸ್ ಜಪ್ತಿ ಮಾಡಿದ್ದಾರೆ. ಯಾದಗಿರಿಯ ಮಾರೆಪ್ಪ ಶಾಲೆಯ ಬಸ್ ಚಾಲಕರಾಗಿ ನಗರದಲ್ಲಿ ಕೆಲಸ ಮಾಡುತ್ತಿದ್ದರು.

‘ಥಣಿಸಂದ್ರ ಮುಖ್ಯರಸ್ತೆಯಿಂದ ಅಡ್ಡರಸ್ತೆಯ ಬಲಕ್ಕೆ ಬಸ್ ತಿರುಗಿಸುವ ಸಂದರ್ಭದಲ್ಲಿ ಎಡ ಭಾಗಕ್ಕೆ ನೋಡುತ್ತಿದ್ದೆ. ಹೀಗಾಗಿ, ಬಲ ಭಾಗದಲ್ಲಿದ್ದ ದ್ವಿಚಕ್ರ ವಾಹನ ನನ್ನ ಗಮನಕ್ಕೆ ಬರಲಿಲ್ಲ’ ಎಂಬುದಾಗಿ ವಿಚಾರಣೆ ವೇಳೆ ಪೊಲೀಸರಿಗೆ ಮಾರೆಪ್ಪ ತಿಳಿಸಿದ್ದಾರೆ.

‘ಬಸ್ ಚಾಲಕನನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ. ಅಪಘಾತದ ಸಂದರ್ಭದಲ್ಲಿ ಮಾರೆಪ್ಪ ಪಾನಮತ್ತನಾಗಿರಲಿಲ್ಲ ಎಂಬುದು ದೃಢಪಟ್ಟಿದೆ’ ಎಂದು ಪೊಲೀಸರು ಹೇಳಿದರು.

ಅಪಾಯಕಾರಿ ವಸ್ತುಗಳ ನಿರ್ವಹಣೆ ಕುರಿತು ನಡೆದ ಮೂರು ದಿನಗಳ ಇಂಡೋ–ಯುಎಸ್ ಸಿಂಪೋಸಿಯಂನ ಸಮಾರೋಪ ಸಮಾರಂಭದಲ್ಲಿ ತಜ್ಞರು ಮತ್ತು ಕಲಾವಿದರು ಭಾಗವಹಿಸಿದ್ದರು

ಅಪಾಯಕಾರಿ ವಸ್ತುಗಳ ಬಗ್ಗೆ ಜಾಗೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪಾಯಕಾರಿ ವಸ್ತುಗಳ ನಿರ್ವಹಣೆ ಕುರಿತು ಆಚಾರ್ಯ ಮತ್ತು ಬಿ.ಎಂ. ರೆಡ್ಡಿ ಕಾಲೇಜ್ ಆಫ್ ಫಾರ್ಮಸಿ ವತಿಯಿಂದ ಮೂರು ದಿನಗಳ ಇಂಡೋ–ಯುಎಸ್ ಸಿಂಪೋಸಿಯಂ ನಡೆಯಿತು.

ಅಪಾಯಕಾರಿ ವಸ್ತುಗಳ ಸುರಕ್ಷಿತ ನಿರ್ವಹಣೆ, ನಿಯಂತ್ರಣ ಕ್ರಮಗಳ ಕುರಿತು ಜಾಗೃತಿ ಮೂಡಿಸಲಾಯಿತು.

ಅಮೆರಿಕ ಮತ್ತು ಭಾರತದ ತಜ್ಞರು ಅನುಭವ ಮತ್ತು ಪರಿಣತಿ ಯನ್ನು ಹಂಚಿಕೊಂಡರು. ಸಂಪನ್ಮೂಲ ವ್ಯಕ್ತಿಗಳಾಗಿ ಯುಎಸ್‌ನ ಫುಲ್‌ಬ್ರೈಟ್ ವಿದ್ವಾಂಸ ಆರ್. ವಿಶ್ವನಾಥ್, ಜ್ಯುಬಿಲೆಂಟ್ ಬಯೋಸಿಸ್‌ನ ವಿಜ್ಞಾನಿ ರಾಬರ್ಟ್ ಎ. ವೆಸ್ಟ್, ಕೆಜಿಎಸ್ ಎನ್ವಿರಾನ್‌ಮೆಂಟಲ್ ಪ್ರಾಂಶುಪಾಲ ಕೆಂಡ್ರಾ ಶ್ರೋಯರ್, ಫ್ಲಾರಿಡಾ ಇಂಟರ್‌ನ್ಯಾಷನಲ್ ಯುನಿವರ್ಸಿಟಿಯ ಡೀನ್ ಇನೇಸ್ ಆರ್. ಟ್ರಿಯೇ, ಯುನಿವರ್ಸಿಟಿ ಆಫ್ ನೆವಾಡಾದ ಸಹಾಯಕ ಪ್ರಾಧ್ಯಾಪಕರಾದ ಎರಿಕಾ ಜೆ. ಮಾರ್ಟಿ ಭಾಗವಹಿಸಿದ್ದರು.

ತಜ್ಞರಾದ ಪಾಲ್ ಹೌಸ್ಮನ್, ಕ್ಯಾಥಿ ನುನೆಜ್, ಕೆಲ್ಲಿ ಎಲ್. ಫೋರ್ಡ್, ಟಿಮೊಥಿ ಸ್ಟಿರಪ್, ಸ್ಟೀಫನ್ ಬೆನೆಟ್, ಎಸ್.ಆರ್. ಸುಬ್ರಹ್ಮಣ್ಯ, ನ್ಯಾ. ಸುಭಾಷ್ ಬಿ. ಅಡಿ, ಹಾಗೂ ವೈ.ಎ. ನಾರಾಯಣಸ್ವಾಮಿ ಉಪಸ್ಥಿತರಿದ್ದರು.

‘ಚರ್ಚ್‌ಗಳಲ್ಲಿ ಕನ್ನಡ ಕ್ಯಾಥೊಲಿಕ್‌ಗಳು ಪರಕೀಯರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕ್ಯಾಥೊಲಿಕ್ ಚರ್ಚ್‌ಗಳು ಕನ್ನಡವನ್ನು ನಿರ್ಲಕ್ಷಿಸುತ್ತಿರುವುದರಿಂದ ಕನ್ನಡ ಕ್ಯಾಥೊಲಿಕ್ ಕ್ರೈಸ್ತರು ಕನ್ನಡ ನೆಲದಲ್ಲಿಯೇ ಪರಕೀಯರಾಗಿದ್ದಾರೆ’ ಎಂದು ಅಖಿಲ ಕರ್ನಾಟಕ ಕಥೋಲಿಕ್ ಕ್ರೈಸ್ತರ ಕನ್ನಡ ಸಂಘ ತಿಳಿಸಿದೆ.

ಕನ್ನಡ ಕ್ಯಾಥೊಲಿಕ್ ನ್ಯಾಯಸಮ್ಮತ ಬೇಡಿಕೆಗಳ ಬಗ್ಗೆ ನಿರಂತರವಾಗಿ ಮನವಿ ಮಾಡಿದ್ದರೂ ಚರ್ಚ್ ನಾಯಕತ್ವ ಕಿವಿಗೊಡುತ್ತಿಲ್ಲ. ಕಾನ್ಫರೆನ್ಸ್ ಆಫ್ ಕ್ಯಾಥೊಲಿಕ್ ಬಿಷಪ್ಸ್ ಆಫ್ ಇಂಡಿಯಾ (ಸಿಸಿಬಿಐ), ಕ್ಯಾಥೊಲಿಕ್ ಬಿಷಪ್‌ಸ್ ಕಾನ್ಫರೆನ್ಸ್ ಆಫ್ ಇಂಡಿಯಾ (ಸಿಬಿಸಿಐ) ನಾಯಕರು ಕರ್ನಾಟಕದ ವಾಸ್ತವ ಪರಿಸ್ಥಿತಿಯನ್ನು ಅರಿಯುತ್ತಿಲ್ಲ. ಸ್ಥಳೀಯರ ನೋವಿಗೆ ಸ್ಪಂದಿಸುತ್ತಿಲ್ಲ ಎಂದು ಸಂಘದ ಅಧ್ಯಕ್ಷ ಎ. ಐಸಾಕ್, ಕಾರ್ಯದರ್ಶಿ ಬಾರ್ತಲೋಮಿಯೊ, ಖಜಾಂಚಿ ಜಾರ್ಜ್ ಕುಮಾರ್ ಬೇಸರ ವ್ಯಕ್ತಪಡಿಸಿದ್ದಾರೆ.

ಕರಾವಳಿ ಪ್ರದೇಶದ ಎಲಿಟ್ ವರ್ಗಗಳು ಚರ್ಚ್ ವ್ಯವಸ್ಥೆಯನ್ನು ಹಿಡಿತದಲ್ಲಿಟ್ಟುಕೊಂಡು ಕನ್ನಡಿಗರಾದ ಕ್ರೈಸ್ತರನ್ನು ಕನ್ನಡದ ನೆಲದಲ್ಲಿಯೇ ಅಂಚಿಗೆ ತಳ್ಳುತ್ತಿದ್ದಾರೆ. ಇದರಿಂದ ಸುವಾರ್ತಾ ಕಾರ್ಯ ದುರ್ಬಲಗೊಂಡಿದೆ. ಬಿಷಪ್ ಬೆಂಗಳೂರಿಗೆ ಬಂದಿದ್ದರೂ ಇಲ್ಲಿನ ಜನರ ಅಳಲಿಗೆ ಕಿವಿಕೊಡದೇ ಹಿಂತಿರುಗಿದ್ದಾರೆ. ಬೇರೆ ರಾಜ್ಯಗಳಿಗೆ ಭೇಟಿ ನೀಡಿದಾಗ ಅಲ್ಲಿನ ಭಾಷೆ, ಸಂಸ್ಕೃತಿ, ಪರಂಪರೆ ಬಗ್ಗೆ ಹೆಮ್ಮೆಯಿಂದ ಮಾತನಾಡಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸಿಸಿಬಿಐ, ಸಿಬಿಸಿಐಗಳು ಕರ್ನಾಟಕದ ವಿಷಯಗಳನ್ನು ನಿರ್ಲಕ್ಷಿಸಬಾರದು ಎಂದು ಹೇಳಿಕೆ ನೀಡಿದ್ದಾರೆ.

ಬಾನೆಟ್ ಮೇಲೆ ಹತ್ತಿದ್ದ ವ್ಯಕ್ತಿಯನ್ನು ಎಳೆದೊಯ್ದು ದುಷ್ಕೃತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆಯಲ್ಲಿ ಸಾಗುವಾಗ ವಾಹನ ತಾಗಿದ ವಿಚಾರಕ್ಕೆ ಗಲಾಟೆ ನಡೆದು, ಕಾರಿನ ಬಾನೆಟ್ ಮೇಲೆ ಹತ್ತಿದ್ದ ವ್ಯಕ್ತಿಯನ್ನು ಎಳೆದೊಯ್ದು ದುಷ್ಕೃತ್ಯ ಎಸಗಲಾಗಿದೆ. ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿ ನಡೆದಿರುವ ಘಟನೆಯ ದೃಶ್ಯವು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಸರಕು ಸಾಗಣೆ ಆಟೊ ಹಾಗೂ ಕಾರು ರಸ್ತೆಯಲ್ಲಿ ಸಾಗುವಾಗ ಒಂದಕ್ಕೊಂದು ತಾಗಿದ್ದವು. ಈ ವಿಚಾರಕ್ಕೆ ಚಾಲಕರ ನಡುವೆ ವಾಗ್ವಾದ ನಡೆದಿತ್ತು. ಸರಕು ಸಾಗಣೆಯ ಆಟೊದ ಚಾಲಕ, ಕಾರಿನ ಬಾನೆಟ್ ಮೇಲೆ ಹತ್ತಿ ಕೂರುತ್ತಾರೆ. ಕಾರಿನ ಚಾಲಕ ಅವರನ್ನು 1 ಕಿ.ಮೀವರೆಗೆ ಎಳೆದೊಯ್ದು ದುಷ್ಕೃತ್ಯ ಎಸಗಿದ್ದಾರೆ.

ಕಾರಿನ ಬಾನೆಟ್ ಮೇಲೆ ಹತ್ತಿದ್ದ ವ್ಯಕ್ತಿ

‘ಬುಧವಾರ ಮಧ್ಯಾಹ್ನ 12.45ರ ಸುಮಾರಿಗೆ ಘಟನೆ ನಡೆದಿದೆ. ಕಾರಿನ ಸಂಖ್ಯೆ ಕೆಎ03 ಎನ್‌ಎನ್ 4501ರ ಚಾಲಕ ದುರ್ವರ್ತನೆ ತೋರಿದ್ದು, ಹಲಸೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆಟೊ ಚಾಲಕ ಅಂಗಲಾಚಿದರೂ ಕಾರು ನಿಲುಗಡೆ ಮಾಡಿಲ್ಲ. ಆರೋಪಿಯನ್ನು ಪತ್ತೆ ಹಚ್ಚಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ವಿಧಾನಸೌಧದಲ್ಲಿ ಆಭರಣ ಕಳವು: ತನಿಖೆಗೆ ಗೃಹ ಇಲಾಖೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧದಲ್ಲಿ ಸಚಿವರೊಬ್ಬರ ಕಚೇರಿ ಬಳಿ ಚಿನ್ನಾಭರಣ ಕಳ್ಳತನ ನಡೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯನ್ನು ಬಂಧಿಸಿದ್ದು, ಚಿನ್ನಾಭರಣ ಅಲ್ಲಿಗೆ ಹೇಗೆ ತರಲಾಯಿತು ಎಂಬುದನ್ನು ಪತ್ತೆಹಚ್ಚಲು ತನಿಖೆಗೆ ಆದೇಶಿಸಲಾಗಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರು ತಿಳಿಸಿದರು.

ಸಿ.ಸಿ.ಟಿ.ವಿ ದೃಶ್ಯಾವಳಿಯನ್ನು ಆಧರಿಸಿ ‘ಡಿ’ ದರ್ಜೆ ನೌಕರರನ್ನು ಬಂಧಿಸಲಾಗಿದೆ ಎಂದು ಅವರು ಸುದ್ದಿಗಾರರ ಜತೆ ಮಾತನಾಡಿ ಹೇಳಿದರು.

‘ವಿಧಾನಸೌಧದ ಯಾವ ಗೇಟ್‌ನಿಂದ ಚಿನ್ನಾಭರಣ ಒಳಗೆ ಹೋಯಿತು. ಸಚಿವರ ಕಚೇರಿಗೆ ಬ್ಯಾಗ್ ಹೋಗುತ್ತದೆ ಎಂದರೆ ಅದನ್ನು ಪತ್ತೆಹಚ್ಚಬೇಕಲ್ಲವೇ? ಆದ ಕಾರಣ ತನಿಖೆ ಆದೇಶಿಸಲಾಗಿದೆ. ಸದ್ಯವೇ ವರದಿ ಕೈ ಸೇರಲಿದೆ. ವರದಿಯ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಪರಮೇಶ್ವರ ತಿಳಿಸಿದರು.

ವಿಧಾನಸೌಧದಲ್ಲಿ ಸಚಿವರ ಕಚೇರಿ ಬಳಿ 300 ಗ್ರಾಂ ಚಿನ್ನಾಭರಣ ಕಳ್ಳತನ ನಡೆದ ವಿಚಾರಕ್ಕೆ ಸಂಬಂಧಿಸಿದಂತೆ ನವೀನ್ ಎಂಬುವವರು ದೂರು ನೀಡಿದ್ದರು. ಆ ದೂರನ್ನು ಆಧರಿಸಿ ಆಡಳಿತ ಸುಧಾರಣಾ ಮತ್ತು ಸಿಬ್ಬಂದಿ ಇಲಾಖೆಯ ಡಿ ದರ್ಜೆ ನೌಕರ ಆಂತೋಣಿ ಎಂಬುವವರನ್ನು ಬಂಧಿಸಿ ಚಿನ್ನಾಭರಣ ಮತ್ತು ₹1ಲಕ್ಷ ನಗದು ವಶಕ್ಕೆ ತೆಗೆದುಕೊಂಡಿದ್ದರು.

ಭಾರತ ಸರ್ಕಾರ
ಅಂಕಿಅಂಶಗಳು ಮತ್ತು ಕಾರ್ಯಕ್ರಮ
ಅನುಷ್ಠಾನ ಸಚಿವಾಲಯ
सत्यमेव जयते

DATA FOR DEVELOPMENT

ದಿನಸಿಯಿಂದ ಶಾಲಾ ಶುಲ್ಕದ ವರೆಗೆ
ನಾವು ಪಾವತಿಸುವ ಹಣವು ಗ್ರಾಹಕ ಬೆಲೆ ಸೂಚ್ಯಂಕದಲ್ಲಿ ಪ್ರತಿಬಿಂಬಿಸುತ್ತದೆ



CBC 39101/13/0004/2526

ರಾಷ್ಟ್ರೀಯ ಮಾದರಿ ಸಮೀಕ್ಷೆಯಲ್ಲಿ ನಮ್ಮ ಭಾಗವಹಿಸುವಿಕೆಯು ಸಿಪಿಐ ಮತ್ತು ಹಣದುಬ್ಬರ ದತ್ತಾಂಶದಲ್ಲಿ ನಿಖರತೆಯನ್ನು ಖಚಿತಪಡಿಸುತ್ತದೆ.

ದೇಶಾದ್ಯಂತ 2860 ಮಾರುಕಟ್ಟೆಗಳಿಂದ ನವೀಕರಿಸಿದ ಸಾಮಾಗ್ರಿಗಳು ಮತ್ತು ಬೆಲೆ ದತ್ತಾಂಶದ ಸಂಗ್ರಹಣೆಯೊಂದಿಗೆ ಸಿಪಿಐ ಮೂಲ ವರ್ಷವನ್ನು 2024ಕ್ಕೆ ಪರಿಷ್ಕರಿಸಲಾಗುತ್ತಿದೆ.

ಬಿಡುಗಡೆ ದಿನಾಂಕ | 12ನೇ ಫೆಬ್ರವರಿ 2026

ಸಮೀಕ್ಷೆಗೆ ಬಂದಾಗ ಎನ್‌ಎಸ್‌ಒ ಗಣತಿದಾರರೊಂದಿಗೆ ದಯವಿಟ್ಟು ಸಹಕರಿಸಿ. ನಿಮ್ಮ ಗುರುತನ್ನು ಗೌಪ್ಯವಾಗಿಡಲಾಗುತ್ತದೆ.

mospi.gov.in @GoIStats /goistats GoIStats Ministry of Statistics & PI

ಇತ್ತ ಕಾಲೇಜೂ ಅಲ್ಲ, ಅತ್ತ ವಿ.ವಿ ಅಲ್ಲ

ಗೊಂದಲಮಯ ಸ್ಥಿತಿಯಲ್ಲಿ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ

• ಎ.ಎಂ.ಸುರೇಶ

ಬೆಂಗಳೂರು: ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬಂದು ಏಳು ವರ್ಷಗಳಾಗಿವೆ. ಆದರೆ, ಇದುವರೆಗೂ ನಿಯಮಗಳ ರಚನೆ ಸಂಬಂಧ ಆದೇಶವಾಗಿಲ್ಲ. ಇದರಿಂದಾಗಿ ಇತ್ತ ವಿಶ್ವವಿದ್ಯಾಲಯವೂ ಅಲ್ಲ, ಅತ್ತ ಕಾಲೇಜೂ ಅಲ್ಲದ ಅತಂತ್ರ ಸ್ಥಿತಿ ನಿರ್ಮಾಣವಾಗಿದೆ.

ವಿಶ್ವವಿದ್ಯಾಲಯ ರೂಪಿಸಿರುವ ನಿಯಮಗಳಿಗೆ ಕಳೆದ ಸೆಪ್ಟೆಂಬರ್ ನಲ್ಲಿ ರಾಜ್ಯಪಾಲರು ಒಪ್ಪಿಗೆ ನೀಡಿದ್ದಾರೆ. ಆದರೆ, ಉನ್ನತ ಶಿಕ್ಷಣ ಇಲಾಖೆ ಇದುವರೆಗೂ ಈ ಕುರಿತು ಆದೇಶ ಹೊರಡಿಸಿಲ್ಲ. ಹೀಗಾಗಿ ಇಲ್ಲಿರುವ ಸಿಬ್ಬಂದಿ ತಾಂತ್ರಿಕವಾಗಿ ಈಗಲೂ ಕಾಲೇಜು ಶಿಕ್ಷಣ ಇಲಾಖೆಯ ಅಧೀನದಲ್ಲೇ ಇದ್ದಾರೆ. ಆದರೆ, ಕೆಲಸ ಮಾತ್ರ ವಿಶ್ವವಿದ್ಯಾಲಯದಲ್ಲಿ ಮುಂದುವರಿದಿದೆ ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

2019ರಲ್ಲಿ ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬಂದಿದ್ದು, ಮಹಾರಾಣಿ ಕಾಲೇಜಿನಲ್ಲಿ ಇದ್ದ ಸಿಬ್ಬಂದಿಯನ್ನೇ ನಿಯೋಜನೆ ಮೂಲಕ ವಿಶ್ವವಿದ್ಯಾಲಯದಲ್ಲಿ ಮುಂದುವರಿಸಲಾಗಿದೆ. ಆದರೆ, ಸಂಬಳ ಮಾತ್ರ ಕಾಲೇಜು ಶಿಕ್ಷಣ ಇಲಾಖೆಯಿಂದ ನೀಡಲಾಗುತ್ತಿದೆ. ವಿಶ್ವವಿದ್ಯಾಲಯದಲ್ಲೇ ಮುಂದುವರಿಯುವ ಹಾಗೂ ಹೊರಗೆ ಹೋಗುವ ಸಿಬ್ಬಂದಿಯ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

'ವಿಶ್ವವಿದ್ಯಾಲಯದಲ್ಲಿ ಒಟ್ಟು 150 ಬೋಧಕ ಸಿಬ್ಬಂದಿ ಇದ್ದು, 90 ಮಂದಿ ವಿಶ್ವವಿದ್ಯಾಲಯದಲ್ಲೇ ಉಳಿಯುವುದಾಗಿ ಹಾಗೂ 60 ಮಂದಿ ಹೊರಗೆ ಹೋಗುವುದಾಗಿ ಲಿಖಿತವಾಗಿ ತಿಳಿಸಿದ್ದಾರೆ. 11 ಮಂದಿ ಬೋಧಕೇತರ ಸಿಬ್ಬಂದಿ ಇದ್ದು, ಅವರೆಲ್ಲರೂ ಹೊರಗೆ ಹೋಗುವುದಾಗಿ ತಿಳಿಸಿದ್ದಾರೆ. ಇದಕ್ಕೆ ಸಂಬಂಧಿಸಿದ ಕಡತವನ್ನು ಕಳೆದ ಅಕ್ಟೋಬರ್‌ನಲ್ಲಿ ಉನ್ನತ ಶಿಕ್ಷಣ ಇಲಾಖೆಗೆ ಸಲ್ಲಿಸಲಾಗಿದೆ. ಆದರೆ, ಇದುವರೆಗೂ ಅನುಮೋದನೆ ನೀಡಿಲ್ಲ' ಎಂದು ಗೊತ್ತಾಗಿದೆ.

ನಿಯಮಗಳಿಗೆ ಮತ್ತು ವಿಶ್ವವಿದ್ಯಾಲಯದಲ್ಲೇ ಇರುವ ಮತ್ತು ಹೊರಗೆ ಹೋಗುವ ಸಿಬ್ಬಂದಿಗೆ ಸಂಬಂಧಿಸಿದ ಕಡತಗಳಿಗೆ ಒಪ್ಪಿಗೆ ಸಿಕ್ಕಿದರೆ ಕ್ಲಸ್ಟರ್ ವಿಶ್ವವಿದ್ಯಾಲಯ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲಿದೆ. ಈ ಕೆಲಸ ಆಗದೇ ಇರುವುದರಿಂದ ಪಿಎಚ್.ಡಿ ಆರಂಭಿಸಲು ಸಾಧ್ಯವಾಗುತ್ತಿಲ್ಲ. ಇದರಿಂದಾಗಿ ಸಂಶೋಧನಾ ಕಾರ್ಯದಲ್ಲಿ ತೊಡಗಲು ಬಯಸುವ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ.

'ಕ್ಲಸ್ಟರ್ ವಿಶ್ವವಿದ್ಯಾಲಯದಲ್ಲಿ 150 ಮಂದಿ ಕಾಯಂ ಬೋಧಕರಿದ್ದಾರೆ. ಬೇರೆ ಯಾವ ವಿಶ್ವವಿದ್ಯಾಲಯದಲ್ಲೂ ಇಷ್ಟೊಂದು ಸಂಖ್ಯೆಯಲ್ಲಿ ಬೋಧಕ ಸಿಬ್ಬಂದಿ ಇಲ್ಲ. ಇಲ್ಲಿ ಇಷ್ಟೊಂದು ದೊಡ್ಡಸಂಖ್ಯೆಯಲ್ಲಿ ಬೋಧಕ ಸಿಬ್ಬಂದಿ ಇದ್ದರೂ, ನಿಯಮಾವಳಿಗಳು ಇಲ್ಲದ ಕಾರಣ ಪಿಎಚ್.ಡಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಲು ಸಾಧ್ಯವಾಗುತ್ತಿಲ್ಲ. ಸರ್ಕಾರ ಆದಷ್ಟು ಬೇಗ ನಿಯಮಗಳಿಗೆ ಒಪ್ಪಿಗೆ ನೀಡಿದರೆ ಪಿಎಚ್.ಡಿ ಮಾಡಲು ಅನುಕೂಲವಾಗಲಿದೆ' ಎಂದು ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿನಿಯರು 'ಪ್ರಜಾವಾಣಿ'ಗೆ ತಿಳಿಸಿದರು.

ಡೇಟಾ ಸೈನ್ಸ್, ಕೃತಕ ಬುದ್ಧಿಮತ್ತೆಯ (ಎಐ) ಸ್ನಾತಕೋತ್ತರ ಕೋರ್ಸ್ ಸೇರಿದಂತೆ ವಿಶ್ವವಿದ್ಯಾಲಯದಲ್ಲಿ ಒಟ್ಟು 23 ಸ್ನಾತಕೋತ್ತರ ವಿಭಾಗಗಳಿವೆ. ಪದವಿ, ಸ್ನಾತಕೋತ್ತರ ಪದವಿಯ ವಿವಿಧ ವಿಭಾಗಗಳಲ್ಲಿ ಸುಮಾರು 4,500 ವಿದ್ಯಾರ್ಥಿನಿಯರು ಇದ್ದಾರೆ. ಡೇಟಾ ಸೈನ್ಸ್, ಕೃತಕ ಬುದ್ಧಿಮತ್ತೆ ಕೋರ್ಸ್‌ಗಳಿಗೆ ಭಾರಿ ಬೇಡಿಕೆ ಇದ್ದು, ಕಡಿಮೆ ವೆಚ್ಚದಲ್ಲಿ ವ್ಯಾಸಂಗ ಮಾಡಲು ಅವಕಾಶವಿದೆ.

ಮುಖ್ಯಾಂಶಗಳು

- ಒಂದು ವರ್ಷ 4 ತಿಂಗಳಿಂದ ಹಂಗಾಮಿ ಕುಲಪತಿ
- ಕ್ಲಸ್ಟರ್ ವಿ.ವಿಯಲ್ಲೇ ಉಳಿಯಲು ಹೆಚ್ಚಿನ ಬೋಧಕರ ಒಲವು
- ಅಡಕತ್ತರಿಯಲ್ಲಿ ಸಿಲುಕಿರುವ ಸಿಬ್ಬಂದಿ

'ಹೊಸ ಬ್ಲಾಕ್ ಇನ್ನೂ ಉದ್ಘಾಟನೆಯಾಗಿಲ್ಲ'

ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಕೋರ್ಸ್‌ಗಳಿಗಾಗಿ ನೂತನ ಶೈಕ್ಷಣಿಕ ವಿಭಾಗವನ್ನು ಕಳೆದ ವರ್ಷ ನಿರ್ಮಿಸಲಾಗಿದೆ. ಆದರೆ, ಇದುವರೆಗೂ ಉದ್ಘಾಟನೆಯಾಗಿಲ್ಲ. ಇದರಿಂದಾಗಿ ಹೊಸ ಕಟ್ಟಡ ಬಳಕೆಯಾಗುತ್ತಿಲ್ಲ.

'ಹೊಸ ಬ್ಲಾಕ್ ಉದ್ಘಾಟನೆಗೆ ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಅವರು ಬರಲಿ ಎಂದು ಆರು ತಿಂಗಳಿಂದ ಕಾಯಲಾಗುತ್ತಿದೆ. ಆದರೆ, ಅವರು ದಿನಾಂಕ ನೀಡಿಲ್ಲ. ಹೊಸ ವಿಭಾಗವನ್ನು ವಿದ್ಯಾರ್ಥಿಗಳ ಉಪಯೋಗಕ್ಕೆ ಬಳಸಿಕೊಳ್ಳಿ, ಮುಂದೆ ಉದ್ಘಾಟನೆ ಮಾಡೋಣ ಎಂದು ಸಚಿವರು ಈಚೆಗೆ ತಿಳಿಸಿದ್ದಾರೆ' ಎಂದು ಗೊತ್ತಾಗಿದೆ.

'ಸಂಶೋಧನೆಗೆ ಒತ್ತು ನೀಡಲಿ'

'ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆಗಳು ನಡೆಯಬೇಕು ಎಂಬುದು ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರ ಆಶಯವಾಗಿತ್ತು. ಅದಕ್ಕೆ ಅನುಗುಣವಾಗಿ ಕ್ಲಸ್ಟರ್ ವಿಶ್ವವಿದ್ಯಾಲಯ ಆರಂಭಿಸಲಾಗಿದೆ. ಆದರೆ, ಅದಕ್ಕೆ ಅನುಗುಣವಾಗಿ ಸಂಶೋಧನಾ ಚಟುವಟಿಕೆಗಳು ನಡೆಯುತ್ತಿಲ್ಲ' ಎಂಬ ಅಸಮಾಧಾನ ವ್ಯಕ್ತವಾಗಿದೆ.

'ವಿಶ್ವವಿದ್ಯಾಲಯದ ಅಧೀನದಲ್ಲಿ ಸಂಯೋಜನೆ ಹೊಂದಿರುವ ಕಾಲೇಜುಗಳು ಇದ್ದರೆ ಸಂಶೋಧನೆಗೆ ಒತ್ತು ನೀಡಲು ಸಾಧ್ಯವಾಗುವುದಿಲ್ಲ ಎಂಬ ಕಾರಣಕ್ಕಾಗಿ ಕ್ಲಸ್ಟರ್ ವಿ.ವಿ.ಗಳು ಇರಬೇಕು ಎಂದು ಮನಮೋಹನ್ ಸಿಂಗ್ ಬಯಸಿದ್ದರು. ಈ ವಿಶ್ವವಿದ್ಯಾಲಯ ಅವರ ಕಲ್ಪನೆಯ ಕೂಸು. ಸರ್ಕಾರಕ್ಕೆ ಅವರ ಬಗ್ಗೆ ಗೌರವವಿದ್ದರೆ, ಪೂರ್ಣ ಪ್ರಮಾಣದಲ್ಲಿ ವಿಶ್ವವಿದ್ಯಾಲಯ ಕಾರ್ಯನಿರ್ವಹಿಸಲು ಅವಕಾಶ ಮಾಡಿಕೊಡಬೇಕು. ಸಂಶೋಧನೆಗೆ ಒತ್ತು ನೀಡಬೇಕು' ಎಂದು ಪ್ರಾಧ್ಯಾಪಕರೊಬ್ಬರು ಅಭಿಪ್ರಾಯಪಟ್ಟರು.

'ಹಳೆಯ ಮೈಸೂರು ಭಾಗದಲ್ಲಿ ಇರುವ ಮಹಿಳಾ ಕಾಲೇಜುಗಳನ್ನು ಕ್ಲಸ್ಟರ್ ವಿಶ್ವವಿದ್ಯಾಲಯದ ಅಧೀನದಲ್ಲಿ ತರುವ ಮೂಲಕ ವಿ.ವಿ.ಯನ್ನು ಬಲಪಡಿಸಬಹುದು. ಇಲ್ಲವೇ ಈಗಿರುವ ರೀತಿಯಲ್ಲೇ ಉಳಿಸಿಕೊಂಡು ಸಂಶೋಧನೆಗೆ ಒತ್ತು ನೀಡಬೇಕು. ಗ್ಯಾರಂಟಿಗಳಿಗೆ ₹56 ಸಾವಿರ ಕೋಟಿ ನೀಡುವ ಸರ್ಕಾರ, ವಿಶ್ವವಿದ್ಯಾಲಯಗಳಿಗೆ ಸಾವಿರ ಕೋಟಿ ನೀಡಿದರೂ, ಬಹಳಷ್ಟು ಅನುಕೂಲವಾಗುತ್ತದೆ' ಎಂದು ತಿಳಿಸಿದರು.

> ಬಹಳ ಕಷ್ಟಪಟ್ಟು ವಿಶ್ವವಿದ್ಯಾಲಯವನ್ನು ಒಂದು ಹಂತಕ್ಕೆ ತರಲಾಗಿದೆ. ಅದನ್ನು ಉಳಿಸಿಕೊಂಡು, ಮತ್ತಷ್ಟು ಬಲಪಡಿಸಬೇಕು. ಕಡಿಮೆ ಶುಲ್ಕದಲ್ಲಿ ಡೇಟಾ ಸೈನ್ಸ್, ಕೃತಕ ಬುದ್ಧಿಮತ್ತೆ ಕೋರ್ಸ್‌ಗೆ ಸೇರಲು ಇಲ್ಲಿ ಅವಕಾಶ ಇದೆ. ಬೇರೆ ಎಲ್ಲೂ ಇಂತಹ ವ್ಯವಸ್ಥೆ ಇಲ್ಲ
> **ಪ್ರೊ.ಎಲ್.ಗೋಮತಿ ದೇವಿ,** ವಿಶ್ರಾಂತ ಕುಲಪತಿ

'ರಕ್ತದಾನ: ವಿಶೇಷ ಅಭಿಯಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಯುವ ರೆಡ್ ಕ್ರಾಸ್ ಕಾರ್ಯಕ್ರಮ ಅಧಿಕಾರಿಗಳ ಸಭೆ ಮತ್ತು ತರಬೇತಿ ಶಿಬಿರದಲ್ಲಿ ಕುಲಪತಿ ಬಿ.ರಮೇಶ್, ಡಾ.ರಾಜೇಶ್, ಆನಂದ್, ರಾಜು ಉಪಸ್ಥಿತರಿದ್ದರು

ಬೆಂಗಳೂರು: 'ವಿದ್ಯಾರ್ಥಿಗಳು ಜ್ಞಾನ ಹಾಗೂ ಕೌಶಲದ ಜತೆಗೆ ಸಾಮಾಜಿಕ ಹೊಣೆಗಾರಿಕೆ ಹಾಗೂ ಮಾನವೀಯ ಸಂವೇದನೆಗಳನ್ನು ಬೆಳೆಸಿಕೊಳ್ಳಬೇಕು' ಎಂದು ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಿ.ರಮೇಶ್ ಅವರು ತಿಳಿಸಿದರು.

ಸೆಂಟ್ರಲ್ ಕಾಲೇಜಿನ ಆವರಣದಲ್ಲಿ ಏರ್ಪಡಿಸಿದ್ದ ಯುವ ರೆಡ್ ಕ್ರಾಸ್ ಕಾರ್ಯಕ್ರಮ ಅಧಿಕಾರಿಗಳ ಸಭೆ ಮತ್ತು ತರಬೇತಿ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

'ಮಹಿಳೆಯರು ಮತ್ತು ಮಕ್ಕಳು ರಕ್ತಹೀನತೆಯಿಂದ ಬಳಲುತ್ತಿದ್ದು, ಗ್ರಾಮೀಣ ಪ್ರದೇಶಗಳ ಜನರು ಗಂಭೀರ ಆರೋಗ್ಯ ಬಿಕ್ಕಟ್ಟಿನ ಸಮಸ್ಯೆ ಎದುರಿಸುತ್ತಿದ್ದಾರೆ. ರಕ್ತದಾನ ಮಾಡುವುದು, ರಸ್ತೆ ಅಪಘಾತ, ದುರಂತಗಳ ಸಂದರ್ಭದಲ್ಲಿ ನೆರವಾಗುವಂತಹ ಸೇವಾ ಮನೋಭಾವವನ್ನು ಉತ್ತೇಜಿಸಲು ವಿಶ್ವವಿದ್ಯಾಲಯ ವಿಶೇಷ ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಿದೆ' ಎಂದು ತಿಳಿಸಿದರು.

ರೆಡ್ ಕ್ರಾಸ್ ಸಂಸ್ಥೆಯ ನಗರ ಜಿಲ್ಲಾ ಕಾರ್ಯದರ್ಶಿ ಡಾ.ರಾಜೇಶ್, ರಾಜ್ಯ ಸಂಯೋಜಕ ಆನಂದ್, ಹಿರಿಯ ಸಲಹೆಗಾರ ಸಿ.ಎನ್. ಎನ್.ರಾಜು ಶಿಬಿರಾರ್ಥಿಗಳಿಗೆ ಉಪನ್ಯಾಸ ಮತ್ತು ಮಾರ್ಗದರ್ಶನ ನೀಡಿದರು.

51ನೇ ರ್‍ಯಾಂಕ್‌ಗೆ ಕುಸಿದ ಬೆಸ್ಕಾಂ

ಪ್ರಜಾವಾಣಿ ವಾರ್ತೆ

ಯಾವ ಕಂಪನಿಗೆ ಯಾವ ರ್‍ಯಾಂಕ್?



ಬೆಂಗಳೂರು: ದೇಶದಲ್ಲಿರುವ ಒಟ್ಟು 54 ವಿದ್ಯುತ್ ಸರಬರಾಜು ಕಂಪನಿಗಳ ಪೈಕಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) 51ನೇ ರ್‍ಯಾಂಕ್‌ಗೆ ಕುಸಿದಿದೆ.

ಕೇಂದ್ರದ ಇಂಧನ ಸಚಿವಾಲಯ ದೇಶದಾದ್ಯಂತ ಮೌಲ್ಯಮಾಪನ ಮಾಡಿದ್ದು, 14ನೇ ವಾರ್ಷಿಕ ಸಮಗ್ರ ರೇಟಿಂಗ್ ಮತ್ತು ರ್‍ಯಾಂಕಿಂಗ್ ವರದಿಯನ್ನು ಈಚೆಗೆ ಬಿಡುಗಡೆ ಮಾಡಿದೆ. ಬೆಸ್ಕಾಂ ಬಹುಮಾದರಿಗಳಲ್ಲಿ ಕಳಪೆ ಕಾರ್ಯನಿರ್ವಹಣೆಯಿಂದ 'ಮೈನಸ್ ಸಿ ರೇಟಿಂಗ್ ಮತ್ತು ರೆಡ್ ಕಾರ್ಡ್' ಪಡೆದಿದೆ.

ವರದಿಯ ಪ್ರಕಾರ, ಬೆಸ್ಕಾಂ ಒಟ್ಟಾರೆ ₹13,819 ಕೋಟಿ ನಷ್ಟ ಅನುಭವಿಸಿದ್ದು, ₹22,611 ಕೋಟಿ ಸಾಲ ಹೊಂದಿದೆ. 2025ರಲ್ಲಿ ₹5,476 ಕೋಟಿ ನಷ್ಟ ಅನುಭವಿಸಿದೆ.

ಸಂಪನ್ಮೂಲ ಸಂಗ್ರಹ, ಬಿಲ್ಲಿಂಗ್, ಪ್ರಸರಣ ನಷ್ಟ ಸೇರಿದಂತೆ 15 ಮಾನದಂಡಗಳಲ್ಲಿ ಕಂಪನಿಗಳ ಕಾರ್ಯದಕ್ಷತೆಯನ್ನು ಮೌಲ್ಯಮಾಪನ ಮಾಡಲಾಗಿದೆ. 13ನೇ ವಾರ್ಷಿಕ ಸಮಗ್ರ ರೇಟಿಂಗ್ ಮತ್ತು ರ್‍ಯಾಂಕಿಂಗ್‌ನಲ್ಲಿ 40.43 ಅಂಕ ಪಡೆದು 34ನೇ ರ್‍ಯಾಂಕ್ ಪಡೆದಿದ್ದ ಬೆಸ್ಕಾಂ, 14ನೇ ವಾರ್ಷಿಕ ವರದಿಯಲ್ಲಿ 100ಕ್ಕೆ 12.44 ಅಂಕ ಪಡೆದಿರುವ ಬೆಸ್ಕಾಂ ಗಣನೀಯವಾಗಿ ಕುಸಿತ ಕಂಡಿದೆ. ಆಡಿಟ್ ವರದಿಯಲ್ಲಿ ನಕಾರಾತ್ಮಕ ಅಭಿಪ್ರಾಯ ಇರುವುದರಿಂದ ಎಚ್ಚರಿಕೆ ನೀಡಲಾಗಿದೆ.

ಕರ್ನಾಟಕದ ಯಾವ ಎಸ್ಕಾಂಗಳೂ ಅಗ್ರ 10 ಅಥವಾ 20ರ ಒಳಗೆ ರ್‍ಯಾಂಕ್ ಪಡೆದಿಲ್ಲ. 26ನೇ ರ್‍ಯಾಂಕ್ ಪಡೆದಿರುವ ಮೆಸ್ಕಾಂ, ರಾಜ್ಯಕ್ಕೆ ಅಗ್ರಸ್ಥಾನದಲ್ಲಿದೆ. ಸರ್ಕಾರ ಸುಧಾರಣೆಗಳ ರೂಪುರೇಷೆಗಳನ್ನು ಅನುಷ್ಠಾನ ಮಾಡದಿದ್ದರೆ, ಎಸ್ಕಾಂಗಳು ಯಾವುದೇ ರೀತಿಯಲ್ಲಿ ಪ್ರಗತಿ ಕಾಣುವುದಿಲ್ಲ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

'ಗುರುಚರಣ್ ಸಮಿತಿಯು ಸುಧಾರಣೆಗೆ ಹಲವು ಸಲಹೆಗಳನ್ನು ನೀಡಿದ್ದು, ಅವುಗಳನ್ನು ಅನುಷ್ಠಾನಗೊಳಿಸುವ ಅಗತ್ಯವಿದೆ ಎಂದು ಕೆಇಆರ್‌ಸಿ ಸಲಹಾ ಸಮಿತಿಯ ಮಾಜಿ ಸದಸ್ಯ ಎಂ.ಜಿ. ಪ್ರಭಾಕರ್ ಹೇಳಿದರು.

'ಕೆಲವು ಸಮಸ್ಯೆಗಳನ್ನು ಗುರುತಿಸಲಾಗಿದೆ. ಅವುಗಳನ್ನು ಬಗೆಹರಿಸಿ, ಕಾರ್ಯದಕ್ಷತೆಯನ್ನು ಉತ್ತಮಗೊಳಿಸಲು ಪ್ರಯತ್ನಿಸಲಾಗುತ್ತಿದೆ' ಎಂದು ಇಂಧನ ಇಲಾಖೆಯ ಅಧಿಕಾರಿಗಳು ಹೇಳಿದರು.

'ಕೆಲವು ಸಮಸ್ಯೆಗಳು ಇರುವುದನ್ನು ಆಡಿಟ್ ಮೂಲಕ ತಿಳಿದುಕೊಂಡಿದ್ದೇವೆ. ಅವುಗಳನ್ನು ಬಗೆಹರಿಸಲು ಕ್ರಮ ಕೈಗೊಳ್ಳುತ್ತಿದ್ದೇವೆ. ಇನ್ನೊಂದೆಡೆ, ನಮ್ಮ ಕಾರ್ಯದಕ್ಷತೆ ತೃಪ್ತಿಕರವಾಗಿದೆ. ನಮ್ಮ ಆದಾಯದ ಪ್ರಗತಿ ಆರೋಗ್ಯಕರವಾಗಿದೆ' ಎಂದು ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಪ್ರತಿಕ್ರಿಯಿಸಿದರು.

ಮಂಗಳೂರಿಗೆ ಕೈಗಾರಿಕಾ ಕಾರಿಡಾರ್ ವಿಸ್ತರಿಸಿ: ಎಚ್.ಡಿ. ದೇವೇಗೌಡ

ಪ್ರಜಾವಾಣಿ ವಾರ್ತೆ

ಎಚ್.ಡಿ. ದೇವೇಗೌಡ

ನವದೆಹಲಿ: ರಾಷ್ಟ್ರದ ಮೂರು ಪ್ರಮುಖ ಬಂದರುಗಳನ್ನು ಜೋಡಿಸಲು ಬೆಂಗಳೂರಿನಿಂದ ಮಂಗಳೂರಿನವರೆಗೆ ಕೈಗಾರಿಕಾ ಕಾರಿಡಾರ್ ವಿಸ್ತರಿಸಬೇಕು. ರೈತರ ಹಿತ ಕಾಯಲು ಹಲಸು, ಹುಣಸೆ, ನೇರಳೆ ಮಂಡಳಿ ರಚನೆ ಮಾಡಬೇಕು ಎಂದು ರಾಜ್ಯಸಭಾ ಸದಸ್ಯ ಎಚ್.ಡಿ.ದೇವೇಗೌಡ ಒತ್ತಾಯಿಸಿದರು.

ರಾಜ್ಯಸಭೆಯಲ್ಲಿ ಮಂಗಳವಾರ ನಡೆದ ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 'ಚೆನ್ನೈನಿಂದ ಬೆಂಗಳೂರು ಮತ್ತು ಹೈದರಾಬಾದ್‌ನಿಂದ ಬೆಂಗಳೂರು ನಡುವಿನ ಪ್ರಮುಖ ಬಂದರುಗಳನ್ನು ಹೊಂದಿರುವ ಕೈಗಾರಿಕಾ ಕಾರಿಡಾರ್ ಯೋಜನೆಗಳಿಗೆ ಈಗಾಗಲೇ ಅನುಮೋದನೆ ನೀಡಿದೆ. ಅದೇ ರೀತಿ, ಬೆಂಗಳೂರಿನಿಂದ ಮಂಗಳೂರಿನವರೆಗೆ ಈ ಕೈಗಾರಿಕಾ ಕಾರಿಡಾರ್ ವಿಸ್ತರಿಸಿದರೆ ಕೈಗಾರಿಕಾ ಅಭಿವೃದ್ಧಿಗೆ ಬಹಳಷ್ಟು ಅನುಕೂಲ ಆಗುತ್ತದೆ. ಮಂಗಳೂರು ಕೂಡ ಪ್ರಮುಖ ಬಂದರು ಆಗಿದ್ದು; ವಿಶಾಖಪಟ್ಟಣ, ಚೆನ್ನೈ ಹಾಗೂ ಮಂಗಳೂರು ಬಂದರುಗಳನ್ನು ಜೋಡಿಸಿದರೆ ರಾಷ್ಟ್ರದ ಕೈಗಾರಿಕಾಭಿವೃದಿಗೆ ಪರಿವರ್ತನಾತ್ಮಕ ವೇಗ ಬರುತ್ತದೆ' ಎಂದರು.

'ಕರ್ನಾಟಕವೂ ಸೇರಿ ತಮಿಳುನಾಡು, ಕೇರಳ ಮುಂತಾದ ರಾಜ್ಯಗಳಲ್ಲಿ ಬೆಳೆಯಲಾಗುವ ಹಲಸು, ಹುಣಸೆ, ನೇರಳೆಗೆ ಉತ್ತೇಜನ ನೀಡಲು ಮಕಾನ ಮಂಡಳಿಯಂತೆ ಪ್ರತ್ಯೇಕ ಮಂಡಳಿಯನ್ನು ರಚನೆ ಮಾಡಬೇಕು. ಈ ಮೂರು ಬೆಳೆಗಳು ಔಷಧೀಯ ಗುಣಗಳನ್ನು ಹೊಂದಿದ್ದು, ದಕ್ಷಿಣದ ಭಾಗದಲ್ಲಿ ವ್ಯಾಪಕವಾಗಿ ಬೆಳೆಯಲಾಗುತ್ತಿದೆ. ಇವು ಕಡಿಮೆ ಮಳೆ ಅಗತ್ಯವಿರುವ ಬೆಳೆಗಳು' ಎಂದರು.

ಚಂದ್ರೇಗೌಡ ಖುಲಾಸೆ

ಬೆಂಗಳೂರು: ನಗರದ ಖಾಸಗಿ ಕಾಲೇಜಿನ ಕನ್ನಡ ಬೋಧಕ ಹನಿಯೂರು ಚಂದ್ರೇಗೌಡ ವಿರುದ್ಧ ಹೊರಿಸಲಾಗಿದ್ದ ಮಾನನಷ್ಟ ಆರೋಪಗಳಿಂದ ಅವರನ್ನು ನಗರದ ನ್ಯಾಯಾಲಯ ಖುಲಾಸೆಗೊಳಿಸಿದೆ.

'ನಾನು ವಾಮ ಮಾರ್ಗದಿಂದ ಅರ್ಹತೆ ಇಲ್ಲದೆ ಹುದ್ದೆ ಪಡೆದುಕೊಂಡಿದ್ದೇನೆ ಎಂದು ಚಂದ್ರೇಗೌಡ ನನ್ನ ತೇಜೋವಧೆ ಮಾಡಿದ್ದಾರೆ ಮತ್ತು ಸುಳ್ಳು ಹೇಳಿಕೆಗಳನ್ನು ನೀಡಿ ಅಪಪ್ರಚಾರ ಮಾಡಿದ್ದಾರೆ' ಎಂದು ಆರೋಪಿಸಿ ಬೆಂಗಳೂರು ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದ ಸಹಾಯಕ ಪ್ರಾಧ್ಯಾಪಕ ನಟರಾಜ್ ಹುಳಿಯಾರ್ ಮಾನನಷ್ಟ ಮೊಕದ್ದಮೆ ಹೂಡಿದ್ದರು.

ಈ ಖಾಸಗಿ ದೂರಿನ ವಿಚಾರಣೆ ನಡೆಸಿದ 9ನೇ ಹೆಚ್ಚುವರಿ ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ವಿನೋದ್ ಬಾಲನಾಯಕ್ ಅವರು ಸಾಕ್ಷ್ಯಾಧಾರ ಕೊರತೆ ಕಾರಣಗಳಿಂದ ಚಂದ್ರೇಗೌಡ ಅವರನ್ನು ದೋಷಾರೋಪಗಳಿಂದ ಮುಕ್ತಗೊಳಿಸಿದ್ದಾರೆ.

ಮೆಟ್ರೊದಲ್ಲಿ ನಿಯಮ ಉಲ್ಲಂಘನೆ: 98,160 ಪ್ರಕರಣ

ಬೆಂಗಳೂರು: ನಮ್ಮ ಮೆಟ್ರೊ ರೈಲಿನಲ್ಲಿ ಪ್ರಯಾಣಿಸುವ ವೇಳೆ ಜೋರಾಗಿ ಸಂಗೀತ ಕೇಳಿದ, ಮೀಸಲಾದ ಆಸನಗಳನ್ನು ಬಿಟ್ಟುಕೊಡದೇ ಇರುವ, ಆಹಾರ, ತಂಬಾಕು ಸೇವಿಸಿರುವ ಒಟ್ಟು 98,160 ಪ್ರಕರಣಗಳು ಒಂದು ವರ್ಷದಲ್ಲಿ ದಾಖಲಾಗಿವೆ.

ಮೆಟ್ರೊ ರೈಲುಗಳಲ್ಲಿ ಪ್ರಯಾಣಿಕರ ಜವಾಬ್ದಾರಿಯುತ ವರ್ತನೆ ಹಾಗೂ ಪ್ರಯಾಣದಲ್ಲಿ ಪಾಲಿಸಬೇಕಾದ ನಿಯಮಗಳನ್ನು ಪ್ರಚುರಪಡಿಸುವ ಉದ್ದೇಶದಿಂದ ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತ (ಬಿಎಂಆರ್‌ಸಿಎಲ್) ವಿಶೇಷ ಜಾಗೃತಿ ಅಭಿಯಾನವನ್ನು ಕೈಗೊಂಡಿತ್ತು.

ಇಬ್ಬರು ಗೃಹ ರಕ್ಷಕರನ್ನೊಳಗೊಂಡ ವಿಶೇಷ ತಂಡಗಳನ್ನು ಮೆಟ್ರೊ ರೈಲುಗಳಲ್ಲಿ ನಿಯೋಜಿಸಿ, ಪ್ರಯಾಣಿಕರಿಗೆ ತಿಳಿವಳಿಕೆ ನೀಡುವ ಹಾಗೂ ಜಾಗೃತಿ ಮೂಡಿಸುವ ಕಾರ್ಯ ನಡೆಸಲಾಗಿತ್ತು.

ಅಭಿಯಾನದ ವೇಳೆ 57,538 ಪ್ರಯಾಣಿಕರು ಜೋರಾಗಿ ಸಂಗೀತ ಕೇಳಿರುವುದು, 37,038 ಪ್ರಯಾಣಿಕರು ಅಗತ್ಯವಿರುವವರಿಗೆ ಮೀಸಲು ಆಸನಗಳನ್ನು ಬಿಡದೆ ಬಳಸಿರುವುದು, 1,907 ಪ್ರಯಾಣಿಕರು ರೈಲುಗಳೊಳಗೆ ಆಹಾರ ಸೇವಿಸಿರುವುದು, 1,677 ಪ್ರಯಾಣಿಕರು ತಂಬಾಕು ಉತ್ಪನ್ನಗಳ ಸೇವನೆ ಮಾಡುತ್ತಿದ್ದುದು ಪತ್ತೆಯಾಗಿತ್ತು.

ಸಾರ್ವಜನಿಕರು ಸಹಕರಿಸುವ ಮೂಲಕ ಎಲ್ಲರಿಗೂ ಸುರಕ್ಷಿತ, ಆರಾಮದಾಯಕ ಮತ್ತು ಆನಂದದಾಯಕ ಪ್ರಯಾಣ ಸಿಗುವಂತೆ ಮಾಡಬೇಕು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಕೋರಿದ್ದಾರೆ.

69ನೇ ರಾಷ್ಟ್ರಮಟ್ಟದ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಪ್ರಶಸ್ತಿ ವಿಜೇತರೊಂದಿಗೆ ಗಣ್ಯರು

ಪಂಜಾಬ್, ಹರಿಯಾಣಕ್ಕೆ ಸಮಗ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಜಾಲಹಳ್ಳಿಯ ಸಂತ ಕ್ಲಾರೆಟ್ ಪದವಿ ಪೂರ್ವ ಕಾಲೇಜು ಆವರಣದಲ್ಲಿ ನಡೆದ 19 ವಯೋಮಾನದೊಳಗಿನ ಬಾಲಕ-ಬಾಲಕಿಯರ 69ನೇ ರಾಷ್ಟ್ರಮಟ್ಟದ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಪಂಜಾಬ್ ಹಾಗೂ ಹರಿಯಾಣ ತಂಡಗಳು ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ಸಮಗ್ರ ಪ್ರಶಸ್ತಿ ಪಡೆದವು.

ಸ್ಕೂಲ್ ಗೇಮ್ಸ್ ಫೆಡರೇಷನ್ ಆಫ್ ಇಂಡಿಯಾ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಹಾಗೂ ಸಂತ ಕ್ಲಾರೆಟ್ ಪದವಿ ಪೂರ್ವ ಕಾಲೇಜು ಸಹಯೋಗದಲ್ಲಿ ಬಾಕ್ಸಿಂಗ್ ಚಾಂಪಿಯನ್‌ಶಿಪ್ ನಡೆಯಿತು.

ವಿವಿಧ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಹಾಗೂ ಶಿಕ್ಷಣ ಸಮಿತಿಗಳ ಬಾಲಕರ 37 ತಂಡಗಳು ಹಾಗೂ ಬಾಲಕಿಯರ 35 ತಂಡಗಳಿಂದ ಪ್ರತ್ಯೇಕ ವಿಭಾಗಗಳಲ್ಲಿ 750ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಿದ್ದರು.

ಬೆಂಗಳೂರು ಉತ್ತರ ಜಿಲ್ಲೆಯ ಉಪ ನಿರ್ದೇಶಕ ಫಾಲಾಕ್ಷ ಮಾತನಾಡಿ, 'ವಿಜೇತ ಕ್ರೀಡಾಪಟುಗಳು ತಮ್ಮ ಭವಿಷ್ಯದ ಕ್ರೀಡಾಬದುಕಿನಲ್ಲಿ ಒಲಿಂಪಿಕ್ಸ್‌ನಂತಹ ಕ್ರೀಡಾಕೂಟದಲ್ಲಿ ಭಾಗವಹಿಸಿ ಪದಕಗಳಿಸುವ ಮೂಲಕ ರಾಷ್ಟ್ರಕ್ಕೆ ಕೀರ್ತಿ' ಎಂದು ಹಾರೈಸಿದರು. ದ್ರೋಣಾಚಾರ್ಯ ಪ್ರಶಸ್ತಿ ಪುರಸ್ಕೃತ ಡಾ. ಚಂದ್ರಲಾಲ್ ಮತ್ತು ಎ. ವೆಂಕಟೇಶ್ವರ ರಾವ್ ಭಾಗವಹಿಸಿದ್ದರು.

ಸಂತ ಕ್ಲಾರೆಟ್ ಶಿಕ್ಷಣ ಸಂಸ್ಥೆಗಳ ವ್ಯವಸ್ಥಾಪಕ ರೆವರೆಂಡ್ ಕ್ಸೇವಿಯರ್ ಇ. ಮನವತ್, ಪ್ರಾಂಶುಪಾಲ ರೆವರೆಂಡ್ ಫಾದರ್ ಮೈಕೆಲ್ ಡಿಸೋಜಾ ಸಿ.ಎಂ.ಎಫ್, ಬೆಂಗಳೂರು ಉತ್ತರ ಜಿಲ್ಲಾ ಪ್ರಾಂಶುಪಾಲರ ಸಂಘದ ಅಧ್ಯಕ್ಷೆ ಸಂಧ್ಯಾ ಮೆನೆಜಿಸ್, ಉಪಾಧ್ಯಕ್ಷರಾದ ರೇಣುಕಾ, ಗುರುರಾಜ್ ಎಸ್. ದಾವಣಗೆರೆ, ವೇಣುಗೋಪಾಲ್, ಕಾರ್ಯದರ್ಶಿ ಡಾ. ಕೃಷ್ಣಮೂರ್ತಿ ಆರ್.. ಕ್ರೀಡಾ ಸಂಯೋಜಕ ಮುರಳೀಧರ್ ಎಂ. ಸಹ ಕ್ರೀಡಾ ಸಂಯೋಜಕ ಡಾ. ಗಿರೀಶ್ ಸಿ. ಗೋಲಾ ಉಪಸ್ಥಿತರಿದ್ದರು.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಸುಧಾ. ಮಯೂರ ಓದಿರಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560020.

ಸಂ: ಬೆಂಅಪ್ರಾ/ನಯೋಸ/CLU-255/4048/2025-26(E-158251) ದಿನಾಂಕ: 11.02.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14-Aರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರು, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ. ನಂ	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾಯೋಜನೆ-2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ. ಮನೋಜ್ ಕುಮಾರ್ ಹೆಚ್. ಬಿನ್ ಲೇಟ್ ನಾಗರಾಜರೆಡ್ಡಿ ಹುಲಿಮಂಗಲ ಗ್ರಾಮ, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು ಬೆಂಗಳೂರು-560105	ಆನೇಕಲ್	ಜಿಗಣಿ	ಎಸ್. ಬಿಂಗೀಪುರ	113/3	0-14	ವ್ಯವಸಾಯ ವಲಯ	ವಾಣಿಜ್ಯ
					114/7	0-13		
					ಒಟ್ಟು	0-27		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನಿನಲ್ಲಿ ಕೃಷಿ ಉಪಯೋಗದಿಂದ ವಾಣಿಜ್ಯ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿರುವುದರಿಂದ ಸ್ಥಳೀಯ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ. ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ನೀಡಿದಂತಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಜಮೀನುಗಳನ್ನು **'ವ್ಯವಸಾಯ' ವಲಯ** ದಿಂದ **'ವಾಣಿಜ್ಯ ವಲಯ'ಕ್ಕೆ** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂಖ್ಯೆ ಇಸಿಎನ್-ಟಿಆರ್‌ಡಿ-04-2025 ದಿನಾಂಕ: 05.02.2026

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಕ್ಕಾಗಿ ಇ-ಟೆಂಡರ್ ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ನೈಋತ್ಯ ರೈಲ್ವೆ ವಲಯದ ಮುಖ್ಯ ವಿದ್ಯುತ್ ಅಭಿಯಂತರರು, ನಿರ್ಮಾಣ ಹುಬ್ಬಳ್ಳಿಯ ವ್ಯಾಪ್ತಿಯಲ್ಲಿ ವಿವಿಧ ನಿರ್ಮಾಣ ಸ್ಥಳಗಳು/ವಿಭಾಗಗಳಿಗೆ (ಬೆಂಗಳೂರು ದಂಡು ಮತ್ತು ಹುಬ್ಬಳ್ಳಿ ಘಟಕ) ಯೋಜನಾ ಮೇಲ್ವಿಚಾರಣಾ ಸೇವೆಗಳನ್ನು ಒದಗಿಸಲು ಯೋಜನಾ ಮೇಲ್ವಿಚಾರಣಾ ಸೇವೆಗಳ ಏಜೆನ್ಸಿ (ಪಿಎಸ್‌ಎಸ್‌ಎ) ನೇಮಕಕ್ಕಾಗಿ ಪ್ರಸ್ತಾವನೆಗಾಗಿ (ಆರ್‌ಎಫ್‌ಪಿ) ವಿನಂತಿ	ರೂ. 2,56,49,420.16/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **23-03-2026 ರಂದು 11:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ

ಉಪ ಮುಖ್ಯ ವಿದ್ಯುತ್ ಅಭಿಯಂತರರು, ಟ್ರಾಕ್ಷನ್ ವಿತರಣೆ-I/ ನಿರ್ಮಾಣ/ ಬೆಂಗಳೂರು ದಂಡು

ಪಿಯುಬಿ/884/ಎಡಿ360/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2025-26

RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ. RailOne ಭಾರತೀಯ ರೈಲ್ವೆಯ ಆಲ್-ಇನ್-ಒನ್ ರೈಲ್ವೆ ಅಪ್ಲಿಕೇಶನ್ ಆಗಿದೆ. ಪ್ರಯಾಣಿಕರು ಕಾಯ್ದಿರಿಸಿದ ಟಿಕೆಟ್‌ಗಳು, ಕಾಯ್ದಿರಿಸದ ಟಿಕೆಟ್‌ಗಳು, ಪ್ಲಾಟ್‌ಫಾರ್ಮ್ ಟಿಕೆಟ್‌ಗಳು ಮತ್ತು ಸೀಸನ್ ಪಾಸ್‌ಗಳನ್ನು ಬುಕ್ ಮಾಡಬಹುದು, PNR ಸ್ಥಿತಿಯನ್ನು ಪರಿಶೀಲಿಸಬಹುದು, ಆಹಾರವನ್ನು ಬುಕ್ ಮಾಡಬಹುದು ಮತ್ತು ಇನ್ನೂ ಅನೇಕ ಸೇವೆಗಳನ್ನು ತಮ್ಮ ಬೆರಳ ತುದಿಯಲ್ಲಿ ಪಡೆಯಬಹುದು. RailOne ಅಪ್ಲಿಕೇಶನ್ ಮೂಲಕ ಕಾಯ್ದಿರಿಸದ ಟಿಕೆಟ್‌ಗಳನ್ನು ಬುಕ್ ಮಾಡಲು ಡಿಜಿಟಲ್ ಪಾವತಿಯನ್ನು ಬಳಸಿ ಮತ್ತು ಶೇ3ವರೆಗೆ ರಿಯಾಯಿತಿಯನ್ನು ಪಡೆದು ಆನಂದಿಸಿ.

South Western Railway - SWR | SWRRLY | @SWRAILWAYHQ | @sw_railways

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂಖ್ಯೆ ಬಿ/ಟಿಆರ್‌ಡಿ-29-2025-26-ಒಟಿ-44 ದಿನಾಂಕ: 06.02.2026

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಕ್ಕಾಗಿ ಇ-ಟೆಂಡರ್ ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದಲ್ಲಿ ವಿವಿಧ ಒಎಚ್‌ಇ/ಪಿಎಸ್‌ಐ ಎಚ್ಚರಿಕೆ ಫಲಕಗಳು ಮತ್ತು ವಿಭಾಗೀಕರಣ ಡಯಾಗ್ರಾಮ್‌ಗಳನ್ನು ಒದಗಿಸುವುದು. **ಮುಕ್ತಾಯದ ಅವಧಿ 06 ತಿಂಗಳು**	ರೂ. 7210386.64/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **27-02-2026 ರಂದು 15:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ

ಹಿರಿಯ ವಿಭಾಗೀಯ ವಿದ್ಯುತ್ ಅಭಿಯಂತರರು/ ಟಿಆರ್‌ಡಿ, ಬೆಂಗಳೂರು

ಪಿಯುಬಿ/886/ಎಡಿ360/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2025-26

RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ. RailOne ಭಾರತೀಯ ರೈಲ್ವೆಯ ಆಲ್-ಇನ್-ಒನ್ ರೈಲ್ವೆ ಅಪ್ಲಿಕೇಶನ್ ಆಗಿದೆ. ಪ್ರಯಾಣಿಕರು ಕಾಯ್ದಿರಿಸಿದ ಟಿಕೆಟ್‌ಗಳು, ಕಾಯ್ದಿರಿಸದ ಟಿಕೆಟ್‌ಗಳು, ಪ್ಲಾಟ್‌ಫಾರ್ಮ್ ಟಿಕೆಟ್‌ಗಳು ಮತ್ತು ಸೀಸನ್ ಪಾಸ್‌ಗಳನ್ನು ಬುಕ್ ಮಾಡಬಹುದು, PNR ಸ್ಥಿತಿಯನ್ನು ಪರಿಶೀಲಿಸಬಹುದು, ಆಹಾರವನ್ನು ಬುಕ್ ಮಾಡಬಹುದು ಮತ್ತು ಇನ್ನೂ ಅನೇಕ ಸೇವೆಗಳನ್ನು ತಮ್ಮ ಬೆರಳ ತುದಿಯಲ್ಲಿ ಪಡೆಯಬಹುದು. RailOne ಅಪ್ಲಿಕೇಶನ್ ಮೂಲಕ ಕಾಯ್ದಿರಿಸದ ಟಿಕೆಟ್‌ಗಳನ್ನು ಬುಕ್ ಮಾಡಲು ಡಿಜಿಟಲ್ ಪಾವತಿಯನ್ನು ಬಳಸಿ ಮತ್ತು ಶೇ3ವರೆಗೆ ರಿಯಾಯಿತಿಯನ್ನು ಪಡೆದು ಆನಂದಿಸಿ.

South Western Railway - SWR | SWRRLY | @SWRAILWAYHQ | @sw_railways

KIRLOSKAR ELECTRIC COMPANY LIMITED

REGD OFFICE: No.19, 2nd Main Road, Peenya 1st Stage, Phase-1, Peenya, Bengaluru - 560 058.
Phone no: 080-28397256; **Fax:** 080-28396727;
Website: www.kirloskarelectric.com;
Email: investors@kirloskarelectric.com;
CIN: L31100KA1946PLC000415

EXTRACT OF STATEMENT OF UNAUDITED FINANCIAL RESULTS FOR THE QUARTER AND NINE MONTHS ENDED DECEMBER 31, 2025

(₹. in Lakhs)

Sr. No.	Particulars	Standalone					Consolidated				
		Quarter ended			Year ended		Quarter ended			Year ended	
		Dec 31, 2025	Sept 30, 2025	Dec 31, 2024	Dec 31, 2025	March 31, 2025	Dec 31, 2025	Sept 30, 2025	Dec 31, 2024	Dec 31, 2025	March 31, 2025
		Unaudited	Unaudited	Unaudited	Unaudited	Audited	Unaudited	Unaudited	Unaudited	Unaudited	Audited
1	Total income from operations	15,511	14,920	12,130	43,751	55,075	15,510	15,320	12,131	44,150	55,157
2	Net Profit / (Loss) for the period (before Tax, Exceptional and/or Extraordinary items)	1,270	630	310	1,969	748	1,240	998	57	2,280	(596)
3	Net Profit / (Loss) for the period before tax (after Exceptional and/or Extraordinary items)	461	630	310	1,160	1,743	431	998	57	1,471	399
4	Net Profit / (Loss) for the period after tax (after Exceptional and/or Extraordinary items)	440	630	310	1,139	1,725	410	998	57	1,450	374
5	Total Comprehensive Income for the period [Comprising Profit / (Loss) for the period (after tax) and Other Comprehensive Income (after tax)]	206	625	310	905	4,592	176	993	57	1,216	3,241
6	Equity share capital	6,641	6,641	6,641	6,641	6,641	6,641	6,641	6,641	6,641	6,641
7	Reserves (excluding revaluation reserves as shown in the Balance Sheet of previous year)	NA	NA	NA	NA	NA	NA	NA	NA	NA	NA
8	Earnings per share (EPS) (₹)										
	(a) Basic EPS before extra ordinary items (not annualised)	0.66	0.95	0.47	1.71	2.60	0.62	1.50	0.09	2.18	0.56
	(b) Diluted EPS before extra ordinary items (not annualised)	0.66	0.95	0.47	1.71	2.60	0.62	1.50	0.09	2.18	0.56
	(c) Basic EPS after extra ordinary items (not annualised)	0.66	0.95	0.47	1.71	2.60	0.62	1.50	0.09	2.18	0.56
	(d) Diluted EPS after extra ordinary items (not annualised)	0.66	0.95	0.47	1.71	2.60	0.62	1.50	0.09	2.18	0.56

NOTE:

1. The above unaudited standalone and consolidated financial results have been reviewed by the Audit Committee and approved by the Board of Directors at its meeting held on February 11, 2026.
2. The standalone and consolidated financial results of the Company for the quarter and nine months ended December 31, 2025 have been subject to limited review by its Statutory auditors.
3. The above is an extract of the detailed format of the unaudited financial results for the quarter and nine months ended December 31, 2025 filed with the Stock Exchanges under Regulation 33 of the SEBI (Listing Obligations and Disclosure Requirements) Regulations, 2015 as amended. The full format of the unaudited financial results are available on the stock exchange websites (www.bseindia.com, www.nseindia.com) and also on the company's website (**http://www.kirloskarelectric.com/investors/investors-information/financial.html**) and can also be accessed by scanning the below quick response code.

Place : Bengaluru
Date : February 11, 2026

Vijay R Kirloskar
Executive Chairman

ಕಸ ಗುತ್ತಿಗೆ: ವಿವರಣೆ ನೀಡಲು ಸೂಚನೆ

ಆಕ್ಷೇಪಗಳ ಉಲ್ಲೇಖಿಸಿ ನಿಗಮಕ್ಕೆ ನಗರಾಭಿವೃದ್ಧಿ ಇಲಾಖೆ ತಾಕೀತು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ನಗರಾಭಿವೃದ್ಧಿ ಇಲಾಖೆಗೆ 63 ಆಕ್ಷೇಪಗಳು ಸಲ್ಲಿಕೆ
- ಬಿಡ್‌ಗಳ ತಾಂತ್ರಿಕ ಮೌಲ್ಯಮಾಪನದಲ್ಲಿ ಅಕ್ರಮ: ಆರೋಪ
- ನಿಯಮಬಾಹಿರ ಗುತ್ತಿಗೆ ಪಡೆದಿದ್ದರೆ ತನಿಖೆ

ಗುತ್ತಿಗೆ ಗಾತ್ರ

33	7 ವರ್ಷ	₹591 ಕೋಟಿ	₹4,137
ಪ್ಯಾಕೇಜ್‌ಗಳು	ಗುತ್ತಿಗೆಯ ಅವಧಿ	ವಾರ್ಷಿಕ ಗುತ್ತಿಗೆ ಮೊತ್ತ	ಏಳು ವರ್ಷಗಳ ಅವಧಿಯ ಗುತ್ತಿಗೆ ಮೊತ್ತ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವಿವಿಧ ಪಾಲಿಕೆಗಳ ವ್ಯಾಪ್ತಿಯಲ್ಲಿ ಕಸ ವಿಲೇವಾರಿ ಗುತ್ತಿಗೆಯನ್ನು ನಿಯಮಬಾಹಿರವಾಗಿ ನೀಡಲಾಗಿದೆ ಎಂದು ನಗರಾಭಿವೃದ್ಧಿ ಇಲಾಖೆಗೆ 63 ಆಕ್ಷೇಪಗಳು ಸಲ್ಲಿಕೆಯಾಗಿದ್ದು, ವಿವರಣೆಗಳನ್ನು ನೀಡಿ ಎಂದು ಇಲಾಖೆಯು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಗಮದ ಅಧಿಕಾರಿಗಳಿಗೆ ಸೂಚಿಸಿದೆ.

ಜಿಬಿಎಯ ಐದೂ ಪಾಲಿಕೆಗಳ ವ್ಯಾಪ್ತಿಯನ್ನು 33 ಪ್ರತ್ಯೇಕ ಪ್ಯಾಕೇಜ್‌ಗಳಾಗಿ ವಿಭಜಿಸಿ, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಗಮವು (ಬಿಎಸ್‌ಡಬ್ಲ್ಯುಎಂಎಲ್) ಗುತ್ತಿಗೆ ನೀಡಿತ್ತು. ಈ ಸಂಬಂಧ ಕರೆಯಲಾಗಿದ್ದ ಟೆಂಡರ್‌ನಲ್ಲಿ ಅರ್ಹರನ್ನು ಕಡೆಗಣಿಸಿ, ಅನರ್ಹರಿಗೆ ಗುತ್ತಿಗೆ ನೀಡಲಾಗಿದೆ ಎಂದು ಇಲಾಖೆಗೆ ಹಲವು ಗುತ್ತಿಗೆದಾರರು ಆಕ್ಷೇಪಗಳನ್ನು ಸಲ್ಲಿಸಿದ್ದರು.

‘ಕಸ ವಿಲೇವಾರಿಯನ್ನು ನಿರ್ವಹಿಸಲು ಅಗತ್ಯವಿರುವ ವಿಂಗಡಣೆ ಘಟಕ, ಅಗತ್ಯ ಸಂಖ್ಯೆಯ ವಾಹನಗಳು ಮತ್ತು ಆರ್ಥಿಕವಾಗಿ ಸಮರ್ಥರಲ್ಲದವರಿಗೂ ಗುತ್ತಿಗೆ ನೀಡಲಾಗಿದೆ. ಅಧಿಕಾರಿಗಳು ಉದ್ದೇಶಪೂರ್ವಕವಾಗಿ ಅರ್ಹರ ಬಿಡ್‌ಗಳನ್ನು ತಿರಸ್ಕರಿಸಿದ್ದಾರೆ. ಬಿಡ್‌ಗಳ ತಾಂತ್ರಿಕ ಮೌಲ್ಯಮಾಪನ ಹಂತದಲ್ಲಿ ಅಕ್ರಮ ನಡೆದಿದೆ’ ಎಂದು ಆಕ್ಷೇಪ ಪತ್ರಗಳಲ್ಲಿ ವಿವರಿಸಲಾಗಿತ್ತು.

ಸಾಂದರ್ಭಿಕ ಚಿತ್ರ

‘ನಗರಾಭಿವೃದ್ಧಿ ಇಲಾಖೆಯ ಅಧಿಕಾರಿಗಳು ಜನವರಿ 27ರಿಂದ ಫೆಬ್ರುವರಿ 6ರವರೆಗೆ ಆಕ್ಷೇಪಣೆಗಳ ವಿಚಾರಣೆ ನಡೆಸಿದ್ದಾರೆ. ಈ ವೇಳೆ ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದು, ನಿಯಮ ಬಾಹಿರವಾಗಿ ಗುತ್ತಿಗೆ ನೀಡಿದ್ದರೆ ಲೋಕಾಯುಕ್ತ ತನಿಖೆಗೆ ಶಿಫಾರಸು ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ’ ಎಂದು ಗುತ್ತಿಗೆದಾರರೊಬ್ಬರು ಮಾಹಿತಿ ನೀಡಿದರು.

ಜತೆಗೆ, ‘ಆಕ್ಷೇಪ ಸಲ್ಲಿಕೆಯಾಗಿರುವ ಎಲ್ಲ ಪ್ಯಾಕೇಜ್‌ಗಳ ಮೌಲ್ಯಮಾಪನ ನಡೆಸಿದ ಬಿಎಸ್‌ಡಬ್ಲ್ಯುಎಂಎಲ್‌ನ ಪ್ರಧಾನ ವ್ಯವಸ್ಥಾಪಕರಿಗೆ (ತಾಂತ್ರಿಕ) ಪ್ರಮಾಣಪತ್ರ ಸಲ್ಲಿಸುವಂತೆ ನಗರಾಭಿವೃದ್ಧಿ ಇಲಾಖೆಯು ಸೂಚಿಸಿದೆ. ‘ಬಿಡ್ ಮೌಲ್ಯಮಾಪನದಲ್ಲಿ ನಿಯಮ ಉಲ್ಲಂಘನೆ ಆಗಿದ್ದರೆ, ಅದರ ಹೊಣೆ ನಾವೇ ಹೊರುತ್ತೇವೆ’ ಎಂದು ಪ್ರಮಾಣಪತ್ರ ನೀಡಿ ಎಂದು ತಾಕೀತು ಮಾಡಿದೆ’ ಎಂದು ಅವರು ವಿವರಿಸಿದರು.

ನಗರಾಭಿವೃದ್ಧಿ ಇಲಾಖೆಯು ಈ ರೀತಿ ಸೂಚನೆ ನೀಡಿದೆ ಎಂಬುದನ್ನು ಬಿಎಸ್‌ಡಬ್ಲ್ಯುಎಂಎಲ್ ಮೂಲಗಳೂ ಖಚಿತಪಡಿಸಿದ್ದು, ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ) ಇನ್ನಷ್ಟೇ ಪ್ರಮಾಣಪತ್ರ ಸಲ್ಲಿಸಬೇಕಿದೆ ಎಂದು ತಿಳಿಸಿವೆ.

ವಾರ್ಡ್ ಹೆಸರು ಬದಲಿಗೆ ಆಕ್ಷೇಪ: ಅರ್ಜಿದಾರರಿಗೆ ₹5000 ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರಿನ ದಕ್ಷಿಣ ಮಹಾನಗರ ಪಾಲಿಕೆಯ ಬೀರೇಶ್ವರ ನಗರ ವಾರ್ಡ್ ಹೆಸರನ್ನು ಚುಂಚಘಟ್ಟ ಎಂದು ಬದಲಿಸಲು ರಾಜ್ಯ ಸರ್ಕಾರ ಮತ್ತು ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ (ಜಿಬಿಎ) ನಿರ್ದೇಶಿಸಬೇಕು’ ಎಂದು ಕೋರಲಾಗಿದ್ದ ಅರ್ಜಿದಾರರಿಗೆ ಹೈಕೋರ್ಟ್ ₹5 ಸಾವಿರ ದಂಡ ವಿಧಿಸಿದೆ.

ಈ ಸಂಬಂಧ ಕೋಣನಕುಂಟೆಯ ‘ರೇಣುಕಾ ಯಲ್ಲಮ್ಮನ ದೇವಸ್ಥಾನ ಟ್ರಸ್ಟ್’ ಕಾರ್ಯದರ್ಶಿ ಲಕ್ಷ್ಮಮ್ಮ ಸೇರಿದಂತೆ ಒಟ್ಟು 20 ಸದಸ್ಯರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

‘ಇಂತಹ ಕೋರಿಕೆಗಳನ್ನು ಪಿಐಎಲ್ ವ್ಯಾಪ್ತಿಗೆ ಒಳಪಡಿಸುವುದು ಸರಿಯಲ್ಲ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ ನ್ಯಾಯಪೀಠ ಅರ್ಜಿದಾರರಿಗೆ ದಂಡ ವಿಧಿಸಿ ಆದೇಶಿಸಿತು. ದಂಡದ ಮೊತ್ತವನ್ನು ಎರಡು ವಾರಗಳಲ್ಲಿ ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಪಾವತಿಸುವಂತೆ ಅರ್ಜಿದಾರರಿಗೆ ನಿರ್ದೇಶಿಸಿತು.

‘ಗ್ರೇಟರ್ ಬೆಂಗಳೂರು ಪ್ರಾಧಿಕಾರವು ವಾರ್ಡ್‌ಗಳನ್ನು ಗುರುತಿಸುವಾಗ ಇತಿಹಾಸ ಪ್ರಸಿದ್ಧ ಚುಂಚಘಟ್ಟವನ್ನು ಬೀರೇಶ್ವರ ನಗರಕ್ಕೆ ಸೇರ್ಪಡೆ ಮಾಡುವ ಮೂಲಕ ಚುಂಚಘಟ್ಟದ ಐತಿಹಾಸಿಕ ಹಿನ್ನೆಲೆಗೆ ಹಾನಿ ಉಂಟುಮಾಡಿದೆ’ ಎಂದು ಅರ್ಜಿದಾರರು ಆಕ್ಷೇಪಿಸಿದ್ದರು.

ಚಿಟಿಕೆ ಸುದ್ದಿ

‘ಬಾ ಇಲ್ಲಿ ಸಂಭವಿಸು’ ದತ್ತಿ ಪ್ರಶಸ್ತಿ ಸ್ಥಾಪನೆ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿಯಲ್ಲಿ ‘ಬಾ ಇಲ್ಲಿ ಸಂಭವಿಸು’ ಶೀರ್ಷಿಕೆಯಡಿ ಕೆ.ಎಲ್. ಲಕ್ಷ್ಮಮ್ಮ ಮತ್ತು ಪ್ರೊ.ಶಿವರಾಮಯ್ಯ ಅವರು ದತ್ತಿ ಪ್ರಶಸ್ತಿ ಸ್ಥಾಪಿಸಿದ್ದಾರೆ.

ಈ ದತ್ತಿ ಪ್ರಶಸ್ತಿಯು ₹25 ಸಾವಿರ ನಗದು ಒಳಗೊಂಡಿದೆ. ಸಾಹಿತಿ ಪ್ರೊ.ಶಿವರಾಮಯ್ಯ ಅವರು ₹5 ಲಕ್ಷ ದತ್ತಿನಿಧಿಯನ್ನು ಅಕಾಡೆಮಿಗೆ ಒದಗಿಸಿದ್ದಾರೆ. 2025ನೇ ಸಾಲಿನ ಪ್ರಶಸ್ತಿಗೆ ಪ್ರತ್ಯೇಕವಾಗಿ ₹25 ಸಾವಿರ ನೀಡಿದ್ದಾರೆ. ಕುವೆಂಪು ಅವರ ಕೃತಿಗಳು ಮತ್ತು ಆಶಯಗಳ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯದ ಯಾವುದೇ ಪ್ರಕಾರದಲ್ಲಿ ರಚನೆಗೊಂಡ ಕೃತಿಯನ್ನು ಪ್ರಶಸ್ತಿಗೆ ಪರಿಗಣಿಸಲಾಗುತ್ತದೆ ಎಂದು ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ತಿಳಿಸಿದ್ದಾರೆ.

ಜಲಮಂಡಳಿ ಫೋನ್–ಇನ್ ನಾಳೆ

ಬೆಂಗಳೂರು: ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ.ವಿ. ರಾಮ್ ಪ್ರಸಾತ್ ಮನೋಹರ್ ಅಧ್ಯಕ್ಷತೆಯಲ್ಲಿ ಫೆ13ರ ಬೆಳಿಗ್ಗೆ 9.30ರಿಂದ 10.30ರವರೆಗೆ ನೇರ ಫೋನ್-ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ.

ಸಾರ್ವಜನಿಕರು ತಮ್ಮ ವಲಯ/ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ/ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಕುಂದು-ಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು.

ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ; 080-22945119, 080-22229639. ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ಆರ್.ಆರ್.ಸಂಖ್ಯೆಯನ್ನು ತಿಳಿಸಿ ದೂರು ನೀಡಲು ಕೋರಲಾಗಿದೆ.

ಬಮೂಲ್‌ನಿಂದ ನೇಮಕ: ಕೆಎಂಎಫ್ ಆಕ್ಷೇಪ

ಸುಧಾರಾಣಿ ಪ್ರಚಾರ ರಾಯಭಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಹಾಲು ಒಕ್ಕೂಟದ (ಬಮೂಲ್) ನಂದಿನಿ ಉತ್ಪನ್ನಗಳಿಗೆ ಪ್ರಚಾರ ರಾಯಭಾರಿಯಾಗಿ ನಟಿ ಸುಧಾರಾಣಿ ಅವರನ್ನು ನೇಮಕ ಮಾಡಲಾಗಿದೆ.

‘ರಾಜ್‌ಕುಮಾರ್, ಶಿವರಾಜ್‌ಕುಮಾರ್ ಹಾಗೂ ಪುನೀತ್ ರಾಜ್‌ಕುಮಾರ್ ಅವರಂತಹ ಮೇರು ವ್ಯಕ್ತಿಗಳ ಹಾದಿಯನ್ನು ಅನುಸರಿಸಿ ಬ್ರ್ಯಾಂಡ್ ಅಂಬಾಸಿಡರ್ ಆಗಿರುವುದು ಕೇವಲ ಅನುಕರಣೆಯಲ್ಲ, ಧನ್ಯತೆ ಮತ್ತು ಹೆಮ್ಮೆಯ ಜವಾಬ್ದಾರಿ. ಅವರಂತೆಯೇ ಉಚಿತವಾಗಿ ಪ್ರಚಾರ ಮಾಡಲು ಒಪ್ಪಿಕೊಂಡಿದ್ದೇನೆ’ ಎಂದು ಸುಧಾರಾಣಿ ತಿಳಿಸಿದ್ದಾರೆ.

‘ತಲೆಮಾರುಗಳಿಂದ ಪ್ರತಿಯೊಬ್ಬ ಕನ್ನಡಿಗನ ನಂಬಿಕೆಯ ಪ್ರತೀಕ ನಂದಿನಿ. ರೈತರ ಸಹಕಾರಿ ಸಂಸ್ಥೆಯಾದ ಬಮೂಲ್ ಜತೆ ಒಡಗೂಡುವ ಅವಕಾಶ ನನಗೆ ಅತ್ಯಂತ ಗೌರವದ ವಿಷಯ. ಡಿ.ಕೆ.ಸುರೇಶ್ ಅವರೊಂದಿಗೆ ಬಮೂಲ್‌ನ ಹೊಸ ಉತ್ಪನ್ನಗಳ ಕುರಿತು ಸಂವಾದ ನಡೆಸಿದೆ. ಮಾರುಕಟ್ಟೆಗೆ ಬರಲಿರುವ ಹೊಸ ಉತ್ಪನ್ನಗಳ ಬಿಡುಗಡೆಯ ಹಿಂದೆ ಇರುವ ದೃಷ್ಟಿಕೋನ ನಿಜಕ್ಕೂ ಪ್ರೇರಣಾದಾಯಕವಾಗಿತ್ತು ಎಂದು ಹೇಳಿದ್ದಾರೆ.

ಸುರೇಶ್ ಸ್ವಾಗತ: ನಂದಿನಿ ಉತ್ಪನ್ನಗಳಿಗೆ ಪ್ರಚಾರ ರಾಯಭಾರಿಯಾಗಿ ಸುಧಾರಾಣಿ ಆಯ್ಕೆಯಾಗಿದ್ದು, ಬಮೂಲ್ ಕುಟುಂಬಕ್ಕೆ ಅವರನ್ನು ಪ್ರೀತಿಯಿಂದ ಸ್ವಾಗತಿಸುತ್ತೇವೆ ಎಂದು ಅಧ್ಯಕ್ಷ ಡಿ.ಕೆ.ಸುರೇಶ್ ಹೇಳಿದ್ದಾರೆ.

ಕೆಎಂಎಫ್ ಆಕ್ಷೇಪ: ‘ಕರ್ನಾಟಕ ಹಾಲು ಮಹಾಮಂಡಳದ(ಕೆಎಂಎಫ್) ಬೈಲಾಗೆ ವಿರುದ್ಧವಾಗಿ ಬೆಂಗಳೂರು ಹಾಲು ಒಕ್ಕೂಟ(ಬಮೂಲ್) ರಾಯಭಾರಿಯನ್ನು ನೇಮಕ ಮಾಡಿಕೊಂಡಿದೆ’ ಎನ್ನುವ ಆಕ್ಷೇಪ ವ್ಯಕ್ತವಾಗಿದೆ.

ಬಮೂಲ್‌ನ ಪ್ರಚಾರ ರಾಯಭಾರಿಯಾಗಿ ನೇಮಕವಾಗಿರುವ ನಟಿ ಸುಧಾರಾಣಿ ಅವರಿಗೆ ಅಧ್ಯಕ್ಷ ಡಿ.ಕೆ.ಸುರೇಶ್ ಅವರು ನಂದಿನಿ ಉತ್ಪನ್ನಗಳನ್ನು ನೀಡಿದರು

‘ಮಹಾಮಂಡಳದ ಗಮನಕ್ಕೂ ತಾರದೇ ನಂದಿನಿ ಉತ್ಪನ್ನಗಳ ರಾಯಭಾರಿಯನ್ನಾಗಿ ನಟಿ ಸುಧಾರಾಣಿಯನ್ನು ನೇಮಕ ಮಾಡಲಾಗಿದೆ. ಈ ಕುರಿತು ಬಮೂಲ್ ಅಧಿಕಾರಿಗಳಿಂದ ಮಾಹಿತಿ ಪಡೆಯಲಾಗುವುದು’ ಎಂದು ಕೆಎಂಎಫ್‌ನ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಐದು ನಗರ ಪಾಲಿಕೆಗಳಲ್ಲಿ ಅರಣ್ಯ ವಿಭಾಗದಿಂದ ಶೀಘ್ರ ಕಾರ್ಯಾಚರಣೆ

‘ಅಪಾಯಕಾರಿ ಮರ ತೆರವುಗೊಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿ ಅಪಾಯದ ಸ್ಥಿತಿಯಲ್ಲಿರುವ ಮರಗಳ ತೆರವು ಕಾರ್ಯಾಚರಣೆ ಆರಂಭಿಸುವಂತೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಮಹೇಶ್ವರ್ ರಾವ್

ಎಲ್ಲ ಇಲಾಖೆಗಳೊಂದಿಗಿನ ಸಮನ್ವಯ ಸಭೆಯಲ್ಲಿ ಮಾತನಾಡಿದ ಅವರು, ‘ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಅಪಾಯದ ಸ್ಥಿತಿಯಲ್ಲಿರುವ ಮರಗಳನ್ನು ಗುರುತಿಸಬೇಕು. ಅವುಗಳನ್ನು ತ್ವರಿತವಾಗಿ ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು’ ಎಂದು ಅರಣ್ಯ ವಿಭಾಗದ ಅಧಿಕಾರಿಗಳಿಗೆ ನಿರ್ದೇಶಿಸಿದರು.

ಸಂಚಾರ ಸಿಗ್ನಲ್‌ಗಳಿಗೆ ಅಡ್ಡಿಯಾಗಿರುವ, ಪಾದಚಾರಿ ಮಾರ್ಗಗಳಲ್ಲಿ ನಾಗರಿಕರ ತಲೆಗೆ ತಾಗುವ, ರಸ್ತೆಗಳಿಗೆ ವಾಲಿಕೊಂಡಿರುವ ಹಾಗೂ ವಿದ್ಯುತ್ ದೀಪಗಳಿಗೆ ಅಡ್ಡಿಯಾಗಿರುವ ಮರದ ರೆಂಬೆಗಳು/ ಕೊಂಬೆಗಳನ್ನು ಕೂಡಲೇ ಕತ್ತರಿಸಬೇಕು. ಪಾದಚಾರಿ ಮಾರ್ಗಗಳಲ್ಲಿ ಬಿದ್ದಿರುವ ಮರದ ಕೊಂಬೆಗಳನ್ನೂ ತೆರವುಗೊಳಿಸಬೇಕು ಎಂದು ಹೇಳಿದರು.

‘ಮಾರ್ಕ್ಸ್’ ತಂತ್ರಾಂಶದ ಮೂಲಕ ರಸ್ತೆ ಕತ್ತರಿಸಲು ಸಲ್ಲಿಸಿರುವ ಅರ್ಜಿಗಳಿಗೆ ತಕ್ಷಣ ಅನುಮತಿ ನೀಡಬೇಕು. ನಂತರ ಸಂಬಂಧಿತ ಇಲಾಖೆಗಳು ರಸ್ತೆ ಕತ್ತರಿಸುವ ಕಾಮಗಾರಿಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಿ, ರಸ್ತೆ ಪುನರ್ ನಿರ್ಮಾಣ ಕಾರ್ಯವನ್ನು ಗುಣಮಟ್ಟದೊಂದಿಗೆ ನಿರ್ವಹಿಸಬೇಕು ಎಂದರು.

ಸಂಚಾರ ಪೊಲೀಸ್ ವಿಭಾಗವು ರಸ್ತೆಗಳಲ್ಲಿ ಮಳೆನೀರು ನಿಲ್ಲುವ ಸ್ಥಳಗಳ ಪಟ್ಟಿಯನ್ನು ಸಲ್ಲಿಸಿದ್ದು, ಅದರನ್ವಯ ಸ್ಥಳ ಪರಿಶೀಲನೆ ನಡೆಸಬೇಕು. ಮುಂಗಾರು ಮಳೆ ಪ್ರಾರಂಭವಾಗುವ ಮುನ್ನವೇ ಎಲ್ಲಾ ಪ್ರದೇಶಗಳಲ್ಲಿ ಸೂಕ್ತ ಕ್ರಮಗಳನ್ನು ಕೈಗೊಂಡು ಮಳೆನೀರು ನಿಲ್ಲದಂತೆ ಕ್ರಮ ವಹಿಸಬೇಕು ಎಂದು ಹೇಳಿದರು.

ಅಕ್ರಮ ಕಟ್ಟಡ ತೆರವು: ಕೇಂದ್ರ ನಗರ ಪಾಲಿಕೆಯ ಶಾಂತಲಾನಗರದಲ್ಲಿ ಅಕ್ರಮವಾಗಿ ನಿರ್ಮಿಸಲಾಗಿದ್ದ ಕಟ್ಟಡಗಳ ಭಾಗವನ್ನು ನಗರ ಪಾಲಿಕೆ ಸಿಬ್ಬಂದಿ ತೆರವುಗೊಳಿಸಿದರು.

ಪಿಐಡಿ ಸಂಖ್ಯೆ: 76-122-4 ಆಸ್ತಿಗೆ ಕಾಯ್ದೆಯಡಿ ಮಾಲೀಕರಿಗೆ ನೋಟಿಸ್ ನೀಡಲಾಗಿತ್ತು. ನಿಯಮಬಾಹಿರವಾಗಿ ನಿರ್ಮಿಸಲಾದ ಭಾಗಗಳನ್ನು ಸ್ವಯಂಪ್ರೇರಿತವಾಗಿ ತೆರವುಗೊಳಿಸಲು ಸೂಚಿಸಲಾಗಿತ್ತು. ಆದರೂ ಮಾಲೀಕರು ಅದನ್ನು ಪಾಲಿಸಿರಲಿಲ್ಲ. ಹೀಗಾಗಿ, ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ, ಕಟ್ಟಡದ ಅಕ್ರಮ ಭಾಗಗಳನ್ನು ಬುಧವಾರ ತೆರವುಗೊಳಿಸಿದರು.

ಮುಖ್ಯ ಆಯುಕ್ತರ ಸೂಚನೆಗಳು

- ಆಯಾ ನಗರ ಪಾಲಿಕೆಗಳಲ್ಲಿ ‘ಅನಾಥ ವಾಹನಗಳ’ ಟೋಯಿಂಗ್ ಕಾರ್ಯಾಚರಣೆ ಪ್ರಾರಂಭಿಸಬೇಕು
- ಕೆ-100ರಲ್ಲಿ ಜಲಮಂಡಳಿಯ ಕೊಳಚೆ ನೀರು ಹರಿದುಬರುವುದನ್ನು ತಡೆಯಬೇಕು.
- ಮೆಟ್ರೊ ನಿಲ್ದಾಣ ಹಾಗೂ ಸುತ್ತಮುತ್ತ ಸಮರ್ಪಕ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಬೇಕು
- ಲಾಸ್ಟ್ ಮೈಲ್ ಕನೆಕ್ಟಿವಿಟಿ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು
- ನಗರ ಪಾಲಿಕೆಗಳಲ್ಲಿ ಪಾದಚಾರಿ ಮಾರ್ಗಗಳ ಸ್ವಚ್ಛತೆ ಮತ್ತು ಸುರಕ್ಷತೆಗೆ ಆದ್ಯತೆ ನೀಡಬೇಕು
- ವೈಟ್ ಟಾಪಿಂಗ್ ಕಾಮಗಾರಿಗಳು ನಡೆಯುತ್ತಿರುವ ಕಡೆ ಸಮಸ್ಯೆಗಳನ್ನು ಬಗೆಹರಿಸಬೇಕು

ಮುಂಬೈ ರೇಸ್

ಥಂಡರಿಂಗ್ ಫಿನಿಕ್ಸ್ ಗೆಲ್ಲುವ ನಿರೀಕ್ಷೆ

ಪಿ.ಡಿ.ಬೋಲ್ಟನ್ ಟ್ರೋಫಿ ಗುರುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಥಂಡರಿಂಗ್ ಫಿನಿಕ್ಸ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಲಾರ 5, ಅಲೆಕ್ಸಾಂಡ್ರಿಯಾ 1, ಮೀಡೊ ಸ್ಪ್ರಿಂಗ್ಸ್ 3
2ನೇ ರೇಸ್: ಲ್ಯಾಸಟಿಯೋಸ್ 6, ಇನ್‌ಹೆರಿಟೆನ್ಸ್ 5, ಅವಾಂಟೆ 3
3ನೇ ರೇಸ್: ಥಂಡರಿಂಗ್ ಫಿನಿಕ್ಸ್ 6, ಫೋರ್ತ್‌ವಿಂಗ್ 4, ಅರ್ತ್ 1
4ನೇ ರೇಸ್: ಸ್ಕಂಧ 2, ಮ್ರಿಗ 4, ಯುವರ್‌ಇಮ್ಯಾನ್‌ಆರ್‌ಬೋರ್ನ್ 14
5ನೇ ರೇಸ್: ಬ್ರೈಟ್ ಬಟನ್ 4, ವೈಕಿಂಗ್ 1, ವಿಸ್ಪರ್ 3
6ನೇ ರೇಸ್: ಚೆರುಬಿನ್ 3, ಶಾಂದಾರ್ 2, ಎನ್ರಿಚ್ 1
7ನೇ ರೇಸ್: ಫಾಕ್ಸಿ 3, ಅಜೂರ್ 5, ಸ್ಟಾರ್ಮ್ ಕ್ಲೌಡ್ 4

ಉತ್ತಮ ಬೆಟ್: ಫಾಕ್ಸಿ

ಜಾಕ್‌ಪಾಟ್ 3,4,5,6,7 | ಟ್ರಿಬಲ್ 4,5,6

ಚಿತ್ರಾವಳಿ

ನಗರದ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಸೋಮವಾರ ವಿವಿಧ ಕಲಾವಿದರ ಕಲಾಕೃತಿಗಳ ಪ್ರದರ್ಶನ ‘ಹಾರ್ಮನಿ’ ಉದ್ಘಾಟನೆ ನಂತರ ಪ್ರೊ. ಎನ್. ಮನು ಚಕ್ರವರ್ತಿಯವರಿಗೆ ಕಲಾವಿದರು ಕಲಾಕೃತಿಗಳ ಬಗ್ಗೆ ತಿಳಿಸಿದರು. ಚಿತ್ರಕಲಾವಿದ ಎಂ.ಎಸ್. ಮೂರ್ತಿ ಅವರು ಉಪಸ್ಥಿತರಿದ್ದರು. ಪ್ರಜಾವಾಣಿ ಚಿತ್ರ



ಏಕ್ಯಾ ಶಾಲೆಗಳು ಹೊರತಂದಿರುವ 15 ವರ್ಷಗಳ ಶೈಕ್ಷಣಿಕ ಪಯಣದ ಸ್ಮರಣಿಕೆಯಾದ ‘15 ಲರ್ನಿಂಗ್ಸ್ ಇನ್ 15 ಇಯರ್ಸ್ ಆಫ್ ಏಕ್ಯಾ: ಹೌ ವಿ ಬಿಲ್ಟ್ ಸ್ಕೂಲ್ಸ್’ ಪುಸ್ತಕವನ್ನು ಬೌದ್ಧರ ಧರ್ಮಗುರು ದಲೈ ಲಾಮಾ ಅವರು ಜನಾರ್ಪಣೆಗೊಳಿಸಿದರು. ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳು ಮತ್ತು ಸಿಎಂಆರ್ ವಿಶ್ವವಿದ್ಯಾಲಯದ ಅಧ್ಯಕ್ಷ ಕೆ.ಸಿ. ರಾಮಮೂರ್ತಿ, ಏಕ್ಯಾ ಶಾಲೆಗಳ ಸಂಸ್ಥಾಪಕಿ ತ್ರಿಸ್ತಾ ರಾಮಮೂರ್ತಿ ಉಪಸ್ಥಿತರಿದ್ದರು

ಸೂಪರ್ ಲೀಗ್ ಹಂತಕ್ಕೆ ಸಾಯಿ ಧಾರವಾಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಯಿ ಧಾರವಾಡ, ಮಂಗಳೂರು ಬಿ.ಸಿ ತಂಡಗಳು ಕರ್ನಾಟಕ ಗ್ರಾಮೀಣ ಲೀಗ್ ಪುರುಷರ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಸೂಪರ್ ಲೀಗ್ ಹಂತಕ್ಕೆ ಮುನ್ನಡೆದವು.

ನಗರದ ಕಂಠೀರವ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯಗಳಲ್ಲಿ ಸಾಯಿ ಧಾರವಾಡ 85–35ರಿಂದ ವೈಸಿಬಿಸಿ ಬಳ್ಳಾರಿ ವಿರುದ್ಧ; ಮಂಗಳೂರು ಬಿ.ಸಿ 78–39ರಿಂದ ಪಿನಾಕಿನಿ ಗೌರಿಬಿದನೂರು ವಿರುದ್ಧ ಗೆಲುವು ಸಾಧಿಸಿದವು.

ಉಳಿದ ಪಂದ್ಯಗಳಲ್ಲಿ ಪ್ರೊಟೆಕ್ ಅಸೋಸಿಯೇಷನ್ ಮೈಸೂರು 67–43ರಿಂದ ಭಗವಾನ್ ಬಿ.ಸಿ. ಕಲಬುರಗಿ ಎದುರು; ನ್ಯಾಷನಲ್ ಎಸ್.ಸಿ ಮೈಸೂರು 43–29ರಿಂದ ಚಿನ್ನದಾನಡು ಬಿ.ಸಿ. ಕೋಲಾರ ಎದುರು; ಮೇರಿಯನ್ಸ್ ಬಿ.ಸಿ ಚಿಕ್ಕಮಗಳೂರು 63–27ರಿಂದ ಸಾಯಿ ಧಾರವಾಡ ಎದುರು; ಮೇರಿಯನ್ಸ್ 58–33ರಿಂದ ಪ್ರೊಟೆಕ್ ಎದುರು ಗೆಲುವು ಪಡೆದವು.

ಮೂರು ದಿನಗಳ ವಿಶ್ವ ಆರೋಗ್ಯ ಪ್ರದರ್ಶನ

ದುಬೈ: ಕರ್ನಾಟಕ ಸೇವಾ ದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಕ್ಷೇತ್ರಕ್ಕೆ ಆದ್ಯತೆ ನೀಡಿದಾಗ ಸದೃಢ ರಾಷ್ಟ್ರ ನಿರ್ಮಾಣ ಸಾಧ್ಯ. ಅದಕ್ಕಾಗಿ ಜಾಗತಿಕ ಆರೋಗ್ಯ ಸಮುದಾಯ ಒಂದಾಗಬೇಕು ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ ಹೇಳಿದರು.

ದುಬೈನಲ್ಲಿ ನಡೆದ ಮೂರು ದಿನಗಳ ವಿಶ್ವ ಆರೋಗ್ಯ ಪ್ರದರ್ಶನದಲ್ಲಿ ಕರ್ನಾಟಕದಲ್ಲಿ ಆರೋಗ್ಯ ಕ್ಷೇತ್ರಕ್ಕೆ ನೀಡುತ್ತಿರುವ ಆದ್ಯತೆಗಳು ಹಾಗೂ ಕರ್ನಾಟಕದ ಪ್ರಗತಿಯನ್ನು ಪ್ರಸ್ತುತಪಡಿಸಿ ಮಾತನಾಡಿದ ಅವರು, ‘ಆರೋಗ್ಯ ಸವಾಲುಗಳನ್ನು ಎದುರಿಸುವಾಗ ಯಾವುದೇ ಅಡೆತಡೆ, ಗಡಿಗಳು ಇರಬಾರದು, ಮಾನವೀಯತೆಯ ಆಧಾರದಲ್ಲಿ ಸೌಲಭ್ಯಗಳನ್ನು ಒದಗಿಸಬೇಕು ಎಂದರು.

ದುಬೈನಲ್ಲಿ ನಡೆಯುತ್ತಿರುವ ಮೂರು ದಿನಗಳ ಆರೋಗ್ಯ ಪ್ರದರ್ಶನದಲ್ಲಿ ಚೀನಾ, ಜರ್ಮನಿ, ಅಮೆರಿಕ, ಮತ್ತು ಬ್ರಿಟನ್ ಸೇರಿದಂತೆ 33 ರಾಷ್ಟ್ರಗಳ 4,800 ಪ್ರತಿನಿಧಿಗಳು ಭಾಗವಹಿಸಿದ್ದಾರೆ. ಪ್ರದರ್ಶನವು ಅತ್ಯಾಧುನಿಕ ವೈದ್ಯಕೀಯ ಸಾಧನಗಳು, ಇಮೇಜಿಂಗ್, ಡಯಾಗ್ನೋಸ್ಟಿಕ್ಸ್, ಆರೋಗ್ಯ ರಕ್ಷಣಾ ಐಟಿ, ಡಿಜಿಟಲ್ ಆರೋಗ್ಯ, ಆಸ್ಪತ್ರೆಗಳ ಮೂಲಸೌಕರ್ಯ ಮತ್ತು ಸೇವೆಗಳ ಪ್ರದರ್ಶನ ನಡೆಯುತ್ತಿದೆ.

ಆಸ್ಟರ್ ಡಿಎಂ ಹೆಲ್ತ್‌ಕೇರ್‌ಗೆ ಭೇಟಿ: ಆಸ್ಟರ್ ಡಿಎಂ ಹೆಲ್ತ್‌ಕೇರ್ ಬೂತ್‌ಗೆ ಭೇಟಿ ನೀಡಿದ ಶರಣ ಪ್ರಕಾಶ ಅವರಿಗೆ ಪ್ರಾಥಮಿಕ, ಮಾಧ್ಯಮಿಕ, ತೃತೀಯ ಮತ್ತು ಕ್ವಾಟರ್ನರಿ ಆರೈಕೆಯನ್ನು ಒಳಗೊಂಡ ಸಮಗ್ರ ವ್ಯವಸ್ಥೆಯನ್ನು ಡಾ.ಆಜಾದ್ ಮೂಪೆನ್, ಅಲಿಶಾ ಮೂಪೆನ್ ವಿವರಿಸಿದರು. ಯುಎಇ ಆರೋಗ್ಯ ಸಚಿವ ಅಹ್ಮದ್ ಅಲ್ ಸಯೇಗ್ ಮಾಹಿತಿ ನೀಡಿದರು. ನಂತರ ತುಂಬೆ ವೈದ್ಯಕೀಯ ಕೇಂದ್ರದ ‘ಮೆಡಿಸಿಟಿ’ಯನ್ನು ಉದ್ಘಾಟಿಸಿದರು. ಡಾ.ತುಂಬೆ ಮೊಯಿದೀನ್, ಕರ್ನಾಟಕ ರಾಜ್ಯ ಅಲೈಡ್ ಹೆಲ್ತ್‌ಕೇರ್ ಕೌನ್ಸಿಲ್‌ನ ಅಧ್ಯಕ್ಷ ಯು.ಟಿ. ಇಫ್ತಿಕರ್ ಉಪಸ್ಥಿತರಿದ್ದರು.

ದುಬೈನಲ್ಲಿ ನಡೆದ ಮೂರು ದಿನಗಳ ವಿಶ್ವ ಆರೋಗ್ಯ ಪ್ರದರ್ಶನಕ್ಕೆ ಭೇಟಿ ನೀಡಿದ್ದ ಕರ್ನಾಟಕ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ, ಅಲ್ಲಿನ ತುಂಬೆ ಮೆಡಿಸಿಟಿ ಉದ್ಘಾಟನೆ ಸಮಾರಂಭದಲ್ಲಿ ಪಾಲ್ಗೊಂಡರು

ಮುಖ್ಯಾಂಶಗಳು

- ಆರೋಗ್ಯ ಕ್ಷೇತ್ರದಲ್ಲಿ ಕರ್ನಾಟಕದ ಪ್ರಗತಿ ಅನಾವರಣ
- ಕಾರ್ಯಕ್ರಮದಲ್ಲಿ 33 ರಾಷ್ಟ್ರಗಳ 4,800 ಪ್ರತಿನಿಧಿಗಳು ಭಾಗಿ

₹100 ಕೋಟಿ ವೆಚ್ಚದಲ್ಲಿ 292 ರಸ್ತೆ ಅಭಿವೃದ್ಧಿ: ಬೈರತಿ ಸುರೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ವಿಧಾನಸಭಾ ಕ್ಷೇತ್ರದಲ್ಲಿ ಒಂದೇ ಬಾರಿಗೆ ₹100 ಕೋಟಿಗೂ ಅಧಿಕ ವೆಚ್ಚದಲ್ಲಿ 290ಕ್ಕೂ ಹೆಚ್ಚು ರಸ್ತೆಗಳ ಅಭಿವೃದ್ಧಿ, ಕಾಂಕ್ರಿಟೀಕರಣ, ವಿವಿಧ ಬಡಾವಣೆಗಳಲ್ಲಿ ಒಳಚರಂಡಿ ವ್ಯವಸ್ಥೆ ಮತ್ತಿತರ ಅಭಿವೃದ್ಧಿ ಕಾಮಗಾರಿಗಳಿಗೆ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರು ಚಾಲನೆ ನೀಡಿದರು.

ಬೈರತಿ ಸುರೇಶ್

ಅಶ್ವಥಕಟ್ಟೆ ರಸ್ತೆ, ಆನಂದಗಿರಿಯ ಎಸ್‌ಎಸ್‌ಎ ರಸ್ತೆ, ಸುಬ್ರಮಣ್ಯ ಕಾಲೊನಿಯ 3ನೇ ಮುಖ್ಯರಸ್ತೆ, ಅಯ್ಯಪ್ಪ ಬಡಾವಣೆಯ ರಸ್ತೆ, ಏಳು ಮಂದಮ್ಮ ದೇವಾಲಯ ಸಮೀಪದ 7ನೇ ಅಡ್ಡರಸ್ತೆ ಸೇರಿದಂತೆ ವಿವಿಧ ಮುಖ್ಯ ಮತ್ತು ಅಡ್ಡರಸ್ತೆಗಳ ಡಾಂಬರೀಕರಣ, ಕಾಂಕ್ರೀಟ್ ರಸ್ತೆ ನಿರ್ಮಾಣ ಮತ್ತು ಒಳಚರಂಡಿ ಅಭಿವೃದ್ಧಿ ಕಾಮಗಾರಿಗಳಿಗೆ ಬೈರತಿ ಸುರೇಶ್ ಅವರು ಬುಧವಾರ ಭೂಮಿಪೂಜೆ ನೆರವೇರಿಸಿದರು.

‘ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳು ನಿರಂತರವಾಗಿ ಸಾಗಿವೆ. ಪ್ರತಿಯೊಬ್ಬ ನಾಗರಿಕರಿಗೂ ಮೂಲಸೌಕರ್ಯಗಳನ್ನು ಕಲ್ಪಿಸುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಬದ್ಧತೆಯಾಗಿದೆ. ಅದರಂತೆ ನಾನು ಪ್ರತಿನಿಧಿಸುತ್ತಿರುವ ಹೆಬ್ಬಾಳ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ’ ಎಂದು ಅವರು ತಿಳಿಸಿದರು.

‘ಒಟ್ಟು 41 ಕಿಲೋ ಮೀಟರ್ ಉದ್ದದ ರಸ್ತೆಗಳ ಕಾಮಗಾರಿ ಇದಾಗಿದ್ದು, ನಾಗರಿಕರಿಗೆ ಹೆಚ್ಚಿನ ತೊಂದರೆ ಆಗಬಾರದು ಎಂಬ ದೃಷ್ಟಿಯಿಂದ ಪ್ಯಾಕೇಜ್‌ಗಳನ್ನು ಮಾಡಿ ಎಲ್ಲಾ ಕಡೆ ಏಕಕಾಲಕ್ಕೆ ಕಾಮಗಾರಿಯನ್ನು ಆರಂಭಿಸಲಾಗಿದೆ. ಮೂರು ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ’ ಎಂದು ಹೇಳಿದರು.

ತುರ್ತು ಸೇವೆ ಬಲಪಡಿಸಲು ತಂತ್ರಜ್ಞಾನ ಅಗತ್ಯ: ಸಲೀಂ

‘ಸ್ಮಾರ್ಟ್ ಆಂಬುಲೆನ್ಸ್’ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆ.ಸಿ.ರಸ್ತೆಯ ಟ್ರಸ್ಟ್‌ವೆಲ್ ಆಸ್ಪತ್ರೆಯ 5‘ಜಿ’ ಚಾಲಿತ ಸ್ಮಾರ್ಟ್ ಆಂಬುಲೆನ್ಸ್‌ಗೆ ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಅವರು ಬುಧವಾರ ಚಾಲನೆ ನೀಡಿದರು.

ರೋಗಿಯನ್ನು ಆಂಬುಲೆನ್ಸ್‌ಗೆ ಹತ್ತಿಸಿಕೊಂಡ ಕ್ಷಣದಿಂದ ಆಸ್ಪತ್ರೆಗೆ ದಾಖಲಿಸುವವರೆಗೂ ನಿಗಾ ವಹಿಸುವ ವ್ಯವಸ್ಥೆ ಈ ಆಂಬುಲೆನ್ಸ್‌ನಲ್ಲಿದೆ. ‘ಗೋಲ್ಡನ್ ಅವರ್’ನಲ್ಲಿ ಪ್ಯಾರಾಮೆಡಿಕಲ್ ಸಿಬ್ಬಂದಿಗೆ ವೈದ್ಯರು ಮಾರ್ಗದರ್ಶನ ನೀಡುವಂತಹ ತಂತ್ರಜ್ಞಾನವನ್ನೂ ಅಳವಡಿಸಲಾಗಿದೆ ಎಂದು ಆಸ್ಪತ್ರೆಯ ಆಡಳಿತ ಮಂಡಳಿ ತಿಳಿಸಿದೆ.

5‘ಜಿ’ ತಂತ್ರಜ್ಞಾನ, ಅತ್ಯಾಧುನಿಕ ಕ್ಯಾಮೆರಾಗಳು, ಸುಧಾರಿತ ಟೆಲಿಮೆಡಿಸಿನ್ ಸಾಧನಗಳಿವೆ. ರೋಗಿಯ ಪ್ರಮುಖ ಆರೋಗ್ಯ ಮಾಹಿತಿಗಳಾದ ಇಸಿಜಿ, ರಕ್ತದೊತ್ತಡ, ಆಮ್ಲಜನಕದ ಮಟ್ಟ ಮತ್ತು ನೇರ ಪ್ರಸಾರದ ವಿಡಿಯೊಗಳನ್ನು ಯಾವುದೇ ಅಡೆತಡೆಯಿಲ್ಲದೆ, ವಿಳಂಬವಿಲ್ಲದೆ ಆಸ್ಪತ್ರೆಯ ತಜ್ಞರಿಗೆ ರವಾನಿಸುತ್ತದೆ. ಈ ವಾಹನವು ‘ಚಲಿಸುವ ತುರ್ತು ಚಿಕಿತ್ಸಾ ಘಟಕ’ದಂತೆ ಕಾರ್ಯ ನಿರ್ವಹಿಸುತ್ತದೆ. ಸುಧಾರಿತ ಜೀವ ರಕ್ಷಕ ಉಪಕರಣಗಳೂ ವಾಹನದಲ್ಲಿವೆ. ಇದರಿಂದ ವೈದ್ಯಕೀಯ ತಂಡವು ದೂರದಿಂದಲೇ ರೋಗಿಯ ಮೌಲ್ಯಮಾಪನ ಮಾಡಿ, ತಕ್ಷಣ ರೋಗಿಯ ಆರೋಗ್ಯ ಸ್ಥಿತಿ ತಿಳಿದುಕೊಳ್ಳಬಹುದು. ರೋಗಿ ಆಸ್ಪತ್ರೆಗೆ ಬರುವ ಮುನ್ನವೇ ಪ್ರಯೋಗಾಲಯ, ಶಸ್ತ್ರಚಿಕಿತ್ಸಾ ಕೊಠಡಿ ಸಿದ್ಧಪಡಿಸಿಕೊಳ್ಳಲು ಸಾಧ್ಯವಾಗಲಿದೆ ಎಂದು ಆಸ್ಪತ್ರೆಯ ಆಡಳಿತ ಮಂಡಳಿ ತಿಳಿಸಿದೆ.

ನಗರದ ಜೆ.ಸಿ.ರಸ್ತೆಯಲ್ಲಿರುವ ಟ್ರಸ್ಟ್‌ವೆಲ್ ಆಸ್ಪತ್ರೆಯ 5‘ಜಿ’ ಚಾಲಿತ ಸ್ಮಾರ್ಟ್ ಆಂಬುಲೆನ್ಸ್‌ಗೆ ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಅವರು ಬುಧವಾರ ಚಾಲನೆ ನೀಡಿದರು

ಆಂಬುಲೆನ್ಸ್‌ಗೆ ಚಾಲನೆ ನೀಡಿ ಮಾತನಾಡಿದ ಸಲೀಂ ಅವರು, ‘ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ತುರ್ತು ಸೇವೆ ಬಲಪಡಿಸಲು ಇಂತಹ ತಂತ್ರಜ್ಞಾನ ಆಧಾರಿತ ಆರೋಗ್ಯ ಪರಿಹಾರಗಳು ಅಗತ್ಯ’ ಎಂದು ಹೇಳಿದರು.

ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಎಚ್.ವಿ. ಮಧುಸೂದನ್ ಅವರು ಮಾತನಾಡಿ, ‘5‘ಜಿ’ ಸ್ಮಾರ್ಟ್ ಆಂಬುಲೆನ್ಸ್ ಬರೀ ರೋಗಿಗಳನ್ನು ಕರೆದೊಯ್ಯುವ ವಾಹನ ಅಲ್ಲ. ತುರ್ತು ಚಿಕಿತ್ಸಾ ವಿಭಾಗವೇ ವಾಹನದಲ್ಲಿ ಇದೆ’ ಎಂದು ತಿಳಿಸಿದರು.

‘ಹೃದಯಾಘಾತ, ಪಾರ್ಶ್ವವಾಯು ಅಥವಾ ತೀವ್ರ ಅಪಘಾತದಂತಹ ತುರ್ತು ಸಂದರ್ಭಗಳಲ್ಲಿ ಪ್ರತಿ ಕ್ಷಣವೂ ಅಮೂಲ್ಯ. ಮಾರ್ಗಮಧ್ಯೆಯೇ ಜೀವ ಉಳಿಸುವ ಚಿಕಿತ್ಸೆಗಳಿಗೆ ಮಾರ್ಗದರ್ಶನ ನೀಡಲು, ಆಸ್ಪತ್ರೆಗೆ ತಲುಪಿದ ತಕ್ಷಣವೇ ನಿಖರ ಚಿಕಿತ್ಸೆ ನೀಡಲು ಸಿದ್ಧವಾಗಿರುವುದಕ್ಕೆ ನೆರವಾಗಲಿದೆ’ ಎಂದು ಅವರು ಹೇಳಿದರು.

ಹಿಂದುತ್ವಪರ ಸಂಘಟನೆಗಳ ಕಾರ್ಯಕರ್ತರು ಮೆಹಕರ್ ಪೊಲೀಸ್ ಠಾಣೆ ಎದುರು ಬುಧವಾರ ರಾತ್ರಿ ಪ್ರತಿಭಟಿಸಿದರು

ಶ್ರೀರಾಮನ ಅವಹೇಳನ; ಠಾಣೆ ಎದುರು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಹುಲಸೂರ (ಬೀದರ್ ಜಿಲ್ಲೆ): ಇಲ್ಲಿನ ಅಟ್ಟರಗಾ ಗ್ರಾಮದ ಯುವಕ ಕಾಳಿದಾಸ್ ಸೂರ್ಯವಂಶಿ ಎಂಬಾತ ಶ್ರೀರಾಮಚಂದ್ರನ ನಿಂದಿಸಿ ಅವಹೇಳನ ಮಾಡಿದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದ್ದು, ಇದಕ್ಕೆ ಭಾರಿ ಆಕ್ರೋಶ ವ್ಯಕ್ತವಾಗಿದೆ.

ಯುವಕನನ್ನೂ ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಹಿಂದುತ್ವಪರ ಸಂಘಟನೆಗಳ ಕಾರ್ಯಕರ್ತರು ಮೆಹಕರ್ ಪೊಲೀಸ್ ಠಾಣೆ ಎದುರು ಜಮಾಯಿಸಿ ಬುಧವಾರ ರಾತ್ರಿ ಪ್ರತಿಭಟಿಸಿದರು. ಮೆಹಕರ್-ಭಾಲ್ಕಿ ರಸ್ತೆಯಲ್ಲಿ ವಾಹನ ಸಂಚಾರ ತಡೆದು ಆಕ್ರೋಶ ಹೊರಹಾಕಿದರು.

ಕಾಳಿದಾಸ್ ಸೂರ್ಯವಂಶಿ ರೈಲಿನಲ್ಲಿ ಸ್ನೇಹಿತರೊಂದಿಗೆ ಕುಳಿತು ಮರಾಠಿ ಭಾಷೆಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಹೊಗಳುತ್ತಲೇ ಶ್ರೀರಾಮಚಂದ್ರನನ್ನು ತೆಗಳಿ, ನಿಂದಿಸಿ ಅವಹೇಳನ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

ಸಂಪತ್ತು ಎನ್ನುವುದು ಮರದಂತೆ. ಸಣ್ಣ ಬೀಜದಿಂದ ಅದು ಬೆಳೆಯುತ್ತದೆ
ಜಾರ್ಜ್ ಎಸ್. ಕ್ಲಾಸನ್, ಬರಹಗಾರ

ದುಡ್ಡಿನಂಥಾ ಮಾತು

ಅದೃಷ್ಟ ಚಕ್ರದ ಗತಿ ಒಂದೇ ರೀತಿ ಇರುತ್ತದೆಯೇ?

ಅದೃಷ್ಟದ ಚಕ್ರವು ಮಾರುಕಟ್ಟೆಗಳಲ್ಲಿ ಹಣ ತೊಡಗಿಸಿದವರಿಗೂ ಒಂದು ಪಾಠವನ್ನು ಹೇಳುತ್ತದೆ. ಹಿಂದೆ ಸಿಕ್ಕಿರುವ ಲಾಭವು ಮುಂದೆಯೂ ಅದೇ ಪ್ರಮಾಣದ ಲಾಭವನ್ನು ಖಾತರಿಪಡಿಸುವುದಿಲ್ಲ ಎಂಬುದು ಮಹತ್ವದ ಆ ಪಾಠ

• ಅಭಿಷೇಕ್ ತಿವಾರಿ

ಕ್ಯಾಸಿನೊ ಒಂದರಲ್ಲಿನ ಅದೃಷ್ಟದ ಚಕ್ರವನ್ನು ತಿರುಗಿಸಿದಾಗ ಅದರ ಮುಳ್ಳು 17ನೆಯ ಸಂಖ್ಯೆಯ ಬಳಿ ಮೂರು ಬಾರಿ ಬಂದು ನಿಂತಿದ್ದನ್ನು ರವಿ (ಹೆಸರು ಬದಲಾಯಿಸಲಾಗಿದೆ) ಗಮನಿಸಿದ. ಅದನ್ನು ಕಂಡು ಆತನಲ್ಲಿ ಉತ್ಸಾಹ ನೂರ್ಮಡಿ ಆಯಿತು. ಅಲ್ಲಿದ್ದ ಇತರ ಹಲವರು ಕೂಡ ಅದೃಷ್ಟ ಚಕ್ರದ ಬಳಿ ಬಂದರು. ರವಿ 17ನೆಯ ಸಂಖ್ಯೆಗೆ ಬಾಜಿ ಕಟ್ಟಿದ. ಆದರೆ ಆ ಬಾರಿ ಚಕ್ರ ತಿರುಗಿದಾಗ, ಅದರ ಮುಳ್ಳು 7ನೆಯ ಸಂಖ್ಯೆಯ ಬಳಿ ನಿಂತಿತು.

ಅದೃಷ್ಟದ ಚಕ್ರಕ್ಕೆ ನೆನಪುಗಳು ಇಲ್ಲ. ಪ್ರತಿ ಬಾರಿ ಚಕ್ರ ತಿರುಗಿದಾಗ, ಅದಕ್ಕೂ ಹಿಂದಿನ ಬಾರಿ ತಿರುಗಿದ್ದಕ್ಕೂ ಸಂಬಂಧ ಇರುವುದಿಲ್ಲ. ಹಿಂದೆ ಮೂರು ಬಾರಿ ಅದರ ಮುಳ್ಳು 17ನೆಯ ಸಂಖ್ಯೆಗೆ ಬಂದುನಿಂತಿತ್ತು ಎಂಬ ವಾಸ್ತವವು, ಅದು ಮುಂದೆಯೂ ಅದೇ ಸಂಖ್ಯೆಯ ಬಳಿ ಬಂದು ನಿಲ್ಲುತ್ತದೆ ಎಂಬುದನ್ನು ಹೇಳುವುದಿಲ್ಲ.

ಈ ಉದಾಹರಣೆಗೂ, ಬಹುತೇಕ ಹೂಡಿಕೆದಾರರು ಮ್ಯೂಚುವಲ್ ಫಂಡ್‌ಗಳನ್ನು ಆಯ್ಕೆ ಮಾಡುವಾಗ ಅನುಸರಿಸುವ ವಿಧಾನಕ್ಕೂ ಬಹಳ ಸಾಮ್ಯತೆ ಇದೆ. ಫಂಡ್ ಒಂದು ಈಚಿನ ನಿರ್ದಿಷ್ಟ ಅವಧಿಯಲ್ಲಿ ಉತ್ತಮ ಗಳಿಕೆ ತಂದುಕೊಟ್ಟಿದೆ ಎಂದಾದರೆ, ಆ ಫಂಡ್ ಮುಂದೆಯೂ ಒಳ್ಳೆಯ ಲಾಭ ತಂದುಕೊಡುತ್ತದೆ ಎಂದು ಭಾವಿಸುವುದು ಸಹಜ.

ಹಿಂದೆ ದೊರೆತ ಲಾಭದ ವಿಚಾರವಾಗಿ ಒಂದಿಷ್ಟು ಬೆರಗು ಬೆಳೆಸಿಕೊಳ್ಳುವುದು ಮಾನವ ಸಹಜವಾದ ಗುಣ. ನಮ್ಮ ಹಣವನ್ನು ಎಲ್ಲಿ ತೊಡಗಿಸಬೇಕು ಎಂಬ ವಿಚಾರವಾಗಿ ನಮ್ಮಲ್ಲಿ ಆತ್ಮವಿಶ್ವಾಸ ಮೂಡಿಸುವಂತಹ ರ‍್ಯಾಂಕಿಂಗ್, ಅತ್ಯುತ್ತಮ ಗಳಿಕೆ ತಂದುಕೊಟ್ಟ ಫಂಡ್‌ಗಳ ಪಟ್ಟಿ, ಅತಿಹೆಚ್ಚು ಖರೀದಿಯಾದ ಇಟಿಎಫ್ ಹಾಗೂ ಆ ಬಗೆಯ ಇತರ ವಿವರಗಳನ್ನು ನಾವು ಇಷ್ಟಪಡುತ್ತೇವೆ.

ರ‍್ಯಾಂಕಿಂಗ್ ಹೇಗೆ ಬದಲಾಗುತ್ತದೆ?

2014ನೆಯ ಕ್ಯಾಲೆಂಡರ್ ವರ್ಷದಿಂದ 2025ರ ನವೆಂಬರ್‌ವರೆಗಿನ ಟಾಪ್ ಮ್ಯೂಚುವಲ್ ಫಂಡ್‌ಗಳ ಕುರಿತಾಗಿ ನಡೆದ ಅಧ್ಯಯನವೊಂದರ ಪ್ರಕಾರ, ವರ್ಷವೊಂದರ ಅತ್ಯುತ್ತಮ ಮ್ಯೂಚುವಲ್ ಫಂಡ್‌ನ ಗಳಿಕೆಯು ಮಾರನೆಯ ವರ್ಷಗಳಲ್ಲಿ ಬಹಳಷ್ಟು ಕಡಿಮೆ ಆಗಿದ್ದೂ ಇದೆ. ನಿರ್ದಿಷ್ಟ ಅವಧಿಯೊಂದರಲ್ಲಿ ಅತ್ಯುತ್ತಮ ಗಳಿಕೆಯ ಫಂಡ್ ಎಂಬ ಸ್ಥಾನ ಗಿಟ್ಟಿಸಿದ್ದವು, ಮುಂದಿನ ವರ್ಷಗಳಲ್ಲಿ ಅತ್ಯಂತ ಕಡಿಮೆ ಗಳಿಕೆಯ ಫಂಡ್‌ಗಳ ಸಾಲಿಗೆ ಸೇರಿದ್ದೂ ಇದೆ. ಕೆಲವು ಸಂದರ್ಭಗಳಲ್ಲಿ ಈ ಕುಸಿತವು ಭಾರಿ ಪ್ರಮಾಣದಲ್ಲಿ ಇರುತ್ತದೆ. 2024ರಲ್ಲಿ ಮೊದಲ ಸ್ಥಾನ ಪಡೆದಿದ್ದ ಒಂದು ಮಿಡ್‌ಕ್ಯಾಪ್ ಫಂಡ್, ನಂತರ ಒಂದು ವರ್ಷದ ಅವಧಿಯಲ್ಲಿ 259ನೆಯ ಸ್ಥಾನಕ್ಕೆ ಕುಸಿದಿರುವುದನ್ನು ಈ ಅಧ್ಯಯನವು ಗುರುತಿಸಿದೆ.

ಹೀಗೆ ಆಗುವುದು ಏಕೆ?

ಇದಕ್ಕೆ ಕಾರಣ ಮಾರುಕಟ್ಟೆಯ ಚಲನೆ. ಮಾರುಕಟ್ಟೆಯ ಚಲನೆಗೆ ಅದರದೇ ಆದ ಗತಿಯೊಂದು ಇದೆ. ಈ ಗತಿಯು ಭಿನ್ನ ಸಂದರ್ಭಗಳಲ್ಲಿ ಭಿನ್ನ ಬಗೆಯ ಷೇರುಗಳಿಗೆ ಪೂರಕವಾಗಿ ಇರುತ್ತದೆ. ಮಿಡ್‌ಕ್ಯಾಪ್ ಹಾಗೂ ಸ್ಮಾಲ್‌ಕ್ಯಾಪ್ ವಲಯದ ಷೇರುಗಳು ಉತ್ತಮ ಗಳಿಕೆ ಕಾಣುವಾಗ ಈ ವರ್ಗಗಳಿಗೆ ಸೇರಿದ ಮ್ಯೂಚುವಲ್ ಫಂಡ್‌ಗಳು ಕೂಡ ಸಹಜವಾಗಿಯೇ ಮುಂಚೂಣಿ ಸ್ಥಾನಗಳಿಗೆ ಬರುತ್ತವೆ.

ಹೂಡಿಕೆದಾರರು ಮಾಡಬೇಕಿರುವುದು ಏನು

ಮೊದಲ ಕೆಲಸವಾಗಿ ಹೂಡಿಕೆದಾರರು ವಿವಿಧ ವರ್ಗಗಳ ಫಂಡ್‌ಗಳಲ್ಲಿ – ಅಂದರೆ ಲಾರ್ಜ್‌ಕ್ಯಾಪ್, ಮಿಡ್‌ಕ್ಯಾಪ್, ಸ್ಮಾಲ್‌ಕ್ಯಾಪ್, ಫ್ಲೆಕ್ಸಿಕ್ಯಾಪ್ ಅಥವಾ ಮಲ್ಟಿಕ್ಯಾಪ್ ಫಂಡ್‌ಗಳಲ್ಲಿ ಹಣ ತೊಡಗಿಸಬೇಕು. ಒಂದೊಂದು ಸಂದರ್ಭದಲ್ಲಿ ಒಂದೊಂದು ವರ್ಗದ ಫಂಡ್‌ಗಳು ಮುಂಚೂಣಿಯಲ್ಲಿ ಇರುತ್ತವೆ. ಹೀಗಾಗಿ ಬೇರೆ ಬೇರೆ ವರ್ಗದ ಫಂಡ್‌ಗಳಲ್ಲಿ ಹಣ ತೊಡಗಿಸುವುದರಿಂದ, ಯಾವುದೋ ಒಂದು ವರ್ಗದ ಫಂಡ್ ಮೇಲಿನ ಅತಿಯಾದ ಅವಲಂಬನೆ ಕಡಿಮೆ ಆಗಿರುತ್ತದೆ.

ಎರಡನೆಯದಾಗಿ, ಒಂದೇ ವರ್ಗದ ಮ್ಯೂಚುವಲ್ ಫಂಡ್‌ಗಳ ಪೈಕಿ ವಿವಿಧ ಹೂಡಿಕೆ ಶೈಲಿಗಳನ್ನು ಅನುಸರಿಸುವ ಫಂಡ್‌ಗಳಲ್ಲಿ ಹಣ ತೊಡಗಿಸುವುದು. ಮಾರುಕಟ್ಟೆಯಲ್ಲಿ ಒಂದೊಂದು ಸಂದರ್ಭದಲ್ಲಿ ಒಂದೊಂದು ಶೈಲಿಗೆ ಹೆಚ್ಚಿನ ಮಹತ್ವ ಸಿಗುವ ಕಾರಣದಿಂದಾಗಿ, ಅವುಗಳಲ್ಲಿನ ಹೂಡಿಕೆಯಲ್ಲಿ ವೈವಿಧ್ಯ ಕಾಯ್ದುಕೊಳ್ಳುವುದು ಉತ್ತಮ. ಇವೆರಡೂ ಕೆಲಸ ಮಾಡಿದಾಗ, ಮಾರುಕಟ್ಟೆಯ ಗತಿಯನ್ನು ತಾಳಿಕೊಳ್ಳುವ ಪೋರ್ಟ್‌ಫೋಲಿಯೊ ಕಟ್ಟಲು ಸಾಧ್ಯವಾಗುತ್ತದೆ.

ಮಾರುಕಟ್ಟೆಯ ಗತಿ ಬದಲಾವಣೆ ಕಂಡಾಗ, ಅದೇ ಫಂಡ್‌ಗಳ ಗಳಿಕೆಯು ಬಹಳ ತೀವ್ರವಾಗಿ ಕಡಿಮೆ ಆಗಬಹುದು. ಇದು ಮಾರುಕಟ್ಟೆ ಬಂಡವಾಳ ಆಧಾರಿತ ಫಂಡ್‌ಗಳಿಗೆ ಮಾತ್ರ ಸೀಮಿತವಲ್ಲ. ಹೂಡಿಕೆ ಶೈಲಿಯನ್ನು ಆಧರಿಸಿದ (ಅಂದರೆ ಬೆಳವಣಿಗೆ, ಮೌಲ್ಯ, ಗುಣಮಟ್ಟ ಇತ್ಯಾದಿ) ಫಂಡ್‌ಗಳಿಗೂ ಇದು ಅನ್ವಯವಾಗುತ್ತದೆ. ವೇಗವಾಗಿ ಮೌಲ್ಯ ಹೆಚ್ಚಿಸಿಕೊಳ್ಳುವ ಷೇರುಗಳಲ್ಲಿ ಹಣ ತೊಡಗಿಸುವ ಫಂಡ್ ಒಂದು ಕೆಲವು ವರ್ಷ ಹೆಚ್ಚಿನ ಗಳಿಕೆ ತಂದುಕೊಡುತ್ತ ಇರಬಹುದು. ಆದರೆ, ಕಡಿಮೆ ಮೌಲ್ಯಕ್ಕೆ ಸಿಗುವ ಗುಣಮಟ್ಟದ ಷೇರುಗಳು ಹೆಚ್ಚಿನ ಲಾಭ ತಂದುಕೊಡುವ ಕಾಲಘಟ್ಟದಲ್ಲಿ ಈ ಬಗೆಯ ಫಂಡ್ ಕಡಿಮೆ ಗಳಿಕೆ ನೀಡಬಹುದು.

ಮಾರುಕಟ್ಟೆಯ ಒಂದು ಘಟ್ಟದಲ್ಲಿ ನಿರ್ದಿಷ್ಟ ಫಂಡ್ ಒಂದನ್ನು ಮೊದಲ ಸ್ಥಾನಕ್ಕೆ ತಂದು ನಿಲ್ಲಿಸುವ ಅಂಶಗಳು ಮುಂದೊಂದು ಘಟ್ಟದಲ್ಲಿ ಇಲ್ಲವಾಗಬಹುದು. ಮೂರು ವರ್ಷಗಳಲ್ಲಿ ಆದ ಬದಲಾವಣೆಯನ್ನು ಅಧ್ಯಯನಕ್ಕಾಗಿ ಕೈಗೆತ್ತಿಕೊಂಡಾಗ ಕೂಡ ಬಹಳ ಗಮನಾರ್ಹವಾದ ಅಂಶಗಳು ಕಂಡುಬಂದವು. ಮೂರು ವರ್ಷಗಳಲ್ಲಿ ಒಂದು ಫಂಡ್ ಉತ್ತಮ ಗಳಿಕೆ ನೀಡಿದ್ದರೂ, ಮುಂದೆಯೂ ಆ ಫಂಡ್ ಉತ್ತಮ ಗಳಿಕೆ ನೀಡುವುದನ್ನು ಮುಂದುವರಿಸಲಿದೆ ಎಂಬುದನ್ನು ಖಚಿತವಾಗಿ ಹೇಳಲಾಗದು.

ಗೆದ್ದವರ ಹಿಂದೆ ಓಟ

ಭಾರಿ ಪ್ರಮಾಣದ ಲಾಭದ ಗಳಿಸಿದ್ದನ್ನು ಕಂಡು ಹೂಡಿಕೆದಾರರು ಫಂಡ್‌ಗಳ ಮೇಲೆ ಹಣ ಸುರಿಯಲು ಆರಂಭಿಸುತ್ತಾರೆ. ಆದರೆ ಈ ಹೊಸ ಹೂಡಿಕೆಗಳ ಅಲೆ ಬರುವ ಹೊತ್ತಿಗೆ, ಆ ಫಂಡ್ ಆಕರ್ಷಕವಾಗುವಂತೆ ಮಾಡಿದ ಲಾಭದ ಪ್ರಮಾಣವು ಇತಿಹಾಸ ಸೇರಿರುತ್ತದೆ. ಮಾರುಕಟ್ಟೆಯ ಗತಿಯು ಬೇರೊಂದು ಮಗ್ಗುಲಿಗೆ ಹೊರಳಿಕೊಳ್ಳಲು ಅಣಿಯಾಗುತ್ತಿರುತ್ತದೆ.

ಹೀಗೆ ಆದಾಗ, ಹೂಡಿಕೆದಾರರು ಮ್ಯೂಚುವಲ್ ಫಂಡ್ ಯೂನಿಟ್‌ನ ಮೌಲ್ಯ ಹೆಚ್ಚು ಇದ್ದಾಗ ಅವುಗಳನ್ನು ಖರೀದಿಸಿ, ಮುಂದೆ ಅವುಗಳ ಮೌಲ್ಯ ಇಳಿಕೆ ಆಗುವುದನ್ನು ಕಾಣುತ್ತ ಕೂರಬೇಕಾಗುತ್ತದೆ. ಒಟ್ಟಾರೆಯಾಗಿ ದೀರ್ಘಾವಧಿಯಲ್ಲಿ ಮಾರುಕಟ್ಟೆಯಿಂದ ಸಿಗುವ ಲಾಭವು ಆರೋಗ್ಯಕರ ಮಟ್ಟದಲ್ಲಿಯೇ ಇದ್ದರೂ, ಹಲವಾರು ಹೂಡಿಕೆದಾರರಿಗೆ ಹೂಡಿಕೆ ಪ್ರಕ್ರಿಯೆಯಲ್ಲಿ ಬೇಸರ ಮೂಡುವುದಕ್ಕೆ ಇದೂ ಒಂದು ಕಾರಣ. ಹೂಡಿಕೆದಾರರಿಗೆ ಹತಾಶೆ ಮೂಡುವುದಕ್ಕೆ ಅವರ ವರ್ತನೆಯೇ ಕಾರಣವಾಗಿರುತ್ತದೆಯೇ ವಿನಾ ಮಾರುಕಟ್ಟೆ ಅಲ್ಲ.

ಒಂದೇ ವರ್ಗಕ್ಕೆ ಸೇರಿದ ಮ್ಯೂಚುವಲ್ ಫಂಡ್‌ಗಳ ನಡುವೆ, ಅಂದರೆ ಉದಾಹರಣೆಯಾಗಿ ಲಾರ್ಜ್‌ಕ್ಯಾಪ್ ಅಥವಾ ಮಿಡ್‌ಕ್ಯಾಪ್ ವರ್ಗದ ಫಂಡ್‌ಗಳನ್ನು ಪರಿಗಣಿಸಿದರೆ, ಒಂದೇ ವರ್ಷದ ಅವಧಿಯಲ್ಲಿ ಅತ್ಯುತ್ತಮ ಗಳಿಕೆ ನೀಡಿದ ಹಾಗೂ ಅತ್ಯಂತ ಕಳಪೆ ಗಳಿಕೆ ನೀಡಿದ ಫಂಡ್‌ಗಳ ನಡುವಿನ ವ್ಯತ್ಯಾಸವು ಬಹಳ ದೊಡ್ಡದಾಗಿರಬಹುದು ಎಂಬುದನ್ನು ನಡೆಸಿದ ಅಧ್ಯಯನವೊಂದು ಹೇಳಿದೆ. 2024ರಲ್ಲಿ ಅತ್ಯುತ್ತಮ ಹಾಗೂ ಅತ್ಯಂತ ಕಳಪೆ ಮಿಡ್‌ಕ್ಯಾಪ್ ಫಂಡ್‌ಗಳ ಗಳಿಕೆಯ ನಡುವಿನ ವ್ಯತ್ಯಾಸವು ಶೇ 45ರಷ್ಟು ಇತ್ತು.

ಹೀಗಾಗುವುದು ಎಲ್ಲೋ ಅಲ್ಲೊಮ್ಮೆ, ಇಲ್ಲೊಮ್ಮೆ ಎಂಬಂತೆ ಅಲ್ಲ. ಹೂಡಿಕೆಯ ಶೈಲಿಯು ಇದಕ್ಕೆ ಕಾರಣ. ಒಬ್ಬ ನಿಧಿ ನಿರ್ವಾಹಕ ವೇಗವಾಗಿ ಮೌಲ್ಯ ವರ್ಧನೆ ಕಾಣುತ್ತಿರುವ ಷೇರುಗಳಲ್ಲಿ ಹಣ ತೊಡಗಿಸಬಹುದು, ಇನ್ನೊಬ್ಬರು ಗುಣಮಟ್ಟದ ಷೇರುಗಳ ಮೇಲೆ ಗಮನ ಹರಿಸಬಹುದು, ಮತ್ತೊಬ್ಬರು ಕಡಿಮೆ ಬೆಲೆಗೆ ಸಿಗುತ್ತಿರುವ ಗುಣಮಟ್ಟದ ಷೇರುಗಳ ಮೇಲೆ ಕಣ್ಣಿಡಬಹುದು. ಮಾರುಕಟ್ಟೆಯು ಒಂದು ಬಗೆಯ ಹೂಡಿಕೆ ಶೈಲಿಗೆ ಹೆಚ್ಚಿನ ಮಾನ್ಯತೆ ನೀಡಿದಾಗ, ಆ ಬಗೆಯ ಹೂಡಿಕೆ ಶೈಲಿಯನ್ನು ಅನುಸರಿಸುವ ಫಂಡ್‌ಗಳು ಹೆಚ್ಚು ಗಳಿಕೆ ನೀಡುತ್ತವೆ, ಮುಂಚೂಣಿ ಸ್ಥಾನಕ್ಕೆ ಬರುತ್ತವೆ.

ಆದರೆ ಆ ಹೂಡಿಕೆ ಶೈಲಿಯ ಜನಪ್ರಿಯತೆ ಕಡಿಮೆ ಆದಾಗ, ಆ ಶೈಲಿಯನ್ನು ಅನುಕರಣೆ ಮಾಡುವ ಫಂಡ್‌ಗಳಿಂದ ಸಿಗುವ ಲಾಭ ಕೂಡ ಕಡಿಮೆ ಆಗುತ್ತದೆ. ಇದು 'ಅತ್ಯುತ್ತಮ ಮ್ಯೂಚುವಲ್ ಫಂಡ್' ಆಯ್ಕೆಯನ್ನು ಇನ್ನಷ್ಟು ಸಂಕೀರ್ಣ ಕೆಲಸವನ್ನಾಗಿಸುತ್ತದೆ. ಮ್ಯೂಚುವಲ್ ಫಂಡ್ ಅಂದರೆ ಒಂದಿಷ್ಟು ಷೇರುಗಳು ಮಾತ್ರವೇ ಅಲ್ಲ; ಅದು ನಿರ್ದಿಷ್ಟ ಹೂಡಿಕೆ ಶೈಲಿಯ ಒಂದಿಷ್ಟು ನಿರ್ಣಯಗಳ ಒಟ್ಟು ಮೊತ್ತವೂ ಹೌದು.

ಇವನ್ನೆಲ್ಲ ಪರಿಗಣಿಸಿದಾಗ, 'ಅತ್ಯುತ್ತಮ ಗಳಿಕೆ ನೀಡಿದ ಫಂಡ್' ಆಯ್ಕೆಯು ಸೋಲುವ ಆಟದಂತೆ ಕಾಣಬಹುದು. ಹೀಗಾಗಿ, ಹೆಚ್ಚು ತರ್ಕಬದ್ಧವಾದ ನಡೆ ಅಂದರೆ, ಯಾವ ವರ್ಗದ ಮ್ಯೂಚುವಲ್ ಫಂಡ್ ಮುಂದೆ ಹೆಚ್ಚು ಲಾಭ ನೀಡಬಹುದು ಎಂಬ ಅಂದಾಜು ಮಾಡುವ ಕೆಲಸಕ್ಕೆ ಕೈಹಾಕದೆ ಇರುವುದು! ಹಾಗೆ ಮಾಡುವ ಬದಲಿಗೆ, ಯಾವುದೇ ಊಹೆಗಳನ್ನು ಆಧರಿಸಿರದ ಬಗೆಯಲ್ಲಿ ಪೋರ್ಟ್‌ಫೋಲಿಯೊ ಕಟ್ಟುವುದು.

ಒಟ್ಟಾರೆಯಾಗಿ ಹೇಳುವುದಾದರೆ, ಅದೃಷ್ಟದ ಚಕ್ರವು ನಮಗೆ ಒಂದು ಪಾಠವನ್ನು ಕಲಿಸುತ್ತದೆ. ಹಿಂದೆ ಚಕ್ರ ತಿರುಗಿದಾಗಲೆಲ್ಲ ಒಂದು ಸಂಖ್ಯೆಯಲ್ಲಿ ಅದರ ಮುಳ್ಳು ಬಂದು ನಿಂತಿರಬಹುದು. ಆದರೆ ಭವಿಷ್ಯದಲ್ಲಿಯೇ ಅದೇ ರೀತಿಯಲ್ಲಿ ಆಗುತ್ತದೆ ಎಂಬುದಕ್ಕೆ ಯಾವುದೇ ಖಾತರಿ ಇಲ್ಲ. ಮಾರುಕಟ್ಟೆ ಹೇಳುವ ಪಾಠ ಕೂಡ ಇದುವೇ. ಹೂಡಿಕೆಗೆ ಸಂಬಂಧಿಸಿದ ತಮ್ಮ ವರ್ತನೆಯನ್ನು ನಿಯಂತ್ರಿಸುವ ಶಕ್ತಿ ಹೂಡಿಕೆದಾರರ ಕೈಯಲ್ಲಿಯೇ ಇರುತ್ತದೆ.

ಲೇಖಕ ಪಿಜಿಐಎಂ ಇಂಡಿಯಾ ಅಸೆಟ್ ಮ್ಯಾನೇಜ್ಮೆಂಟ್‌ನ ಸಿಇಒ

ಜನವರಿಯಲ್ಲಿ ಹೂಡಿಕೆಯ ಹರಿವು ಹೀಗಿತ್ತು...

₹24,040 ಕೋಟಿ
ಜನವರಿಯಲ್ಲಿ ಚಿನ್ನದ ಇಟಿಎಫ್‌ಗಳಲ್ಲಿ ಆಗಿರುವ ಹೂಡಿಕೆ

₹24,028 ಕೋಟಿ
ಜನವರಿಯಲ್ಲಿ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಆಗಿರುವ ಹೂಡಿಕೆ

₹81.01 ಲಕ್ಷ ಕೋಟಿ
ಜನವರಿಯಲ್ಲಿ ಮ್ಯೂಚುವಲ್ ಫಂಡ್ ಉದ್ಯಮ ನಿರ್ವಹಿಸುತ್ತಿರುವ ಒಟ್ಟು ಹೂಡಿಕೆ ಮೊತ್ತ

₹80.23 ಲಕ್ಷ ಕೋಟಿ
ಡಿಸೆಂಬರ್‌ನಲ್ಲಿ ಮ್ಯೂಚುವಲ್ ಫಂಡ್ ಉದ್ಯಮವು ನಿರ್ವಹಿಸುತ್ತಿದ್ದ ಒಟ್ಟು ಹೂಡಿಕೆ ಮೊತ್ತ

ಫ್ಲೆಕ್ಸಿಕ್ಯಾಪ್ ಫಂಡ್‌ಗಳೇ ಆಕರ್ಷಕ



(ಆಧಾರ: ಎಎಂಎಫ್‌ಐ 30ಗಳ ವರದಿ)

ಭಾರತೀಯ ಸ್ಟೇಟ್ ಬ್ಯಾಂಕ್

ಭಾರತೀಯ ಸ್ಟೇಟ್ ಬ್ಯಾಂಕ್‌ನ (ಎಸ್‌ಬಿಐ) ಷೇರಿನ ಮೌಲ್ಯ ₹1,300 ಆಗಲಿದೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಹೇಳಿದೆ.

ಪ್ರಸಕ್ತ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಬ್ಯಾಂಕ್‌ನ ಹಣಕಾಸಿನ ಸ್ಥಿತಿಯು ಬಹಳ ಸದೃಢವಾಗಿದೆ, ಬ್ಯಾಂಕ್‌ನ ಆಸ್ತಿ ಗುಣಮಟ್ಟ ಸುಧಾರಿಸಿದೆ. ಜೊತೆಗೆ ಬ್ಯಾಂಕ್ ಉತ್ತಮ ಲಾಭ ಗಳಿಸಿದೆ. ಇದೇ ಅವಧಿಯಲ್ಲಿ ರಿಟೇಲ್, ಅತಿಸಣ್ಣ ಮತ್ತು ಸಣ್ಣ ಉದ್ದಿಮೆಗಳು (ಎಸ್‌ಎಂಇ), ಕೃಷಿ ಹಾಗೂ ಕಾರ್ಪೊರೇಟ್ ವಲಯದ ಸಾಲದ ಬೆಳವಣಿಗೆ ದರ ಶೇ 15.6ಕ್ಕೆ ಹೆಚ್ಚಿದೆ.

ದೇಶೀಯ ನಿವ್ವಳ ಬಡ್ಡಿ ವರಮಾನ (ಎನ್‌ಐಎಂ) ಶೇ 3.12ರಷ್ಟಿದೆ. ಶಿಸ್ತುಬದ್ಧ ನಿರ್ವಹಣೆಯು ವೆಚ್ಚ-ವರಮಾನದ ಅನುಪಾತವನ್ನು ಶೇ 50ರ ಬಳಿ ಇರಿಸಿತ್ತು. ವಸೂಲಾಗದ ಸಾಲದ ಒಟ್ಟು ಪ್ರಮಾಣ (ಜಿಎನ್‌ಪಿಎ) ಶೇ 1.57 ಮತ್ತು ನಿವ್ವಳ ಎನ್‌ಪಿಎ ಶೇ 0.39ರಷ್ಟಿದೆ.

ಬ್ಯಾಂಕ್‌ನ ಸಾಲ ನೀಡುವಿಕೆ, ಹೆಚ್ಚಿನ ಪ್ರಮಾಣದಲ್ಲಿ ಇರುವ ಬಂಡವಾಳ, ನಿವ್ವಳ ಬಡ್ಡಿ ವರಮಾನ ಶೇ 3ಕ್ಕಿಂತ ಹೆಚ್ಚಿರಲಿದೆ ಎಂದು ಬ್ಯಾಂಕ್‌ನ ಆಡಳಿತ ಮಂಡಳಿಗೆ ಇರುವ ವಿಶ್ವಾಸದ ಕಾರಣದಿಂದಾಗಿ 2026–27ರ ವೇಳೆಗೆ ಬ್ಯಾಂಕ್‌ನ ಆಸ್ತಿ ಮೇಲಿನ ಗಳಿಕೆ (ಆರ್‌ಒಎ) ಮತ್ತು ಹೂಡಿಕೆ ಮೇಲಿನ ಲಾಭ (ಆರ್‌ಒಇ) ಕ್ರಮವಾಗಿ ಶೇ 1.1 ಮತ್ತು ಶೇ 15.9ರಷ್ಟಾಗಲಿದೆ ಎಂದು ಮೋತಿಲಾಲ್ ಓಸ್ವಾಲ್ ಅಂದಾಜಿಸಿದೆ.

ಬುಧವಾರದ ವಹಿವಾಟಿನ ಅಂತ್ಯಕ್ಕೆ ಎಸ್‌ಬಿಐನ ಷೇರು ಬೆಲೆಯು ₹1,182 ಆಗಿದೆ.

ಬ್ರೋಕರೇಜ್ ಮಾತು

ಲೆಮನ್ ಟ್ರೀ ಹೋಟೆಲ್ಸ್

ಲೆಮನ್ ಟ್ರೀ ಹೋಟೆಲ್ಸ್ ಕಂಪನಿಯ ಷೇರು ಬೆಲೆಯು ₹165ಕ್ಕೆ ತಲುಪಬಹುದು ಎಂದು ಜೆಎಂ ಫೈನಾನ್ಶಿಯಲ್ಸ್ ಹೇಳಿದೆ.

ಲೆಮನ್ ಟ್ರೀ ಹೋಟೆಲ್ಸ್ ಕಂಪನಿಯು ಡಿಸೆಂಬರ್ ತ್ರೈಮಾಸಿಕದಲ್ಲಿ ₹410 ಕೋಟಿ ವರಮಾನ ಗಳಿಸಿದೆ. ಇದು ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 14ರಷ್ಟು ಹೆಚ್ಚು, ಹಿಂದಿನ ತ್ರೈಮಾಸಿಕದ ವರಮಾನಕ್ಕೆ ಹೋಲಿಸಿದರೆ ಶೇ 33ರಷ್ಟು. ಹೋಟೆಲ್‌ನ ಕೊಠಡಿಗಳ ಸರಾಸರಿ ದರವು ಶೇ 11ರಷ್ಟು ಹೆಚ್ಚಾಗಿ, ಕೊಠಡಿಗಳ ಬಳಕೆ ಪ್ರಮಾಣವು ಶೇ 73.4ರಷ್ಟು ಆಗಿದೆ.

ಪ್ರಸಕ್ತ ಹಣಕಾಸು ವರ್ಷದ ಮೊದಲ ಆರು ತಿಂಗಳ ಅವಧಿಯಲ್ಲಿ ಕಂಪನಿಯ ವರಮಾನವು ₹1,030 ಕೋಟಿ ಆಗಿದೆ. ಇದು ಹಿಂದಿನ ವರ್ಷದ ಇದೇ ಒಂಬತ್ತು ತಿಂಗಳ ಅವಧಿಯಲ್ಲಿ ಕಂಪನಿ ಗಳಿಸಿದ ವರಮಾನಕ್ಕೆ ಹೋಲಿಸಿದರೆ ಶೇ 13ರಷ್ಟು ಹೆಚ್ಚು ಎಂದು ಜೆಎಂ ಫೈನಾನ್ಶಿಯಲ್ಸ್‌ನ ವರದಿಯಲ್ಲಿ ವಿವರಿಸಲಾಗಿದೆ.

2026–27ರಿಂದ ಕಂಪನಿಯ ಲಾಭದ ಪ್ರಮಾಣ ಹೆಚ್ಚಳ ಕಾಣಲಿದೆ ಎಂದು ಆಡಳಿತ ಮಂಡಳಿ ಹೇಳಿದೆ. ನವೀಕರಣ ಆಗಿರುವ ಕೆಲವು ಹೋಟೆಲ್‌ಗಳ ಸಾಧನೆಯನ್ನು ಕಂಡಾಗ ಈ ಮಾತಿಗೆ ಪುಷ್ಟಿ ಸಿಗುತ್ತದೆ. ಕಂಪನಿಯ ವರಮಾನದ ಸಂಯುಕ್ತ ವಾರ್ಷಿಕ ಬೆಳವಣಿಗೆ ದರವು 2027–28ರ ವರೆಗೆ ಶೇ 12ರಷ್ಟು, ತೆರಿಗೆ ನಂತರದ ಲಾಭದ ಸಿಎಜಿಆರ್ ಪ್ರಮಾಣ ಶೇ 20ರಷ್ಟು ಇರುವ ನಿರೀಕ್ಷೆ ಇದೆ ಎಂದು ಅದು ಹೇಳಿದೆ. ಬುಧವಾರದ ವಹಿವಾಟಿನ ಅಂತ್ಯಕ್ಕೆ ಕಂಪನಿಯ ಷೇರು ಮೌಲ್ಯವು ₹133.90 ಆಗಿತ್ತು.

(ಬ್ರೋಕರೇಜ್ ಕಂಪನಿಗಳು ನೀಡುವ ವಿವರ, ಮಾಹಿತಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ಇಂಗ್ಲಿಷ್

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ — Biology

ಎಸ್ಸೆಸ್ಸೆಲ್ಸಿ ದ್ವಿತೀಯ ಭಾಷೆ ಇಂಗ್ಲಿಷ್ ವ್ಯಾಕರಣ ಮಾದರಿ ಪ್ರಶ್ನೋತ್ತರಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಶಂಕರನಾರಾಯಣ್‌ರಾವ್, ನಿವೃತ್ತ ಇಂಗ್ಲಿಷ್ ಅಧ್ಯಾಪಕ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

XII Answer the following question in about 8-10 sentences:

51. What is uncommon about the desire or the quality of the grand mother? How does the poet term this uncommon quality or desire?

Ans : Grandma had the desire of climbing the tree. It is uncommon or unusual because even at the age of 62 she climbed a tree. The poet termed this uncommon quality as genius.

52. Give at least two descriptions of the jazz player to show that he is sad while not playing the instrument.

Ans : When the Jazz Player was not playing the instruments he was sad because he lost his on tersest in the life. He didn't care to wore the term dress. He had more pain that could be seen in each wrinkle of his face.

53. The sailors in the 'Ballad of the Tempest' shuddered in silence. When did they do so ?

Ans:-When the ship was to break apart by the gust of wind. The sailors heard the rattling sound of the trumpet and some one thundered to cut away the most. All sailors shuddered in silence out of fear.

54. How does the poet portray the positive side of India in the poem 'The song of India'?

Ans:- The poet was answered by a wonderful vision. A vision of new and bright future. In the vision he saw the mother (motherland) rise gloriously against the blue sky. The three milky - white oceans, i.e., the Arabian sea, Bay of Bengal and the Indian Ocean, rose and fell with steady powerful motions. (There was calm on the sea's). Their waves sent forth a wonderful and illuminated her. She seemed to sit of this illuminating light to write the 'book of marrow'. (a new reign, a new future'.) She foresaw a new 'destiny', a new bright future like the bright sun - god, who destroyed darkness with his powerful rays, this new future wiped out the sorrow of her people. This new future will arrive like a 'clear dawn'. In this new future the sorrows and hardships of her people will flee like a nightmare (bad dream). This new future (sun beam) will act like the 'Hand that saves' her people.

55. Why did Nehru choose Ambedkar as the law minister?

Ans:- Dr. Ambedkar had talented skill in the field of law and legislation. He had a foresighted vision of social Justice. Above all he had succeeded in his own campaigns against social injustice. From all points of view he deserved person to choose as the law minister. Therefore Nehru chose him as the first law minister of free India.

56. What lessons did Keilis Borok learn at the Geneva Summit?

Ans:- Kellis Borok learn the following lessons at the Geneva summit.
i) he had similar people who think and inter act like him all over the world.
ii) There is no need to feel lonely in abroad.
iii) Where there is science, there is hope of survival and well being for all.

57. Why does the poet have the feeling that he is imprisoned?

Ans:- The poet have the feeling that he is imprisoned because in space there is no communication, no letters, no mail. Nobody visits him. Totally he was alone and he felt that he was in prison and he imprisoned in it.

58. How can you say that Don Anselmo was passionate about his land and the children of Rio en Medio?

Ans:- Don Anselmo was very much passionate about his land and the children. His land had come from his ancestors. He lived in that land from his birth. He took possession of his house from his mother. Everyone in the village were his relatives and the children are his nieces, nephews and grand children. Every time a child has been born in Rio en Medio, a tree was planted in its name.

59. How can you say that Pepe was loyal to Columbus?

Ans:- We feel Pepe was loyal to Columbus because he was obedient to him and prefer to accompany though he was off duty. He requested Columbus to be careful from seamen because sometimes they were dangerous. He took more concern about Columbus.

60. According to the poet, his grandmother was genius, Substantiate this Statement.

Ans:- The tree may be high or spreading, She would have to climb. Even at the age of 62 she climbed a tree, she had the capacity or climbing the tree very quickly. She has this skill. She is fond of climbing a tree since her childhood. She had this gift and enjoying a lot. She feels happy to climb a tree. She had more pleasure in a tree than in a lift.

OR

The pathetic figure of Jazz player is lifted by his music. Justify.

Ans:- He wanted to tell that he was a Black Man. He had been obedient here to preach the Black Gospel of Jazz. He was preaching it with words by loud musical sound. When he started to preach, he was transformed into a Bird. That Bird gathers its wings and flies high, high and higher until it flies away. Otherwise he come back to find himself as a Black man again. *(Contd..)*

REVISION : MODEL QUESTIONS

29) Justify the below given statement:

a) "RNA polymerase cannot transcribe a gene by itself"

b) "Transcription and translation are separated by site and not coupled in eukaryotes".

c) Which RNA polymerase enzyme involved in the transcription of 5s rRNA.

Ans:-(a) RNA polymerase cannot initiate transcription alone because it requires additional proteins, such as transcription factors (in eukaryotes) or sigma factors (in prokaryotes), to recognize specific promoter sequences on the DNA and form an initiation complex. These factors are necessary for binding, unwinding the DNA, and starting transcription.

Justification for this statement includes:

***Promoter Recognition:** RNA polymerase is unable to identify the start site of a gene by itself. Transcription factors must first bind to the promoter region to recruit the polymerase.

***Initiation Complex Formation:** In eukaryotes, general transcription factors and RNA polymerase form a complex (basal transcription complex) at the TATA box before transcription can begin.

***Unwinding DNA:** Accessory proteins help in opening the double-stranded DNA to expose the template strand, a task the enzyme cannot efficiently perform alone.

***Prokaryotic Sigma Factor:** In prokaryotes, the core enzyme of RNA polymerase requires a sigma (σ) factor to recognize the promoter region and initiate transcription.

(b) In eukaryotes, transcription and translation are separated by site and not coupled because transcription occurs inside the membrane-bound nucleus, while translation happens in the cytoplasm. The newly synthesized pre-mRNA must undergo processing (splicing, capping, polyadenylation) and transport out of the nucleus before translation can begin.

C) In eukaryotic cells, **RNA polymerase III** (or Po III) is the enzyme responsible for the transcription of 5S rRNA. It is specialized to transcribe small, structural RNAs, including 5S rRNA, tRNA, and snRNA. This distinction is crucial because other rRNAs (18S, 28S, 5.8S) are transcribed by RNA Polymerase I.

Justification for RNA Polymerase III in 5S rRNA Transcription:

Specialized Functional Role: While RNA Polymerase I handles large ribosomal RNAs, RNA Polymerase III is dedicated to transcribing smaller functional RNA molecules necessary for protein synthesis.

Unique Promoter Structure: The gene for 5SrRNA contains an internal promoter (a Type II promoter) located within the transcribed region, which is recognized specifically by the transcription factors associated with RNA Polymerase III.

Distinct from Other Pols: RNA Polymerase II transcribes mRNA, while RNA Polymerase I transcribes ribosomal genes in the nucleolus. RNA Polymerase III operates independently to ensure high-volume production of 5S rRNA.

Therefore, due to its specialized role in synthesizing small RNAs, RNA Polymerase III is the enzyme responsible for 5S rRNA production.

This separation allows for more sophisticated regulation of gene expression compared to the rapid, coupled processes in prokaryotes.

30. Mention some of the differences between the Autogamy and Geitonogamy.

Ans:-

Autogamy	*Geitonogamy*
The transfer of pollen grains from anther to the stigma of the same flower.	It is the transfer of pollen grains from anther of one flower to the stigma of another flower of same plant.
The flowers are hermaphrodite.	The flowers are generally unisexual
No external agency is required for pollination.	An external agency is required to perform pollination.

31) Give the structure of a typical antibody.

Ans:-



32. Explain the Law of independent assortment briefly?

Ans:- In an organism with many characters, the genes for different characters undergo segregation independently. This means, the separation of genes for a character does not interfere in the separation of genes for the other character.

Hence, they assort independently. This is possible because the genes for various characters are located on different loci or in different homologous chromosomes. *(Contd.)*

ಖರ್ಗೆ ಭೇಟಿಯಾದ ಡಿಕೆ ಸಹೋದರರು

ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಲು ನಡೆಸಿದ ಪ್ರಯತ್ನ ವಿಫಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ನಾಯಕತ್ವ ಜಟಾಪಟಿ ನಡುವೆಯೇ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಅವರನ್ನು ಬುಧವಾರ ರಾತ್ರಿ ಭೇಟಿ ಮಾಡಿ ಸಮಾಲೋಚಿಸಿದರು. ಈ ಮೂಲಕ, ತಮ್ಮ ಕನಸು ಸಾಕಾರಗೊಳಿಸಿಕೊಳ್ಳುವ ಯತ್ನ ಮುಂದುವರಿಸಿದರು.

ಅಸ್ಸಾಂ ವಿಧಾನಸಭಾ ಚುನಾವಣೆಗೆ ಪಕ್ಷದ ಕಾರ್ಯತಂತ್ರ ಹೆಣೆಯಲು ಎಐಸಿಸಿ ಕಚೇರಿಯಲ್ಲಿ ಮಂಗಳವಾರ ರಾತ್ರಿ ಆಯೋಜಿಸಿದ್ದ ಸಭೆಯಲ್ಲಿ ಶಿವಕುಮಾರ್ ಭಾಗಿಯಾಗಿದ್ದರು. ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ನೇತೃತ್ವದಲ್ಲಿ ಮತ್ತೊಂದು ಸುತ್ತಿನ ಸಭೆ ಗುರುವಾರ ನಡೆಯಲಿದೆ. ಇದರ ನಡುವೆ, ಪಕ್ಷದ ಉನ್ನತ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಲು ಉಪಮುಖ್ಯಮಂತ್ರಿ ಪ್ರಯತ್ನಿಸಿದರು. ಆದರೆ, ಯಶಸ್ಸು ಸಿಗಲಿಲ್ಲ.

ರಾಹುಲ್ ಹಾಗೂ ಪಕ್ಷದ ಉನ್ನತ ನಾಯಕರನ್ನು ಸಂಸತ್‌ನಲ್ಲೇ ಕಾಣುವ ಉದ್ದೇಶದಿಂದ ಶಿವಕುಮಾರ್ ಅವರು ಪಾರ್ಲಿಮೆಂಟ್ ಪಾಸ್ ಮಾಡಿಸಿಕೊಂಡಿದ್ದರು. ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡಿದ್ದ ರಾಹುಲ್ ಅವರು ತಮ್ಮ ಭಾಷಣ ಮುಗಿದ ಬೆನ್ನಲ್ಲೇ ಲೋಕಸಭೆಯಿಂದ ನಿರ್ಗಮಿಸಿದರು.

ಸಹೋದರ ಡಿ.ಕೆ. ಸುರೇಶ್ ಜತೆಗೂಡಿ ಖರ್ಗೆ ಅವರನ್ನು ಭೇಟಿ ಮಾಡಿದ ಶಿವಕುಮಾರ್, ಅಧಿಕಾರ ಹಸ್ತಾಂತರ ಗೊಂದಲವನ್ನು ಶೀಘ್ರ ಬಗೆಹರಿಸಬೇಕು ಎಂದು ಒತ್ತಾಯಿಸಿದರು. ಆ ಬಳಿಕ, ವೇಣುಗೋಪಾಲ್ ಅವರನ್ನು ಸಹೋದರರು ಭೇಟಿ ಮಾಡಿ ಚರ್ಚಿಸಿದರು.

ಸಿ.ಎಂ ಮಾತು ತಪ್ಪಲ್ಲ: ಡಿ.ಕೆ.ಸುರೇಶ್

ಬೆಂಗಳೂರು: 'ಕೊಟ್ಟ ಮಾತಿನಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ನಡೆಯುತ್ತಾರೆ ಎಂಬ ಭರವಸೆ ನನಗಿದೆ' ಎಂದು ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗಾರರ ಜೊತೆ ಮಾತನಾಡಿ, 'ಯತೀಂದ್ರ ಸಿದ್ದರಾಮಯ್ಯ ಏನು ಹೇಳಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಅವರಷ್ಟು ತಿಳಿವಳಿಕೆ ಇಲ್ಲ. ಅವರಷ್ಟು ದೊಡ್ಡವರೂ ನಾವಲ್ಲ. ಅವರು ಏನು ಹೇಳುತ್ತಾರೊ ಅದೇ ವೇದವಾಕ್ಯ' ಎಂದರು.

'ನಮಗೆ ಸಿಗುವ ನೋಟಿಸ್ ಯತೀಂದ್ರ ಅವರಿಗೆ ಏಕಿಲ್ಲ' ಎಂಬ ಶಾಸಕ ಇಕ್ಬಾಲ್ ಹುಸೇನ್ ಅವರ ಹೇಳಿಕೆಯ ಬಗ್ಗೆ ಕೇಳಿದಾಗ, 'ಇಕ್ಬಾಲ್ ಹುಸೇನ್ ಹೇಳಿರುವುದರಲ್ಲಿ ತಪ್ಪೇನೂ ಇಲ್ಲ. ಎಲ್ಲರಿಗೂ ಒಂದೇ ನೀತಿ ಇರಬೇಕು' ಎಂದರು.

'ಕಾಂಗ್ರೆಸ್ ಪಕ್ಷ ಸರ್ವ ಧರ್ಮ, ಸರ್ವ ಪಕ್ಷಗಳ ನಾಯಕರನ್ನು ಒಳಗೊಂಡಿದೆ. ಇಲ್ಲಿ ಬಿಜೆಪಿ, ಜೆಡಿಎಸ್, ಬಿಎಸ್‌ಪಿಗೆ ಸೇರಿದವರಿದ್ದಾರೆ. ನಮ್ಮಲ್ಲಿ ಹೊರಗಿನಿಂದ ಬಂದವರಿಗೆ ಮೊದಲ ಆದ್ಯತೆ. ಆ ನಂತರ ಕಾಂಗ್ರೆಸಿಗರಿಗೆ ಆದ್ಯತೆ. ಅತಿಥಿಗಳನ್ನು ಗೌರವಿಸುವುದೇ ಕಾಂಗ್ರೆಸ್ ಪಕ್ಷದ ಗುರಿ' ಎಂದರು.

ಈ ಪ್ರಶ್ನೆ ಮತ್ತೆ ಕೇಳಬೇಡಿ: ಸಿ.ಎಂ ಸಿಡಿಮಿಡಿ

'ಮೂರು ತಿಂಗಳುಗಳಿಂದ ಇದನ್ನೇ ಕೇಳುತ್ತಿದ್ದೀರಿ. ಎಷ್ಟು ಸಲ ಇದನ್ನೇ ಕೇಳುತ್ತೀರಾ? ಈ ಪ್ರಶ್ನೆ ಮತ್ತೆ ಕೇಳಬೇಡಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಾಯಕತ್ವ ಬದಲಾವಣೆ ವಿಚಾರವಾಗಿ ಸುದ್ದಿಗಾರರು ಬುಧವಾರ ಪ್ರಸ್ತಾಪಿಸಿದಾಗ ಸಿಡಿಮಿಡಿಗೊಂಡ ಅವರು, 'ಪದೇ ಪದೇ ಯಾಕೆ ನಾಯಕತ್ವ ಬದಲಾವಣೆ ಬಗ್ಗೆ ಕೇಳುತ್ತೀರಿ' ಎಂದು ಖಾರವಾಗಿಯೇ ಪ್ರಶ್ನಿಸಿದರು. 'ಹೈಕಮಾಂಡ್ ನಿರ್ಧಾರ ಅಂತಿಮ ಎಂದು ಎಷ್ಟು ಸಲ ಹೇಳಬೇಕು. ಹೈಕಮಾಂಡ್ ಹೇಳಿದರೆ ನಾನೂ ಕೇಳಬೇಕು, ಅವರೂ (ಡಿ.ಕೆ. ಶಿವಕುಮಾರ್) ಕೇಳಬೇಕು' ಎನ್ನುತ್ತ ಅವರು ಗರಂ ಆದರು.

'ವಿವಿಧ ಇಲಾಖೆಗಳೊಂದಿಗೆ ಸಭೆಗಳನ್ನು ನಡೆಸಲಾಗುತ್ತಿದೆ. ಬಜೆಟ್ ಮಂಡಿಸುವ ದಿನವನ್ನು ಸದ್ಯದಲ್ಲಿಯೇ ತಿಳಿಸಲಾಗುವುದು' ಎಂದರು.

ವಿವಿಧ ಇಲಾಖೆಗಳಲ್ಲಿ ಹುದ್ದೆಗಳ ಭರ್ತಿಗೆ ಆಗ್ರಹಿಸಿ, ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ರಾಜ್ಯ ವಿದ್ಯಾರ್ಥಿ ಸಂಘಟನೆಯ ನೇತೃತ್ವದಲ್ಲಿ ನೂರಾರು ಉದ್ಯೋಗ ಆಕಾಂಕ್ಷಿಗಳು ಬುಧವಾರ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಹುದ್ದೆಗಳ ಭರ್ತಿಗೆ ಆಗ್ರಹ: ಪ್ರತಿಭಟನೆ

ಸರ್ಕಾರದ ವಿರುದ್ಧ ಉದ್ಯೋಗ ಆಕಾಂಕ್ಷಿಗಳ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳ ಭರ್ತಿಗೆ ಆಗ್ರಹಿಸಿ, ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ರಾಜ್ಯ ವಿದ್ಯಾರ್ಥಿ ಸಂಘಟನೆಯ ನೇತೃತ್ವದಲ್ಲಿ ನೂರಾರು ಉದ್ಯೋಗ ಆಕಾಂಕ್ಷಿಗಳು ಬುಧವಾರ ಪ್ರತಿಭಟನೆ ನಡೆಸಿದರು.

ಖಾಲಿ ಹುದ್ದೆಗಳನ್ನು ಭರ್ತಿ ಮಾಡದ ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ಹೊರಹಾಕಿದರು.

ಐದು ವರ್ಷಗಳಿಂದ ರಾಜ್ಯದಲ್ಲಿ ಯಾವುದೇ ನೇಮಕಾತಿ ನಡೆದಿಲ್ಲ. ಉದ್ಯೋಗ ಆಕಾಂಕ್ಷಿಗಳ ವಯೋಮಿತಿ ಮೀರುತ್ತಿದೆ ಎಂದು ಪ್ರತಿಭಟನಕಾರರು ಆತಂಕ ವ್ಯಕ್ತಪಡಿಸಿದರು. ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ 2.84 ಲಕ್ಷ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು ಎಂದೂ ಆಗ್ರಹಿಸಿದರು.

ಗ್ರಾಮೀಣ ಭಾಗದ ನಿರುದ್ಯೋಗಿ ಯುವಕ, ಯುವತಿಯರು ಸರ್ಕಾರಿ ನೌಕರಿ ಪಡೆದುಕೊಳ್ಳಬೇಕೆಂಬ ನಿರೀಕ್ಷೆಯಿಂದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿದ್ದಾರೆ. ಆದರೆ, ನೇಮಕಾತಿಗೆ ಅಧಿಸೂಚನೆಯನ್ನೇ ಹೊರಡಿಸದ ಕಾರಣ ಆಕಾಂಕ್ಷಿಗಳು ಆತಂಕಕ್ಕೆ ಒಳಗಾಗಿದ್ದಾರೆ ಎಂದು ಪ್ರತಿಭಟನಕಾರರು ನೋವು ತೋಡಿಕೊಂಡರು.

'600 ಪಿಎಸ್‌ಐ ಹುದ್ದೆಗಳ ಭರ್ತಿಗೆ ಆರ್ಥಿಕ ಇಲಾಖೆ ಅನುಮೋದನೆ ನೀಡಿದ್ದು, ನೇಮಕಾತಿ ಆರಂಭಿಸಬೇಕು. ಪೊಲೀಸ್ ಕಾನ್‌ಸ್ಟೆಬಲ್ ನೇಮಕಾತಿಗೆ ಅಧಿಸೂಚನೆ ಹೊರಡಿಸಬೇಕು. ದೈಹಿಕ ಶಿಕ್ಷಣ ಶಿಕ್ಷಕರು, ಕಂಪ್ಯೂಟರ್ ಆಪರೇಟರ್, ವಾರ್ಡನ್ ಹುದ್ದೆಗಳಿಗೂ ನೇಮಕಾತಿ ಆರಂಭಿಸಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

> **ವಿದ್ಯಾರ್ಥಿಗಳ ಜೀವನವನ್ನು ಹಾಳು ಮಾಡುವ ಸರ್ಕಾರ ರಾಜ್ಯದಲ್ಲಿದೆ. ನೇಮಕಾತಿಗೆ ಕ್ರಮ ತೆಗೆದುಕೊಳ್ಳುವಂತೆ ಮುಂದಿನ ಅಧಿವೇಶನದಲ್ಲಿ ಧ್ವನಿ ಎತ್ತಲಾಗುವುದು**
> **ಎನ್. ರವಿಕುಮಾರ್,** ವಿರೋಧ ಪಕ್ಷದ ಮುಖ್ಯ ಸಚೇತಕ, ವಿಧಾನಪರಿಷತ್

ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗೆ ವಯೋಮಿತಿಯನ್ನು (ಎಸ್‌ಸಿ/ಎಸ್‌ಟಿ/ಒಬಿಸಿ/ 33 ವರ್ಷ ಹಾಗೂ ಸಾಮಾನ್ಯ ವರ್ಗಕ್ಕೆ 30 ವರ್ಷ) ನಿಗದಿಗೊಳಿಸಬೇಕು. ಪ್ರತಿ ವರ್ಷ ಎಲ್ಲ ಇಲಾಖೆಯಲ್ಲೂ ನೇಮಕಾತಿ ನಡೆಯುವಂತೆ ಕ್ರಮ ತೆಗೆದುಕೊಳ್ಳಬೇಕು' ಎಂದರು.

ಸಂಘಟನೆಯ ಅಧ್ಯಕ್ಷ ಕಾಂತಕುಮಾರ್ ಮಾತನಾಡಿ, 'ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದು ಬಡ ವಿದ್ಯಾರ್ಥಿಗಳನ್ನು ಬೀದಿ ಪಾಲು ಮಾಡಲಾಗಿದೆ. ಹೈಕೋರ್ಟ್ ಸೂಚನೆಯಂತೆ ಖಾಲಿಯಿರುವ ಹುದ್ದೆಗಳ ಭರ್ತಿಗೆ ಕ್ರಮ ತೆಗೆದುಕೊಳ್ಳಬೇಕು. ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ಮುಂದಿನ ದಿನಗಳಲ್ಲಿ ವಿಧಾನಸೌಧಕ್ಕೆ ಮುತ್ತಿಗೆ ಹಾಕಲಾಗುವುದು' ಎಂದರು.

ನಿವೃತ್ತ ಪೊಲೀಸ್ ಕಮಿಷನರ್ ಭಾಸ್ಕರ್ ರಾವ್, ವಿಧಾನಸಭೆಯ ವಿರೋಧ ಪಕ್ಷದ ಉಪ ನಾಯಕ ಅರವಿಂದ ಬೆಲ್ಲದ ಪಾಲ್ಗೊಂಡಿದ್ದರು.

7,240 ಕಿ.ಮೀ. ರೈಲು ಮಾರ್ಗ ನಿರ್ಮಾಣಕ್ಕೆ ಸಮೀಕ್ಷೆ: ವೈಷ್ಣವ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ 7,240 ಕಿ.ಮೀ. ಉದ್ದದ ರೈಲು ಮಾರ್ಗಗಳ ನಿರ್ಮಾಣಕ್ಕೆ ಸಮೀಕ್ಷೆ ನಡೆಸಲು ಅನುಮೋದನೆ ನೀಡಲಾಗಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ ಬುಧವಾರ ಕೇಳಿದ ಪ್ರಶ್ನೆಗೆ ಉತ್ತರ ನೀಡಿದ ಅವರು, '25 ಹೊಸ ಮಾರ್ಗಗಳ ಹಾಗೂ 40 ಜೋಡಿ ಹಳಿ ಮಾರ್ಗಗಳ ಮಾರ್ಗ ನಿರ್ಮಾಣಕ್ಕೆ ಸಮೀಕ್ಷೆ ನಡೆಸಲಾಗುತ್ತಿದೆ' ಎಂದರು.

'ರಾಜ್ಯದಲ್ಲಿ ಭೂಸ್ವಾಧೀನ ಪ್ರಕ್ರಿಯೆ ನಿಧಾನಗತಿಯಲ್ಲಿ ಸಾಗುತ್ತಿದೆ. ಹೀಗಾಗಿ, ಕೆಲವೊಂದು ಯೋಜನೆಗಳ ಕಾಮಗಾರಿಗಳು ಸ್ಥಗಿತಗೊಂಡಿವೆ. ರೈಲ್ವೆ ಯೋಜನೆಗಳಿಗೆ ಅಗತ್ಯವಿರುವ ಭೂಮಿಗಳ ಪೈಕಿ ಶೇ 63ರಷ್ಟು ಮಾತ್ರ ಸ್ವಾಧೀನಪಡಿಸಿಕೊಳ್ಳಲಾಗಿದೆ. ಇನ್ನೂ ಶೇ 37 ಭೂಮಿಯ ಸ್ವಾಧೀನ ಆಗಬೇಕಿದೆ. ರಾಜ್ಯ ಸರ್ಕಾರ ಸಹಕಾರ ನೀಡಿದರೆ ಈ ಯೋಜನೆಗಳನ್ನು ಆದಷ್ಟು ಬೇಗ ಪೂರ್ಣಗೊಳಿಸಬಹುದು' ಎಂದರು.

ಅಂಕಿ ಅಂಶಗಳು

9,064 ಹೆಕ್ಟೇರ್ — ರಾಜ್ಯದಲ್ಲಿ ರೈಲ್ವೆ ಯೋಜನೆಗಳಿಗೆ ಬೇಕಿರುವ ಭೂಮಿ

5,707 ಹೆಕ್ಟೇರ್ — ಈವರೆಗೆ ಭೂಸ್ವಾಧೀನ

3,357 ಹೆಕ್ಟೇರ್ — ಇನ್ನಷ್ಟೇ ಭೂಸ್ವಾಧೀನ ಆಗಬೇಕಿದೆ

ಭೂಸ್ವಾಧೀನದಿಂದ ಯೋಜನೆಗಳ ವಿಳಂಬ (ಹೆಕ್ಟೇರ್‌ಗಳಲ್ಲಿ)

ಯೋಜನೆ	ಕಿ.ಮೀ	ಬೇಕಿರುವ ಭೂಮಿ	ಸ್ವಾಧೀನ	ಬಾಕಿ
ಶಿವಮೊಗ್ಗ–ರಾಣೆಬೆನ್ನೂರು	96	559	226	333
ಬೆಳಗಾವಿ– ಧಾರವಾಡ	73	581	0	581
ಶಿವಮೊಗ್ಗ–ಹರಿಹರ	79	488	0	488
ವೈಟ್‌ಫೀಲ್ಡ್–ಕೋಲಾರ	53	337	0	337
ಹಾಸನ–ಬೇಲೂರು	27	206	0	206

ಝೀ ಕನ್ನಡ ನ್ಯೂಸ್ ಪ್ರಶಸ್ತಿ ಪ್ರದಾನ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಸಾಮಾಜಿಕ, ಸಾಂಸ್ಕೃತಿಕ ಮತ್ತು ಅಭಿವೃದ್ಧಿಯ ಪಥದಲ್ಲಿ ಸಾಧನೆ ಮಾಡಿದವರನ್ನು ಗೌರವಿಸುವ 'ಝೀ ಕನ್ನಡ ನ್ಯೂಸ್ ಸಾಧಕರ ಪ್ರಶಸ್ತಿ–2026' ಪ್ರದಾನ ಸಮಾರಂಭವು ಇಲ್ಲಿನ ದಿ ಲಲಿತ್ ಅಶೋಕ ಹೋಟೆಲ್‌ನಲ್ಲಿ ಗುರುವಾರ ನಡೆಯಲಿದೆ.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ 'ಜೀವಮಾನ ಸಾಧನೆ ಪ್ರಶಸ್ತಿ', ಸಿನಿಮಾ ನಿರ್ದೇಶಕ ಎಸ್. ನಾರಾಯಣ್, ಅಂತರರಾಷ್ಟ್ರೀಯ ಸ್ನೂಕರ್ ಪಟು ಚಿತ್ರಾ ಮಗಿಮೈರಾಜ್, ಪುಸ್ತಕಮನೆಯ ಎಂ.ಅಂಕೇಗೌಡ ಅವರಿಗೆ 'ಜೀವಮಾನ ಸಾಧನೆ' ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಸಂಜೆ 5ಕ್ಕೆ ಕಾರ್ಯಕ್ರಮ ಆರಂಭವಾಗಲಿದೆ. ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಸಚಿವರಾದ ಎಚ್.ಕೆ.ಪಾಟೀಲ, ರಾಮಲಿಂಗಾರೆಡ್ಡಿ, ಜಿ.ಪರಮೇಶ್ವರ, ಈಶ್ವರ ಬಿ.ಖಂಡ್ರೆ, ಶಿವರಾಜ ತಂಗಡಗಿ, ರಹೀಂ ಖಾನ್, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರಸ್ವಾಮಿ, ಶಾಸಕ ವಿ.ಸುನಿಲ್ ಕುಮಾರ್ ಅವರು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

'ಸನ್‌ಪ್ಯೂರ್ ಆಯಿಲ್' ಈ ಕಾರ್ಯಕ್ರಮವನ್ನು ಪ್ರಸ್ತುತ ಪಡಿಸುತ್ತಿದೆ. ತನಿಷ್ಕ್, ಸ್ಮಾರ್ಟ್‌ಕ್ವಿಕ್ ಮತ್ತು ಬಂಧನ್ ಪ್ರಾಪರ್ಟೀಸ್ ಮುಖ್ಯ ಪ್ರಾಯೋಜಕತ್ವ ವಹಿಸಿವೆ. ಟಿಆರ್‌ಎಸ್ ರ್‍ಯಾಷನ್ಸ್, ಅಭಯಾ ಗೋಲ್ಡ್ ಬಯರ್ಸ್, ಕಲ್ಯಾಣ್ ಫುಡ್ಸ್ ಮತ್ತು ದಾನಗಣಪತಿ ಫೈನಾನ್ಸ್ ವಿಶೇಷ ಪಾಲುದಾರರಾಗಿದ್ದಾರೆ. ನಂದಿನಿ ಸಂಸ್ಥೆಯು ರಿಫ್ರೆಶ್‌ಮೆಂಟ್ ಪಾಲುದಾರರಾಗಿದ್ದು, 'ಪ್ರಜಾವಾಣಿ' ಪತ್ರಿಕೆಯು ಮುದ್ರಣ ಸಹಯೋಗ ನೀಡಿದೆ.

ಎನ್‌ಎಂಡಿಸಿ ಅಕ್ರಮ ಅದಿರು ರವಾನೆ ತನಿಖೆಗೆ

ಒಂದನೇ ಪುಟದಿಂದ...

ಇದರ ಬೆನ್ನಲ್ಲೇ, ಸಚಿವರು ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ನೇತೃತ್ವದಲ್ಲಿ ಮೂರು ಸದಸ್ಯರ ತಂಡವನ್ನು ರಚಿಸಿದ್ದಾರೆ. ತನಿಖೆ ನಡೆಸಿ, 7 ದಿನಗಳ ಒಳಗಾಗಿ ವರದಿ ಸಲ್ಲಿಸುವಂತೆ ಸೂಚನೆ ನೀಡಿದ್ದಾರೆ.

ಈ ಪ್ರಕರಣದಲ್ಲಿ ಅರಣ್ಯ ಪ್ರದೇಶದಿಂದ ಕಬ್ಬಿಣದ ಅದಿರು ಅಕ್ರಮವಾಗಿ ಸಾಗಾಟವಾಗಿದೆಯೇ, ನಿಯಮಗಳ ಉಲ್ಲಂಘನೆ ಆಗಿದೆಯೇ ಎಂಬುದರ ಕುರಿತು ತನಿಖೆ ನಡೆಸಬೇಕು. ಆರೋಪಿ, ಲಾರಿ ಚಾಲಕ ನೀಡಿದ ಮಾಹಿತಿ ಆಧರಿಸಿ ಎರಡೂವರೆ ಸಾವಿರ ಟನ್ ಕಬ್ಬಿಣ ಅದಿರನ್ನು ಜಪ್ತಿ ಮಾಡಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿರುವುದು ತಮ್ಮ ಗಮನಕ್ಕೆ ಬಂದಿದೆ ಎಂದಿದ್ದಾರೆ.

ಮುಕರ್ರಮ್ ವಿರುದ್ಧದ ಪ್ರಕರಣ ಕೈ ಬಿಡಲು ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್ ಧರಿಸುವುದನ್ನು ನಿಷೇಧಿಸಲಾಗಿದ್ದ ಸಂದರ್ಭದಲ್ಲಿ 'ಹಿಂದೂಗಳನ್ನು ತುಂಡು ತುಂಡಾಗಿ ಕತ್ತರಿಸುತ್ತೇನೆ' ಎಂಬ ಹೇಳಿಕೆ ನೀಡುವ ಮೂಲಕ ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದ ಆರೋಪ ಎದುರಿಸುತ್ತಿರುವ ಕಾಂಗ್ರೆಸ್ ಮುಖಂಡ ಮುಕರ್ರಮ್ ಖಾನ್ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

'ನನ್ನ ವಿರುದ್ಧದ ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿ ವಕೀಲರೂ ಆದ ಮುಕರ್ರಮ್ ಖಾನ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ರಾಜೇಶ್ ರೈ ಅವರಿದ್ದ ಏಕಸದಸ್ಯ ನ್ಯಾಯಪೀಠ (ಕಲಬುರಗಿ) ಈ ಕುರಿತಂತೆ ಆದೇಶಿಸಿದೆ. ಇದೇ ವೇಳೆ ಮುಕರ್ರಮ್ ಖಾನ್‌ಗೆ ಆಶ್ರಯ ನೀಡಿ, ಪೊಲೀಸರಿಂದ ತಪ್ಪಿಸಿಕೊಳ್ಳಲು ಸಹಕರಿಸಿದ ಆರೋಪ ಎದುರಿಸುತ್ತಿದ್ದ ಅವರ ಪುತ್ರ ಡಾ.ಸೋಯಬ್ ಖಾನ್ ವಿರುದ್ಧದ ಪ್ರಕರಣವನ್ನು ರದ್ದುಪಡಿಸಲಾಗಿದೆ.

'ಹಿಂದೂಗಳನ್ನು ತುಂಡು ತುಂಡಾಗಿ ಕತ್ತರಿಸುವುದಾಗಿ ಹೇಳುವ ಮೂಲಕ ಮುಕರ್ರಮ್ ಖಾನ್ ಉದ್ದೇಶಪೂರ್ವಕ ಹಾಗೂ ದುರುದ್ದೇಶಪೂರಿತ ಮನಃಸ್ಥಿತಿ ಪ್ರದರ್ಶಿಸಿ ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿದ್ದಾರೆ ಎಂಬ ದೋಷಾರೋಪದ ಅಂಶಗಳು ಮತ್ತು ಸಾಕ್ಷಿಗಳ ಹೇಳಿಕೆಗಳನ್ನು ಗಮನಿಸಿದರೆ ಆರೋಪ ವೇದ್ಯವಾಗುತ್ತದೆ. ಎರಡನೇ ಆರೋಪಿ ಸೋಯಬ್ ಖಾನ್ ಘಟನೆಯ ನಂತರ ಮುಕರ್ರಮ್, ಹೈದರಾಬಾದ್‌ಗೆ ಪರಾರಿಯಾಗಿದ್ದಾಗ ಅವರಿಗೆ ಆಶ್ರಯ ನೀಡಿ, ಪೊಲೀಸರಿಂದ ತಪ್ಪಿಸಿಕೊಳ್ಳಲು ಸಹಕರಿಸಿದ್ದರು ಎನ್ನಲಾಗಿದೆ. ಆದರೆ, ಈ ಆರೋಪಗಳಿಗೆ ಯಾವುದೇ ಸಾಕ್ಷ್ಯಾಧಾರ ಅಥವಾ ಸಾಕ್ಷಿ ಹೇಳಿಕೆಗಳಾಗಲಿ ಇಲ್ಲ' ಎಂದು ಆದೇಶದಲ್ಲಿ ವಿವರಿಸಿದೆ.

ಪ್ರಕರಣವೇನು?: ರಾಜ್ಯದ ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್ ಧರಿಸುವುದನ್ನು ನಿಷೇಧಿಸಿ ಅಂದಿನ ಬಿಜೆಪಿ ಸರ್ಕಾರ ಆದೇಶಿಸಿತ್ತು. ಈ ಸಂದರ್ಭದಲ್ಲಿ ಸೇಡಂನಲ್ಲಿ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ್ದ ಮುಕರ್ರಮ್ ಖಾನ್, 'ಹಿಂದೂಗಳು ಹಿಜಾಬ್ ತಂಟೆಗೆ ಬಂದರೆ ತುಂಡು ತುಂಡಾಗಿ ಕತ್ತರಿಸುತ್ತೇನೆ ಎಂಬ ಹೇಳಿಕೆ ನೀಡಿದ್ದಾರೆ' ಎಂದು ಆರೋಪಿಸಿ ಶಂಕರ್, 2022ರ ಫೆಬ್ರುವರಿ 17ರಂದು ದೂರು ನೀಡಿದ್ದರು.

ತನಿಖೆ ನಡೆಸಿದ್ದ ಪೊಲೀಸರು, ಮುಕರ್ರಮ್ ವಿರುದ್ಧ, ಭಾರತೀಯ ದಂಡ ಸಂಹಿತೆ–1860ರ ಕಲಂ 298, 295, 212 ಮತ್ತು 34ರ ಅಡಿಯಲ್ಲಿ ಸೇಡಂ ಜೆಎಂಎಫ್‌ಸಿ ಕೋರ್ಟ್‌ಗೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಪ್ರೇಯಸಿಯು ಕುಟುಂಬದ ಸದಸ್ಯೆ ಅಲ್ಲ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿವಾಹಿತ ಮಹಿಳೆಗೆ ಆಕೆಯ ಪತಿ ಅಥವಾ ಅವರ ಸಂಬಂಧಿಕರು ವರದಕ್ಷಿಣೆ ಬೇಡಿಕೆ ಮುಂದಿಟ್ಟು ಹಿಂಸೆ, ದೌರ್ಜನ್ಯ ಅಥವಾ ಕೌಟುಂಬಿಕ ಕ್ರೌರ್ಯ ಎಸಗಿದ ಆರೋಪಗಳ ಪ್ರಕರಣದಲ್ಲಿ, ಪತಿಯ ಪ್ರೇಯಸಿಯನ್ನೂ ವ್ಯಾಜ್ಯದಲ್ಲಿ ಎಳೆತಂದು ನಿಲ್ಲಿಸುವುದು ಸಲ್ಲ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

'ಕೌಟುಂಬಿಕ ದೌರ್ಜನ್ಯದ ಆರೋಪ ಪ್ರಕರಣದಲ್ಲಿ ನನ್ನನ್ನು ಐದನೇ ಆರೋಪಿಯನ್ನಾಗಿ ಮಾಡಿ ಕ್ರಿಮಿನಲ್ ಅಪರಾಧಗಳ ವಿಚಾರಣೆಗೆ ಗುರಿಪಡಿಸಲಾಗಿದೆ. ಹಾಗಾಗಿ, ಈ ಕುರಿತ ಎಫ್‌ಐಆರ್ ಮತ್ತು ಮೈಸೂರಿನ ನ್ಯಾಯಾಲಯದಲ್ಲಿ ನಡೆಯುತ್ತಿರುವ ನನ್ನ ವಿರುದ್ಧದ ವಿಚಾರಣೆಗೆ ತಡೆ ನೀಡಬೇಕು' ಎಂದು ಕೋರಿ ಮಹಿಳೆಯೊಬ್ಬರು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

ಅರ್ಜಿದಾರ ಮಹಿಳೆಯ ವಿರುದ್ಧದ ಪ್ರಕರಣವನ್ನು ರದ್ದುಪಡಿಸಿರುವ ನ್ಯಾಯಪೀಠ, 'ವರದಕ್ಷಿಣೆ ಕಿರುಕುಳ ಬೇಡಿಕೆಗೆ ಸಂಬಂಧಿಸಿದಂತೆ ಕ್ರೌರ್ಯ ಅಪರಾಧದಡಿ, ಭಾರತೀಯ ದಂಡ ಸಂಹಿತೆ–1860ರ (ಐಪಿಸಿ) ಕಲಂ 498ಎ ಅನುಸಾರ ಪತಿಯ ಕುಟುಂಬಸ್ಥರನ್ನು ಮಾತ್ರವೇ ವಿಚಾರಣೆಗೆ ಗುರಿಪಡಿಸಲು ಕಾನೂನಿನಲ್ಲಿ ಅವಕಾಶವಿದೆ. ಆದರೆ, ಅಪರಿಚಿತ, ನೆರೆಹೊರೆಯವರು ಮತ್ತು ಪತಿಯ ಪ್ರೇಯಸಿಯನ್ನೂ ಆರೋಪಿಯನ್ನಾಗಿಸಿ ಆಕೆಯ ವಿರುದ್ಧ ವಿಚಾರಣೆ ನಡೆಸಲು ಆಗದು' ಎಂದು ತೀರ್ಪಿನಲ್ಲಿ ಸ್ಪಷ್ಟಪಡಿಸಿದೆ.

Infosys® Navigate your next

Infosys Limited

Corporate Identification Number (CIN): L85110KA1981PLC013115
Regd. Office: Electronics City, Hosur Road, Bengaluru - 560 100.
Phone: +91 80 2852 0261, Fax: +91 80 2852 0362
investors@infosys.com, www.infosys.com

NOTICE
SPECIAL WINDOW FOR TRANSFER AND DEMATERIALIZATION (DEMAT) OF PHYSICAL SHARES

Please note that a Special Window for Transfer and Dematerialization (Demat) of Physical Shares will remain open till February 4, 2027 pursuant to SEBI circular No. Circular No. - HO/38/13/11(2)2026-MIRSD-POD/ I/3750/2026 dated January 30, 2026 ("SEBI CIRCULAR").

This facility of a special window is for lodgement of physical securities transfer and dematerialization ("demat") which were sold/purchased prior to April 01, 2019. Kindly refer to the matrix below with regards to the applicability of lodgement:

Execution Date of Transfer Deed	Lodged for transfer before April 01, 2019?	Original Security Certificate Available?	Eligible to lodge in the current window?
Before April 01, 2019	No (it is fresh lodgement)	Yes	Yes
Before April 01, 2019	Yes (it was rejected/ returned earlier)	Yes	Yes
Before April 01, 2019	Yes	No	No
Before April 01, 2019	No	No	No

Kindly note that the request(s) which are accompanied by original certificate(s) along with transfer deeds and relevant supporting documents will only be considered under this special window. The securities so transferred shall be mandatorily credited to the transferee only in demat mode and shall be under lock-in for a period of one year from the date of registration of transfer. Such securities shall not be transferred/lien-marked/ pledged during the said lock-in period.

For any queries on the above matter, shareholders are requested to contact the Company's Registrar and Share Transfer Agents, Mrs. Shobha Anand, Vice President at M/s. KFin Technologies Limited Unit: Infosys Limited, Selenium Building, Tower B, Plot Nos. 31-32, Financial District, Nanakramguda, Serilingampally, Hyderabad, Rangareddi, Telangana India -500032. Tel: +91-40-67162222 email ID: einward.ris@kfintech.com

For **Infosys Limited**
Sd/-
A.G.S. Manikantha
Company Secretary
Membership No. A21918

Bengaluru, India
February 11, 2026

ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ
ನವನಗರ, ಹುಬ್ಬಳ್ಳಿ-580025

ಕ್ರ.ಸಂ: ಹುಧಾನಪ್ರಾ: ಸಿ.ಎ. ನಿ.ಹಂಚಿಕೆ/2025–26 ದಿನಾಂಕ: 11–02–2026

ಪ್ರಕಟಣೆ
ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ

ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಈ ಕೆಳಕಂಡ ಖಾಸಗಿ ಬಡಾವಣೆಗಳಲ್ಲಿರುವ ಸಾರ್ವಜನಿಕ ಸೌಲಭ್ಯಕ್ಕಾಗಿ ಮೀಸಲಿಟ್ಟಿರುವ 30 ನಿವೇಶನಗಳು (30 ವರ್ಷಗಳ ಗುತ್ತಿಗೆ ಆಧಾರದ ಮೇಲೆ) ಹಂಚಿಕೆಗಾಗಿ ಲಭ್ಯವಿರುತ್ತವೆ. ಸದರಿ ಸಾರ್ವಜನಿಕ ಸೌಲಭ್ಯದ ನಿವೇಶನಗಳನ್ನು ಸಾರ್ವಜನಿಕ ಉದ್ದೇಶಗಳಿಗೆ ಹಂಚಿಕೆ ಮಾಡಲು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಸಾರ್ವಜನಿಕ ಉಪಯೋಗ (ನಾಗರೀಕ ಸೌಲಭ್ಯ) ನಿವೇಶನಗಳ ಹಂಚಿಕೆ ನಿಯಮ 1991 ರ ಪ್ರಕಾರ, ಅರ್ಹ ನೋಂದಾಯಿತ ಸಂಘ ಸಂಸ್ಥೆಗಳು/ ಕೇಂದ್ರ/ ರಾಜ್ಯ/ ಅರೆ ಸರ್ಕಾರಿ ನಿಗಮ ಮಂಡಳಿಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅ. ನಂ	ಗ್ರಾಮ	ರಿಸನಂ/ ಬ್ಲಾಕ್ ನಂ	ನಿವೇಶನ ಸಂಖ್ಯೆ.	ಒಟ್ಟು ವಿಸ್ತೀರ್ಣ ಚ.ಮೀ. ಗಳಲ್ಲಿ	ರೂ. ಪ್ರತಿ ಚ.ಮೀ ಗಳಲ್ಲಿ	ಉದ್ದೇಶ	ಗುತ್ತಿಗೆ ಮೊಬಲಗು ರೂ.ಗಳಲ್ಲಿ	ಭರಿಸಬೇಕಾದ ನೋಂದಣಿ ಶುಲ್ಕ	ಶೇ 10 ರಂತೆ ಭರಿಸಬೇಕಾದ ಪ್ರಾರಂಭಿಕ ಠೇವಣಿ ರೂ	ಷರಾ
1	ಅಯೋಧ್ಯಾ	155	151	0–ಎ 21 ಗು–8.75 ಆ	9000	ಶೈಕ್ಷಣಿಕ	1,96,83,000	5000	19,68,300	
2	ಅಯೋಧ್ಯಾ	127/1ಅ/2+4+5+6+7	77	253 (2ಗು–8ಆ)	9000	ಶೈಕ್ಷಣಿಕ (ಫ್ರಿ ನರ್ಸರಿ)	22,77,000	1000	2,27,700	
3	ಉಣಕಲ್ಲ	73/1	60	412.88 (4ಗು–1.25ಆ)	8500	ಧಾರ್ಮಿಕ/ ಸಾಮಾಜಿಕ	35,09,480	1000	3,50,948	
4	ಬಮ್ಮಾಪೂರ	63/ಅ+64	230	1489.24 (14ಗು–11.50ಆ)	5000	ಸಾಮಾಜಿಕ	7446200	2000	744620	
5	ಗೋಪನಕೊಪ್ಪ	182/2+3+4, 183/1	108	1425.04 (14ಗು–1.25ಆ)	13000	ಧಾರ್ಮಿಕ/ ಸಾಮಾಜಿಕ	1,85,25,520	2000	18,52,552	
6	ಬೈರಿದೇವರಕೊಪ್ಪ	344ಅ	35	347.00(3ಗು–6.75ಆ)	10500	ಸಾಮಾಜಿಕ	36,43,500	1000	3,64,350	
7	ತಾರಿಹಾಳ	17/2,18/1+2+3	01	2126.25(21ಗು–0.25ಆ)	5500	ಶೈಕ್ಷಣಿಕ	1,16,94,375	5000	11,69,438	
8	ಅಯೋಧ್ಯಾ	160/ಬ+163ಕ	225	4582.68	9000	ಶೈಕ್ಷಣಿಕ	4,12,38,000	7000	41,23,800	
9	ಕೇಶ್ವಾಪೂರ	40	139	336.70(3ಗು–5.25ಆ)	6000	ಸಾಮಾಜಿಕ	20,20,200	1000	2,02,020	
10	ಅಮರಗೋಳ	68/1	82	1067.57(10ಗು–8.75ಆ)	11000	ಶೈಕ್ಷಣಿಕ ಸಾಮಾಜಿಕ	1,17,43,270	2000	11,74,327	
11	ಕೃಷ್ಣಾಪೂರ	95ಅ+ಬ	336	2538.73	9000	ಸಾಮಾಜಿಕ	2,28,48,570	5000	22,84,857	
12	ನಾಗಶೆಟ್ಟಿಕೊಪ್ಪ	28/6ಅ+6ಬ+7/2,3 ಹಾಗೂ 28/9	48	402.68(3ಗು–15.75ಆ)	16000	ಸಮುಧಾಯ ಭವನ	64,42,880	1000	6,44,288	
13	ನಾಗಶೆಟ್ಟಿಕೊಪ್ಪ	8/1	163	3008.22(29ಗು–11.75ಆ)	7500	ಶೈಕ್ಷಣಿಕ	2,25,60,000	5000	22,56,000	
14	ಗಬ್ಬೂರ	69/2ಅ+69/2ಬ+3	44	628 (6ಗು–3.25ಆ)	7000	ಸಾಮಾಜಿಕ	43,96,000	1000	4,39,600	
15	ಗಬ್ಬೂರ	65/3+66/1+67/3+7	116	1420.25(14ಗು–0.75ಆ)	7000	ಶೈಕ್ಷಣಿಕ/ ಸಾಮಾಜಿಕ	99,41,750	2000	9,94,175	ಪ.ಜಾ
16	ಗಬ್ಬೂರ	67/6+68/1,68/2+4	156	1881.94	7000	ಶೈಕ್ಷಣಿಕ	1,31,73,580	2000	13,17,358	
17	ಗೋಪನಕೊಪ್ಪ	11/1	79	3679.75	13000	ಸಾಮಾಜಿಕ	4,78,36,750	5000	47,83,675	
18	ನಾಗಶೆಟ್ಟಿಕೊಪ್ಪ	8/1	163	3008.22	7500	ಶೈಕ್ಷಣಿಕ	2,25,61,650	5000	22,56,165	
19	ಬೆಂಗೇರಿ	86/1	15	1742.02	7000	ಸಾಮಾಜಿಕ	1,21,94,140	2000	12,19,414	
20	ನಾಗಶೆಟ್ಟಿಕೊಪ್ಪ	14/1/ಬಿ	86	1598.16	16000	ಶೈಕ್ಷಣಿಕ/ ಸಾಮಾಜಿಕ	2,55,70,560	2000	25,57,056	
21	ರಾಯನಾಳ	85/2	103	492.21	10000	ಸಾಂಸ್ಕೃತಿಕ	49,22,100	1000	4,92,210	ಪ.ಜಾ
22	ಕೇಶ್ವಾಪೂರ	38/1+2/ಅ+ಬ/5	02	381.89	6000	ಸಮುದಾಯ ಭವನ	22,91,340	1000	2,29,134	
23	ಕೆಲಗೇರಿ	48/1ಹ,1ಗ1ಫ, 1ಡ,1ಕ,1ಇ	84	1143.48	6500	ಸಾಂಸ್ಕೃತಿಕ	74,32,620	2000	7,43,262	ಪ.ಜಾ
24	ಬೇಲೂರ	116/1	89	379.52	5000	ಸಾಮಾಜಿಕ	18,97,600	1000	1,89,760	ಪ.ಜಾ
25	ದೊಡ್ಡನಾಯ ಕನಕೊಪ್ಪ	30/1ಕ/11	02	202.50	8000	ವ್ಯಾಯಾಮ ಶಾಲೆ	16,20,000	1000	1,62,000	ಪ.ಪಂ
26	ತಡಸಿನಕೊಪ್ಪ	95	93	961	6500	ಸಾಮಾಜಿಕ	62,49,100	1000	6,24,910	ಪ.ಪಂ
27	ನರೇಂದ್ರ	62/2ಎ, 63	27	240.3	4500	ಮಿಲ್ಕಭೂತ	10,81,350	1000	1,08,135	
28	ಕೆಲಗೇರಿ	10/1+10/2+13+17/1+19/1+20/1+2+3+4	139	1456.65(14ಗು–6.25ಆ)	6500	ಶೈಕ್ಷಣಿಕ/ಕನ್ನಡ ಮಾಧ್ಯಮ/ವಸತಿ ನಿಲಯ	94,68,225	2000	9,46,823	
29	ಲಕಮನಹಳ್ಳಿ	4ಅ/1ಅ/1	09	135.92(01 ಗು–5.50ಆ)	8500	ಸಾಮಾಜಿಕ	11,55,320	1000	1,15,532	
30	ನಾರಾಯಣಪೂರ	7/14ಅ/2/2ಸಿ.ಟಿ. ಎಸ್.ನಂ.12ಡಿ/20	18	202.70	7000	ಸಾಮಾಜಿಕ	14,18,900	1000	1,41,890	ಪ.ಜಾ

ಸೂಚನೆ: 1) ನಿಗಧಿತ ನೋಂದಣಿ ನಮೂನೆ ನಿವೇಶನ ಮಂಜೂರಾತಿ ಅರ್ಜಿ ಇವುಗಳನ್ನು **ದಿನಾಂಕ: 12–02–2026 ರಿಂದ ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿಯಲ್ಲಿ ರೂ. 1,000/– ಶುಲ್ಕ ಪಾವತಿಸಿ, ಪಡೆಯಬಹುದು. 2)ಕೇಂದ್ರ/ರಾಜ್ಯ/ಅರೆ ಸರ್ಕಾರಿ/ ನಿಗಮ ಮಂಡಳಿಗಳು** ಸಿ.ಎ **ನಿವೇಶಗಳಿಗಾಗಿ ಕೋರಿದಲ್ಲಿ/ಅರ್ಜಿ ಸಲ್ಲಿಸಿದಲ್ಲಿ ಮೊದಲ ಆದ್ಯತೆ ನೀಡಲಾಗುವುದು.** 3) ಸಭೆಯ ನಿರ್ಣಯದಂತೆ ಹಂಚಿಕೆಗೆ ಕ್ರಮ ವಹಿಸಲಾಗುವುದು. 4) ಅರ್ಹ ಸಂಘ ಸಂಸ್ಥೆಗಳು ಕಾಲಂ (9) ಮತ್ತು (10) ರಲ್ಲಿ ನಿಗದಿಪಡಿಸಿರುವ ನೋಂದಣಿ ಶುಲ್ಕ ಹಾಗೂ ಪ್ರಾರಂಭಿಕ ಠೇವಣಿ**ದೊಂದಿಗೆ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ ಇವರಿಗೆ ಸಂದಾಯವಾಗುವಂತೆ ಖರೀದಿಸಲಾದ ಡಿ.ಡಿ./ ಕೆನರಾ ಬ್ಯಾಂಕ ನವನಗರ ಹುಬ್ಬಳ್ಳಿ ಶಾಖೆಯ ಖಾತೆ ಸಂಖ್ಯೆಗೆ ನಿಗದಿತ ಫಾರಂನೊಂದಿಗೆ ಸಲ್ಲಿಸಬಹುದು.** 5) ಕೊನೆಯ ದಿನಾಂಕದ ನಂತರ ಸಲ್ಲಿಸಲಾದ ಮತ್ತು ದೋಷಪೂರಿತ ಸರಿಯಾದ ಮಾಹಿತಿ ನೀಡದ ಹಾಗೂ ದಾಖಲೆಗಳನ್ನು ಸಲ್ಲಿಸದೇ ಇರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು. 6) ಕಚೇರಿ ವೇಳೆಯಲ್ಲಿ ಮಂಜೂರಾತಿಗೆ ಪ್ರಕಟಿಸಿರುವ ನಿವೇಶನಗಳ ನಕ್ಷೆ ಪರಿಶೀಲಿಸಿ ಹೆಚ್ಚಿನ ವಿವರಗಳನ್ನು ಪ್ರಾಧಿಕಾರದ ಹಂಚಿಕೆ ಶಾಖೆಯಲ್ಲಿ ಪಡೆಯಬಹುದು. 7) ನಾಗರೀಕ ಸೌಲಭ್ಯ ನಿವೇಶನಗಳನ್ನು ಹಂಚಲು ಅನುಸರಿಸಬೇಕಾದ ನಿಯಮಗಳ ಅರ್ಹತೆ ಷರತ್ತುಗಳು, ನಿಬಂಧನೆಗಳು ಮತ್ತು ಇತರೆ ವಿವರಗಳನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ನಾಗರೀಕ ಸೌಲಭ್ಯ ನಿವೇಶನ ಹಂಚಿಕೆ ನಿಯಮ 1991 ನ್ನು ಪರಿಶೀಲಿಸಬಹುದು. ಯಾವುದೇ ಅರ್ಜಿಯನ್ನು ತಿರಸ್ಕರಿಸುವ ಅಧಿಕಾರ ಪ್ರಾಧಿಕಾರಕ್ಕೆ ಇರುತ್ತದೆ. 8) ನಿವೇಶನ ಹಂಚಿಕೆಯನ್ನು ಸ್ಥಳದಲ್ಲಿ ಲಭ್ಯವಿರುವ ಕ್ಷೇತ್ರಕ್ಕೆ ಹಂಚಿಕೆ ಮಾಡಲಾಗುವುದು, ಕ್ಷೇತ್ರದಲ್ಲಿ ವ್ಯತ್ಯಾಸವಾದಲ್ಲಿ ಶುಲ್ಕವನ್ನು ಹೊಂದಾಣಿಕೆ ಮಾಡಲಾಗುವುದು. 9) ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ಸಿ.ಎ. ನಿವೇಶನ ಹಂಚಿಕೆ ನಿಯಮ 1991ರ ಅಡಿಯಲ್ಲಿ 8(4) ರಲ್ಲಿ ಅವಕಾಶವಿರುವಂತೆ ಪ್ರಕರಣಗಳಲ್ಲಿನ ನಿವೇಶನಗಳಿಗೆ ಗುತ್ತಿಗೆ ಹಣದ ಶೇಕಡ 50 ರಷ್ಟು ದರಕ್ಕೆ ಹಂಚಿಕೆ ಮಾಡಲಾಗುವುದು. 10) ಯಾವುದೇ ನಿವೇಶನವನ್ನು ಉಪವಿಭಾಗ ಮಾಡಿ ಹಂಚಿಕೆ ಮಾಡುವ ಅಧಿಕಾರವನ್ನು ಪ್ರಾಧಿಕಾರವು ಕಾಯ್ದಿರಿಸಿರುತ್ತದೆ. ಸಂಘ ಸಂಸ್ಥೆಗಳು ಈ ಕೆಳಗಿನ (ಅ ದಿಂದ ಉ) ವರೆಗಿನ ದಾಖಲೆಗಳೊಂದಿಗೆ **ಅರ್ಜಿ ಸಲ್ಲಿಸಬೇಕಾದ ಕೊನೆಯ ದಿನಾಂಕ:20–02–2026 ರಂದು ಸಾಯಂಕಾಲ 4:00 ಗಂಟೆವರೆಗೆ ಮಾತ್ರ ಸ್ವೀಕರಿಸಲಾಗುವುದು.** ನಂತರ ಬಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. 11) ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ಸಿ.ಎ. ನಿವೇಶನ ಹಂಚಿಕೆ ನಿಯಮ 1991ರ 3(2) ರ ಅಡಿಯಲ್ಲಿ ಬೇರೆ ಸಂಘ ಸಂಸ್ಥೆಗಳಿಗೆ ಹಂಚಿಕೆ ಮಾಡಲು ಕ್ರಮ ವಹಿಸಲಾಗುವುದು.12) ಹಂಚಿಕೆಯಾಗಿರುವ ಸಿ.ಎ. ನಿವೇಶನದ ಆಸ್ತಿ ತೆರಿಗೆಯನ್ನು ಹಂಚಿಕೆ ಪಡೆದವರು ಭರಿಸತಕ್ಕದ್ದು.
ಅ) ಸಂಘದ ಉದ್ದೇಶ ಹಾಗೂ ಚಟುವಟಿಕೆಗಳ ವಿವರ, ಸಂಘದ ನೋಂದಾಯಿಸಿದ ಬಗ್ಗೆ ದಾಖಲೆ ಹಾಗೂ ಧ್ಯೇಯೋದ್ದೇಶಗಳು / ಬೈಲಾ. ಆ) ಸಂಘದ ಆರ್ಥಿಕ ಪರಿಸ್ಥಿತಿಗಳ ಬಗ್ಗೆ ಮಾಹಿತಿ. ಇ) ಸಾರ್ವಜನಿಕರಿಗೆ ಒದಗಿಸಬಹುದಾದ ಸೌಲಭ್ಯಗಳು. ಈ) ಕಳೆದ 03 ವರ್ಷದ ಆಡಿಟ್ ವರದಿ. ಉ) ಸಿ.ಎ ನಿವೇಶನದ ಅಗತ್ಯತೆಯ ಬಗ್ಗೆ ವಿವರ ಹಾಗೂ ನಡಾವಳಿಕೆ ಪ್ರತಿ.

ಸಹಿ/–
ಡಾ॥ ಸಂತೋಷಕುಮಾರ ಬಿರಾದಾರ, ಆಯುಕ್ತರು
ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ ಹುಬ್ಬಳ್ಳಿ

ಡಿಐಪಿಆರ್/ಧಾರವಾಡ/1224/ಮಣಿಪಾಲ್/2025–26

ಸಹಿ/–
ಶಾಕೀರ ಸನದಿ, ಅಧ್ಯಕ್ಷರು
ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ ಹುಬ್ಬಳ್ಳಿ

ಹಾಲೊಗ್ರಾಂ ಕೊರತೆ: ತಪಾಸಣೆಗೆ ‘ಹೊಗೆ’

ವಾಹನಗಳ ಮಾಲಿನ್ಯ ತಪಾಸಣೆ ನಡೆಸಿ ನೀಡುವ ಪ್ರಮಾಣಪತ್ರಕ್ಕೆ ಬೇಕು ಸ್ಟಿಕ್ಕರ್

• ಬಾಲಕೃಷ್ಣಪಿ.ಎಚ್.

ಬೆಂಗಳೂರು: ವಾಯುಮಾಲಿನ್ಯ ತಪಾಸಣಾ ಕೇಂದ್ರಗಳಿಗೆ ಸಾರಿಗೆ ಇಲಾಖೆಯು ಎರಡು ತಿಂಗಳಿನಿಂದ ಹಾಲೊಗ್ರಾಂ ಪೂರೈಕೆ ಮಾಡಿಲ್ಲ. ಇದರಿಂದ ವಾಹನಗಳ ಮಾಲಿನ್ಯ ತಪಾಸಣೆ ನಡೆಸಿದ ಬಳಿಕ ನೀಡುವ ಪ್ರಮಾಣಪತ್ರಗಳಿಗೆ ಅಂಟಿಸಲು ಹಾಲೊಗ್ರಾಂ ಇಲ್ಲದಂತಾಗಿದೆ.

ವಾಹನಗಳ ನೋಂದಣಿ ಪ್ರಮಾಣಪತ್ರ (ಆರ್‌ಸಿ) ಮತ್ತು ಚಾಲನಾ ಪರವಾನಗಿ (ಡಿಎಲ್) ಮತ್ತು ಅತಿ ಸುರಕ್ಷಿತ ನೋಂದಣಿ ಫಲಕಗಳ (ಎಸ್‌ಎಸ್‌ಆರ್‌ಪಿ) ನಕಲು ತಡೆಗಟ್ಟಲು ಮತ್ತು ಭದ್ರತೆಯನ್ನು ಹೆಚ್ಚಿಸಲು ಹಾಲೊಗ್ರಾಂ ಸ್ಟಿಕ್ಕರ್ ಬಳಸಲಾಗುತ್ತಿದೆ. ಇದು ನಕಲು ಮಾಡಲು ಸಾಧ್ಯವಿಲ್ಲದ ಲೇಸರ್‌-ಕಟ್ ಭದ್ರತಾ ವೈಶಿಷ್ಟ್ಯ ಹೊಂದಿದ್ದು, ದಾಖಲೆಗಳ ದೃಢೀಕರಣ ಒದಗಿಸುತ್ತದೆ.

ವಾಯುಮಾಲಿನ್ಯ ತಪಾಸಣಾ ಕೇಂದ್ರಗಳು ಸಾರಿಗೆ ಇಲಾಖೆಗೆ ₹ 1,000 ಪಾವತಿಸಿ ಹಾಲೊಗ್ರಾಂ ಪಡೆದರೆ ಒಂದು ಸಾವಿರ ವಾಹನಗಳಿಗೆ ಪ್ರಮಾಣಪತ್ರ ನೀಡಬಹುದು. ಹಾಲೊಗ್ರಾಂ ಖಾಲಿಯಾದಾಗ ಮತ್ತೆ ಹಣ ತುಂಬಿದರೆ ಪೂರೈಸಬೇಕು. ಆದರೆ, ಎರಡು ತಿಂಗಳಿನಿಂದ ಪೂರೈಸುತ್ತಿಲ್ಲ ಎಂದು ಮಾಲಿನ್ಯ ತಪಾಸಣೆ ಕೇಂದ್ರದ ಮಾಲೀಕರು ತಿಳಿಸಿದರು.

ಯಾಕೆ ಕೊಡುತ್ತಿಲ್ಲ: ‘ಹಾಲೊಗ್ರಾಂ ಪೂರೈಸುವಂತೆ ನಾವು ಕೇಳಿದರೆ, ಸರ್ಕಾರದಿಂದ ಆದೇಶ ಬಂದಿಲ್ಲ ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಅಧಿಕಾರಿಗಳು ಹೇಳುತ್ತಾ ಬಂದಿದ್ದರು. ಸರ್ಕಾರ ಅಂದರೆ ಅವರು ಸಾರಿಗೆ ಇಲಾಖೆಯ ಕಾರ್ಯದರ್ಶಿ ಮತ್ತು ಸಚಿವರ ಕಡೆಗೆ ಕೈ ತೋರಿಸುತ್ತಿದ್ದರು. ನಾವು ಸಚಿವರಿಗೆ, ಕಾರ್ಯದರ್ಶಿಗಳಿಗೆ ಮನವಿ ಮಾಡಿದ್ದರಿಂದ ಸಾರಿಗೆ ಇಲಾಖೆಯಿಂದ ಆದೇಶ ಹೊರಡಿಸಲಾಗಿತ್ತು. ಈ ಆದೇಶ ಬಂದು ಒಂದೂವರೆ ತಿಂಗಳು ಕಳೆದರೂ ಸಾರಿಗೆ ಮತ್ತು ರಸ್ತೆ ಸುರಕ್ಷತೆ ಅಧಿಕಾರಿಗಳು ಅನುಷ್ಠಾನಗೊಳಿಸಿಲ್ಲ’ ಎಂದು ವಾಯುಮಾಲಿನ್ಯ ತಪಾಸಣೆ ಕೇಂದ್ರಗಳ ಮಾಲೀಕರ ಸಂಘದ ಅಧ್ಯಕ್ಷ ಯೋಗೇಶ್ ಅಸಮಾಧಾನ ವ್ಯಕ್ತಪಡಿಸಿದರು.

> ಏಪ್ರಿಲ್ 1ರ ಒಳಗೆ ವಾಹನ್ ಪೋರ್ಟಲ್‌ನಲ್ಲಿ ರಾಜ್ಯದ ತಂತ್ರಾಂಶ ಸಂಯೋಜನೆಗೊಳ್ಳಲೇಬೇಕು. ಆಗ ಎಲ್ಲ ಸಮಸ್ಯೆ ಪರಿಹಾರಗೊಳ್ಳಲಿದೆ. ಹಾಲೊಗ್ರಾಂ ಕೆಲವೇ ದಿನಗಳಲ್ಲಿ ವಿತರಣೆಯಾಗಲಿದೆ
> **ರಾಮಲಿಂಗಾರೆಡ್ಡಿ,** ಸಾರಿಗೆ ಸಚಿವ



ವಾಯುಮಾಲಿನ್ಯ ತಪಾಸಣೆಯ ಬಳಿಕ ಹಾಲೊಗ್ರಾಂ ಸ್ಟಿಕ್ಕರ್ ಅಂಟಿಸಿರುವ ಪ್ರಮಾಣಪತ್ರ

ಅಂದಾಜು ವೆಚ್ಚ ₹ 36 ಲಕ್ಷದಲ್ಲಿ ಕೆಟಿಪಿಪಿ ಕಾಯ್ದೆ ಮತ್ತು ನಿಯಮಗಳ ಅನುಸಾರ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್ ಕರೆದು ಹಾಲೊಗ್ರಾಂ ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ. ಇದರ ವೆಚ್ಚವನ್ನು ವಾಯುಮಾಲಿನ್ಯ ಮತ್ತು ಇತರ ಚಟುವಟಿಕೆಗಳ ನಿಯಂತ್ರಣ ಕ್ರಮಗಳ ಅನುಷ್ಠಾನದ ಇತರ ವೆಚ್ಚದಡಿ ಒದಗಿಸಿರುವ ಅನುದಾನದಲ್ಲಿ ಮತ್ತು ಅನುಮೋದನೆ ನೀಡಿರುವ ಕಾರ್ಯಕ್ರಮಗಳಲ್ಲಿ ಬಾಕಿ ಉಳಿದಿರುವ ಅನುದಾನದಲ್ಲಿ ಭರಿಸಬೇಕು ಎಂದೂ ತಿಳಿಸಲಾಗಿದೆ.

ಟೆಂಡರ್ ಆಗಿದೆ: ಹಾಲೊಗ್ರಾಂ ಒದಗಿಸಲು ಟೆಂಡರ್ ಕರೆಯಲಾಗಿತ್ತು. ಜ.27ಕ್ಕೆ ಟೆಂಡರ್ ಪ್ರಕ್ರಿಯೆ ಮುಗಿದಿದೆ. ಕೆಲವೇ ದಿನಗಳಲ್ಲಿ ಪೂರೈಕೆಯಾಗಲಿದೆ ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ.

‘ಗ್ರಾಹಕರು ಒಪ್ಪುತ್ತಿಲ್ಲ’

ಆದೇಶ ಬಂದು ಒಂದೂವರೆ ತಿಂಗಳಾಗಿದೆ. ಟೆಂಡರ್ ಕರೆಯಲಾಗಿದೆ. ಪೂರೈಕೆ ಆಗುವವರೆಗೆ ಹಾಲೊಗ್ರಾಂ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಅಲ್ಲಿವರೆಗೆ ಏನು ಮಾಡುವುದು ಎಂದು ಕೇಳಿದರೆ ಹಾಲೊಗ್ರಾಂ ಇಲ್ಲದೆಯೇ ಪ್ರಮಾಣಪತ್ರ ನೀಡಿ ಎಂದು ಸಲಹೆ ನೀಡಿದ್ದಾರೆ. ಕೆಲವು ವಾಹನ ಮಾಲೀಕರು ಅಂಥ ಪ್ರಮಾಣಪತ್ರವನ್ನು ಒಯ್ಯುತ್ತಿದ್ದಾರೆ. ಹಾಲೊಗ್ರಾಂ ಬಗ್ಗೆ ಮಾಹಿತಿ ಇರುವ ಮಾಲೀಕರು ಒಪ್ಪುತ್ತಿಲ್ಲ. ಅಲ್ಲದೇ ಈ ಸ್ಟಿಕ್ಕರ್ ಇಲ್ಲದ ಪ್ರಮಾಣಪತ್ರಗಳಿಗೆ ಮೌಲ್ಯ ಕೂಡ ಇಲ್ಲ ಎಂದು ವಾಯುಮಾಲಿನ್ಯ ತಪಾಸಣೆ ಕೇಂದ್ರಗಳ ಮಾಲೀಕರ ಸಂಘದ ಅಧ್ಯಕ್ಷ ಯೋಗೇಶ್ ತಿಳಿಸಿದರು.

ಹಾಲೊಗ್ರಾಮ್ ಇಲ್ಲದ ಪ್ರಮಾಣಪತ್ರವನ್ನು ಎಲ್ಲಿ ಬೇಕಾದರೂ ಮುದ್ರಿಸಿ ತರಬಹುದು. ಈ ಸ್ಟಿಕ್ಕರ್ ಇದ್ದರಷ್ಟೇ ನಕಲು ಮಾಡಲು ಸಾಧ್ಯವಾಗುವುದಿಲ್ಲ ಎಂದು ವಿವರಿಸಿದರು.

ಸುದ್ದಿ 2 ನಿಮಿಷ

ನದಿಯಲ್ಲಿ 3 ಬೈಕ್ ಪತ್ತೆ ಸಾಕ್ಷ್ಯ ನಾಶಕ್ಕೆ ಎಸೆದಿರುವ ಶಂಕೆ

ಬೆಳಗಾವಿ: ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ನಯಾನಗರ ಸೇತುವೆ ಬಳಿ ಬುಧವಾರ, ಮಲಪ್ರಭಾ ನದಿಯಲ್ಲಿ ಮೂರು ಬೈಕ್‌ಗಳು ಪತ್ತೆಯಾಗಿವೆ.

KA25 G-1459, KA24 J-7907 ನೋಂದಣಿ ಸಂಖ್ಯೆಯ ಎರಡು ಹಾಗೂ ನಂಬರ್ ಪ್ಲೇಟ್ ಇಲ್ಲದ ಇನ್ನೊಂದು ಬೈಕ್ ಪತ್ತೆಯಾಗಿದೆ. ಬೈಲಹೊಂಗಲ ಪೊಲೀಸರು ಅವುಗಳನ್ನು ಹೊರಕ್ಕೆ ತಂದರು.

ಸವದತ್ತಿ ಪಟ್ಟಣದಲ್ಲಿ 2025ರ ಡಿ.22ರಂದು ಮೂರು ಬೈಕುಗಳಲ್ಲಿ ಬಂದಿದ್ದ 9 ಮಂದಿ ಚಿನ್ನದ ಅಂಗಡಿಯಲ್ಲಿ ₹12 ಲಕ್ಷ ಮೌಲ್ಯದ ಚಿನ್ನಾಭರಣ ಕಳವು ಮಾಡಿದ್ದರು. ಇದು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲೂ ಸೆರೆಯಾಗಿತ್ತು.

‘ಬಹುಶಃ ಈ ಮೂರೂ ಬೈಕುಗಳನ್ನೇ ಕೃತ್ಯಕ್ಕೆ ಬಳಸಿ ಸಾಕ್ಷ್ಯ ನಾಶಕ್ಕಾಗಿ ನದಿಯಲ್ಲಿ ಎಸೆದಿರುವ ಶಂಕೆ ಇದೆ. ಈ ನಿಟ್ಟಿನಲ್ಲಿ ತನಿಖೆ ನಡೆಸಲಾಗುತ್ತಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ತಿಳಿಸಿದ್ದಾರೆ.

ಮಾದಕ ವಸ್ತು: ಕ್ರಮ ಕೈಗೊಳ್ಳದ ಕಾಲೇಜುಗಳ ಮಾನ್ಯತೆ ರದ್ದು

ಬೆಂಗಳೂರು: ‘ಮಾದಕ ವಸ್ತು ಪ್ರಕರಣಗಳ ತಡೆಗೆ ಅಗತ್ಯ ಕ್ರಮ ಕೈಗೊಳ್ಳದ ಕಾಲೇಜುಗಳ ಮಾನ್ಯತೆ ರದ್ದತೆ ರದ್ದುಪಡಿಸುವ ಕುರಿತು ಚಿಂತನೆ ನಡೆಸಿದ್ದು, ಉನ್ನತ ಶಿಕ್ಷಣ ಸಚಿವರ ಜತೆಗೂ ಚರ್ಚಿಸಲಾಗಿದೆ’ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ದಿಶಾಭೋದ್ ಫೌಂಡೇಶನ್, ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೊ ಬುಧವಾರ ಆಯೋಜಿಸಿದ್ದ ನಶಾ ಮುಕ್ತ ಭಾರತ, ನಶಾ ಮುಕ್ತ ಕರ್ನಾಟಕ, ನಶಾ ಮುಕ್ತ ಕ್ಯಾಂಪಸ್, ಅಂಗಾಂಗ ದಾನ ಅಭಿಯಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಾಜ್ಯವನ್ನು ಸಂಪೂರ್ಣ ಮಾದಕದ್ರವ್ಯ ಮುಕ್ತಗೊಳಿಸಲು ಸರ್ಕಾರ ಗಂಭೀರ ಚಿಂತನೆ ನಡೆಸಿದೆ. ಈ ಆಶಯ ಈಡೇರಲು ಮೊದಲು ಕಾಲೇಜು ಕ್ಯಾಂಪಸ್‌ಗಳು ನಶೆ ಮುಕ್ತವಾಗಬೇಕು. ರಾಜೀವ್ ಗಾಂಧಿ ವಿಶ್ವವಿದ್ಯಾಲಯ ಕೈಗೊಂಡಿರುವ ಅಭಿಯಾನಕ್ಕೆ ಸರ್ಕಾರ ಸಂಪೂರ್ಣ ಬೆಂಬಲ ನೀಡಲಿದೆ. ಮಾದಕ ದ್ರವ್ಯದ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳದ, ಪ್ರಕರಣಗಳು ವರದಿಯಾಗುವ ಕಾಲೇಜುಗಳ ಮಾನ್ಯತೆ ರದ್ದು ಮಾಡಲಾಗುವುದು. ಅದಕ್ಕಾಗಿ ಪ್ರತಿ ಕಾಲೇಜಿನಲ್ಲೂ ಮಾದಕ ದ್ರವ್ಯ ವಿರೋಧಿ ಸಮಿತಿಗಳನ್ನು ರಚಿಸುವಂತೆ ಸೂಚಿಸಲಾಗಿದೆ ಎಂದು ಹೇಳಿದರು. ಮಾದಕ ದ್ರವ್ಯ ಜಾಲವು ಕರ್ನಾಟಕವನ್ನು ಮತ್ತೊಂದು ಉಡ್ತಾ ಪಂಜಾಬ್ ಮಾಡಲು ಹೊರಟಿದೆ. ಜನರು ಅದಕ್ಕೆ ಆಸ್ಪದ ನೀಡಬಾರದು. ಸರ್ಕಾರವೂ ನೀಡುವುದಿಲ್ಲ. ಮಾದಕದ್ರವ್ಯ ಮುಕ್ತ ಅಭಿಯಾನಕ್ಕೆ ಯುವಜನರು, ಪೋಷಕರು, ಅಧ್ಯಾಪಕರು, ಶಿಕ್ಷಣ ಸಂಸ್ಥೆಗಳ ಸಹಕಾರ ಅಗತ್ಯ. ಬೇರೆ ದೇಶ, ರಾಜ್ಯಗಳಿಂದ ಬರುವ ಮಾದಕ ಪದಾರ್ಥಗಳನ್ನು ತಡೆಯಲು ಸರ್ಕಾರ ಅಗತ್ಯ ಕ್ರಮ ಕೈಗೊಂಡಿದೆ. ಕೋಟ್ಯಂತರ ಮೌಲ್ಯದ ಮಾದಕ ದ್ರವ್ಯ ಪದಾರ್ಥಗಳನ್ನು ವಶಕ್ಕೆ ಪಡೆದು ಸುಟ್ಟು ಹಾಕಲಾಗಿದೆ ಎಂದರು.

ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಶಾಸಕ ರಿಜ್ವಾನ್ ಅರ್ಷದ್, ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕಿ ಸುಜಾತಾ ರಾಥೋಡ್ ಉಪಸ್ಥಿತರಿದ್ದರು.

ನೌಕಾದಳದ ನಿವೃತ್ತ ಕ್ಯಾಪ್ಟನ್, ವೈದ್ಯೆ ಕೊಂದ ಪುತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೌಕಾದಳದ ಕ್ಯಾಪ್ಟನ್ ಆಗಿ ನಿವೃತ್ತರಾಗಿದ್ದ ತಂದೆ ಹಾಗೂ ದಂತವೈದ್ಯೆಯಾಗಿ ಕೆಲಸ ಮಾಡುತ್ತಿದ್ದ ತಾಯಿಯನ್ನು ಪುತ್ರ ಕೊಲೆ ಮಾಡಿದ್ದು, ಆರೋಪಿಯನ್ನು ಎಚ್‌ಎಎಲ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ರೋಹನ್

ನವೀನ್ ಚಂದ್ರಭಟ್ (61) ಹಾಗೂ ಶ್ಯಾಮಲಾ ಭಟ್ (55) ಕೊಲೆಯಾದವರು. ಆರೋಪಿ ರೋಹನ್ ಚಂದ್ರಭಟ್ (33) ಬಂಧಿತ ಆರೋಪಿ.

ಎಚ್‌ಎಎಲ್ ಪೊಲೀಸ್ ಠಾಣಾ ವ್ಯಾಪ್ತಿಯ ವಿಜ್ಞಾನನಗರದ ಆದರ್ಶ ವಿಸ್ತಾ ಅಪಾರ್ಟ್‌ಮೆಂಟ್‌ನ ವಿಲ್ಲಾ ಸಂಖ್ಯೆ 112ರಲ್ಲಿ ನವೀನ್ ಚಂದ್ರಭಟ್ ಹಾಗೂ ಶ್ಯಾಮಲಾ ಭಟ್ ಅವರು ವಾಸವಾಗಿದ್ದರು. ಪೋಷಕರ ಜತೆಗೆ ಪುತ್ರ ರೋಹನ್ ಭಟ್ ನೆಲಸಿದ್ದರು. ತಂದೆ ಹಾಗೂ ತಾಯಿಯನ್ನು ರೋಹನ್ ಭಟ್ ಚಾಕುವಿನಿಂದ ಬುಧವಾರ ಬೆಳಿಗ್ಗೆ ಇರಿದು ಕೊಲೆ ಮಾಡಿದ್ದಾರೆ. ಆದರ್ಶ ವಿಸ್ತಾ ಅಪಾರ್ಟ್‌ಮೆಂಟ್ ನಿವಾಸಿಯೊಬ್ಬರು ನೀಡಿದ ದೂರಿನ ಮೇರೆಗೆ ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

‘ಸಾಫ್ಟ್‌ವೇರ್ ಎಂಜಿನಿಯರ್ ಕೆಲಸ ಮಾಡುತ್ತಿದ್ದ ರೋಹನ್ ಭಟ್ ಅವರು ಇತ್ತೀಚೆಗೆ ಕೆಲಸ ಬಿಟ್ಟಿದ್ದರು. ಬೇರೊಂದು ಪ್ರಾಜೆಕ್ಟ್ ಕೈಗೆತ್ತಿಕೊಂಡಿದ್ದರು. ಆರೋಪಿಯನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ. ಕೌಟುಂಬಿಕ ಕಾರಣಕ್ಕೆ ಕೃತ್ಯ ಎಸಗಿರುವುದಾಗಿ ಆರೋಪಿ ಹೇಳುತ್ತಿದ್ದಾರೆ. ನಿಖರ ಕಾರಣ ಗೊತ್ತಾಗಿಲ್ಲ. ಆರೋಪಿಯನ್ನು ಗುರುವಾರ ಬೆಳಿಗ್ಗೆ ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆದುಕೊಳ್ಳಲಾಗುವುದು’ ಎಂದು ಪೊಲೀಸರು ಹೇಳಿದರು.

‘ಬುಧವಾರ ಬೆಳಿಗ್ಗೆ ಆರೋಪಿ ಚಾಕು ಹಿಡಿದು ವಿಲ್ಲಾದ ಒಳಗೆ ಹೋಗಿದ್ದನ್ನು ನಿವಾಸಿಗಳು ಗಮನಿಸಿದ್ದರು. ನವೀನ್ ಚಂದ್ರಭಟ್ ಹಾಗೂ ಶ್ಯಾಮಲಾ ಭಟ್ ಅವರು ಮಧ್ಯಾಹ್ನ ಕಳೆದರೂ ವಿಲ್ಲಾದಿಂದ ಹೊರಗೆ ಬಂದಿರಲಿಲ್ಲ. ಎದುರಿಗೆ ಇರುವ ವಿಲ್ಲಾದ ನಿವಾಸಿಗಳು ಹೋಗಿ ನೋಡಿದಾಗ ಕೊಲೆ ಆಗಿರುವುದು ಗೊತ್ತಾಗಿದೆ’ ಎಂದು ಪೊಲೀಸರು ಹೇಳಿದರು. ‘ಬೌರಿಂಗ್ ಆಸ್ಪತ್ರೆಯ ಶವಾಗಾರದಲ್ಲಿ ಮೃತದೇಹಗಳನ್ನು ಇಡಲಾಗಿದೆ. ಪುತ್ರಿ ರಶ್ಮಿ ಅವರು ಅಮೆರಿಕದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ಬಂದ ಬಳಿಕ ಮೃತದೇಹಗಳನ್ನು ಹಸ್ತಾಂತರಿಸಲಾಗುವುದು’ ಎಂದು ಪೊಲೀಸರು ಹೇಳಿದರು.

ಜಿಲ್ಲಾ, ಸರ್ಕಾರಿ ಆಸ್ಪತ್ರೆಗಳಲ್ಲಿ ಅಲಭ್ಯತೆ; ರೋಗಿಗಳಿಗೆ ಸಮಸ್ಯೆ

ಔಷಧ ಕೊರತೆ: ಜಿಲ್ಲೆಗಳಿಗೂ ಬಿಸಿ

ಮೈಸೂರು: ಮೈಸೂರು ಭಾಗದ ಮಂಡ್ಯ ಮತ್ತು ಕೊಡಗುವಿನ ಜಿಲ್ಲಾ ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ ಅಗತ್ಯ ಔಷಧಗಳ ಕೊರತೆಯಾಗಿದೆ. ಈ ಕೊರತೆಯನ್ನು ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ (ಎ.ಬಿ.ಆರ್.ಕೆ) ಯೋಜನೆಯಡಿ ಸ್ಥಳೀಯವಾಗಿ ಔಷಧ ಖರೀದಿಸಿ ಸದ್ಯಕ್ಕೆ ಸರಿದೂಗಿಸಲಾಗುತ್ತಿದೆ.

ಮುಂದಿನ ದಿನಗಳಲ್ಲಿ ಇದೇ ಪರಿಸ್ಥಿತಿ ತಲೆದೋರಿದರೆ ಸಮಸ್ಯೆ ಉಲ್ಬಣಿಸಲಿದೆ. ನೇರವಾಗಿ ಅದರ ಬಿಸಿ ರೋಗಿಗಳಿಗೂ ತಟ್ಟಲಿದೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಕರಾವಳಿಯಲ್ಲೂ ಖಾಸಗಿಯಾಗಿ ಖರೀದಿ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಅಗತ್ಯ ಹಾಗೂ ತುರ್ತಾಗಿ ಬೇಕಾಗುವ ಔಷಧಗಳ ಕೊರತೆ ನೀಗಿಸಲು ಒಂದೊಂದಾಗಿ ಖರೀದಿಸಲಾಗಿದ್ದು, ಕೊರತೆ ತಕ್ಕಮಟ್ಟಿಗೆ ನೀಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮೂಲಗಳು ತಿಳಿಸಿವೆ.

‘ಕೊರತೆ ಇದ್ದ 170 ಔಷಧಗಳ ಖರೀದಿಗೆ ಆದೇಶವಾಗಿದೆ. 82 ಔಷಧಗಳ ಪೂರೈಕೆ ಆದೇಶ ಆಗಿದೆ. ಈ ಔಷಧಗಳು ಒಂದೊಂದಾಗಿ ಜಿಲ್ಲಾ ಔಷಧ ಉಗ್ರಾಣಕ್ಕೆ ತಲುಪಲಿವೆ’ ಎಂದು ಹೆಸರು ಬಹಿರಂಗಪಡಿಸಲು ಬಯಸದ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

‘ಉಡುಪಿ ಜಿಲ್ಲೆಯಲ್ಲಿ ಯಾವುದೇ ಔಷಧಗಳ ಕೊರತೆ ಇಲ್ಲ. ಜಿಲ್ಲೆಯಲ್ಲಿ ಹೆರಿಗೆಗೆ ಸರ್ಕಾರಿ ಆಸ್ಪತ್ರೆಗಳಿಗೆ ಬರುವ ಜನರು ಕಡಿಮೆ. ಈ ಕಾರಣಕ್ಕೆ ಹೆಚ್ಚಿನ ಔಷಧಗಳ ಕೊರತೆ ಆಗಿಲ್ಲ’ ಉಡುಪಿ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಬಸವರಾಜ ಹುಬ್ಬಳ್ಳಿ ಪ್ರತಿಕ್ರಿಯಿಸಿದರು.

ಮುಖ್ಯಾಂಶಗಳು

- ಎ.ಬಿ.ಆರ್.ಕೆ ಯೋಜನೆಯಡಿ ಸರಿದೂಗಿಸುವಿಕೆ
- ಸಾಲ ಮಾಡಿ ಔಷಧ ಖರೀದಿ
- ಆ್ಯಂಟಿಬಯೋಟಿಕ್ ಇಂಜೆಕ್ಷನ್ ಕೊರತೆ

ಯಾದಗಿರಿ: ‘ಸಾಲ ಮಾಡಿ ಖರೀದಿ’

ಯಾದಗಿರಿ: ‘ಏಪ್ರಿಲ್ ತಿಂಗಳಿಂದ ಅಭಾವವಿದೆ. ತಾಲ್ಲೂಕು ಆಸ್ಪತ್ರೆಯವರು ₹10 ಲಕ್ಷದಿಂದ ₹15 ಲಕ್ಷದವರೆಗೆ, ಸಮುದಾಯ ಆರೋಗ್ಯ ಕೇಂದ್ರದವರು ₹3 ಲಕ್ಷದಿಂದ ₹4 ಲಕ್ಷದವರೆಗೆ ಸಾಲ ಮಾಡಿ ಔಷಧಗಳು ಖರೀದಿಸಿದ್ದಾರೆ. ಇದುವರೆಗೂ ಅನುದಾನ ಬಂದಿಲ್ಲ..’ ಎಂದು ಹೆಸರು ಹೇಳಲಿಚ್ಛಿಸದ ಯಾದಗಿರಿ ಜಿಲ್ಲೆಯ ಆರೋಗ್ಯ ಇಲಾಖೆಯ ಜಿಲ್ಲಾಮಟ್ಟದ ಅಧಿಕಾರಿಯೊಬ್ಬರ ಅಳಲು ತೋಡಿಕೊಂಡರು

‘300 ಬಗೆಯ ಔಷಧ ಪೂರೈಕೆ ಆಗಬೇಕಿತ್ತು. 30 ಔಷಧಗಳಷ್ಟೇ ಪೂರೈಕೆ ಆಗುತ್ತದೆ. ಕೇವಲ ಶೇ10ರಷ್ಟು ಔಷಧಗಳ ಮೇಲೆ ಆಸ್ಪತ್ರೆ ನಡೆಸಲು ಆಗುತ್ತಿಲ್ಲ’ ಎಂದು ಪ್ರಶ್ನಿಸಿದರು.

‘ಎಬಿಆರ್‌ಕೆಯಿಂದಲೂ ಸರಿಯಾಗಿ ಅನುದಾನ ಬರುತ್ತಿಲ್ಲ. ₹10 ಲಕ್ಷ ಅನುದಾನಕ್ಕೆ ಬೇಡಿಕೆ ಇರಿಸಿದರೆ ಒಂದೆರಡು ಲಕ್ಷ ರೂಪಾಯಿ ಮಾತ್ರ ಕೊಡುತ್ತಿದ್ದಾರೆ’ ಎಂದು ಹೇಳಿದರು.

ಕಲಬುರಗಿ ಜಿಲ್ಲೆಯಲ್ಲಿ ಐಫ್ಲ್ಯುಡ್ಸ್‌ಗಳು, ಆ್ಯಂಟಿ ಬಯಾಟಿಕ್ಸ್ ಚುಚ್ಚುಮದ್ದು, ಬೀದರ್‌ನಲ್ಲಿ ‘ಸೆಪ್ಟ್ರ್ಯಾಕ್ಸನ್’ ಆ್ಯಂಟಿಬಯೋಟಿಕ್ ಇಂಜೆಕ್ಷನ್ ಕೊರತೆ ಇದೆ. ’ರಾಯಚೂರಿನಲ್ಲಿ ಸ್ಥಳೀಯ ಅನುದಾನದಲ್ಲಿ ಔಷಧ ಖರೀದಿಗೆ ಕ್ರಮವಹಿಸಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರೋಗಿಗಳಿಗೆ ಚೀಟಿ ಬರೆದು ಕೊಡ್ತಿದ್ದೇವೆ..

ದಾವಣಗೆರೆ/ಚಿತ್ರದುರ್ಗ/ಶಿವಮೊಗ್ಗ: ಉಚಿತವಾಗಿ ನೀಡುತ್ತಿದ್ದ ಔಷಧಗಳ ಕೊರತೆಯು ಮಧ್ಯ ಕರ್ನಾಟಕದ ಪ್ರಮುಖ ಜಿಲ್ಲೆಗಳಲ್ಲಿ ಎದುರಾಗಿದೆ. ಖಾಸಗಿ ಔಷಧದ ಅಂಗಡಿಯಲ್ಲಿ ಖರೀದಿಸುವಂತೆ ವೈದ್ಯರು, ಶುಶ್ರೂಷಕರು ಚೀಟಿ ನೀಡುತ್ತಿದ್ದಾರೆ.

ನೋವು ನಿವಾರಕಗಳು, ರೋಗ ನಿರೋಧಕ ಮಾತ್ರೆಗಳು, ಸಿರಪ್‌ಗಳ ಕೊರತೆ ತೀವ್ರವಾಗಿದೆ. ‘ಮಂಡಿ ನೋವು, ಬೆನ್ನು ನೋವಿಗೆ ಹೆಚ್ಚಿನ ಜನರಿಗೆ ನೀಡುತ್ತಿದ್ದ ಔಷಧಗಳ ಪೂರೈಕೆ ಸ್ಥಗಿತಗೊಂಡಿದೆ’ ಎಂದು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರೊಬ್ಬರು ತಿಳಿಸಿದರು.

‘ಚಿತ್ರದುರ್ಗ ಜಿಲ್ಲೆಯಲ್ಲಿ ಹುಚ್ಚು ನಾಯಿ ಕಡಿತ, ಹಾವು ಕಡಿತಕ್ಕೆ ಬಳಸುವ ಔಷಧಿಗಳೂ ಕೊರತೆ ಇವೆ’ ಎಂದು ವೈದ್ಯರೊಬ್ಬರು ಬೇಸರ ವ್ಯಕ್ತಪಡಿಸಿದ್ದಾರೆ.

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ, ಸಾಗರ, ತೀರ್ಥಹಳ್ಳಿ, ಹೊಸನಗರ, ಸೊರಬ, ಭದ್ರಾವತಿ) ತಾಲ್ಲೂಕು ಆಸ್ಪತ್ರೆಗಳಲ್ಲಿ 2025ರ ಏಪ್ರಿಲ್‌ನಿಂದಲೇ ಕೆಲವು ಮುಖ್ಯ ಔಷಧ ಪೂರೈಕೆ ಸ್ಥಗಿತಗೊಂಡಿದೆ‘ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ಅಳಲು ತೋಡಿಕೊಳ್ಳುತ್ತಾರೆ.

ಬಿಜೆಪಿ ಅಧಿಪತ್ಯ: ರಿತು ತಾವ್ಡೆ ಮುಂಬೈ ನೂತನ ಮೇಯರ್

ಮುಂಬೈ: ದೇಶದ ಅತ್ಯಂತ ಶ್ರೀಮಂತ ಪಾಲಿಕೆ ಎನಿಸಿರುವ ಬೃಹನ್ ಮುಂಬೈ ಮಹಾನಗರ ಪಾಲಿಕೆಯ ಮೇಯರ್ ಆಗಿ ಬಿಜೆಪಿಯ ರಿತು ತಾವ್ಡೆ ಅವಿರೋಧ ಆಯ್ಕೆಯಾದರು. ಮುಂಬೈ ಪಾಲಿಕೆಯ 44 ವರ್ಷಗಳ ಇತಿಹಾಸದಲ್ಲಿ ಬಿಜೆಪಿಗೆ ಎರಡನೇ ಬಾರಿ ಮೇಯರ್ ಗದ್ದುಗೆ ಒಲಿದಿದೆ. ಕಳೆದ 25 ವರ್ಷಗಳಿಂದ (1997ರಿಂದ) ಮುಂಬೈ ಪಾಲಿಕೆ ಮೇಯರ್ ಸ್ಥಾನ ಅವಿಭಜಿತ ಠಾಕ್ರೆ ಶಿವಸೇನಾದ ಅಧಿಪತ್ಯದಲ್ಲಿತ್ತು.

ಹಂಪಿ ಉತ್ಸವಕ್ಕೆ ಮೊದಲಾಗಿ ಬುಧವಾರ ರಾತ್ರಿ ಹಂಪಿಯ ವಿರೂಪಾಕ್ಷೇಶ್ವರ ದೇವಸ್ಥಾನ ಬಳಿಯ ತುಂಗಭದ್ರಾ ನದಿ ದಂಡೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ತುಂಗಭದ್ರಾ ನದಿಗೆ ಆರತಿ ಮಾಡಿದರು. ಜಿಲ್ಲಾಧಿಕಾರಿ ಕವಿತಾ ಎಸ್‌.ಮನ್ನಿಕೇರಿ ಇದ್ದರು ಚಿತ್ರ: ಲವ ಕೆ.

ನಾಳೆಯಿಂದ ಹಂಪಿ ಉತ್ಸವ

ಹೊಸಪೇಟೆ (ವಿಜಯನಗರ): ಮೂರು ದಿನಗಳ ಹಂಪಿ ಉತ್ಸವ ಶುಕ್ರವಾರ (ಫೆಬ್ರುವರಿ 13) ಆರಂಭವಾಗಲಿದ್ದು, ಸಂಜೆ 7 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ.

ವಿಜಯನಗರ ಸಾಮ್ರಾಜ್ಯದ ದೊರೆ ಶ್ರೀಕೃಷ್ಣದೇವರಾಯನ ದರ್ಬಾರ್ ಮಾದರಿಯ ವೇದಿಕೆಯನ್ನು ಗಾಯತ್ರಿ ಪೀಠ ಸಮೀಪದ ಮೈದಾನದಲ್ಲಿ ನಿರ್ಮಿಸಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ಅವರು ಹಿರಿಯ ಅಧಿಕಾರಿಗಳ ಜತೆಗೆ ಬುಧವಾರ ಮುಖ್ಯ ವೇದಿಕೆ, ಇತರ ವ್ಯವಸ್ಥೆಗಳನ್ನು ಪರಿಶೀಲಿಸಿದರು.

ಹೆಲಿಕಾಪ್ಟರ್‌ನಲ್ಲಿ ಹಂಪಿಯ ದರ್ಶನ ಮಾಡಿಸುವ ‘ಹಂಪಿ ಬೈ ಸ್ಕೈ’ ಗುರುವಾರ ಬೆಳಿಗ್ಗೆ ಆರಂಭವಾಗಲಿದ್ದು, ಹೊಸಪೇಟೆಯಲ್ಲಿ ಸಂಜೆ ಜಾನಪದ ತಂಡಗಳ ವಸಂತ ವೈಭವ ಶೋಭಾಯಾತ್ರೆ ನಡೆಯಲಿದೆ. ಮೂರು ದಿನ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದ್ದು,ಹೆಸರಾಂತ ಕಲಾವಿದರು ಪ್ರಸ್ತುಪಡಿಸುವರು.

ಆನೆಲಾಯ ಪ್ರದೇಶದಲ್ಲಿ ‘ವಿಜಯನಗರ ವೈಭವ ಧ್ವನಿ ಮತ್ತು ಬೆಳಕು’ ಕಾರ್ಯಕ್ರಮ ಫೆ.13ರಿಂದ ಒಂದು ವಾರ ನಡೆಯಲಿದೆ. ನಿತ್ಯ ಸಂಜೆ 7ಕ್ಕೆ ಮುಖ್ಯ ವೇದಿಕೆ ಬಳಿ 15 ನಿಮಿಷ ಡ್ರೋನ್ ಶೋ ಈ ಬಾರಿಯ ವಿಶೇಷವಾಗಿದೆ.

‘ತಮಿಳುನಾಡಿನಲ್ಲಿ ಸಮ್ಮಿಶ್ರ ಸರ್ಕಾರ ನಡೆಯುವುದಿಲ್ಲ: ಸ್ಟಾಲಿನ್

ಚೆನ್ನೈ: ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ಬೇಡಿಕೆಯನ್ನು ತಿರಸ್ಕರಿಸುವ ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್, ‘ತಮಿಳುನಾಡಿನಲ್ಲಿ ಸಮ್ಮಿಶ್ರ ಸರ್ಕಾರ ನಡೆಯುವುದಿಲ್ಲ. ಕಾಂಗ್ರೆಸ್ ಜತೆಗಿನ ಡಿಎಂಕೆಯ ದೀರ್ಘಕಾಲೀನ ಮೈತ್ರಿಯು 2026ರ ವಿಧಾನಸಭೆ ಚುನಾವಣೆವರೆಗೆ ಮುಂದುವರಿಯಲಿದೆ’ ಎಂದು ಹೇಳಿದ್ದಾರೆ.


ಸ್ಟಾಲಿನ್

ಇದೇ ವೇಳೆ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಜತೆಗಿನ ತಮ್ಮ ಅತ್ಯುತ್ತಮ ಬಾಂಧವ್ಯದ ಕುರಿತು ಮಾತನಾಡಿರುವ ಸ್ಟಾಲಿನ್, ‘ನಮ್ಮ ಸಂಬಂಧವು ರಾಜಕೀಯವನ್ನು ಮೀರಿದೆ’ ಎಂದು ಹೇಳಿದ್ದಾರೆ.

‘ರಾಹುಲ್ ನನ್ನನ್ನು ಅಣ್ಣ ಎಂದು ಭಾವಿಸಿದ್ದಾರೆ. ನಾನು ಅವರನ್ನು ತಮ್ಮ ಎಂದುಕೊಂಡಿದ್ದೇನೆ. ರಾಹುಲ್ ತಮ್ಮ ಕುಟುಂಬ ಸದಸ್ಯರಲ್ಲಿ ಒಬ್ಬರಾಗಿ ನನ್ನನ್ನು ಕಂಡಿದ್ದಾರೆ. ನಾನೂ ಕೂಡ ಅವರನ್ನು ಹಾಗೆಯೇ ಭಾವಿಸಿದ್ದೇನೆ’ ಎಂದು ಸ್ಟಾಲಿನ್ ಇಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಹೇಳಿದರು.

‘ತಮಿಳುನಾಡಿನಲ್ಲಿ ಸಮ್ಮಿಶ್ರ ಸರ್ಕಾರ ಕೆಲಸ ಮಾಡುವುದಿಲ್ಲ ಎನ್ನುವುದು ನಮಗೂ ತಿಳಿದಿದೆ ಅವರಿಗೂ (ಕಾಂಗ್ರೆಸ್) ಚೆನ್ನಾಗಿ ತಿಳಿದಿದೆ’ ಎಂದರು.

ಕರ್ನಾಟಕ ಗೃಹ ಮಂಡಳಿ
1,3, 4ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560 009.
Karnataka Housing Board Building communities
ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಲಾಟರಿ/2025–26 ದಿನಾಂಕ: 02–02–2026
ಸಾರ್ವಜನಿಕ ಪ್ರಕಟಣೆ
ಕರ್ನಾಟಕ ಗೃಹ ಮಂಡಳಿಯ ವತಿಯಿಂದ ಸೂರ್ಯನಗರ 2ನೇ ಹಂತದ ಮುಂದುವರೆದ ರಾಜಾಪುರ ಬಡಾವಣೆಯಲ್ಲಿ ಹಂಚಿಕೆಗೆ ಲಭ್ಯವಿರುವ ನಿವೇಶನಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡಲು ದಿನಾಂಕ: 04–12–2025ರಂದು ಸಾರ್ವಜನಿಕರಿಂದ ಆರಂಭಿಕ ಠೇವಣಿಯೊಂದಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು.
ಆದರೆ, ಅರ್ಜಿ ಆಹ್ವಾನಿಸಿರುವ ಪ್ರಕಟಣೆಯನ್ನೇ ಆಧಾರವಾಗಿ ಬಳಸಿ ಕೆಲ ಮಧ್ಯವರ್ತಿಗಳು ತಮ್ಮ Whats APP Status ಗೃಹ ಮಂಡಳಿಯ ಲಾಂಛನ ಬಳಸಿಕೊಂಡು ಅರ್ಜಿ ಸಲ್ಲಿಸಿರುವ ಕೆಲವು ಅರ್ಜಿದಾರರಿಂದ ನಿವೇಶನಗಳನ್ನು ಇ–ಲಾಟರಿಯಲ್ಲಿ ಹಂಚಿಕೆ ಮಾಡಿಸುವುದಾಗಿ ತಿಳಿಸಿ ಹಣ ವಸೂಲಿ ಮಾಡಿ, ಮೋಸ ಮಾಡುತ್ತಿರುವುದಾಗಿ ಮಂಡಳಿಗೆ ದೂರು ಬರುತ್ತಿವೆ.
ಕರ್ನಾಟಕ ಗೃಹ ಮಂಡಳಿಯು ಇ–ಲಾಟರಿ ಮೂಲಕ ನಿವೇಶನಗಳನ್ನು ಹಂಚಿಕೆ ಮಾಡುತ್ತಿದ್ದು, ಹಂಚಿಕೆ ಪ್ರಕ್ರಿಯೆಯು ಪಾರದರ್ಶಕವಾಗಿರುತ್ತದೆ. ಆದುದರಿಂದ ಇಂತಹ ಮಧ್ಯವರ್ತಿಗಳಿಗೆ ಮತ್ತು ಮಂಡಳಿಗೆ ಯಾವುದೇ ಸಂಬಂಧ ಇರುವುದಿಲ್ಲ. ಮಧ್ಯವರ್ತಿಗಳು ಮೋಸದಿಂದ ಹಣ ಪಡೆದು ಇ–ಲಾಟರಿಯಲ್ಲಿ ನಿವೇಶನ ಹಂಚಿಕೆಯಲ್ಲಿ ತಾವೇ ಮಾಡಿಸಿಕೊಡುವುದಾಗಿ ಸದರಿ ಅರ್ಜಿದಾರರಿಂದ ಹಣ ವಸೂಲಿ ಮಾಡುತ್ತಾರೆ. ನಿವೇಶನ ಹಂಚಿಕೆಯಾಗದಿದ್ದಲ್ಲಿ ಅರ್ಜಿದಾರರಿಂದ ಪಡೆದ ಹಣವನ್ನು ವಾಪಸ್ಸು ಕೊಡದೇ ಸತಾಯಿಸಿ ತೊಂದರೆ ಕೊಡುತ್ತಾರೆ. ಈ ರೀತಿಯ ಮೋಸ/ವಂಚನೆಯನ್ನು ತಪ್ಪಿಸಲು ಮಧ್ಯವರ್ತಿಗಳ ವಿರುದ್ಧ ಮಂಡಳಿಯ ಕೇಂದ್ರ ಕಛೇರಿಯಲ್ಲಿ ದಾಖಲೆಗಳ ಸಮೇತ ದೂರು ಸಲ್ಲಿಸಿದಲ್ಲಿ, ಅಂತಹ ವ್ಯಕ್ತಿಗಳ ವಿರುದ್ಧ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲು ಸೂಕ್ತ ಕ್ರಮ ವಹಿಸಲಾಗುವುದು. ಆದಾಗ್ಯೂ ಅರ್ಜಿದಾರರು ಮಧ್ಯವರ್ತಿಗಳ ಮಾತಿಗೆ ಮರುಳಾಗಿ ಮೋಸ ಹೋದಲ್ಲಿ ಕರ್ನಾಟಕ ಗೃಹ ಮಂಡಳಿ ಜವಾಬ್ದಾರಿಯಾಗಿರುವುದಿಲ್ಲ.
ಸಹಿ/–
ಗೃಹ ಆಯುಕ್ತರು
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
ವಾಸಾಸಂಇ/ವಾಪ್ರ/5556/ಎಂಎಎ/2025–26

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001
ದೂ.: (080) 22215601, 22211246, ಫ್ಯಾಕ್ಸ್: 080–22215602
ಸಂ.: ಡಿವೈಇಎಸ್/ತಾಂಶಾ/ಕ್ರೀಯೋ/141/2025–26 ದಿನಾಂಕ: 11.02.2026
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಸಹಾಯಕ ಕಾರ್ಯಪಾಲಕ ಅಭಿಯಂತರರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560 001 ಕರ್ನಾಟಕ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ, ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರಿನ ಜಿಲ್ಲಾ ಕ್ರೀಡಾಂಗಣದಲ್ಲಿ 400 ಮೀ ಸಿಂಥೆಟಿಕ್ ಅಥ್ಲೆಟಿಕ್ ದುರಸ್ತಿ ಟ್ರ್ಯಾಕ್ ಸುತ್ತಲು ಚೈನ್ ಲಿಂಕ್ ಬೇಲಿ ಅಳವಡಿಸುವ ಕಾಮಗಾರಿ, ಉಡುಪಿ ಜಿಲ್ಲಾ ಕ್ರೀಡಾಂಗಣ ಆವರಣದಲ್ಲಿ ಮೇಲ್ಛಾವಣಿ ಒಳಗೊಂಡ ಸಿಂಥೆಟಿಕ್ ವಾಲಿಬಾಲ್ ಮತ್ತು ಬಾಸ್ಕೆಟ್ ಬಾಲ್ ಅಂಕಣ ನಿರ್ಮಾಣ ಕಾಮಗಾರಿ, ಧಾರವಾಡ ಜಿಲ್ಲೆ ಕಲಘಟಗಿ ತಾಲ್ಲೂಕು ಕ್ರೀಡಾಂಗಣ ನಿರ್ಮಾಣ ಕಾಮಗಾರಿ, ಚಿಕ್ಕಮಗಳೂರು ಜಿಲ್ಲೆ ಎನ್.ಆರ್. ಪುರ ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿ ಮತ್ತು ಇನ್ನಿತರ ಅಭಿವೃದ್ಧಿ ಕಾಮಗಾರಿಗಳಿಗೆ ಟೆಂಡರ್ ಮೂಲಕ ಕೈಗೊಳ್ಳಲು ಗುತ್ತಿಗೆದಾರರನ್ನು ನೇಮಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಟೆಂಡರ್ ಅನ್ನು ಆಹ್ವಾನಿಸಿದೆ.

ಕ್ರ. ಸಂ.	ಕಾಮಗಾರಿ ವಿವರ	ಟೆಂಡರ್‌ಗೆ ಇಟ್ಟ ಮೊತ್ತ	ಇ.ಎಂ.ಡಿ. ಮೊತ್ತ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ	ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1	ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರಿನ ಜಿಲ್ಲಾ ಕ್ರೀಡಾಂಗಣದಲ್ಲಿ 400 ಮೀ ಸಿಂಥೆಟಿಕ್ ಅಥ್ಲೆಟಿಕ್ ದುರಸ್ತಿ ಟ್ರ್ಯಾಕ್ ಸುತ್ತಲು ಚೈನ್ ಲಿಂಕ್ ಬೇಲಿ ಅಳವಡಿಸುವ ಕಾಮಗಾರಿ.	ರೂ. 249.48 ಲಕ್ಷಗಳು	ರೂ. 3,74,220/–	24.02.2026 ಸಮಯ 16:00 ಗಂಟೆ	25.02.2026 ಸಮಯ 16:30 ಗಂಟೆ
2	ಉಡುಪಿ ಜಿಲ್ಲಾ ಕ್ರೀಡಾಂಗಣ ಆವರಣದಲ್ಲಿ ಮೇಲ್ಛಾವಣಿ ಒಳಗೊಂಡ ಸಿಂಥೆಟಿಕ್ ವಾಲಿಬಾಲ್ ಮತ್ತು ಬಾಸ್ಕೆಟ್ ಬಾಲ್ ಅಂಕಣ ನಿರ್ಮಾಣ ಕಾಮಗಾರಿ.	ರೂ. 248.25 ಲಕ್ಷಗಳು	ರೂ. 3,72,372/–	09.03.2026 ಸಮಯ 16:00 ಗಂಟೆ	10.03.2026 ಸಮಯ 16:30 ಗಂಟೆ
3	ಧಾರವಾಡ ಜಿಲ್ಲೆ ಕಲಘಟಗಿ ತಾಲ್ಲೂಕು ಕ್ರೀಡಾಂಗಣ ನಿರ್ಮಾಣ ಕಾಮಗಾರಿ.	ರೂ. 248 ಲಕ್ಷಗಳು	ರೂ. 3,07,843/–	02.03.2026 ಸಮಯ 16:00 ಗಂಟೆ	03.03.2026 ಸಮಯ 16:30 ಗಂಟೆ
4	ಚಿಕ್ಕಮಗಳೂರು ಜಿಲ್ಲೆ ಎನ್.ಆರ್. ಪುರ ಸರ್ಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿ ಮತ್ತು ಇನ್ನಿತರ ಅಭಿವೃದ್ಧಿ ಕಾಮಗಾರಿ. (ಪರಿಶಿಷ್ಟ ಜಾತಿ ಮೀಸಲಾತಿ)	ರೂ. 40.58 ಲಕ್ಷಗಳು	ರೂ. 40,582/–	26.02.2026 ಸಮಯ 16:00 ಗಂಟೆ	27.02.2026 ಸಮಯ 16:30 ಗಂಟೆ

ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ htttps://kppp.karnataka.gov.in ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.
ಸಹಿ/– ಸಹಾಯಕ ಕಾರ್ಯಪಾಲಕ ಅಭಿಯಂತರರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರ)
ವಾಸಾಸಂಇ/ವಾಪ್ರ/ಎಲ್‌ಸಿ/––––/2025–26

ಕರ್ನಾಟಕ ಸರಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ
ದೂರವಾಣಿ : 08472 –220196, midnglb@rediffmail.com/midnglb1@gmail.com
ಐಎಫ್‌ಟಿ. ನಂ: ಕಾನಿಅ/ಸನೀಅಅವಿ/ಕ/ಯೋಶಾ–4/2025–26/4845 ದಿನಾಂಕ: 09–02–2026
:: ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ–1, 3&4) ::
1) ಕಾಮಗಾರಿ ವಿವರ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ ಕಾರ್ಯಾಲಯದಿಂದ ಅರ್ಹ ಗುತ್ತಿಗೆದಾರರಿಂದ 4702–ಆಣೆಕಟ್ಟು, ಪಿಕಪ್, 4702–ಏತ ನೀರಾವರಿ ಯೋಜನೆ–ಪ್ರಧಾನ ಕಾಮಗಾರಿಗಳು, 2702 ವಾರ್ಷಿಕ ನಿರ್ವಹಣೆ, ವಿಶೇಷ ಘಟಕ ಹಾಗೂ ಗಿರಿಜನ ಉಪ ಯೋಜನೆ ಅಡಿಯಲ್ಲಿ ಕಾಮಗಾರಿಗಳಿಗಾಗಿ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ : ಗರಿಷ್ಠ ರೂ. 161,37,788.26, ಕನಿಷ್ಠ ರೂ. 3,43,481.25, 3) ಗುತ್ತಿಗೆದಾರರ ಅರ್ಹತೆ ವಿವರ: 4ನೇ ದರ್ಜೆ ಮೇಲ್ಪಟ್ಟು (ಬಿಡ್‌ನಲ್ಲಿ ಇರುವಂತೆ), 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ: ಅರ್ಜಿಯ ಬೆಲೆ ಕೆ.ಪಿ.ಪಿ. ಪೋರ್ಟಲ್‌ನಂತೆ ಇ.ಎಂ.ಡಿ. ಮೊತ್ತ ಗರಿಷ್ಠ ರೂ. 2,43,000.00, ಕನಿಷ್ಠ ರೂ. 4,300.00, 5) ಪ್ರಿ ಬಿಡ್ ಮೀಟಿಂಗ್ ದಿನಾಂಕ: **16–02–2026 ಸಮಯ 11–00ರ ವರೆಗೆ,** 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: **17–02–2026 ಸಮಯ 11–00ರ ವರೆಗೆ,** 7) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: **18–02–2026 ಸಮಯ 17–30ರ ವರೆಗೆ,** 8) ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: **19–02–2026 ಸಮಯ 17–30ರ ವರೆಗೆ,** 9) ಫೈನಾನ್ಸಿಯಲ್ ಬಿಡ್ ತೆರೆಯುವ ದಿನಾಂಕ: **20–02–2026 ಸಮಯ 17–30ರ ವರೆಗೆ,** 10) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ, 11) ಅಂತರಜಾಲ ತಾಣದ ವಿಳಾಸ: www. kppp.Karnataka.gov.in
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/1072/ಕೆ.ಎಸ್.ಎಂ.ಸಿ.&ಎ/2025–26

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಹಿರೇಮಗಳೂರು ವಸತಿ ಬಡಾವಣೆ, ಒಂದನೇ ಹಂತ, ಹಿರೇಮಗಳೂರು–ಕಡೂರು ಬೈಪಾಸ್ ರಸ್ತೆ, ಕಲ್ಯಾಣ ನಗರ, ಚಿಕ್ಕಮಗಳೂರು – 577102.
ನಂ. ನಅಪ್ರಾಚಿ: ಕೆಂಚನಕಟ್ಟೆ ಅಭಿವೃದ್ಧಿ: 2025–26 Date: 06.02.2026
ಇ– ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಈ ಕೆಳಕಂಡ ವಿವರದ ಕಾಮಗಾರಿಯನ್ನು ನಿರ್ವಹಿಸುವ ಬಗ್ಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಷರತ್ತುಗಳಿಗೊಳಪಟ್ಟು ಇ–ಪ್ರೊಕ್ಯೂರ್ ಮೆಂಟ್ ಮೂಲಕ ಮರುಟೆಂಡರ್ ಆಹ್ವಾನಿಸಲಾಗಿದೆ.

ಕ್ರ ಸಂ.	ಕಾಮಗಾರಿ ವಿವರ	ಟೆಂಡರ್ ಗಿಟ್ಟ /ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1	ಚಿಕ್ಕಮಗಳೂರು ನಗರಾಭಿವೃದ್ಧಿ ವ್ಯಾಪ್ತಿಯಲ್ಲಿನ ಹಿರೇಮಗಳೂರು ಕೆಂಚನಕಟ್ಟೆ ಕೆರೆ ಅಭಿವೃದ್ಧಿ ಪಡಿಸುವ ಕಾಮಗಾರಿ. ಇಂಡೆಂಟ್ ನಂ : CKMUDA/2025-26/OW/WORK_INDENT12	320.00	ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಿರುವಂತೆ

ಟೆಂಡರ್ ನಮೂನೆ ಶುಲ್ಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಂತೆ,

ಪೂರ್ವ ಬಿಡ್ ಸಭೆ ದಿನಾಂಕ ಮತ್ತು ಸಮಯ	ದಿನಾಂಕ : 26.02.2026 ರ 16:00 ಗಂಟೆಯವರೆಗೆ
ಇ–ಪೋರ್ಟಲ್‌ನಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ :	ದಿನಾಂಕ : 05.03.2026 ರ 16:00 ಗಂಟೆಯವರೆಗೆ
ಟೆಂಡರ್ ನಮೂನೆಗಳನ್ನು ಇ–ಪ್ರೊಕೂರ್‌ಮೆಂಟ್ ಪೋರ್ಟಲ್ ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ :	ದಿನಾಂಕ : 10.03.2026 ರ 17:30 ಗಂಟೆಯವರೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ : 12.03.2026 ರ 11:00 ಗಂಟೆಯವರೆಗೆ
ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ : 16.03.2026 ರ 11:00 ಗಂಟೆಯವರೆಗೆ

ಹೆಚ್ಚಿನ ವಿವರಗಳನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಹಾಗೂ ಇ–ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ. ತಿದ್ದುಪಡಿಗಳಾದಲ್ಲಿ ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಚುರಪಡಿಸಲಾಗುವುದು.
ಸಹಿ/– ಆಯುಕ್ತರು, ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು.
ಸಹಿ/– ಅಧ್ಯಕ್ಷರು, ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು.

25 ಹುಲಿಗಳ ಸೆರೆ: ಎನ್‌ಟಿಸಿಎ ಕಳವಳ

• ಚಿರಂಜೀವಿ ಕುಲಕರ್ಣಿ

ಬೆಂಗಳೂರು: ಕಳೆದ ನಾಲ್ಕು ತಿಂಗಳಲ್ಲಿ ಬಂಡೀಪುರ-ನಾಗರಹೊಳೆ-ಬಿಳಿಗಿರಿ ರಂಗನಾಥಸ್ವಾಮಿ ಹುಲಿ ಸಂರಕ್ಷಿತ ವ್ಯಾಪ್ತಿಯಲ್ಲಿ 25 ಹುಲಿಗಳನ್ನು ಸೆರೆ ಹಿಡಿದಿರುವುದಕ್ಕೆ ಕಳವಳ ವ್ಯಕ್ತಪಡಿಸಿರುವ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ(ಎನ್‌ಟಿಸಿಎ) ಈ ಬಗ್ಗೆ ವಿವರಣೆ ನೀಡುವಂತೆ ರಾಜ್ಯದ ಅರಣ್ಯ ಇಲಾಖೆಗೆ ತಾಕೀತು ಮಾಡಿದೆ.

ಈ ವಿಷಯದ ಕುರಿತು ವಿಸ್ತೃತ ಚರ್ಚೆ ನಡೆಸಿರುವ ಎನ್‌ಟಿಸಿಎ, ಜನವರಿ 27ರಂದು ಮುಖ್ಯ ವನ್ಯಜೀವಿ ಪಾಲಕರಿಗೆ ಪತ್ರ ಬರೆದಿದೆ.

ಎನ್‌ಟಿಸಿಎ ಶಾಸನಬದ್ಧ ಸಂಸ್ಥೆಯಾಗಿದ್ದು, ರಾಜ್ಯಗಳ ಅರಣ್ಯ ಇಲಾಖೆ ಅಥವಾ ಅಧಿಕಾರಿಗಳಿಗೆ ನಿರ್ದೇಶನ ನೀಡುವ ಅಧಿಕಾರ ಹೊಂದಿದೆ. ಆ ನಿರ್ದೇಶನಗಳನ್ನು ಪಾಲಿಸುವುದು ಕಡ್ಡಾಯ. ಮಾನವ-ಹುಲಿ ಸಂಘರ್ಷದ ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರಕರಣಗಳನ್ನು ವೈಜ್ಞಾನಿಕವಾಗಿ ನಿಭಾಯಿಸಿದ್ದೀರಾ ಎಂಬ ಪ್ರಶ್ನೆಯನ್ನೂ ಕೇಳಿದೆ.

‘ಇತ್ತೀಚಿನ 3-4 ತಿಂಗಳಲ್ಲಿ ಬಂಡೀಪುರ-ನಾಗರಹೊಳೆ ಮತ್ತು ಬಿಆರ್‌ಟಿಯಲ್ಲಿ ಹುಲಿಗಳನ್ನು ಸೆರೆ ಹಿಡಿಯುತ್ತಿರುವ ಪ್ರಕರಣ ಅಸಹಜ ಎಂಬ ರೀತಿಯಲ್ಲಿ ಏರಿಕೆಯಾಗಿದೆ. ಲಭ್ಯವಾಗಿರುವ ಮಾಹಿತಿಯ ಪ್ರಕಾರ 27 ಪ್ರಕರಣಗಳು ವರದಿಯಾಗಿವೆ. ಸೆರೆ ಹಿಡಿಯುವಿಕೆಯ ಪ್ರಕರಣ ಹಠಾತ್ ಏರಿಕೆ ಆಗಿರುವುದು ಸಂಬಂಧಪಟ್ಟ ಎಲ್ಲರ ಗಮನ ಸೆಳೆದಿದೆ’ ಎಂದು ಪತ್ರದಲ್ಲಿ ತಿಳಿಸಿದೆ.

ಹುಲಿ ಸಂರಕ್ಷಿತ ಪ್ರದೇಶದಲ್ಲಿ ಪರಿಸರ ಧಾರಣ ಸಾಮರ್ಥ್ಯವನ್ನು ಮೀರಿ ಹುಲಿಗಳ ಸಂಖ್ಯೆ ಹೆಚ್ಚಾಗುತ್ತಿದೆ ಎಂಬ ರಾಜ್ಯ ಸರ್ಕಾರದ ಸಂಕಥನವನ್ನೂ ಎನ್‌ಟಿಸಿಎ ಪ್ರಶ್ನಿಸಿದೆ. ಈ ಬಗ್ಗೆ ಲಭ್ಯವಿರುವ ವೈಜ್ಞಾನಿಕ ಅಂದಾಜನ್ನೂ ಎನ್‌ಟಿಸಿಎ ಪರಿಶೀಲನೆಗೆ ಒಳಪಡಿಸಿದೆ. ಆ ಪ್ರಕಾರ ಬಂಡೀಪುರದಲ್ಲಿ 110 ಹುಲಿಗಳಿವೆ. ಅಲ್ಲಿ 229 ಹುಲಿಗಳಿಗೆ ಆಶ್ರಯವಾಗುವ ಸಾಮರ್ಥ್ಯ ಹೊಂದಿದೆ. ನಾಗರಹೊಳೆಯಲ್ಲಿ 135 ಹುಲಿಗಳಿದ್ದು, ಅಲ್ಲಿ 170 ಹುಲಿಗಳಿಗೆ ಆಶ್ರಯ ನೀಡಬಹುದು. ಬಿಆರ್‌ಟಿ ಹುಲಿ ಸಂರಕ್ಷಿತದಲ್ಲಿ 29 ಹುಲಿಗಳಿದ್ದು, 81 ಹುಲಿಗಳಿಗೆ ಆಶ್ರಯ ನೀಡುವ ಅವಕಾಶವಿದೆ. ನೆರೆಯ ತಮಿಳುನಾಡಿನ ಮದುಮಲೈನಲ್ಲಿ 58 ಹುಲಿಗಳಿದ್ದು, 92 ಹುಲಿಗಳಿಗೆ ಆಶ್ರಯ ಸಾಮರ್ಥ್ಯವಿದೆ. ಅಚ್ಚರಿ ಎಂದರೆ ಮದುಮಲೈನಲ್ಲಿ ಈ ಅವಧಿಯಲ್ಲಿ ಕೇವಲ ಒಂದು ಹುಲಿಯನ್ನು ಮಾತ್ರ ಸೆರೆಹಿಡಿಯಲಾಗಿದೆ ಎಂದು ಎನ್‌ಟಿಸಿಎ ಹೇಳಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಪಿಸಿಸಿಎಫ್ (ಅರಣ್ಯ) ಕುಮಾರ್ ಪುಷ್ಕರ್, ಸಂಘರ್ಷದ ಸನ್ನಿವೇಶವನ್ನು ಆಧರಿಸಿ ಸೆರೆ ಹಿಡಿಯುವ ಕಾರ್ಯಾಚರಣೆ ನಡೆಸಲಾಗುತ್ತದೆ. ಪ್ರತಿಯೊಂದು ಕಾರ್ಯಾಚರಣೆ ಕುರಿತು ಎನ್‌ಟಿಸಿಎಗೆ ಮಾಹಿತಿ ನೀಡಲಾಗುತ್ತದೆ. ಮಾನವರ ಮೇಲಿನ ದಾಳಿಯನ್ನು ತಡೆಯುವುದರ ಜತೆಗೆ, ಮಾನವ- ವನ್ಯಜೀವಿ ಸಂಘರ್ಷವನ್ನು ತಗ್ಗಿಸಬೇಕಾಗಿದೆ ಎಂದಿದ್ದಾರೆ.

‘ಒಳಮೀಸಲಾತಿ ಜಾರಿಗೆ ಕಾಲಹರಣ’

ಬೆಂಗಳೂರು: ‘ರಾಜ್ಯ ಸರ್ಕಾರ ಒಳ ಮೀಸಲಾತಿ ವಿಚಾರದಲ್ಲಿ ಕಾಲಹರಣ ಮಾಡುತ್ತಿದೆ. ತಕ್ಷಣವೇ ಒಳಮೀಸಲಾತಿಯನ್ನು ಜಾರಿಗೊಳಿಸಬೇಕು. ಒಂದು ಸ್ಪಷ್ಟ ನಿರ್ಧಾರ ತೆಗೆದುಕೊಳ್ಳಲು ನಿಮಗಿರುವ ಅಡ್ಡಿಯಾದರೂ ಏನು’ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಸಿ.ಎಂ ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದ್ದಾರೆ.

‘ದಾವಣಗೆರೆಯ ರಾಜನಹಳ್ಳಿಯಲ್ಲಿ ನಡೆದ ವಾಲ್ಮೀಕಿ ಜಾತ್ರಾ ಮಹೋತ್ಸವದಲ್ಲಿ ತಾವು ನೀಡಿದ ಭಾಷಣ ಕೇವಲ ರಾಜಕೀಯ ಪ್ರೇರಿತವಾಗಿದೆ. ಅದರಲ್ಲಿ ದಲಿತ ಮತ್ತು ಹಿಂದುಳಿದ ವರ್ಗಗಳ ಹಿತಾಸಕ್ತಿ ಎಳ್ಳಷ್ಟೂ ಕಾಣುತ್ತಿಲ್ಲ. ಜನರ ಕಣ್ಣಿಗೆ ಮಣ್ಣೆರಚುವ ಭಾಷಣಗಳಿಂದ ಸಮುದಾಯದ ಏಳಿಗೆ ಅಸಾಧ್ಯ’ ಎಂದು ಅವರು ಟೀಕಿಸಿದ್ದಾರೆ.

‘ನೇಮಕಾತಿಯಲ್ಲಿ ಶೆಡ್ಯೂಲ್ 9ರ ಬದಲಾವಣೆಗಳನ್ನು ನಂತರದ ಹಂತದಲ್ಲಿ ಅಳವಡಿಸಿಕೊಳ್ಳಲು ಅವಕಾಶವಿದೆ. ತಡ ಮಾಡದೇ 2.84 ಲಕ್ಷ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಆರಂಭಿಸಬೇಕು’ ಎಂದು ಅವರು ಒತ್ತಾಯಿಸಿದ್ದಾರೆ.

ಸಿ.ಎಂ ಆಪ್ತರ ವಿದೇಶ ಪ್ರವಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್ ನೇತೃತ್ವದಲ್ಲಿ 20ಕ್ಕೂ ಹೆಚ್ಚು ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರು ಇದೇ 16ರಿಂದ ಮಾರ್ಚ್ 3ರ ವರೆಗೆ ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ಪ್ರವಾಸ ಕೈಗೊಂಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ವಲಯದಲ್ಲಿರುವ ಸಚಿವರು ಮತ್ತು ಶಾಸಕರ ಈ ಪ್ರವಾಸವು ರಾಜ್ಯ ರಾಜಕೀಯ ವಲಯದಲ್ಲಿ ನಾನಾ ಚರ್ಚೆಗೆ ಗ್ರಾಸವಾಗಿದೆ.

ಪ್ರವಾಸ ಹೋಗುವವರ ಪಟ್ಟಿಯಲ್ಲಿ ಹಂಪನಗೌಡ ಬಾದರ್ಲಿ, ಬಿ.ದೇವೇಂದ್ರಪ್ಪ, ಯಶವಂತರಾಯಗೌಡ ವಿ ಪಾಟೀಲ, ಬಿ.ಎಂ.ನಾಗರಾಜ, ಜೆ.ಟಿ. ಪಾಟೀಲ, ಅಲ್ಲಮಪ್ರಭು ಪಾಟೀಲ, ಸಿ. ಪುಟ್ಟರಂಗಶೆಟ್ಟಿ, ಬಸನಗೌಡ ದದ್ದಲ್, ಎ.ಆರ್. ಕೃಷ್ಣಮೂರ್ತಿ, ಬಸನಗೌಡ ತುರ್ವಿಹಾಳ, ಎಚ್.ಡಿ. ತಮ್ಮಯ್ಯ ಮುಂತಾದವರ ಹೆಸರಿದೆ.

ಪ್ರವಾಸ ಬಗ್ಗೆ ಖಚಿತಪಡಿಸಿದ ಚಾಮರಾಜನಗರ ಕ್ಷೇತ್ರದ ಶಾಸಕ ಪುಟ್ಟರಂಗ ಶೆಟ್ಟಿ, ‘ಯಾವುದೇ ಸಮಿತಿಯಿಂದ ವಿದೇಶ ಪ್ರವಾಸ ಹೋಗುತ್ತಿಲ್ಲ. ಶಾಸಕರ ವಿದೇಶ ಪ್ರವಾಸದ ನೇತೃತ್ವವನ್ನು ಸಚಿವ ವೆಂಕಟೇಶ್ ವಹಿಸಿದ್ದಾರೆ. ತಂಡದಲ್ಲಿ ಯಾರೆಲ್ಲ ಇದ್ದಾರೆಂದು ಗೊತ್ತಿಲ್ಲ’ ಎಂದು ಹೇಳಿದರು.

‘ಬಜೆಟ್ ಒಳಗೆ ವಾಪಸ್ ಬರುತ್ತೇವೆ. ಪ್ರವಾಸದ ಬಗ್ಗೆ ಮುಖ್ಯಮಂತ್ರಿಯವರ ಗಮನಕ್ಕೆ ಇದ್ದೇ ಇರುತ್ತದೆ’ ಎಂದರು.

ಡಿ.ಕೆ. ಶಿವಕುಮಾರ್ ಅವರ ಸೋದರ ಡಿ.ಕೆ. ಸುರೇಶ್ ಪ್ರತಿಕ್ರಿಯಿಸಿ, ‘ಈ ಪ್ರವಾಸವನ್ನು ಶಾಸಕರೇ ಯೋಜಿಸಿರಬಹುದು ಅಥವಾ ಯಾರಾದರೂ ಪ್ರಾಯೋಜಕತ್ವ ವಹಿಸಿರಬಹುದು. ಇದಕ್ಕೂ ಶಿವಕುಮಾರ್ ಅವರಿಗೂ ಯಾವುದೇ ಸಂಬಂಧ ಇಲ್ಲ’ ಎಂದರು.

‘ಸ್ವಂತ ಖರ್ಚಿನಲ್ಲಿ ಹೋದರೆ ತಪ್ಪೇನು?’

‘ಸ್ವಂತ ಖರ್ಚಿನಲ್ಲಿ ವಿದೇಶ ಪ್ರವಾಸಕ್ಕೆ ಹೋದರೆ ತಪ್ಪೇನು?’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಳಿದರು. ಶಾಸಕರು ವಿದೇಶ ಪ್ರವಾಸ ಕೈಗೊಳ್ಳುತ್ತಿರುವ ಬಗ್ಗೆ ಸ್ಪಷ್ಟನೆ ನೀಡಿದ ಅವರು, ‘ಶಾಸಕರು, ವಿಧಾನ ಪರಿಷತ್ ಸದಸ್ಯರು ಅವರ ದುಡ್ಡಿನಲ್ಲಿ ವಿದೇಶ ಪ್ರವಾಸ ಕೈಗೊಳ್ಳುತ್ತಿದ್ದಾರೆ’ ಎಂದರು.

ಕಂದಾಯ ಆಯುಕ್ತಾಲಯ, ಕಂದಾಯ ಇಲಾಖೆ
ಭೂಮಿ ಉಸ್ತುವಾರಿ ಕೋಶ
1ನೇ ಮಹಡಿ, ಎಸ್.ಎಸ್.ಎಲ್.ಆರ್.ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು-560001.
ಇ-ಮೇಲ್: bhoomi.bmc01@gmail.com ದೂರವಾಣಿ ಸಂ: 080-22113255
No: BMC/2025-26/IND0028 Date: 11/02/2026
ಅಲ್ಪಾವಧಿ ಇ-ಟೆಂಡರ್ ಅಧಿಸೂಚನೆ
ಭೂಮಿ ಉಸ್ತುವಾರಿ ಕೋಶ ಕಛೇರಿಯಿಂದ “Modular Rack Systems/ Compactors to Revenue Department, Karnataka” ಅನ್ನು ಸರಬರಾಜು ಮಾಡಲು ಇ-ಟೆಂಡರ್ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ದಿನಾಂಕ: 19/02/2026ರ ಸಂಜೆ 5.29 ಗಂಟೆಯೊಳಗೆ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರ್ ಷರತ್ತು ಮತ್ತಿತರ ವಿವರಗಳನ್ನು https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.
ಸಹಿ/- ಸಹಾಯಕ ಆಯುಕ್ತರು, ಭೂಮಿ ಉಸ್ತುವಾರಿ ಕೋಶ, ಕಂದಾಯ ಇಲಾಖೆ
DIPR/CP/SHIRDI SAI/ 5598/2025-26

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ನಂ.1 ಕಟ್ಟಡಗಳ ವಿಭಾಗ, ಎಸ್.ಜೆ.ಪಿ. ಆವರಣ, ಬೆಂಗಳೂರು.
ದೂರವಾಣಿ ಸಂಖ್ಯೆ: 080-22255210
ಸಂಖ್ಯೆ: ಕಾಅ/ಕವಿ.1/ಎಇ-3/2025-26/78 ದಿನಾಂಕ: 11.02.2026
ಟೆಂಡರ್‌ಗಾಗಿ ಆಹ್ವಾನ
ಮೇಲ್ಕಂಡ ಇಲಾಖೆಯು ಬೆಂಗಳೂರಿನ ಎಂ.ಎಸ್. ಕಟ್ಟಡದ ಮೊದಲ ಹಂತದ ಮೊದಲ ಮಹಡಿಯಲ್ಲಿ ಪೊಲೀಸ್ ವರಿಷ್ಠಾಧಿಕಾರಿ ಮತ್ತು ಪೊಲೀಸ್ ಇನ್ಸ್‌ಪೆಕ್ಟರ್ ಕೊಠಡಿ (24+2)=26 ಕೊಠಡಿಗಳ ನವೀಕರಣ (ಪಿಡಬ್ಲ್ಯೂಡಿ/ 2025-26/ಬಿಡಿ/ವರ್ಕ್-ಇಂಡೆಂಟ್32736) ಕಾಮಗಾರಿಗಾಗಿ ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://kppp.karnataka.gov.in) ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ. ಕಾಮಗಾರಿಗಿಟ್ಟ ಅಂದಾಜು ಮೊತ್ತ: **ರೂ.2,82,11,518.35**. ಇಎಂಡಿ: **ರೂ.4,23,200/- (ರೂ.1,00,000/-** ಹಣವನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ, ಉಳಿದ ಹಣವನ್ನು ಬ್ಯಾಂಕ್ ಗ್ಯಾರಂಟಿ ಮುಖಾಂತರ ಪಾವತಿಸುವುದು). ಕಾಮಗಾರಿಯ ಕಾಲಾವಧಿ: **6 ತಿಂಗಳು** (ಮಳೆಗಾಲ ಸೇರಿದಂತೆ). ದಸ್ತಾವೇಜು ಬೆಲೆ: ಕೆಪಿಪಿ ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಮೀಸಲಾತಿ: ಇತರೆ. ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ **ದಿನಾಂಕ: 18.02.2026, ಸಂಜೆ 5.00 ಗಂಟೆಯೊಳಗೆ**, ಟೆಂಡರ್‌ಗಳನ್ನು ತೆರೆಯುವ ದಿನಾಂಕ: ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಇತರೆ ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಚೇರಿಯಿಂದ ಅಥವಾ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://kppp.karnataka.gov.in ಮೂಲಕ ಪಡೆಯಬಹುದು.
ಸಹಿ/- ಕಾರ್ಯಪಾಲಕ ಅಭಿಯಂತರರು.
ವಾಸಾಸಂಇ/ಉನಿ-ಸಿ.ಪಿ/5582/ಕೆಎಸ್‌ಎಂಸಿಎ/2025-26

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ KEONICS ISO 9001 : 2008
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಂ. 59, 1ನೇ ಮಹಡಿ, ಕುಮಾರ ಪಾರ್ಕ್ ಪಶ್ಚಿಮ, ರೈಲ್ವೆ ಪ್ಯಾರಲಲ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು 560020
ಸಂಖ್ಯೆ: KSEDC/P364/2025-26 ದಿನಾಂಕ: 11.02.2026
ಇ-ಟೆಂಡರ್ ಪ್ರಕಟಣೆ
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999-2000ರನ್ವಯ ಕೆಪಿಪಿಪಿ ಪೋರ್ಟಲ್ ಮುಖಾಂತರ ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಮೆ: ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್), ಸಂಸ್ಥೆಯು **“Expression of Interest (EoI) for the Empanelment of ICT Services Startups and MSMEs for Providing IT Services to Government Department in Karnataka”.** ಗಾಗಿ ಸಂಸ್ಥೆಗಳನ್ನು ಆಯ್ಕೆ ಮಾಡಲು 15 ದಿನಗಳ ಅವಧಿಗೆ ಓಪನ್ ಇ-ಟೆಂಡರ್ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಬಿಡ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ವಿವರವನ್ನು ಪಡೆಯಬಹುದು.
ಹೆಚ್ಚಿನ ಮಾಹಿತಿಗಾಗಿ ಕಿಯೋನಿಕ್ಸ್ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು (ದೂರವಾಣಿ ಸಂಖ್ಯೆ: 080 2222 5645)

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ವಿವರ	ಟೆಂಡರ್‌ನಲ್ಲಿ ಭಾಗವಹಿಸಲು ಕೊನೆಯ ದಿನಾಂಕ
1	KEONICS/ 2025-26/ PREQUAL_ TENDER_ NUMBER_23	“Expression of Interest (EoI) for the Empanelment of ICT Services Startups and MSMEs for Providing IT Services to Government Department in Karnataka”.	**24.02.2026**

DIPR/CP/5595/SA/2025-26 ಸಹಿ/- ನಿರ್ದೇಶಕರು (ತಾಂತ್ರಿಕ)

ವಿದ್ಯುನ್ಮಾನ ನಾಗರೀಕ ಸೇವಾ ನಿರ್ದೇಶನಾಲಯ (ಇಡಿಸಿಎಸ್)
ಎಂಬಸಿ ಐಕಾನ್ ಕಟ್ಟಡ. 4ನೇ ಮಹಡಿ, ಇನ್ಫೆಂಟ್ರಿ ರಸ್ತೆ, ಬೆಂಗಳೂರು-560001
ದೂರವಾಣಿ:080-22230281/0282, ಇ-ಮೇಲ್: dir-edcs@karnataka.gov.in
ಸಂ.: EDCS/18/ADM/2025 (1888896) ದಿನಾಂಕ: 11.02.2026
ಟೆಂಡರ್ ಆಹ್ವಾನ
ಅರ್ಹ ಬಿಡ್‌ದಾರರಿಂದ, ಕೆಳಕಂಡ ಟೆಂಡರ್‌ಗಳಿಗೆ ಅರ್ಜಿ ಸಲ್ಲಿಸಲು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.
ವೆಬ್‌ಸೈಟ್: **https://kppp.karnataka.gov.in.**
1) **ಟೆಂಡರ್ ಸಂಖ್ಯೆ** - DPAREGOV/2025-26/SE0038 (Selection of Manpower Agency for providing Human Resources to projects of EDCS). ಅರ್ಹ ಬಿಡ್‌ದಾರ ಸಂಸ್ಥೆಗಳು ಪಾಲ್ಗೊಳ್ಳಲು **ಕೊನೆಯ ದಿನಾಂಕ: 16.03.2026.**
2) **ಟೆಂಡರ್ ಸಂಖ್ಯೆ**-DPAREGOV/2025-26/SE0039 (Selection of Manpower Agency for providing Human Resources to projects of EDCS) ಅರ್ಹ ಬಿಡ್‌ದಾರ ಸಂಸ್ಥೆಗಳು ಪಾಲ್ಗೊಳ್ಳಲು ಕೊನೆಯ **ದಿನಾಂಕ: 16.03.2026.**
3) **ಟೆಂಡರ್ ಸಂಖ್ಯೆ** - DPAREGOV/2025-26/SE0040 (Selection of Manpower Agency for providing Human Resources to projects of EDCS) ಅರ್ಹ ಬಿಡ್‌ದಾರ ಸಂಸ್ಥೆಗಳು ಪಾಲ್ಗೊಳ್ಳಲು ಕೊನೆಯ **ದಿನಾಂಕ : 16.03.2026.**
4) **ಟೆಂಡರ್ ಸಂಖ್ಯೆ** - DPAREGOV/2025-26/SE0041 (Selection of Manpower Agency for providing Human Resources to projects of EDCS) ಅರ್ಹ ಬಿಡ್‌ದಾರ ಸಂಸ್ಥೆಗಳು ಪಾಲ್ಗೊಳ್ಳಲು ಕೊನೆಯ **ದಿನಾಂಕ : 16.03.2026.**
5) **ಟೆಂಡರ್ ಸಂಖ್ಯೆ** - DPAREGOV/2025-26/SE0042 (Selection of Manpower Agency for providing Human Resources to projects of EDCS) ಅರ್ಹ ಬಿಡ್‌ದಾರ ಸಂಸ್ಥೆಗಳು ಪಾಲ್ಗೊಳ್ಳಲು ಕೊನೆಯ **ದಿನಾಂಕ : 16.03.2026.**
ಸಹಿ/- ನಿರ್ದೇಶಕರು, ಇಡಿಸಿಎಸ್ ನಿರ್ದೇಶನಾಲಯ
DIPR/CP/SA/5597/2025-26

ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ಸಂ. 2, 2/1 ಮತ್ತು 2/3, ಕಾಳಿದಾಸ ಮಾರ್ಗ, 1ನೇ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು-560009. ದೂ ಸಂಖ್ಯೆ: 22265383, ವೆಬ್‌ಸೈಟ್: www.kiadb.in
ಸಂಖ್ಯೆ: IADB/ENGG/ETND-EP-27/1670/2025-26 ದಿನಾಂಕ: 10.02.2026
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ ಪ್ರಕಟಣೆ
(ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)
ಕೆ.ಐ.ಎ.ಡಿ.ಬಿ ಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ ಹಾಗೂ ಇದೇ ರೀತಿಯ ಕಾಮಗಾರಿಗಳಲ್ಲಿ ಅನುಭವ ಹೊಂದಿರುವ ಕೆಪಿಡಬ್ಲ್ಯೂಡಿ ನೋಂದಾಯಿತ ದರ್ಜೆ-1 (ಸಿವಿಲ್) ಪರವಾನಗಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಕಾಮಗಾರಿಯ ಹೆಸರು: ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಮಾನ್ವಿ ಕೈಗಾರಿಕಾ ಪ್ರದೇಶದಲ್ಲಿ 18ಮೀ, 15ಮೀ ಮತ್ತು 12ಮೀ ಅಗಲದ ರಸ್ತೆಗಳು, ಫ್ಲೆಕ್ಸಿಬಲ್ ಪೇವ್‌ಮೆಂಟ್, ಆರ್‌ಸಿಸಿ ಸೈಡ್ ಡ್ರೈನ್‌ಗಳ ನಿರ್ಮಾಣ, ಇನ್ಸ್‌ಪೆಕ್ಷನ್ ಚೇಂಬರ್ಸ್, ಓವರ್ ಹೆಡ್ ಟ್ಯಾಂಕ್ ಮತ್ತು ಹೆಚ್‌ಡಿಪಿಇ ನೀರು ಸರಬರಾಜು ಪೈಪ್‌ಲೈನ್ ಇತ್ಯಾದಿಗಳನ್ನು ಒಳಗೊಂಡಂತೆ ಕೈಗಾರಿಕಾ ಬಡಾವಣೆ ರಚನೆ ಮಾಡುವ ಕಾಮಗಾರಿ.
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 27.02.2026 ರಂದು ಸಂಜೆ 04:00 ರವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/- ಮುಖ್ಯ ಅಭಿಯಂತರರು-2, ಕೆಐಎಡಿಬಿ, ಬೆಂಗಳೂರು
ವಾಸಾಸಂಇ/ವಾ.ಪ್ರ/ಎಎಎ/5590/2025-26

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ.
ದೂರವಾಣಿ ಸಂ:(0831) 2463850/ಫ್ಯಾಕ್ಸ್ ಸಂ:(0831) 2423008
No.EE /MI&GWDDD/BGM/TND/AE/2025-26/5278 Date:10-02-2026
ಅಲ್ಪಾವಧಿ ಟೆಂಡರ ಪ್ರಕಟಣೆ (ಕೆ.ಡಬ್ಲೂ-1,2,3&4)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ ಅಧಿನಿಯಮ-2000ರ ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಅರ್ಹ ಗುತ್ತಿಗೆದಾರರಿಂದ ಐಟಂ ದರದಂತೆ ಗುತ್ತಿಗೆಯನ್ನು “ಕೆಪಿಪಿಪಿ” ಮುಖಾಂತರ ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಬೆಳಗಾವಿ ಇವರಿಂದ ಆವ್ಹಾನಿಸಲಾಗಿದೆ. ಬೆಳಗಾವಿ/ಗೋಕಾಕ/ಅಥಣಿ ಉಪ ವಿಭಾಗಗಳಡಿಯ ಒಟ್ಟು 22 ಕಾಮಗಾರಿಗಳ ಅಂದಾಜು ಮೊತ್ತ ಗರಿಷ್ಠ ರೂ.796.00 ಲಕ್ಷಗಳು ಹಾಗೂ ಕನಿಷ್ಠ ರೂ.4.30 ಲಕ್ಷಗಳು. 1.ಕೆ.ಡಬ್ಲ್ಯೂ-4 ಕಾಮಗಾರಿಗಾಗಿ ಪೂರ್ವ ಟೆಂಡರ ಸಭೆಯು ದಿನಾಂಕ:17-02-2026 ಮುಂ 11.00 ಘಂಟೆಗೆ, 2. ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ:18-02-2026 ಸಾಯಂಕಾಲ 4.00 ಗಂಟೆಯವರೆಗೆ, 3.ಟೆಂಡರ ತೆರೆಯುವ ದಿನಾಂಕ:19-02-2026 ಸಂಜೆ 4.30 ಘಂಟೆಗೆ ಮುಂದುವರೆದು (ಸಾಧ್ಯವಾದಲ್ಲಿ), 4.ಹೆಚ್ಚಿನ ವಿವರಗಳಿಗೆ ಸಂಪರ್ಕಿಸುವ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ & www.kppp.gov.in
ಸಹಿ/-ಕಾರ್ಯನಿರ್ವಾಹಕ ಅಭಿಯಂತರರು, ಸ.ನೀ ಮತ್ತು ಅಂ.ಅ.ಇ ವಿಭಾಗ, ಬೆಳಗಾವಿ.
DIPR/BGM/RO-NO-1821/KSMCA/2025-26

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಹುಣಸೂರು
ಅಲ್ಪಾವಧಿ ಐಟಂವಾರು ಟೆಂಡರ್ ಅಧಿಸೂಚನೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ)
ಐ.ಎಫ್.ಟಿ ಸಂಖ್ಯೆ 19/2025-26 ದಿನಾಂಕ: 07.02.2026
ಟೆಂಡರ್ ಅಧಿಸೂಚನೆ
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಹುಣಸೂರು ಲೋಕೋಪಯೋಗಿ ವಿಶೇಷ ವಿಭಾಗದ ರಸ್ತೆ ಅಭಿವೃದ್ಧಿ ಹಾಗೂ ಸೇತುವೆ ಮತ್ತು ಕಟ್ಟಡಗಳ ನಿರ್ವಹಣೆ ಕಾಮಗಾರಿಗಳಿಗೆ ಕಾರ್ಯಪಾಲಕ ಇಂಜಿನಿಯರ್ ರವರಿಂದ ಲೋಕೋಪಯೋಗಿ ಇಲಾಖೆಯಲ್ಲಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ನೊಂದಾಯಿತ 4ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರನ್ನು “ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್” ನಲ್ಲಿನ ಷರತ್ತುಗಳಿಗನುಗುಣವಾಗಿ 08-ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ದಿ: 07.02.2026 ರಿಂದ ಟೆಂಡರು ದಾಖಲಾತಿಗಳನ್ನು https://kppp.karnataka.gov.in ವೆಬ್ ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರಿಗಿಟ್ಟ ಮೊತ್ತ ಗರಿಷ್ಠ 162.56 ಲಕ್ಷಗಳು ಮತ್ತು ಕನಿಷ್ಠ 5.08 ಲಕ್ಷಗಳು, ಗರಿಷ್ಠ ಇ.ಎಂ.ಡಿ ರೂ.2,44,000/- ಮತ್ತು ಕನಿಷ್ಠ ರೂ.6,360/- ಗುತ್ತಿಗೆ ಕಾಲಾವಧಿ ಗರಿಷ್ಠ 4-ತಿಂಗಳು ಮತ್ತು ಕನಿಷ್ಠ 2-ತಿಂಗಳು ಆಗಿರುತ್ತದೆ. ಹಾಗೂ ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ನಲ್ಲಿ ಸಲ್ಲಿಸಲು ಕಡೆಯ ದಿನಾಂಕ ಟೆಂಡರ್ ಅಧಿಸೂಚನೆಯಲ್ಲಿನ ಕಾಮಗಾರಿಗಳ ಕ್ರ.ಸಂ-1 ರಿಂದ 5 ರವರೆಗೆ ದಿ: 16.02.2026 ಮತ್ತು ಕ್ರ.ಸಂ-6 ರಿಂದ 8 ರವರೆಗೆ ದಿ: 18.02.2026 ಎಂದು ನಿಗಧಿಪಡಿಸಲಾಗಿದೆ. ಹಾಗೂ ಟೆಂಡರು ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.
ಟಿಪ್ಪಣಿ: 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ/ ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. **2)** ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ತಾಂತ್ರಿಕ ಕಾರಣಗಳಿಂದ ಯಾವುದೇ ಬದಲಾವಣೆಗಳು/ತಿದ್ದುಪಡಿಗಳು ಉಂಟಾದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.
ಸಹಿ/- ಕಾರ್ಯಪಾಲಕ ಇಂಜಿನಿಯರ್
DIPR/DDMYS/1633/KSMCA/930/2025-26

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರರವರ ಕಛೇರಿ, ಲೋ.ಇ, ಉಡುಪಿ ವಿಭಾಗ - ಉಡುಪಿ - 576101.
ದೂರವಾಣಿ & ಫ್ಯಾಕ್ಸ್: (0820) 2531802
ನಂ: ಪಿಡಬ್ಲ್ಯೂಡಿ:ಯುಡಿಎನ್: ಎನ್‌ಐಟಿ: 47:2025-26: ಎಇ-2 ದಿ: 11.02.2026
ಅಲ್ಪಾವಧಿ ಟೆಂಡರ್ ಪ್ರಕಟಣೆ
2025-26ನೇ ಸಾಲಿನ ರೂ. 64.97 ಲಕ್ಷದ (ಜಿ.ಎಸ್.ಟಿ ಹೊರತುಪಡಿಸಿ), 8443 - ಶೇವಣಿ ಕೊಡುಗೆ ಯೋಜನೆಯಡಿಯ 1 ಕಾಮಗಾರಿಗೆ (I.No. 32413) ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 3ನೇ ದರ್ಜೆ ಮತ್ತು ಮೇಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ‘ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್’ “kppp.karnataka.gov.in” ಮುಖಾಂತರ ಟೆಂಡರನ್ನು ಕರ್ನಾಟಕ ಟ್ರಾನ್ಸ್‌ಫರೆನ್ಸಿ ಇನ್ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಆ್ಯಕ್ಟ್ - 2023ರಲ್ಲಿ ನಿರೂಪಿತ ಶರ್ತಗೊಳಪಟ್ಟು ಟೆಂಡರನ್ನು ಆಹ್ವಾನಿಸಲಾಗಿದ್ದು, ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ “kppp.karnataka.gov.in” ಮುಖಾಂತರ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 19.02.2026 ರ ಸಂಜೆ 5.30ರ ವರೆಗೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯನ್ನು ಸಂಪರ್ಕಿಸುವುದು.
ಸಹಿ/- ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ
ವಾಸಾಇ/ಸನಿಉ/ಕೆಎಸ್‌ಎಂಸಿಎ/2246/ 25-26 ದಿ: 11.02.2026

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕು.ಕ. ಸಂಘ (ರಿ), ಚಿತ್ರದುರ್ಗ
ಜಿಲ್ಲಾ ಯೋಜನಾ ನಿರ್ವಹಣಾ ಘಟಕ, ಚಿತ್ರದುರ್ಗ.
ರಾಷ್ಟ್ರೀಯ ಆರೋಗ್ಯ ಅಭಿಯಾನ (NHM)
ತಾಯಿ ಮತ್ತು ಮಕ್ಕಳ ಆಸ್ಪತ್ರೆ (ಎಂ.ಸಿ.ಹೆಚ್) 3ನೇ ಮಹಡಿ, ಚಿತ್ರದುರ್ಗ.
Office : 08194-234132 Email: rchochitradurga@gmail.com
No. DPMU/NHM/CTA/317/2025-26 Date: 10.02.2026
ಇ-ಟೆಂಡರ್ ಪ್ರಕಟಣೆ
ಜಿಲ್ಲಾ ಯೋಜನಾ ನಿರ್ವಹಣಾ ಘಟಕ, ಎನ್.ಹೆಚ್.ಎಂ. ಚಿತ್ರದುರ್ಗ ಈ ಕಛೇರಿಗೆ ಕೆಳಕಂಡ ವಿವರಗಳಂತೆ ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೂಲಕ ಒದಗಿಸಲು ಅರ್ಹ ಮಾನವ ಸಂಪನ್ಮೂಲ ಸಂಸ್ಥೆಗಳಿಂದ ಇ-ಟೆಂಡರ್ ಆಹ್ವಾನಿಸಿದೆ.
(1) ಪ್ರಕಟಣೆ ಸಂಖ್ಯೆ:-DHFWS/ 2025-26/SE1929 **ಒದಗಿಸಬೇಕಾದ ಮಾನವ ಸಂಪನ್ಮೂಲ:**- ಲೆಕ್ಕ ಸಹಾಯಕರು ಮತ್ತು ಡಾಟಾ ಎಂಟ್ರಿ ಆಪರೇಟರ್ಸ್ ಇತರೆ ಸಿಬ್ಬಂದಿ. **ಹುದ್ದೆಗಳ ಸಂಖ್ಯೆ:**- ಒಟ್ಟು 88 ಹುದ್ದೆಗಳು. **ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:**-07.03.2026
(2) ಪ್ರಕಟಣೆ ಸಂಖ್ಯೆ:-DHFWS/ 2025-26/SE1930 **ಒದಗಿಸಬೇಕಾದ ಮಾನವ ಸಂಪನ್ಮೂಲ:**-ನಗು-ಮಗು ವಾಹನ ಚಾಲಕರು, ಜನನಿ ಸುರಕ್ಷಾ ವಾಹಿನಿಯ ವಾಹನ ಚಾಲಕರು. **ಹುದ್ದೆಗಳ ಸಂಖ್ಯೆ:**- ಒಟ್ಟು 18 ಹುದ್ದೆಗಳು. **ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:**-07.03.2026
(3) ಪ್ರಕಟಣೆ ಸಂಖ್ಯೆ:-DHFWS/ 2025-26/SE1931 **ಒದಗಿಸಬೇಕಾದ ಮಾನವ ಸಂಪನ್ಮೂಲ:**-1) ಆರ್.ಬಿ.ಎಸ್.ಕೆ ಶಾಲಾ ಆರೋಗ್ಯ ಕಾರ್ಯಕ್ರಮಕ್ಕಾಗಿ ವಾಹನ ಪ್ರತಿ ತಾಲ್ಲೂಕಿಗೆ 2ರಂತೆ 2) ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕರಿಗೆ 1 ವಾಹನ 3) ಜಿಲ್ಲಾ ಕ್ವಾಲಿಟಿ ಮ್ಯಾನೇಜರ್‌ರವರಿಗೆ 1 ವಾಹನ
ಹುದ್ದೆಗಳ ಸಂಖ್ಯೆ:- ಒಟ್ಟು 14 ವಾಹನಗಳು (ವಾಹನ 2024 ರ ನಂತರದ ಮಾಡೆಲ್)
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:-07.03.2026
ಹೊರ ಸಂಪನ್ಮೂಲ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ನಿಯಾಮಾನುಸಾರ ಇ-ಟೆಂಡರ್ ಕರೆಯಲಾಗಿದೆ. ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ https://kppp.karnataka.gov.in ಮೂಲಕ ದಿನಾಂಕ: 10.02.2026 ರಿಂದ ನಿಗಧಿತ ಅವಧಿಯಲ್ಲಿ ಪಡೆಯಬಹುದು (ಡೌನ್‌ಲೋಡ್) ಮೇಲ್ಕಂಡ ಕ್ರ.ಸಂ. 1, 2 ಮತ್ತು 3ರಲ್ಲಿ ಪ್ರತ್ಯೇಕವಾಗಿ ಇ-ಟೆಂಡರ್ ನಿಯಾಮನುಸಾರ ಟೆಂಡರ್ ಸಲ್ಲಿಸುವುದು.
ಸಹಿ/- ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಆರೋಗ್ಯ ಮತ್ತು ಕು.ಕ. ಸೊಸೈಟಿ(ರಿ) ಚಿತ್ರದುರ್ಗ.
DIPR/CTA/KSMCA/ 663/2025-26

ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಸಾಮಾಜಿಕ ಅರಣ್ಯ ವಿಭಾಗ, ಮಂಡ್ಯ. ಸುಭಾಷ್ ನಗರ, 6ನೇ ಅಡ್ಡರಸ್ತೆ, ಮಂಡ್ಯ-571401, ದೂ:08232-221651
e-mail-dcfsfmandya@gmail.com
ಸಂ:ಎ3/ಬಿಯುಡಿ/ಟೆಂ.ಪ್ರ/ಸಿಆರ್-43/2025-26 ದಿ:30.01.2026
ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ದ್ವಿಲಕೋಟೆ)
ಈ ಮೂಲಕ ಸಾರ್ವಜನಿಕರಿಗೆ ಮತ್ತು 2025-26ನೇ ಸಾಲಿನಲ್ಲಿ ಅರಣ್ಯ ಇಲಾಖೆಯಲ್ಲಿ ನೊಂದಾವಣೆಯಾಗಿರುವ ಅರಣ್ಯ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ ಈ ವಿಭಾಗದ ವಲಯಗಳಲ್ಲಿ 2026-27ನೇ ಸಾಲಿನಲ್ಲಿ ಅಂದರೆ ದಿನಾಂಕ:01-04-2026 ರಿಂದ ಪ್ರಾರಂಭವಾಗುವ ಋತುಮಾನಾಧಾರಿತ ಕಾಮಗಾರಿಗಳನ್ನು ದಿ:31-03-2027ರವರೆಗೆ ಸಸ್ಯಕ್ಷೇತ್ರಗಳಲ್ಲಿ ಸಸಿಗಳ ಪೋಷಣೆ, ನೆಡುತೋಪುಗಳ ನಿರ್ವಹಣೆ ಮತ್ತು ನೆಡುತೋಪುಗಳ ರಚನೆ. ಮತ್ತು ಪೋಷಣೆ ಕಾಮಗಾರಿಗಳನ್ನು ಕೈಗೊಳ್ಳಲು ಪಾರದರ್ಶಕ ನಿಯಮಗಳನುಸಾರ ಕರ್ನಾಟಕ ಸರ್ಕಾರದ ವೆಬ್ ಸೈಟ್ http://kppp.karnataka.gov.inರಲ್ಲಿ ಈ ಕೆಳಗಿನ ಅನುಸೂಚಿಯಲ್ಲಿರುವ ಕಾಮಗಾರಿಗಳಿಗೆ ಇ-ಟೆಂಡರ್ ಅನ್ನು ಕರೆಯಲಾಗಿದೆ. ಹಾಗೆಯೇ ಟೆಂಡರ್‌ಗಳಲ್ಲಿ ಭಾಗವಹಿಸುವ ಮುನ್ನ ಇದೇ ಪ್ರಕಟಣೆಯಲ್ಲಿರುವ ಷರತ್ತುಗಳು ಅನ್ವಯವಾಗುತ್ತವೆ. ಟೆಂಡರ್ ವೇಳಾಪಟ್ಟಿ ಈ ಕೆಳಗಿನಂತಿರುತ್ತದೆ.ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/-ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ, ಸಾಮಾಜಿಕ ಅರಣ್ಯ ವಿಭಾಗ, ಮಂಡ್ಯ
ವಾಸಾಸಂಇ/ಹಿಸನಿ-ಮಂ/ಕೆಎಸ್‌ಎಂಸಿ&ಎ/782/2025-26

ಬೆಳಗಾವಿ ಸ್ಮಾರ್ಟ್ ಸಿಟಿ ನಿಯಮಿತ
1 ನೇ ಮಹಡಿ, ಬುಡಾ ಕಚೇರಿ, ಅಶೋಕ ನಗರ, ಬೆಳಗಾವಿ-590016.
Phone: 0831-2461352, E-mail: bscltd16@gmail.com, website: www.bscl.in
ಟೆಂಡರ್ ರೆಫರನ್ಸ್ ನಂ.: ಬಿಎಸ್‌ಸಿಎಲ್/ಮ್ಯಾನ್ ಪವರ & Vehicle ಟೆಂಡರ್/2025-26/721 ದಿನಾಂಕ: 11-02-2026
ಅಲ್ಪಾವಧಿ ಟೆಂಡರ್ ಪ್ರಕಟಣೆ
ವ್ಯವಸ್ಥಾಪಕ ನಿರ್ದೇಶಕರು, ಬೆಳಗಾವಿ ಸ್ಮಾರ್ಟ್ ಸಿಟಿ ನಿಯಮಿತ ಬೆಳಗಾವಿ ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರ (ಪ್ರೊಕ್ಯೂರ್‌ಮೆಂಟ್) ಇವರಿಂದ ಈ ಕೆಳಗಿನ ಕಾಮಗಾರಿಗಳಿಗೆ ಅರ್ಹಗುತ್ತಿಗೆದಾರರಿಂದ ಟೆಂಡರ್ ಕರೆಯಲಾಗಿದೆ. ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ (https://Kppp.karnataka.gov.in) ಪೋರ್ಟಲ್‌ನಿಂದ ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ವಿವರಗಳು ಈ ಕೆಳಕಂಡಂತಿವೆ.
ಕಾಮಗಾರಿಗಳ ಹೆಸರು:
1. ಬೆಳಗಾವಿ ಸ್ಮಾರ್ಟ ಸಿಟಿ ಲಿಮಿಟೆಡ್, ಬೆಳಗಾವಿಯಲ್ಲಿ ಕಛೇರಿ ಕೆಲಸಕ್ಕೆ ಹಾಜರಾಗಲು ಮ್ಯಾನಪವರ್ ಏಜನ್ಸಿ ಮೂಲಕ ಕಾಂಟ್ರಾಕ್ಟ್ ಆಧಾರದ ಮೇಲೆ ಡಾಟಾಎಂಟ್ರಿ ಆಪರೇಟರ್/ಕಂಪ್ಯೂಟರ್ ಆಪರೇಟರ್, ಅಟೆಂಟರ್, ಡ್ರೈವರ್ ಮತ್ತು ವಾಚಮನ್/ ಸೆಕ್ಯೂರಿಟಿ ಗಾರ್ಡ ಗ್ರೂಪ್-ಡಿ ಪೂರೈಕೆ. ಇ.ಎಮ್.ಡಿ: ರೂ. 60,700/-
2. ವ್ಯವಸ್ಥಾಪಕ ನಿರ್ದೇಶಕರು, ಬೆಳಗಾವಿ ಸ್ಮಾರ್ಟ ಸಿಟಿ ಲಿಮಿಟೆಡ್, ಬೆಳಗಾವಿ, "1300 ರಿಂದ 1600 ಸಿಸಿ ಸಾಮರ್ಥ್ಯದ 4+1 ಸೀಟು ಹೊಂದಿರುವ 4-ಚಕ್ರ ವಾಹನ ಸೇವೆಯನ್ನು ಚಾಲಕನೊಂದಿಗೆ ತಿಂಗಳಿಗೆ ಬಾಡಿಗೆ ಆಧಾರದ ಮೇಲೆ ಸರಬರಾಜು ಮಾಡಲು ಪ್ರಸ್ತಾವನೆಯನ್ನು ಆಹ್ವಾನಿಸಿದ್ದಾರೆ. AC/NON AC 4+1 ಸೀಟು ಹೊಂದಿರುವ 1300 ರಿಂದ 1600 ಸಿಸಿ ಸಾಮರ್ಥ್ಯದ ಪೂರೈಕೆಗಾಗಿ. 4+1 ಸೀಟು ಹೊಂದಿರುವ 4-ಚಕ್ರ ವಾಹನ ಸೇವೆಯನ್ನು ಒದಗಿಸುವುದು. 4-ಚಕ್ರ ವಾಹನ ಸ್ವಿಫ್ಟ್ ಡೆಜೈರ್/ಎರ್ಟಿಗಾ/ ಬೊಲೆರೊ/ಟೊಯೋಟಾ ಎಟಿಯೋಸ್/ಇಂಡಿಕಾ ವಿಸ್ಟಾ/ಸ್ವಿಫ್ಟ್/ಬಲೆನೊ/ಅಮೇಜ್/ ಇಂಡಿಗೊರ್ ಸಮಾನ ವಾಹನ ಸೇವೆಯನ್ನು ಬಾಡಿಗೆ ಚಾಲಕನೊಂದಿಗೆ ಬೆಳಗಾವಿ ಸ್ಮಾರ್ಟ್ ಸಿಟಿ ಲಿಮಿಟೆಡ್ಗೆ ತಿಂಗಳಿಗೆ ವಾಹನದ ಮೂಲ ಶುಲ್ಕಗಳು ಒದಗಿಸುವುದು.. ಇ.ಎಮ್.ಡಿ: ರೂ 34,800/-
1) ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಟೆಂಡರ್ ಡಾಕ್ಯುಮೆಂಟ್ ಅನ್ನು ದಿನಾಂಕ: 12/02/2026 ರಿಂದ 20/02/2026 ಸಂಜೆ 5.00 PM ಗಂಟೆಯವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. 2) ಟೆಂಡರ್ ಸಲ್ಲಿಸುವ ಕೊನೆಯ 20/02/2026 ಸಂಜೆ 5.00 PM ಗಂಟೆಯವರೆಗೆ, 3) ತಾಂತ್ರಿಕ ಕ್ವರೀಸ್ ಸಲ್ಲಿಸುವ ಕೊನೆಯ ದಿನಾಂಕ: 16/02/2026 ಸಂಜೆ 5.00 ಗಂಟೆಯವರೆಗೆ, 4) ಪೂರ್ವ ಬಿಡ್ ಸಭೆಯ ದಿನಾಂಕ: 17/02/2026 ರಂದು 11:30 AM ಕ್ಕೆ ಬೆಸ್ಮಾಸಿಲಿ ಕಛೇರಿಯಲ್ಲಿ 5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 23/02/2026 ರಂದು 11:00 AM ಕ್ಕೆ 6) ಆರ್ಥಿಕ ಬಿಡ್ ತೆರೆಯುವ ದಿನಾಂಕ: 25/02/2026 ರಂದು 11.00 AM.
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಪ್ರೊಕ್ಯೂರಮೆಂಟ್) ಬೆಳಗಾವಿ ಸ್ಮಾರ್ಟ್ ಸಿಟಿ ನಿಯಮಿತ, ಬೆಳಗಾವಿ
ವಾ.ಸಾ.ಇ./ಬೆಳಗಾವಿ/1823/ 2025-26/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ
ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ
ಸರ್ಕಾರಿ ಕೇಂದ್ರ ಮುದ್ರಣಾಲಯ, 8ನೇ ಮೈಲಿ, ಮೈಸೂರು ರಸ್ತೆ, ಆರ್.ವಿ. ಕಾಲೇಜ್ ಅಂಚೆ, ಬೆಂಗಳೂರು-560 059. ದೂ : 080 28484515 / 28484518
ಸಂಖ್ಯೆ: ಡಿಪಿಎಸ್/ಪಿಯುಆರ್‌ಬಿ/ಟಿಡಿಆರ್‌ಸಿ/6/2025-ಪಿಯುಆರ್/ಎಸ್.ಎಸ್.ಮ್ಯಾಪ್‌ಲಿಥೋ ದಿನಾಂಕ: 09.02.2026
ಸಂಕ್ಷಿಪ್ತ ಟೆಂಡರ್ ಅಧಿಸೂಚನೆ
(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)
ಎಸ್.ಎಸ್.ಮ್ಯಾಪ್‌ಲಿಥೋ ಮುದ್ರಣ ಕಾಗದ ಸಂಗ್ರಹಣೆಗಾಗಿ ದರಗುತ್ತಿಗೆ ವ್ಯವಸ್ಥೆ ಅಡಿಯಲ್ಲಿ ಆನ್‌ಲೈನ್ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ ರೂ. 94.17 ಲಕ್ಷಗಳು ಹಾಗೂ ಇ.ಎಂ.ಡಿ.ಯು ರೂ. 4.80 ಲಕ್ಷಗಳಾಗಿರುತ್ತದೆ. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ:02-03-2026, 17.30 ಗಂಟೆ. ಮಾಹಿತಿಯನ್ನು https://kppp.karnataka.gov.in. ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.
ಸಹಿ/- ನಿರ್ದೇಶಕರು (ಪ್ರಭಾರ)
DIPR/CP/5578/Zen/2025-26

ಬೆಂಗಳೂರು ದಕ್ಷಿಣ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಟ್ರಾಫಿಕ್ ಇಂಜಿನಿಯರಿಂಗ್ ಮತ್ತು ಮೊಬಿಲಿಟಿ ಸೆಲ್, 2ನೇ ಮಹಡಿ, 9ನೇ ಮುಖ್ಯ ರಸ್ತೆ, ಜಯನಗರ ಪೂರ್ವ 2ನೇ ಬ್ಲಾಕ್, ಬೆಂಗಳೂರು - 560 011.
ನಂ. ಕಾಅ/ಬೆಂದನಪಾ/ಸಂಇಂ & ಮೊ.ಸೆಲ್/ಟೆಂಡರ್/02/2025-26 ದಿನಾಂಕ : 11.02.2026
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
(ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ) (ಎರಡು ಲಕೋಟೆ ಪದ್ಧತಿ)
ಕಾರ್ಯಪಾಲಕ ಅಭಿಯಂತರರು, ಟ್ರಾಫಿಕ್ ಎಂಜಿನಿಯರಿಂಗ್ ಮತ್ತು ಮೊಬಿಲಿಟಿ ಸೆಲ್, ಬೆಂಗಳೂರು ದಕ್ಷಿಣ ನಗರ ಪಾಲಿಕೆ, ಬೆಂಗಳೂರು ಇವರು ಬೆಂಗಳೂರು ದಕ್ಷಿಣ ನಗರ ಪಾಲಿಕೆಯಲ್ಲಿ ನೋಂದಾಯಿಸಲಾದ ಅರ್ಹ ಗುತ್ತಿಗೆದಾರ ಸಂಸ್ಥೆಯಿಂದ ಅಥವಾ ಕಾರ್ಮಿಕ ಇಲಾಖೆ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ಸಮಾನ ನೋಂದಣಿಯಾದ ಸಂಸ್ಥೆಯಿಂದ ಈ ಕೆಳಗಿನ ಕೆಲಸಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸುತ್ತದೆ.
ವಿವರ : ಜಯನಗರ ಕ್ಷೇತ್ರದ ಗುರುತಿಸಲಾದ ಬೀದಿಯಲ್ಲಿ ಪಿಪಿಪಿ ಮೋಡ್ ಅಡಿಯಲ್ಲಿ ಆನ್-ಸ್ಟ್ರೀಟ್ ಸ್ಮಾರ್ಟ್ ಪಾರ್ಕಿಂಗ್ ನಿರ್ವಹಣಾ ವ್ಯವಸ್ಥೆಯ ಅನುಷ್ಠಾನ, ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಏಜೆನ್ಸಿಯ ಆಯ್ಕೆ (ಸುಮಾರು 31.65 ಕಿಮೀ ರಸ್ತೆ ಉದ್ದವನ್ನು ಒಳಗೊಂಡ 42 ರಸ್ತೆಗಳು, ಸುಮಾರು 914 ಕಾರು ಸ್ಥಳಗಳು ಮತ್ತು 3835 ದ್ವಿಚಕ್ರ ವಾಹನ ಸ್ಥಳಗಳು), **ಬೆಂ.ದ.ನ.ಪಾ.ಗೆ ಕನಿಷ್ಠ ವಾರ್ಷಿಕ ಪರವಾನಗಿ ಶುಲ್ಕ : ರೂ. 1,240/- ಲಕ್ಷಗಳು, ಇಎಂಡಿ : ರೂ. 9,50,000/-**
(1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಿಂದ ದಿನಾಂಕ : **13.02.2026** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು (2) ಟೆಂಡರ್‌ಗಳನ್ನು ದಿನಾಂಕ : **10.03.2026 ರಂದು ಸಂಜೆ 4.00 ಗಂಟೆಯೊಳಗೆ** ಅಥವಾ ಅದಕ್ಕೂ ಮೊದಲು ಕೆಪಿಪಿ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಸಲ್ಲಿಸಬೇಕು (3) ಪೂರ್ವ-ಬಿಡ್ ಸಭೆಯು ದಿನಾಂಕ **23.02.2026 ರಂದು ಮಧ್ಯಾಹ್ನ 3.00 ಗಂಟೆಗೆ** ಮುಖ್ಯ ಅಭಿಯಂತರರು, ಬೆಂಗಳೂರು ದಕ್ಷಿಣ ನಗರ ಪಾಲಿಕೆ, 2ನೇ ಮಹಡಿ, 9ನೇ ಮುಖ್ಯ ರಸ್ತೆ, ಜಯನಗರ ಪೂರ್ವ, 2ನೇ ಬ್ಲಾಕ್, ಬೆಂಗಳೂರು-560011 ರ ಕಚೇರಿಯಲ್ಲಿ ನಡೆಯಲಿದೆ (4) ತಾಂತ್ರಿಕ ಬಿಡ್‌ಗಳನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಕಾರ್ಯಪಾಲಕ ಅಭಿಯಂತರರು, ಟ್ರಾಫಿಕ್ ಇಂಜಿನಿಯರಿಂಗ್ ಮತ್ತು ಮೊಬಿಲಿಟಿ ಸೆಲ್, ವಲಯ-1 ಮತ್ತು 2, ಬೆಂದನಪಾ, ಬೆಂಗಳೂರಿನ ಕಚೇರಿಯಲ್ಲಿ **ದಿನಾಂಕ 12.03.2026 ರಂದು ಸಂಜೆ 4.30 ರ** ನಂತರ ತೆರೆಯಲಾಗುತ್ತದೆ.
ಸಹಿ/- ಕಾರ್ಯಪಾಲಕ ಅಭಿಯಂತರರು - ವಲಯ 1 & 2 ಟ್ರಾಫಿಕ್ ಇಂಜಿನಿಯರಿಂಗ್ ಮತ್ತು ಮೊಬಿಲಿಟಿ ಸೆಲ್

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಜಯನಗರ ವಾಣಿಜ್ಯ ಸಂಕೀರ್ಣ ಮಳಿಗೆ, ಜಯನಗರ, ಬೆಂಗಳೂರು-560011.
ಸಂಖ್ಯೆ: ಕಾಇಂ/ಸನೀ/ಸ.ಇಂ-5/ಟೆಂಡರ್ ಪ್ರಕಟಣೆ ಸಂ.31/2025-26/466 ದಿನಾಂಕ: 11.02.2026
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಅರ್ಹ ಗುತ್ತಿಗೆದಾರರು ಲೆಕ್ಕ ಶೀರ್ಷಿಕೆ ಗಿರಿಜನ ಉಪಯೋಜನೆ ಮತ್ತು ವಿಶೇಷ ಘಟಕ ಕಾಮಗಾರಿಗಳು ಯೋಜನೆಯಡಿ ಅನುಮೋದನೆಗೊಂಡ ಈ ಕೆಳಕಂಡಂತೆ ಕಾಮಗಾರಿಗಳ ಕೆಟಿಪಿಪಿ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ KW-1 ಮತ್ತು 2 ರ ಮುಖಾಂತರ ಪರಿಶಿಷ್ಠ ಜಾತಿ ಗುತ್ತಿಗೆದಾರರಿಗೆ, ಪರಿಶಿಷ್ಠ ಪಂಗಡ ಗುತ್ತಿಗೆದಾರರಿಗೆ ಟೆಂಡರ್ ಆಹ್ವಾನಿಸಲಾಗಿದೆ. ಈ ಕಾಮಗಾರಿಗಳಿಗೆ ಕೆಪಿಪಿ ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಹಾಗೂ ಮೇಲಿನ ವೆಬ್ ಸೈಟ್‌ನಲ್ಲಿ ಮಾಹಿತಿ ಪಡೆಯಬಹುದು.
ಕಾಮಗಾರಿಯ ಹೆಸರು :- ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ, ಮಾಗಡಿ ತಾಲ್ಲೂಕು, ಹಾರೋಹಳ್ಳಿ ತಾಲ್ಲೂಕು, ರಾಮನಗರ ತಾಲ್ಲೂಕು, ಕನಕಪುರ ತಾಲ್ಲೂಕುಗಳಲ್ಲಿ ಕೊಳವೆ ಬಾವಿ ಕೊರೆದು ನೀರಾವರಿ ಸೌಲಭ್ಯ ಕಲ್ಪಿಸುವ ಕಾಮಗಾರಿಗಳು ಒಳಗೊಂಡಂತೆ **ಒಟ್ಟು 14 ಕಾಮಗಾರಿಗಳನ್ನು ಆಹ್ವಾನಿಸಲಾಗಿದೆ.**
ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : **ರೂ.4.84 (ಕನಿಷ್ಠ) & ರೂ.14.60 (ಗರಿಷ್ಠ)**
ಇಎಂಡಿ (ರೂಗಳಲ್ಲಿ): **ರೂ.6,100/- (ಕನಿಷ್ಠ) & ರೂ.36,500/- (ಗರಿಷ್ಠ).**
ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ: 02 ತಿಂಗಳು ಮಳೆಗಾಲ ಸೇರಿದಂತೆ.
(ಟೆಂಡರ್‌ಗಿಟ್ಟ ಮೊತ್ತ, ಇಎಂಡಿ, ಕಾಮಗಾರಿಯ ಅವದಿ ಆಯಾ ಕಾಮಗಾರಿಗಳಿಗೆ ಅನುಗುಣವಾಗಿ ಕೆಪಿಪಿ ಪೋರ್ಟಲ್‌ನಲ್ಲಿ ಇದ್ದಂತೆ)
(1) ಟೆಂಡರ್ ದಾಸ್ತಾ ವೇಜುಗಳನ್ನು ವೆಬ್‌ಸೈಟ್ ಪ್ರಕಟಿಸುವ ದಿನಾಂಕ: **11.02.2026 ಸಂಜೆ 16.30** ಗಂಟೆಯ ನಂತರ, **(2)** ವಿವರಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾದ ದಿನಾಂಕ ಮತ್ತು ವೇಳೆ: **18.02.2026 ಸಂಜೆ 15.00** ಗಂಟೆಯವರೆಗೆ. (3) ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **18.02.2026 ಸಂಜೆ 16.30** ಗಂಟೆಯವರೆಗೆ. (4) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: **20.02.2026 ಬೆಳಿಗ್ಗೆ 11.30** ಗಂಟೆಗೆ. (5) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: **ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ**
ಷರತ್ತುಗಳು: 1) ಹೆಚ್ಚಿನ ವಿವರಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ವೆಬ್‌ಸೈಟ್ ವಿಳಾಸ: https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಬದಲಾವಣೆ ಇದ್ದಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಪ್ರಕಟಿಸಲಾಗುವುದು. **2)** ಗುತ್ತಿಗೆ ಪಡೆಯಲು ಕನಿಷ್ಠ ಅರ್ಹತೆಗಳಿಗಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಐ ಟಿ ಟಿ ನಿಬಂಧನೆ- 1 ಮತ್ತು 2 ರಲ್ಲಿ ನಮೂದಿಸಿದ ಸೂಚನೆಗಳನ್ನು ಸೂಕ್ಷ್ಮವಾಗಿ ಗಮನಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. **3)** ಗುತ್ತಿಗೆದಾರರು ಜಿಎಸ್‌ಟಿ ಹೊರತುಪಡಿಸಿ ದರಗಳನ್ನು ನಮೂದಿಸಬೇಕು. **4)** ಎಲ್ಲಾ ಟೆಂಡರ್‌ನ್ನು ಅಥವಾ ಯಾವುದಾದರೂ ಟೆಂಡರ್‌ನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.
ಸಹಿ/- ಕಾರ್ಯಪಾಲಕ ಇಂಜಿನಿಯರ್ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ
ವಾಸಾಸಂಇ/ವಾ.ಪ್ರ/5585/ಎಸ್‌ಎಸ್‌ಸಿ/2025-26

ಕರ್ನಾಟಕ ಸರ್ಕಾರ
ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ದೇವಗಿರಿ-ಯಲ್ಲಾಪುರ, ಹಾವೇರಿ-581110
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
Website : https://himshaveri.karnataka.gov.in
E-mail : tenders.hims.dme@gmail.com
ಸಂ: ಹಿಮ್ಸ್/19/2025-26, ದಿನಾಂಕ : 10/02/2026
ಇ-ಟೆಂಡರ್ ಪ್ರಕಟಣೆ
ಕರ್ನಾಟಕ ಸಾರ್ವಜನಿಕ ಸಂಗ್ರಹಗಳ ಪಾರದರ್ಶಕ ಅಧಿನಿಯಮ-99/ 2000 ಮತ್ತು ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಿರುವ ಷರತ್ತುಗಳನ್ವಯ ನೋಂದಾಯಿತ ಅರ್ಹ ಸಂಸ್ಥೆಗಳಿಂದ/ಪ್ರತಿಷ್ಠಿತ ಮೂಲ ತಯಾರಕರು/ಅಧಿಕೃತ ಪ್ರತಿನಿಧಿಗಳು/ ಅಧಿಕೃತ ವಿತರಕರಿಂದ 2025-26ನೇ ಸಾಲಿಗಾಗಿ ಜಿಲ್ಲಾ ಆಸ್ಪತ್ರೆ, ಹಾವೇರಿಗೆ ಒಂದು ವರ್ಷದ ಅವಧಿಗೆ ಬೇಕಾದ ಔಷಧಿಗಳನ್ನು, ಹಾಗೂ ಪ್ರಯೋಗಾಲಯ ಪರಿಕರಗಳನ್ನು ಖರೀದಿಸಲು ವಾರ್ಷಿಕ ದರ ಗುತ್ತಿಗೆ ಆದಾರದ ಮೇಲೆ ಖರೀದಿಸುವ ಕುರಿತು ಇ-ಟೆಂಡರ್ ಆಹ್ವಾನಿಸಲಾಗಿದೆ ಅರ್ಹ ಟೆಂಡರ್‌ದಾರರು ಕೆ.ಪಿ.ಪಿ. ಪೋರ್ಟಲ್ https://kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಸಲ್ಲಿಸಬಹುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ವಿಳಾಸದಲ್ಲಿ ಪಡೆಯುವುದು.
ಟೆಂಡರ್ ವೇಳಾಪಟ್ಟಿ : (1) ಟೆಂಡರ್ ಸಂಖ್ಯೆ DHFWS/2025-26/IND1949 (2) ಟೆಂಡರ್ ಅಪ್‌ಲೋಡ್ ಮಾಡುವ ಪ್ರಾರಂಭ ದಿನಾಂಕ : **10/02/2026** (3) ಇ ಎಂ ಡಿ ಮೊತ್ತ ರೂ. **4.50** ಲಕ್ಷ (4) ಟೆಂಡರ್ ಅಂದಾಜು ಮೌಲ್ಯ ರೂ. **300.00** ಲಕ್ಷಗಳು (5) ಪ್ರಿ-ಬಿಡ್ ಸಭೆಯ ದಿನಾಂಕ ಮತ್ತು ಸಮಯ : **24/02/2026** ಬೆಳಿಗ್ಗೆ 11.00 ಗಂಟೆಗೆ (6) ಟೆಂಡರ್ ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ ಮತ್ತು ವೇಳೆ : **09/03/2026** ಸಾಯಂಕಾಲ 4.30 ಗಂಟೆಯವರೆಗೆ (7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ : **10/03/2026** (8) ಮೂಲ ದಾಖಲಾತಿಗಳ ಪರಿಶೀಲನೆ ದಿನಾಂಕ : **16/03/2026** ಪೂರ್ವಾಹ್ನ : 11:00 ಗಂಟೆಗೆ ಸ್ಥಳ : ಹಿಮ್ಸ್ ಹಾವೇರಿ. (9) ಔಷಧಗಳ ಹಾಗೂ ಪ್ರಯೋಗಾಲಯ ಪರಿಕರಗಳ ಮಾದರಿ ಸಲ್ಲಿಸುವ ದಿನಾಂಕ : ತಿಳಿಸಲಾಗುವುದು (10) ಹಣಕಾಸಿನ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ : ತಿಳಿಸಲಾಗುವುದು (11) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ (ರಜಾ ದಿನಗಳನ್ನು ಹೊರತುಪಡಿಸಿ) ನಿರ್ದೇಶಕರು, ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾವೇರಿ **08375-200015/ 8660990320**
ಸಹಿ/- ಡೀನ್ ಮತ್ತು ನಿರ್ದೇಶಕರು, ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾವೇರಿ
ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/698/2025-26

ಉದಯರವಿಯನ್ನು ನಾವೇ ವಸ್ತುಸಂಗ್ರಹಾಲಯವನ್ನಾಗಿ ಮಾಡುತ್ತೇವೆ ಎನ್ನುವ ಕುವೆಂಪು ಕುಟುಂಬದವರ ಹೇಳಿಕೆಗೆ ನಿಮ್ಮ ಸಹಮತವಿದೆಯೇ?

● ಇದೆ ● ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ರೈತ ಕರೆ ಕೇಂದ್ರಕ್ಕೆ ದೂರಿನ ಸುರಿಮಳೆ

ಪಿಎಂ ಕಿಸಾನ್, ಬೆಳೆ ಸಮೀಕ್ಷೆ ತೊಡಕುಗಳ ಪರಿಹಾರಕ್ಕಾಗಿ 2.41 ಲಕ್ಷ ಕರೆಗಳು

● ಖಲೀಲಅಹ್ಮದ ಶೇಖ

ಬೆಂಗಳೂರು: 'ಪಿಎಂ–ಕಿಸಾನ್ ಯೋಜನೆಯಡಿ ನೋಂದಣಿ ಮಾಡಿಕೊಳ್ಳುವುದು ಹೇಗೆ? ಫಲಾನುಭವಿಗಳ ಪಟ್ಟಿಯಲ್ಲಿ ನಮ್ಮ ಹೆಸರಿದೆ, ಆದರೆ ನನ್ನ ಖಾತೆಗೆ ಹಣ ಜಮೆ ಆಗುತ್ತಿಲ್ಲ? ಬೆಳೆ ಸಮೀಕ್ಷೆ ಮಾಡುವಾಗ ಸರ್ವರ್ ಹಾಗೂ ನೆಟ್‌ವರ್ಕ್ ಸಮಸ್ಯೆ ಆಗುತ್ತಿದೆ...'

ಇದು ರಾಜ್ಯದ ಅನ್ನದಾತರ ಅಳಲುಗಳು. ಇಂತಹ ಸಮಸ್ಯೆಗಳ ಕುರಿತು ನಿತ್ಯ ನೂರಾರು ದೂರುಗಳು 'ರೈತ ಕರೆ ಕೇಂದ್ರ'ಕ್ಕೆ ಬರುತ್ತಿವೆ.

ರೈತರಿಗೆ ಮಾಹಿತಿ, ಸಲಹೆ, ಮಾರ್ಗದರ್ಶನ ನೀಡುವ ಉದ್ದೇಶದಿಂದ ಕೃಷಿ ಇಲಾಖೆ 2023ರ ಆಗಸ್ಟ್‌ನಲ್ಲಿ ಏಕೀಕೃತ ಶುಲ್ಕ ರಹಿತ ದೂರವಾಣಿ ಸಂಖ್ಯೆಯನ್ನಾಗಿ (18004253553) ಪರಿವರ್ತಿಸಿ (ಇಂಟಿಗ್ರೇಟೆಡ್ ವಾಯ್ಸ್ ರೆಸ್ಪಾನ್ಸ್ ಸಿಸ್ಟಂ–ಐವಿಆರ್‌ಎಸ್) ರೈತ ಕರೆ ಕೇಂದ್ರಕ್ಕೆ ಚಾಲನೆ ನೀಡಿತ್ತು.

ಈ ಸಹಾಯವಾಣಿಗೆ ಕರೆ ಮಾಡುವ ಬಹುತೇಕ ರೈತರು ಪಿಎಂ–ಕಿಸಾನ್ ಯೋಜನೆ ಹಾಗೂ ಬೆಳೆ ಸಮೀಕ್ಷೆಗೆ ಸಂಬಂಧಿಸಿದ ಮಾಹಿತಿ ಕೇಳುತ್ತಿದ್ದಾರೆ. 2023ರ ಆಗಸ್ಟ್‌ನಿಂದ 2026ರ ಫೆ.3ರ ವರೆಗೆ ಬಂದ ಒಟ್ಟು 2,89,552 ಕರೆಗಳ ಪೈಕಿ, 2,41,151 ಕರೆಗಳು ಬೆಳೆ ಸಮೀಕ್ಷೆ, ಪಿಎಂ–ಕಿಸಾನ್‌ಗೆ ಸಂಬಂಧಿಸಿದ್ದಾಗಿವೆ.

'ಪಿಎಂ ಕಿಸಾನ್ ಯೋಜನೆಯಡಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೇಂದ್ರ ಸರ್ಕಾರ ಪ್ರತಿವರ್ಷ ₹6 ಸಾವಿರ ಆರ್ಥಿಕ ನೆರವು ನೀಡುತ್ತಿದ್ದು, ನಾಲ್ಕು ತಿಂಗಳಿಗೊಮ್ಮೆ ₹2 ಸಾವಿರದಂತೆ ಮೂರು ಕಂತುಗಳಲ್ಲಿ ರೈತರ ಬ್ಯಾಂಕ್ ಖಾತೆಗೆ ವರ್ಗಾಯಿಸುತ್ತಿದೆ. ಫಲಾನುಭವಿಗಳ ಪಟ್ಟಿಯಲ್ಲಿ ಹೆಸರಿದೆ, ಇ–ಕೆವೈಸಿ ಮಾಡಿಸಿದ್ದೇನೆ. ಆದರೂ ಹಣ ಬಂದಿಲ್ಲ ಎಂದು ರೈತ ಸಹಾಯವಾಣಿಗೆ ನೂರಾರು ಕರೆಗಳು ಬರುತ್ತಿವೆ' ಕೃಷಿ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

'ಈ ಕರೆಗಳಿಗೆ ಸ್ಪಂದಿಸುವ ಕೇಂದ್ರದ ಸಿಬ್ಬಂದಿ ಅವರ ದಾಖಲೆಗಳನ್ನು ಪಡೆದು ಪರಿಶೀಲಿಸುತ್ತಾರೆ. ರೈತರ ಆಧಾರ್ ಕಾರ್ಡ್, ಜಮೀನಿನ ಪಹಣಿ, ಬ್ಯಾಂಕ್ ಖಾತೆಯಲ್ಲಿ ಇರುವ ಹೆಸರಿನ ಸ್ಪೆಲಿಂಗ್ ಒಂದೇ ರೀತಿ ಇರದಿದ್ದರೆ, ಬ್ಯಾಂಕ್ ಖಾತೆಗೆ ಆಧಾರ್ ಲಿಂಕ್ ಆಗದಿದ್ದರೆ, ಹಣ ಜಮೆ ಆಗುವುದಿಲ್ಲ. ಈ ದಾಖಲೆಗಳನ್ನು ಸರಿಪಡಿಸಿಕೊಳ್ಳುವಂತೆ ಸಲಹೆ ನೀಡಲಾಗುತ್ತದೆ' ಎಂದರು.

'ಬೆಳೆ ಸಮೀಕ್ಷೆ ಆ್ಯಪ್‌ನಲ್ಲಿ ಸರ್ವರ್ ಬ್ಯುಸಿ, ದತ್ತಾಂಶ ಅಪ್‌ಲೋಡ್ ಆಗದಿರುವುದು, ಜಿಪಿಎಸ್ ದೋಷಗಳು, ಹಿಸ್ಸಾ ಸಂಖ್ಯೆ ಗುರುತಿಸುವಿಕೆಯಲ್ಲಿ ಆಗುತ್ತಿರುವ ತೊಂದರೆಗಳು, ಬೆಳೆ ಸಮೀಕ್ಷೆ ಆ್ಯಪ್‌ನಲ್ಲಿ ಬೆಳೆ ವಿವರ ನಮೂದಿಸುವುದು ಹೇಗೆ ಎಂಬ ಕರೆಗಳು ಬರುತ್ತಿವೆ. ಕೇಂದ್ರದ ಸಿಬ್ಬಂದಿ ಇವುಗಳಿಗೆ ಪರಿಹಾರ ನೀಡುವ ಕೆಲಸ ಮಾಡುತ್ತಿದ್ದಾರೆ' ಎಂದು ವಿವರಿಸಿದರು.

ಮುಖ್ಯಾಂಶಗಳು

- ರೈತ ಕರೆ ಕೇಂದ್ರಕ್ಕೆ ಎಐ ತಂತ್ರಜ್ಞಾನ ಬಳಸುವ ಚಿಂತನೆ
- ನೂತನ ಡ್ಯಾಶ್ ಬೋರ್ಡ್ ರೂಪಿಸಲು ಬಿಇಎಲ್‌ನೊಂದಿಗೆ ಒಪ್ಪಂದ
- ರೈತರ ಎಲ್ಲ ಸಮಸ್ಯೆಗಳಿಗೆ ಒಂದು ವೇದಿಕೆಯಡಿ ಪರಿಹಾರ

21 ಸಿಬ್ಬಂದಿ ನಿಯೋಜನೆ

ಈ ಕರೆ ಕೇಂದ್ರ ಬೆಳಿಗ್ಗೆ 8ರಿಂದ ಸಂಜೆ 7 ಗಂಟೆಯವರೆಗೆ ಕಾರ್ಯನಿರ್ವಹಿಸುತ್ತಿದ್ದು, ಇದರ ನಿರ್ವಹಣೆಗಾಗಿ ಒಟ್ಟು 21 ಸಿಬ್ಬಂದಿ ಇದ್ದಾರೆ. ನಿತ್ಯ ಸುಮಾರು 500ಕ್ಕೂ ಹೆಚ್ಚು ಕರೆಗಳು ಬರುತ್ತಿದ್ದು, ಇದರಲ್ಲಿ ಪಿಎಂ ಕಿಸಾನ್ ಸಮ್ಮಾನ್ ನಿಧಿಗೆ ಹಾಗೂ ಬೆಳೆ ಸಮೀಕ್ಷೆ ಕುರಿತು ಮಾಹಿತಿ ಕೋರಿ ಹೆಚ್ಚು ಕರೆಗಳು ಬರುತ್ತಿವೆ. ಬಹುತೇಕ ಪ್ರಶ್ನೆಗಳಿಗೆ ಉತ್ತರಿಸಲಾಗುತ್ತದೆ. ಇಲ್ಲದಿದ್ದರೆ ಸಂಬಂಧಪಟ್ಟ ವಿಭಾಗದವರಿಂದ ಮಾಹಿತಿ ಪಡೆದು ನೀಡಲಾಗುತ್ತದೆ' ಎಂದು ಕೃಷಿ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

ರೈತಕೇಂದ್ರದಲ್ಲಿ ಸ್ವೀಕೃತವಾದ ಕರೆಗಳ ವಿವರ

ವಿಭಾಗ	2023	2024	2025 ಹಾಗೂ 2026ರ ಫೆ.3ರವರೆಗೆ
ಬೆಳೆ ಸಮೀಕ್ಷೆ	24,275	42,755	48,515
ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ	30,693	43,329	51,584
ಬೆಳೆ ವಿಮೆ	2,569	8,198	8,959
ಮುಖ್ಯಮಂತ್ರಿ ರೈತ ವಿದ್ಯಾನಿಧಿ	4,999	4,009	640
ಇತರೆ ತಾಂತ್ರಿಕ ವಿಷಯ/ಯೋಜನೆಗಳು	2,247	11,493	5,287
ಸ್ವೀಕೃತವಾದ ಒಟ್ಟು ಕರೆಗಳ ಸಂಖ್ಯೆ	2,89,552		

'ದತ್ತಾಂಶ ಸಂಗ್ರಹಕ್ಕೆ ಪ್ರತ್ಯೇಕ ಡ್ಯಾಶ್‌ಬೋರ್ಡ್'

'ಕರೆಗಳ ದತ್ತಾಂಶ ಸಂಗ್ರಹಿಸಲು ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದೊಂದಿಗೆ ರೈತ ಕರೆ ಕೇಂದ್ರವನ್ನು ಉನ್ನತೀಕರಿಸುವ ಚಿಂತನೆ ಇದೆ. ಈ ಕರೆಗಳ ದತ್ತಾಂಶಗಳನ್ನು ಸಂಗ್ರಹಿಸುವ ಡ್ಯಾಶ್‌ಬೋರ್ಡ್ ರೂಪಿಸುವುದಕ್ಕೆ ಭಾರತ್ ಎಲೆಕ್ಟ್ರಾನಿಕ್ ಲಿಮಿಟೆಡ್ (ಬಿಇಎಲ್) ಜೊತೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ' ಎಂದು ಎಂದು ಕೃಷಿ ಇಲಾಖೆಯ ನಿರ್ದೇಶಕ ಜಿ.ಟಿ. ಪುತ್ರ 'ಪ್ರಜಾವಾಣಿ'ಗೆ ತಿಳಿಸಿದರು.

ಜಿ.ಟಿ. ಪುತ್ರ

ರೈತ ಕರೆ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ
ಪ್ರಜಾವಾಣಿ ಚಿತ್ರ: ಎಂ.ಎಸ್ ಮಂಜುನಾಥ್

ಎಟಿಎಂ ಒಡೆದು ₹ 5 ಲಕ್ಷ ಹಣ ಕಳವು

ಶಿಗ್ಗಾವಿ ತಾಲ್ಲೂಕಿನ ಹನುಮರಹಳ್ಳಿ ಗ್ರಾಮದಲ್ಲಿ ಕಳ್ಳತನ ಘಟನೆ ನಡೆದ ಎಟಿಎಂ ಕೇಂದ್ರವನ್ನು ಪರಿಶೀಲಿಸಿದರು

ಶಿಗ್ಗಾವಿ (ಹಾವೇರಿ ಜಿಲ್ಲೆ): ತಾಲ್ಲೂಕಿನ ಹನುಮರಹಳ್ಳಿ ಬಳಿ ಮಂಗಳವಾರ ರಾತ್ರಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯ ಎಟಿಎಂ ಯಂತ್ರವನ್ನು ಕಳ್ಳರು ಒಡೆದು ಹಾಕಿ, ಸುಮಾರು ₹ 5 ಲಕ್ಷ ಹಣ ಕಳವು ಮಾಡಿದ್ದಾರೆ.

'ಎಟಿಎಂ ಯಂತ್ರ ಕೇಂದ್ರದ ಬೀಗವನ್ನು ಗ್ಯಾಸ್ ಕಟ್ಟರ್‌ನಿಂದ ಕತ್ತರಿಸಿ ಕೃತ್ಯ ಎಸಗಲಾಗಿದೆ. ಸಿಸಿಟಿವಿ ಕ್ಯಾಮೆರಾಗೆ ಬಿಳಿಬಣ್ಣ ಸ್ಪ್ರೇ ಮಾಡಿ, ನಿಷ್ಕ್ರಿಯಗೊಳಿಸಿ ಕೃತ್ಯವೆಸಗಿದ್ದಾರೆ' ಎಂದು ಶಿಗ್ಗಾವಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಪೌತಿ ಖಾತೆಗೆ ಗಂಡುಮಕ್ಕಳದ್ದೇ ತೊಡಕು: ಕೃಷ್ಣ ಬೈರೇಗೌಡ

ಬೆಂಗಳೂರು: ಮೃತ ವ್ಯಕ್ತಿಗಳ ಹೆಸರಿನಲ್ಲಿರುವ ಕೃಷಿ ಜಮೀನುಗಳನ್ನು ಅವರ ವಾರಸುದಾರರಿಗೆ ಪೌತಿಖಾತೆ ಮಾಡಿಕೊಡುವ ರಾಜ್ಯ ಸರ್ಕಾರದ ಅಭಿಯಾನಕ್ಕೆ, ಹೆಣ್ಣುಮಕ್ಕಳಿಗೆ ಪಾಲು ನೀಡಲೊಪ್ಪದ ಗಂಡುಮಕ್ಕಳ ಅಸಹಕಾರದಿಂದ ತೊಡಕಾಗಿದೆ.

'ರಾಜ್ಯದಲ್ಲಿ 4.1 ಕೋಟಿ ಕೃಷಿ ಜಮೀನುಗಳಿವೆ. ನಮ್ಮ ಸರ್ಕಾರ ಕೃಷಿ ಜಮೀನಿನ ದಾಖಲೆಗಳಿಗೆ ಆಧಾರ್ ಜೋಡಣೆ ಆರಂಭಿಸಿತು. ಆಗ 49.06 ಲಕ್ಷ ಕೃಷಿ ಜಮೀನುಗಳು ಇನ್ನೂ ಮೃತಪಟ್ಟ ವ್ಯಕ್ತಿಗಳ ಹೆಸರಿನಲ್ಲಿ ಇರುವುದು ಪತ್ತೆಯಾಯಿತು. ಅದನ್ನು ನೈಜ ವಾರಸುದಾರರಿಗೆ ವರ್ಗಾಯಿಸುವ ಸಲುವಾಗಿ ಪೌತಿ ಖಾತೆ ಮಾಡಿಕೊಡುವ ಅಭಿಯಾನ ಆರಂಭಿಸಿದೆವು. ಆದರೆ ಈಗ ಅದಕ್ಕೆ ತೊಡಕು ಎದುರಾಗಿದೆ' ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಹೇಳಿದರು.

'ಪ್ರಜಾವಾಣಿ' ಜತೆಗೆ ಮಾಹಿತಿ ಹಂಚಿಕೊಂಡ ಅವರು, 'ಪೌತಿ ಖಾತೆ ಅಭಿಯಾನದ ಅಡಿಯಲ್ಲಿ ಗ್ರಾಮ ಆಡಳಿತಾಧಿಕಾರಿಯು ಪ್ರತಿ ಮನೆಗೂ ಹೋಗಿ, ಮೃತ ವ್ಯಕ್ತಿಗಳ ವಾರಸುದಾರರ ವಿವರ ಕಲೆಹಾಕಬೇಕು ಎಂದು ಸೂಚಿಸಿದ್ದೆವು. ಆದರೆ ಹಲವು ಕುಟುಂಬದವರು ಮಾಹಿತಿ ನೀಡಲು ಮುಂದೆ ಬರುತ್ತಿಲ್ಲ. ಹೆಣ್ಣುಮಕ್ಕಳಿಗೆ ಪಾಲು ನೀಡಲೇಬಾರದು ಎಂಬ ಕಾರಣಕ್ಕೆ ಹಾಗೆ ಮಾಡುತ್ತಿದ್ದಾರೆ ಎಂಬುದು ಗೊತ್ತಾಗಿದೆ' ಎಂದರು.

'ಪೌತಿ ಖಾತೆ ಮಾಡಲು ವಂಶವೃಕ್ಷದ ಆಧಾರದ ಮೇಲೆ ವಾರಸುದಾರರನ್ನು ನಿರ್ಧರಿಸಲಾಗುತ್ತಿದೆ. ಇಲ್ಲದಿದ್ದಲ್ಲಿ ಕುಟುಂಬದವರು ಪಾಲುಪಟ್ಟಿ ಒದಗಿಸಬೇಕು. ಅದರಲ್ಲಿನ ಪಾಲಿನಂತೆ ಪೌತಿ ಖಾತೆಯಾಗುತ್ತದೆ. ಅಲ್ಲಿ ಕುಟುಂಬದ ಮಹಿಳಾ ಸದಸ್ಯರನ್ನು ಬಿಡುವಂತಿಲ್ಲ. ಒಂದೊಮ್ಮೆ ಮಹಿಳಾ ಸದಸ್ಯರು ಹಕ್ಕು ಬಿಡುಗಡೆ ಪತ್ರ ಸಲ್ಲಿಸಿದರಷ್ಟೇ ಪೌತಿ ಖಾತೆಯಿಂದ ಅವರನ್ನು ಬಿಡಲು ಅವಕಾಶವಿದೆ' ಎಂದು ಮಾಹಿತಿ ನೀಡಿದರು.

ಜೋತಿಷಿ ಸೇರಿ ಐವರ ನ್ಯಾಯಾಂಗ ಬಂಧನ ವಿಸ್ತರಣೆ

ಕಾರವಾರ: ಸಿದ್ದಾಪುರ ತಾಲ್ಲೂಕಿನ ಅವರಗುಪ್ಪದಲ್ಲಿ ನಡೆದ ವಸಂತ ನಾಯ್ಕ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತರಾದ ಆರೋಪಿಗಳ ಪೈಕಿ ಐವರ ನ್ಯಾಯಾಂಗ ಬಂಧನ ಅವಧಿಯನ್ನು ಫೆಬ್ರುವರಿ 21ರವರೆಗೆ ವಿಸ್ತರಿಸಿ ಸಿದ್ದಾಪುರದ ಜೆಎಂಎಫ್‌ಸಿ ಕೋರ್ಟ್ ಬುಧವಾರ ಆದೇಶಿಸಿದೆ.

ಪ್ರಮುಖ ಆರೋಪಿಗಳಾದ ಸುಚಿತ್ರಾ ನಾಯ್ಕ, ಆಕೆಯ ತಂದೆ ಲೋಕನಾಥ ನಾಯ್ಕ, ಜೋತಿಷಿ ಕಮಲಾಕರ ಹೆಗಡೆ (ಭಟ್ಟ), ಆಕಾಶ್ ಎಂ. ಮತ್ತು ಶಿವಮೊಗ್ಗದ ವಿನಯ್ ಎಂಬುವರನ್ನು ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ. ಉಳಿದ ಮೂವರು ಆರೋಪಿಗಳಾದ ಶಿವಮೊಗ್ಗದ ಮಹಮ್ಮದ್ ಮೈಫೂಜ್, ಫೈಸಲ್ ಜಾನ್, ಇಫ್ರಾನ್ ಅಮಾನುಲ್ಲಾ ಅವರ ಪೊಲೀಸ್ ಕಸ್ಟಡಿ ಅವಧಿಯನ್ನು ಇನ್ನೂ ಮೂರು ದಿನ ವಿಸ್ತರಿಸಲಾಗಿದೆ.

ಮೂವರು ಆರೋಪಿಗಳನ್ನು ಸುಚಿತ್ರಾ, ಜೋತಿಷಿಗೆ ಪರಿಚಯಿಸಿದ್ದ ವಿನಯ್ ಎಂಬುವರನ್ನು ಎರಡು ದಿನದ ಹಿಂದೆ ಸಿದ್ದಾಪುರ ಠಾಣೆ ಪೊಲೀಸರು ಶಿವಮೊಗ್ಗದಲ್ಲಿ ಬಂಧಿಸಿದ್ದರು. ಫೆಬ್ರುವರಿ 3ರಂದು ವಸಂತ ನಾಯ್ಕ ಅವರನ್ನು ಹತ್ಯೆ ನಡೆದಿತ್ತು.

'15ಕ್ಕೆ ಒಪ್ಪಂದದ ಪ್ರತಿ ಸುಡುವ ಚಳವಳಿ'

ಅಮೆರಿಕ ಜೊತೆಗಿನ ಒಪ್ಪಂದ ರೈತರಿಗೆ ಮರಣ ಶಾಸನ: ರೈತ ನಾಯಕ ಜಗಜಿತ್ ಸಿಂಗ್ ದಲ್ಲೇವಾಲ್

ಪ್ರಜಾವಾಣಿ ವಾರ್ತೆ

ಮೈಸೂರು: 'ಅಮೆರಿಕಾ–ಭಾರತ ವ್ಯಾಪಾರ ಒಪ್ಪಂದದ ಪ್ರತಿಯನ್ನು ಸುಡುವ ಚಳವಳಿಯು ಫೆ. 15ರಂದು ದೇಶದಾದ್ಯಂತ ನಡೆಯಲಿದ್ದು, ರೈತರು ತೋಳಿಗೆ ಕಪ್ಪುಪಟ್ಟಿ ಧರಿಸಿ ಭಾಗವಹಿಸುವರು' ಎಂದು ಸಂಯುಕ್ತ ಕಿಸಾನ್ ಮೋರ್ಚಾ ರಾಷ್ಟ್ರೀಯ ಸಂಚಾಲಕ ಜಗಜಿತ್ ಸಿಂಗ್ ದಲ್ಲೇವಾಲ್ ಬುಧವಾರ ಇಲ್ಲಿ ಹೇಳಿದರು.

ಸಂಯುಕ್ತ ಕಿಸಾನ್ ಮೋರ್ಚಾ ಸಂಘಟನೆಯು ಕನ್ಯಾಕುಮಾರಿಯಿಂದ ದೆಹಲಿವರೆಗೆ ಕೈಗೊಂಡಿರುವ ಜಾಗೃತಿ ಯಾತ್ರೆ ಅಂಗವಾಗಿ ಇಲ್ಲಿ ಏರ್ಪಡಿಸಿದ್ದ ಸಮಾವೇಶದಲ್ಲಿ ಅವರು ಮಾತನಾಡಿದರು.

'ಕೇಂದ್ರ ಸರ್ಕಾರವು ಈ ಒಪ್ಪಂದದ ವಿಚಾರದಲ್ಲಿ ಸುಳ್ಳು ಹೇಳುತ್ತಿದೆ. ಕೇಂದ್ರ ಸಚಿವರು ಹಾಗೂ ಅಮೆರಿಕದ ವಿಭಿನ್ನ ಹೇಳಿಕೆಗಳು ಶಂಕೆ ಮೂಡಿಸಿವೆ. ಕೃಷಿ ಉತ್ಪನ್ನಗಳ ಆಮದಿಗೆ ಕೇಂದ್ರ ಹಸಿರು ನಿಶಾನೆ ತೋರಿದ್ದು, ಈ ಒಪ್ಪಂದವು ದೇಶದ ರೈತರ ಪಾಲಿಗೆ ಮರಣ ಶಾಸನವಾಗಲಿದೆ. ಪ್ರತಿ ಹಳ್ಳಿಯ ರೈತರಲ್ಲಿ ಈ ಒಪ್ಪಂದದ ದುಷ್ಪರಿಣಾಮಗಳ ಕುರಿತು ಅರಿವು ಮೂಡಿಸಲಾಗುವುದು' ಎಂದು ತಿಳಿಸಿದರು.

ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಜಾರಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಫೆ. 7ರಂದು ಕನ್ಯಾಕುಮಾರಿಯಲ್ಲಿ ಜಾಗೃತಿ ಯಾತ್ರೆ ಆರಂಭಗೊಂಡಿದ್ದು, 40 ದಿನ ವಿವಿಧ ರಾಜ್ಯಗಳಲ್ಲಿ ಸಂಚರಿಸಲಿದೆ. ಮಾ.19 ರಂದು ದೆಹಲಿಯಲ್ಲಿ ಸಮಾರೋಪಗೊಳ್ಳಲಿದ್ದು, ದೇಶದ ರೈತರ ಸಹಿಗಳಿರುವ ಪತ್ರಗಳನ್ನು ಪ್ರಧಾನಿ ಅವರಿಗೆ ಸಲ್ಲಿಸುತ್ತೇವೆ. ಆದರೆ, ನಮ್ಮ ಹೋರಾಟ ಅಷ್ಟಕ್ಕೇ ನಿಲ್ಲದು' ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಕುರುಬೂರು ಶಾಂತಕುಮಾರ್, 'ಒಪ್ಪಂದ ಜಾರಿಯಾದರೆ ನಾವು ಅಮೆರಿಕದ ರೈತರ ಜೊತೆಗೆ ಪೈಪೋಟಿಗೆ ಇಳಿಯಬೇಕಾಗುತ್ತದೆ. ಅಲ್ಲಿ ಕೃಷಿಗೆ ಸರ್ಕಾರ ಭಾರೀ ಸಬ್ಸಿಡಿ ಸಿಗಲಿದೆ. ನಮ್ಮಲ್ಲಿ ಆ ವ್ಯವಸ್ಥೆ ಇದೆಯೇ' ಎಂದು ಪ್ರಶ್ನಿಸಿದರು.

ಸಾನ್ನಿಧ್ಯ ವಹಿಸಿದ್ದ ಅವಧೂತ ದತ್ತ ಪೀಠದ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಮಾತನಾಡಿ, 'ಸರ್ಕಾರಗಳು ಇನ್ನಾದರೂ ರೈತರ ಸಮಸ್ಯೆಗಳಿಗೆ ಸ್ಪಂದಿಸಬೇಕು. ಕೃಷಿಕರ ಬದುಕು ಬುಡಮೇಲು ಮಾಡುವ ಯೋಜನೆಗಳನ್ನು ಬಿಡಬೇಕು. ವಿದೇಶಗಳಲ್ಲಿ ಇರುವಂತೆ ಇಲ್ಲಿಯೂ ರೈತರಿಗೆ ಸೌಲಭ್ಯಗಳು ಸಿಗಬೇಕು' ಎಂದು ಆಶಿಸಿದರು.

ಮುಖಂಡರಾದ ಹರಿಯಾಣದ ಅಭಿಮನ್ಯು ಕೋಹರ್, ಉತ್ತರ ಪ್ರದೇಶದ ನಿತಿನ್ ಬಾಲ್ಯನ, ರಾಜಸ್ಥಾನದ ಇಂದ್ರಜಿತ್ ಪಲ್ಲಿವಾನ್, ಮಧ್ಯಪ್ರದೇಶದ ಲೀಲಾಧರ್ ರಜಪೂತ್, ಅರುಣ್ ಪಟೇಲ್, ಪಂಜಾಬ್‌ನ ಹರ್ಸುಲಿಂದರ್ ಸಿಂಗ್, ರಾಜ್ಯದ ಹತ್ತಳ್ಳಿ ದೇವರಾಜ್, ಬಡಗಲಪುರ ನಾಗರಾಜ್, ಬಲ್ಲೂರು ರವಿಕುಮಾರ್, ಲಕ್ಷ್ಮೀದೇವಿ ಅವರು ಸಮಾವೇಶದಲ್ಲಿ ಪಾಲ್ಗೊಂಡರು.

ಮುಖ್ಯಾಂಶಗಳು

- ಒಪ್ಪಂದ ಪರಿಣಾಮ ಕುರಿತು ಗ್ರಾಮಗಳಲ್ಲಿ ಜಾಗೃತಿ
- ವಿದೇಶಗಳಲ್ಲಿರುವಂತೆ ಇಲ್ಲೂ ರೈತರಿಗೆ ಸೌಲಭ್ಯ ನೀಡಿ
- ಸರ್ಕಾರ ಇನ್ನಾದರೂ ರೈತರ ಸಮಸ್ಯೆಗಳಿಗೆ ಸ್ಪಂದಿಸಲಿ

ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಬುಧವಾರ ನಡೆದ ರೈತ ಜಾಗೃತಿ ಯಾತ್ರೆಯಲ್ಲಿ ಸೋನುವಾಲ, ಅಭಿಮನ್ಯು ಕೋಹರ್, ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಜಗಜಿತ್ ಸಿಂಗ್ ದಲ್ಲೇವಾಲ್, ಕುರುಬೂರು ಶಾಂತಕುಮಾರ್, ಬಲ್ಲೂರು ರವಿಕುಮಾರ್ ಹಾಗೂ ಹರ್ಸುಲಿಂದರ್ ಸಿಂಗ್ ಪಾಲ್ಗೊಂಡರು

ರೈತರ ಬೆಂಬಲ

ನವದೆಹಲಿ (ಪಿಟಿಐ): ನಾಲ್ಕು ಕಾರ್ಮಿಕ ಕಾಯ್ದೆಗಳನ್ನು ವಿರೋಧಿಸಿ, ನರೇಗಾ ಉಳಿಸಲು ಆಗ್ರಹಿಸಿ ಕಾರ್ಮಿಕ ಸಂಘಟನೆಗಳು ಫೆ.12ರಂದು ನಡೆಸಲಿರುವ ಸಾರ್ವತ್ರಿಕ ಮುಷ್ಕರಕ್ಕೆ ರೈತರು ಬೆಂಬಲ ನೀಡುವಂತೆ ಸಂಯುಕ್ತ ಕಿಸಾನ್ ಮೋರ್ಚಾ ಕರೆ ನೀಡಿದೆ.

ರೈತ ಸಂಘಟನೆಗಳು ಮತ್ತು ನರೇಗಾ ಸಂಘರ್ಷ ಮೋರ್ಚಾ (ಎನ್‌ಎಸ್‌ಎಂ) ದೇಶದಾದ್ಯಂತ ನಡೆಯಲಿರುವ ಮುಷ್ಕರದಲ್ಲಿ ಭಾಗವಹಿಸಿ ಬೆಂಬಲ ನೀಡಲಿದ್ದಾವೆ ಎಂದು ಎಸ್‌ಕೆಎಂ ಪ್ರಕಟಣೆ ತಿಳಿಸಿದೆ.

ಹುಲಿ ಸೆರೆ

ಮಡಿಕೇರಿ: ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲ್ಲೂಕಿನ ಬೆಸಗೂರು ಸಮೀಪ 6 ವರ್ಷದ ಗಂಡು ಹುಲಿಯನ್ನು ಅರಣ್ಯ ಇಲಾಖೆ ತಂಡ ಸೆರೆ ಹಿಡಿದಿದೆ.

'ಒಂದು ವಾರದಿಂದ 7 ಜಾನುವಾರು ಹುಲಿಗೆ ಬಲಿಯಾಗಿದ್ದು, ಗ್ರಾಮಸ್ಥರಲ್ಲಿ ಭೀತಿ ಮೂಡಿತ್ತು. ಸಾಕಾನೆಗಳ ನೆರವಿನಲ್ಲಿ ಸತತ 4 ಗಂಟೆ ಕಾರ್ಯಾಚರಣೆ ನಡೆಯಿತು. ಹುಲಿ ಕಾಲಿಗೆ ಗಾಯವಾಗಿದ್ದು, ಅಸ್ವಸ್ಥವಾಗಿತ್ತು. ಬೆಂಗಳೂರಿನ ಬನ್ನೇರುಘಟ್ಟ ಉದ್ಯಾನಕ್ಕೆ ರವಾನಿಸಲಾಗಿದೆ' ಡಿಸಿಎಫ್ ಜಗನ್ನಾಥ್ 'ಪ್ರಜಾವಾಣಿ' ತಿಳಿಸಿದರು.

ಆಲಮಟ್ಟಿ ಎತ್ತರ ಹೆಚ್ಚಳ: ಆಂಧ್ರ ಆಕ್ಷೇಪ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಕೃಷ್ಣಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಆಲಮಟ್ಟಿ ಅಣೆಕಟ್ಟೆಯ ಎತ್ತರ ಹೆಚ್ಚಿಸುವ ಕರ್ನಾಟಕ ಸರ್ಕಾರದ ನಿರ್ಧಾರಕ್ಕೆ ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಕೇಂದ್ರ ಜಲಶಕ್ತಿ ಸಚಿವ ಸಿ.ಆರ್ ಪಾಟೀಲ ಅವರೊಂದಿಗೆ ದೆಹಲಿಯಲ್ಲಿ ಮಂಗಳವಾರ ಮಾತುಕತೆ ನಡೆಸಿದ ಅವರು, 'ಕರ್ನಾಟಕದ ನಿರ್ಧಾರವು ಆಂಧ್ರಪ್ರದೇಶಕ್ಕೆ ಬರುವ ಹೊರಹರಿವಿನ ಮೇಲೆ ಗಂಭೀರ ಪರಿಣಾಮ ಬೀರುತ್ತದೆ' ಎಂದು ಹೇಳಿದ್ದಾರೆ.

ಆಂಧ್ರಪ್ರದೇಶ–ಒಡಿಶಾ ನಡುವಿನ ವಂಸಧಾರ ನದಿ ವಿವಾದವನ್ನು ಶೀಘ್ರದಲ್ಲಿ ಬಗೆಹರಿಸುವಂತೆ ಮತ್ತು ಆಂಧ್ರಪ್ರದೇಶ–ತೆಲಂಗಾಣ ನಡುವಿನ ಗೋದಾವರಿ ನದಿ ನೀರಿನ ಹಂಚಿಕೆಗೆ ನ್ಯಾಯಮಂಡಳಿ ರಚಿಸುವಂತೆಯೂ ನಾಯ್ಡು ಮನವಿ ಮಾಡಿದ್ದಾರೆ.

ರೈಲ್ವೆ ಆಸ್ತಿ ಜಪ್ತಿ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ಬೆಂಗಳೂರು –ಮೈಸೂರು ಜೋಡಿ ರೈಲು ಮಾರ್ಗ ವಿಸ್ತರಣೆಗೆ ಸ್ವಾಧೀನ ಪಡೆದ ಕೃಷಿ ಜಮೀನಿಗೆ ಪರಿಹಾರ ನೀಡಿಲ್ಲ ಎಂಬ ಕಾರಣಕ್ಕೆ ಪಟ್ಟಣದ ರೈಲ್ವೆ ಇಲಾಖೆ ಕಚೇರಿಯ ಪೀಠೋಪಕರಣಗಳನ್ನು ಬುಧವಾರ ಜಪ್ತಿ ಮಾಡಲಾಯಿತು.

ಪಟ್ಟಣದ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದ ಸೂಚನೆಯಂತೆ, ಕಚೇರಿಯ ಕುರ್ಚಿ, ಮೇಜು ಇತರ ಚರ ಸ್ವತ್ತುಗಳನ್ನು ನ್ಯಾಯಾಲಯದ ಸಿಬ್ಬಂದಿ ಜಪ್ತಿ ಮಾಡಿದರು. ಪರಿಹಾರ ಪಾವತಿಸುವವರೆಗೆ ಪೀಠೋಪಕರಣಗಳು ನ್ಯಾಯಾಲಯದ ವಶದಲ್ಲಿರುತ್ತವೆ ಎಂದು ತಿಳಿಸಿದರು.

ತಾಲ್ಲೂಕಿನ ಕಪನಕೊಪ್ಪಲು ಗ್ರಾಮದ ರೈತ ಬಾಲಕೃಷ್ಣ ಅವರ 4 ಗುಂಟೆ ಜಮೀನನ್ನು ರೈಲ್ವೆ ಇಲಾಖೆ 2013ರಲ್ಲಿ ವಶಪಡಿಸಿಕೊಂಡಿತ್ತು. ಅದಕ್ಕೆ ₹50 ಲಕ್ಷ ಪರಿಹಾರ ನಿಗದಿ ಮಾಡಿದ್ದು, ಭಾಗಶಃ ಹಣವನ್ನು ಪಾವತಿಸಿತ್ತು. ಬಾಕಿ ಬಿಡುಗಡೆಗೆ ರೈತನ ಪರ ವಕೀಲ ಬಿ. ಕುಮಾರ್ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಶೇ 50ರಷ್ಟು ಪರಿಹಾರದ ನೀಡಬೇಕು ಎಂಬ ಸ್ಥಳೀಯ ಕೋರ್ಟ್ ಆದೇಶವನ್ನು ರೈಲ್ವೆ ಅಧಿಕಾರಿಗಳು ಪಾಲಿಸಿರಲಿಲ್ಲ. ಹೀಗಾಗಿ ಜಪ್ತಿ ಮಾಡುವಂತೆ ನ್ಯಾಯಾಧೀಶರಾದ ಮೋಹನ್‌ಗೌಡ ಆದೇಶಿಸಿದ್ದರು.

ಶವ ಪ್ಯಾಕ್‌ಗೆ ಲಂಚ ಆಕ್ರೋಶ

ಹುಬ್ಬಳ್ಳಿ: ಇಲ್ಲಿನ ಕೆಎಂಸಿ–ಆರ್‌ಐ ಆಸ್ಪತ್ರೆಯಲ್ಲಿ ಶವ ಪ್ಯಾಕ್ ಮಾಡಲು ಹಣಕ್ಕೆ ಬೇಡಿಕೆ ಇಟ್ಟ ಘಟನೆ ಬುಧವಾರ ನಡೆದಿದೆ. ಪಿತ್ತಕೋಶದ ಸಮಸ್ಯೆಯಿಂದ ರಾಯಚೂರು ಜಿಲ್ಲೆಯ ಲಿಂಗಸಗೂರಿನ ಗದ್ದೆಮ್ಮ (52) ಜ.31ರಂದು ಕೆಎಂಸಿ–ಆರ್‌ಐ ಆಸ್ಪತ್ರೆಗೆ ದಾಖಲಾಗಿದ್ದು, ಬುಧವಾರ ಮೃತಪಟ್ಟಿದ್ದರು.

'ಹಣ ನೀಡಿದರಷ್ಟೇ ಮೃತದೇಹ ಪ್ಯಾಕ್ ಮಾಡುವುದಾಗಿ ಶವಾಗಾರದ ಸಿಬ್ಬಂದಿ ಪಟ್ಟು ಹಿಡಿದಿದ್ದು, ಫೋನ್ ಪೇ ಮೂಲಕ ಹಣ ಪಡೆದರು' ಎಂದು ಕುಟುಂಬದವರು ಆಕ್ರೋಶ ವ್ಯಕ್ತಪಡಿಸಿದ್ದಾರೆ. 'ವೈದ್ಯಕೀಯ ಅಧೀಕ್ಷಕರ ವರದಿ ಆಧರಿಸಿ ಕ್ರಮಜರುಗಿಸುತ್ತೇವೆ' ಎಂದು ಆಸ್ಪತ್ರೆಯ ನಿರ್ದೇಶಕ ಡಾ. ಈಶ್ವರ ಹೊಸಮನಿ ಹೇಳಿದರು.

ಮೈಸೂರಿನಲ್ಲಿರುವ ಕುವೆಂಪು ಅವರ ನಿವಾಸ ● ಕುಟುಂಬದವರ ಸ್ಪಷ್ಟನೆ

'ಮಾರಲ್ಲ, ಮ್ಯೂಸಿಯಂ ಮಾಡ್ತೀವಿ'

ಪ್ರಜಾವಾಣಿ ವಾರ್ತೆ

ಮೈಸೂರು: 'ಮೈಸೂರಿನಲ್ಲಿರುವ ರಾಷ್ಟ್ರಕವಿ ಕುವೆಂಪು ಅವರ 'ಉದಯರವಿ' ಮನೆಯನ್ನು ಮಾರುವ ಅಥವಾ ಸರ್ಕಾರಕ್ಕೆ ಹಸ್ತಾಂತರಿಸುವ ಉದ್ದೇಶ ನಮ್ಮ ಮುಂದಿಲ್ಲ. ಮನೆಯನ್ನು ನಾವೇ ವಸ್ತುಸಂಗ್ರಹಾಲಯವಾಗಿ ರೂಪಿಸುತ್ತೇವೆ' ಎಂದು ಕುಟುಂಬದವರು ತಿಳಿಸಿದ್ದಾರೆ.

ಕುವೆಂಪು ಅವರ ಅಳಿಯ ಚಿದಾನಂದ ಕೆ.ಗೌಡ ಅವರು ಪ್ರಕಟಣೆ ನೀಡಿದ್ದು, 'ಕುವೆಂಪು 60 ವರ್ಷ ಬಾಳಿದ ಹಾಗೂ ಅವರ ಬಹುತೇಕ ಕೃತಿಗಳು ರಚನೆಯಾದ ಸ್ಥಳ ಈ ಮನೆ. ಅದನ್ನೂ ವಸ್ತುಸಂಗ್ರಹಾಲಯವನ್ನಾಗಿ ಮಾಡಬೇಕೆಂಬ ಮಾತುಗಳು ಹಲವು ವರ್ಷಗಳಿಂದ ಕೇಳಿಬರುತ್ತಿವೆ. ಕೆಲವು ವರ್ಷಗಳ ಹಿಂದೆ ಸರ್ಕಾರದಿಂದ ಪ್ರಯತ್ನ ನಡೆಯಿತಾದರೂ ಕಾರಣಾಂತರಗಳಿಂದ ಕಾರ್ಯಗತವಾಗಲಿಲ್ಲ' ಎಂದು ಹೇಳಿದ್ದಾರೆ.

'ಆದರೆ, ಉದಯರವಿ ನೋಡಲು ಬರುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ಕನ್ನಡಿಗರ ಬಯಕೆಯಂತೆ, ನಾವೇ ಅದನ್ನು ಮ್ಯೂಸಿಯಂ ಆಗಿಸಲು ನಿರ್ಧರಿಸಿದ್ದೇವೆ. ಸದ್ಯದಲ್ಲೇ, ಮನೆಯ ಅತ್ಯಂತ ಅಗತ್ಯವಾದ ದುರಸ್ತಿ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು. ಮ್ಯೂಸಿಯಂ ಹೇಗಿರಬೇಕೆಂಬ ರೂಪರೇಷೆ ನಿರ್ಧರಿಸಲಾಗುತ್ತಿದೆ. ಬಳಿಕ, ಮೂಲಸ್ವರೂಪ ಉಳಿಸಿಕೊಂಡೇ ಅತ್ಯುನ್ನತವಾಗಿ ಮ್ಯೂಸಿಯಂ ರೂಪಿಸಿ, ಮುಂದಿನ ತಲೆಮಾರಿಗೆ ಕುವೆಂಪು ಅವರ ಜೀವನ, ಸಾಹಿತ್ಯ, ಚಿಂತನೆಗಳನ್ನು ಪರಿಚಯಿಸುವ ಜವಾಬ್ದಾರಿ ನಮ್ಮದಾಗಿದೆ' ಎಂದು ತಿಳಿಸಿದ್ದಾರೆ.

'ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಅವರು ಮನೆಗೆ ಭೇಟಿ ನೀಡಿದ್ದಾಗ ಈ ಸಂಗತಿಯನ್ನೆಲ್ಲಾ ಗಮನಕ್ಕೆ ತಂದಿದ್ದೇವೆ. ಈ ವಿಚಾರ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತೇನೆ. ನೀವು ಸಹಕರಿಸಿ ಎಂದು ಸಚಿವರು ಹೇಳಿದ್ದರು. ನಾವೇ ಮ್ಯೂಸಿಯಂ ಮಾಡುವುದರಿಂದ 'ಉದಯರವಿ'ಯನ್ನು ಮಾರುವ ಉದ್ದೇಶವೇ ನಮಗಿಲ್ಲ. ಹೀಗಿರುವಾಗ, ಹಣಕಾಸಿನ ವಿಷಯ ಇಲ್ಲಿ ಅಪ್ರಸ್ತುತ' ಎಂದು ಹೇಳಿದ್ದಾರೆ.

'ಈ ವಿಚಾರದಲ್ಲಿ, ಸತ್ಯಕ್ಕೆ ದೂರವಾದ ಹಾಗೂ ಗೊಂದಲಕಾರಿಯಾದ ಕೆಲವು ವಿಚಾರಗಳು ಮಾಧ್ಯಮದಲ್ಲಿ ಪ್ರಕಟವಾಗಿರುವುದು ಕುಟುಂಬದವರಿಗೆ ನೋವುಂಟು ಮಾಡಿದೆ. ಹೀಗಾಗಿ, ಈ ಸ್ಪಷ್ಟನೆ ನೀಡುತ್ತಿದ್ದೇವೆ' ಎಂದು ಅವರು ತಿಳಿಸಿದ್ದಾರೆ.

ಮೈಸೂರಿನಲ್ಲಿರುವ 'ಉದಯರವಿ'

ಸಾರ್ವತ್ರಿಕ ಮುಷ್ಕರ ಇಂದು

ಒಂದನೇ ಪುಟದಿಂದ...

'ಜನಜೀವನಕ್ಕೆ ನೇರ ಪರಿಣಾಮ ಆಗದೇ ಇರಬಹುದು. ಆದರೆ, ಕೈಗಾರಿಕೋದ್ಯಮಿಗಳು, ಐಟಿ–ಬಿಟಿ ಉದ್ಯಮಿಗಳು ಸೇರಿದಂತೆ ಬಂಡವಾಳ ಶಾಹಿಗಳಿಗೆ ಹೊಡೆತ ಬೀಳಲಿದೆ. ಒಂದು ದಿನದ ಉತ್ಪಾದನೆ ಸ್ಥಗಿತಗೊಂಡಾಗ ಕೋಟ್ಯಂತರ ರೂಪಾಯಿ ನಷ್ಟವಾಗುತ್ತದೆ. ಆಗಲಾದರೂ ಕಾರ್ಮಿಕರ ಮಹತ್ವ ಅರ್ಥವಾಗಲಿ ಎಂದು ಮುಷ್ಕರ ಕೈಗೊಳ್ಳಲಾಗಿದೆ' ಎಂದು ಸಿಐಟಿಯು ಅಧ್ಯಕ್ಷ ಮೀನಾಕ್ಷಿ ಸುಂದರಂ, ಕಾರ್ಯದರ್ಶಿ ಎಸ್. ವರಲಕ್ಷ್ಮೀ ತಿಳಿಸಿದ್ದಾರೆ.

ಬೇಡಿಕೆಗಳೇನು?: ನಾಲ್ಕು ಕಾರ್ಮಿಕ ಕಾಯ್ದೆಗಳನ್ನು ರದ್ದುಗೊಳಿಸಬೇಕು. ವಿಬಿ ಜಿ ರಾಮ್ ಜಿ ಕಾಯ್ದೆ ರದ್ದುಗೊಳಿಸಿ, ನರೇಗಾ ಪುನರ್ ಸ್ಥಾಪಿಸಬೇಕು. ಭೂಸ್ವಾಧೀನ ಕಾಯ್ದೆಯನ್ನು ಹಿಂಪಡೆಯಬೇಕು. ಭೂಸುಧಾರಣಾ, ಎಪಿಎಂಸಿ, ಜಾನುವಾರು ಸಂರಕ್ಷಣಾ ತಿದ್ದುಪಡಿ ಕಾಯ್ದೆಗಳನ್ನು ಹಿಂಪಡೆಯಬೇಕು. ವಿದ್ಯುಚ್ಛಕ್ತಿ ಖಾಸಗೀಕರಣ ಮಾಡಬಾರದು. ಬೀಜ ಕಾಯ್ದೆ ಹಿಂಪಡೆಯಬೇಕು. ವಿಮಾ ತಿದ್ದುಪಡಿ ಕಾಯ್ದೆ, ಶಾಂತಿ ಕಾಯ್ದೆ ರದ್ದುಗೊಳಿಸಬೇಕು. ರಾಜ್ಯ ಸರ್ಕಾರ ತರಲು ಉದ್ದೇಶಿಸಿರುವ ನಾಲ್ಕು ಕಾರ್ಮಿಕ ಸಂಹಿತೆಗಳಿಗೆ ಸಂಬಂಧಿಸಿದ ಅಧಿಸೂಚನೆ ರದ್ದುಪಡಿಸಬೇಕು. ಕಾರ್ಮಿಕರಿಗೆ ಕನಿಷ್ಠ ವೇತನ ಹೆಚ್ಚಳ ಮಾಡಲು ಅಧಿಸೂಚನೆ ಹೊರಡಿಸಬೇಕು. ಕೇಂದ್ರದ ಜನವಿರೋಧಿ ಕಾಯ್ದೆಗಳನ್ನು ಕರ್ನಾಟಕದಲ್ಲಿ ಜಾರಿಗೊಳಿಸುವುದಿಲ್ಲ ಎಂದು ರಾಜ್ಯ ಸರ್ಕಾರ ಘೋಷಣೆ ಮಾಡಬೇಕು ಎಂಬುದು ಬೇಡಿಕೆಗಳಾಗಿವೆ.

ಪ್ರಚಾರಕ್ಕೆ ಸಿಗದ ಅವಕಾಶ

'ಮುಷ್ಕರದ ಬಗ್ಗೆ ಸಾರ್ವಜನಿಕರಿಗೆ ತಿಳಿಸಲು ಆಟೊದಲ್ಲಿ ಪ್ರಚಾರ ಮಾಡಲು ಅನುಮತಿ ನೀಡುವಂತೆ ಪೊಲೀಸ್ ಇಲಾಖೆಗೆ ಮನವಿ ಮಾಡಿದ್ದೆವು. ಆದರೆ, ಅನುಮತಿ ನಿರಾಕರಿಸಿದ್ದರು. ಹಾಗಾಗಿ ಜನರಿಗೆ ಮಾಹಿತಿ ನೀಡಲು ಸಾಧ್ಯವಾಗಿಲ್ಲ' ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ಎಸ್. ವರಲಕ್ಷ್ಮೀ ತಿಳಿಸಿದರು.

'ಆಟೊದಲ್ಲಿ ಪ್ರಚಾರಕ್ಕೆ ಅನುಮತಿ ನೀಡದೇ ಇರುವುದನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದೆವು. ನ್ಯಾಯಾಲಯ ನಮ್ಮ ಪರ ತೀರ್ಪು ನೀಡಿದೆ. ಆದರೆ, ಬುಧವಾರ ಸಂಜೆ ತೀರ್ಪು ಪ್ರತಿ ಕೈಸೇರಿದ್ದರಿಂದ ಪ್ರಚಾರ ಮಾಡಲು ಸಮಯವಿಲ್ಲದಂತಾಯಿತು' ಎಂದರು.

ಉಪ ನೋಂದಣಾಧಿಕಾರಿ ಸೇರಿ 9 ಮಂದಿ ಬಂಧನ

ಬಾನಿಮಠ

ಬೆಳಗಾವಿ: ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಕುರಣಿ ಗ್ರಾಮದಲ್ಲಿನ ಜಮೀನಿಗೆ ಸಂಬಂಧಿಸಿದಂತೆ ನಕಲಿ ದಾಖಲೆ ಸೃಷ್ಟಿಸಿ, ₹2 ಕೋಟಿಗೂ ಅಧಿಕ ಮೌಲ್ಯದ ಜಮೀನು ಕಬಳಿಸಿದ ಆರೋಪದ ಮೇಲೆ ಹುಕ್ಕೇರಿ ಉಪ ನೋಂದಣಾಧಿಕಾರಿ ಮಡಿವಾಳಯ್ಯ ಬಸವರಾಜ ಬಾನಿಮಠ ಸೇರಿ 9 ಜನರನ್ನು ಪೊಲೀಸರು ಬಂಧಿಸಿದ್ದಾರೆ.

ಮಡಿವಾಳಯ್ಯ ಬಸವರಾಜ ಬಾನಿಮಠ, ಸಿಬ್ಬಂದಿ ಆನಂದ ಎಂ. ದಡ್ಡಿಮನಿ ಸದ್ಯ ಜಾಮೀನು ಪಡೆದಿದ್ದಾರೆ. ಕುರಣಿ ಗ್ರಾಮದ ರೇಣುಕಾ ಶಂಕರ ಮಾಳಿ, ಶಿವರುದ್ರ ಪ್ರಧಾನಿ ಕುದ್ನೂರಿ, ಕಾಶವ್ವ ಶಿವರುದ್ರ ಕುದ್ನೂರಿ, ನೀಲಕಂಠ ಶೆಟ್ಟೆಪ್ಪ ಮುದುಪಾಕಿ, ಸಿದ್ದಯ್ಯ ನಿರುಪಾದಯ್ಯ ಹಿರೇಮಠ, ವಿಜಯ ಶಿವಶಂಕರ ಮಠದ, ಅಶೋಕ ಸೂರ್ಯವಂಶಿ ಬಂಧಿತರು. ಇನ್ನೊಬ್ಬ ಆರೋಪಿ ಅಡಿವೆಪ್ಪ ಶೆಟ್ಟೆಪ್ಪ ಮುದುಪಾಕಿ ನಿಧನರಾಗಿದ್ದಾರೆ.

'ಕುರಣಿ ಗ್ರಾಮದ ಶಿವಾನಂದ ಮಾರುತಿ ಕುದ್ನೂರಿ ಅವರು ದೂರು ನೀಡಿದ ಬಳಿಕ ಪ್ರಕರಣ ಪತ್ತೆಯಾಗಿದೆ. ಆರೋಪಿಗಳು ಒಟ್ಟು 6 ಪ್ರಕರಣಗಳಲ್ಲಿ ಭಾಗಿ ಆಗಿರುವುದು ತನಿಖೆಯಲ್ಲಿ ಗೊತ್ತಾಗಿದೆ' ಎಂದು ಎಸ್.ಪಿ ಕೆ.ರಾಮರಾಜನ್ ತಿಳಿಸಿದ್ದಾರೆ.

'2025ರ ಮೇ ತಿಂಗಳಲ್ಲಿ ಎಲ್ಲರೂ ಸೇರಿ ನಕಲಿ ಆಧಾರ್ ಕಾರ್ಡ್, ನಕಲು ಪಾನ್‌ಕಾರ್ಡ್ ಹಾಗೂ ಜಮೀನು ದಾಖಲೆಗಳನ್ನು ಸೃಷ್ಟಿಸಿದ್ದರು. ಕೊಳ್ಳುವವರು ಹಾಗೂ ಮಾರುವವರು ತಾವೇ ಎಂದು ಹೇಳಿ ಹುಕ್ಕೇರಿ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ವ್ಯವಹಾರ ಕುದುರಿಸಿದ್ದರು' ಎಂದು ತಿಳಿಸಿದರು.

'ಜಮೀನಿನ ಮಾಲೀಕರ ಹೆಸರಲ್ಲಿ ನಕಲಿ ಆಧಾರ್ ಕಾರ್ಡ್ ಹಾಗೂ ಮತದಾರರ ಕಾರ್ಡ್ ಮಾಡಿ, ಅವರ ಭಾವಚಿತ್ರದ ಜಾಗದಲ್ಲಿ ಆರೋಪಿಯೊಬ್ಬನ ಭಾವಚಿತ್ರ ಅಂಟಿಸಿದ್ದರು. ಕೃತ್ಯಕ್ಕೆ ಬಳಸಿದ್ದ ಲ್ಯಾಪ್‌ಟಾಪ್, ಮೊಬೈಲ್ ಫೋನ್, 9 ನಕಲಿ ಆಧಾರ್ ಕಾರ್ಡ್, 3 ನಕಲಿ ಪಾನ್‌ಕಾರ್ಡ್, 1 ನಕಲಿ ಮತದಾರರ ಗುರುತಿನ ಚೀಟಿ ಕೂಡ ವಶಕ್ಕೆ ಪಡೆಯಲಾಗಿದೆ. ಈ ಎಲ್ಲ ದಾಖಲೆಗಳು ಅಶೋಕ ಸೂರ್ಯವಂಶಿ ಎಂಬುವವರ ಫೋಟೊ ಸ್ಟುಡಿಯೊದಲ್ಲಿ ಪತ್ತೆಯಾಗಿವೆ' ಎಂದು ಅವರು ತಿಳಿಸಿದ್ದಾರೆ.

ಬೆಳಗಾವಿ ಜಿಲ್ಲೆ ಎರಡು ಕಡೆ ಉಚಿತ ತರಬೇತಿಗೆ ಕ್ರಮ ● ಪ್ರತಿ ಭಾನುವಾರ ಅಣಕು ಪರೀಕ್ಷೆ

ಸರ್ಕಾರಿ ಕಾಲೇಜುಗಳಲ್ಲಿ ನೀಟ್, ಜೆಇಇ ತರಬೇತಿ

● ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ಕೆ–ಸಿಇಟಿ, ನೀಟ್, ಜೆಇಇ ಅರ್ಹತಾ ಪರೀಕ್ಷೆಗಳಿಗೆ ಸಿದ್ಧತೆ ನಡೆಸಿರುವ ಬಡ ವಿದ್ಯಾರ್ಥಿಗಳಿಗೆ ಜಿಲ್ಲೆಯ ಎರಡು ಸರ್ಕಾರಿ ಪಿಯು ಕಾಲೇಜುಗಳಲ್ಲಿ ಉಚಿತವಾಗಿ ತರಬೇತಿ ನೀಡಿ, ಪರೀಕ್ಷೆಗೆ ಸಜ್ಜುಗೊಳಿಸಲಾಗುತ್ತಿದೆ.

ಚಿಕ್ಕೋಡಿ ತಾಲ್ಲೂಕಿನ ಮಜಲಟ್ಟಿ ಕಾಲೇಜಿನಲ್ಲಿ 53, ಬೈಲಹೊಂಗಲದ ಕಾಲೇಜಿನಲ್ಲಿ 60 ವಿದ್ಯಾರ್ಥಿಗಳಿಗೆ ಸದ್ಯ ತರಬೇತಿ ಕೊಡಲಾಗುತ್ತಿದೆ. ಈ ಎರಡೂ ಕಾಲೇಜುಗಳಲ್ಲಿ ಇದೇ ಶೈಕ್ಷಣಿಕ ವರ್ಷದಿಂದ ಆಯ್ದ ವಿದ್ಯಾರ್ಥಿಗಳಿಗಾಗಿ 'ಸೂಪರ್–50' ಎಂಬ ಕಾರ್ಯಕ್ರಮವನ್ನು ಜಿಲ್ಲಾ ಪಂಚಾಯಿತಿಯು ರೂಪಿಸಿದೆ.

ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಸಲು ಜಿಲ್ಲಾ ಪಂಚಾಯಿತಿ ಸಿಇಒ ರಾಹುಲ್ ಶಿಂಧೆ ಅವರು, 'ಸಿಇಟಿ–ಸಕ್ಷಮ್' ಯೋಜನೆ ಜಾರಿಗೊಳಿಸಿದ್ದರು. ಇದಕ್ಕೆ ಉತ್ತಮ ಫಲ ಸಿಕ್ಕಿತ್ತು.

2024–25ನೇ ಸಾಲಿನ ಕೆ–ಸಿಇಟಿಯಲ್ಲಿ ಬೆಳಗಾವಿ ಶೈಕ್ಷಣಿಕ ಜಿಲ್ಲೆಯಲ್ಲಿ 18 ಮತ್ತು ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯಲ್ಲಿ 43 ವಿದ್ಯಾರ್ಥಿಗಳು ಒಟ್ಟು 50 ಸಾವಿರ ರ‍್ಯಾಂಕ್‌ನೊಳಗೆ ಸ್ಥಾನ ಪಡೆದಿದ್ದರು. ಈ ವರ್ಷವೂ ಜಿಲ್ಲೆಯ ಎಲ್ಲ ಸರ್ಕಾರಿ ಪಿಯು ಕಾಲೇಜುಗಳಲ್ಲಿ ಸಿಇಟಿ–ಸಕ್ಷಮ್ ಕಾರ್ಯಕ್ರಮ ಮುಂದುವರಿದಿದೆ.

ಪ್ರತಿ ಭಾನುವಾರ ಪರೀಕ್ಷೆ: 'ಪರೀಕ್ಷೆಯ ಮೂಲಕ ಪ್ರತಿಭಾವಂತ ವಿದ್ಯಾರ್ಥಿಗಳನ್ನು ತರಬೇತಿಗೆ ಆಯ್ಕೆ ಮಾಡಲಾಗಿದೆ. ಪರೀಕ್ಷೆಗೆ ಅಗತ್ಯವಿರುವ ಪುಸ್ತಕಗಳನ್ನು ಜಿಲ್ಲಾ ಪಂಚಾಯಿತಿಯೇ ಒದಗಿಸಿದೆ. ಕಾಲೇಜಿನ ಉಪನ್ಯಾಸಕರೇ ವಿಶೇಷ ತರಗತಿಗಳನ್ನು ನಡೆಸುತ್ತಾರೆ' ಎಂದು ಮಜಲಟ್ಟಿ ಕಾಲೇಜಿನ ಪ್ರಾಚಾರ್ಯ ಆನಂದ ಕೋಳಿ ಅವರು ತಿಳಿಸಿದರು.

'ಒಂದು ವಾರವಿಡೀ ಕಲಿಸಿದ ವಿಷಯದ ಮೌಲ್ಯಮಾಪನಕ್ಕಾಗಿ ಪ್ರತಿ ಭಾನುವಾರ ಪರೀಕ್ಷೆ ನಡೆಸುತ್ತೇವೆ' ಎಂದು ಅವರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಸರ್ಕಾರಿ ಕಾಲೇಜು ವಿದ್ಯಾರ್ಥಿಗಳೂ ನೀಟ್, ಜೆಇಇನಲ್ಲಿ ಉತ್ತಮ ರ‍್ಯಾಂಕ್ ಗಳಿಸಬೇಕು ಎಂಬುದು ಉದ್ದೇಶ. ಇದಕ್ಕೆ ಪೂರಕವಾಗಿ ತರಬೇತಿ ನೀಡಲಾಗುತ್ತಿದೆ. ವಿದ್ಯಾರ್ಥಿಗಳು ಧಾರವಾಡದ ಐಐಟಿಗೂ ಭೇಟಿ ನೀಡಿ ಅಧ್ಯಯನ ಮಾಡಿದ್ದಾರೆ' ಎಂದು ಬೈಲಹೊಂಗಲ ಕಾಲೇಜಿನ ಉಪನ್ಯಾಸಕ ಬಸವರಾಜ ಕೊಳವಿ ಪ್ರತಿಕ್ರಿಯಿಸಿದರು.

ಬೈಲಹೊಂಗಲದ ಸರ್ಕಾರಿ ಪಿಯು ಕಾಲೇಜಿನಲ್ಲಿ ಭಾನುವಾರ ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿಗಳು

> ಖಾಸಗಿಯಾಗಿ ತರಬೇತಿ ಪಡೆಯುವುದು ಕಷ್ಟವಿತ್ತು. ಉಚಿತ ತರಬೇತಿಯಿಂದ ಪರೀಕ್ಷೆ ಕುರಿತಾಗಿ ಈಗ ಸ್ಪಷ್ಟಚಿತ್ರಣ ಸಿಕ್ಕಿದೆ
> **ಬೀಬಿ ಆಯೇಷಾ ನದಾಫ್**
> ವಿದ್ಯಾರ್ಥಿನಿ, ಬೈಲಹೊಂಗಲ

> ಸರ್ಕಾರಿ ಕಾಲೇಜಿನ ವಿದ್ಯಾರ್ಥಿಗಳೂ ಕೆ–ಸಿಇಟಿ, ಜೆಇಇ, ನೀಟ್‌ನಲ್ಲಿ ಯಶಸ್ಸು ಕಾಣಲೆಂದು ತರಬೇತಿ ಕೊಡುತ್ತಿದ್ದೇವೆ. ಇದಕ್ಕೆ ಉತ್ತಮ ಸ್ಪಂದನ ಸಿಕ್ಕಿದೆ
> **ರಾಹುಲ್ ಶಿಂಧೆ**
> ಜಿಲ್ಲಾ ಪಂಚಾಯಿತಿ ಸಿಇಒ

ಒಳ್ಳೆ ಸುದ್ದಿ

ಫೆ.27ಕ್ಕೆ ದಿ ರೈಸ್ ಆಫ್ ಅಶೋಕ



ಸತೀಶ್ ನೀನಾಸಂ
ಸಪ್ತಮಿ ಗೌಡ

ಸತೀಶ್ ನೀನಾಸಂ, ಸಪ್ತಮಿ ಗೌಡ ಮುಖ್ಯಭೂಮಿಕೆಯಲ್ಲಿರುವ 'ದಿ ರೈಸ್ ಆಫ್ ಅಶೋಕ' ಚಿತ್ರದ ಬಿಡುಗಡೆ ದಿನಾಂಕ ಕೊನೆಗೂ ಘೋಷಣೆಯಾಗಿದೆ. ಕಳೆದ ಕೆಲ ತಿಂಗಳಿನಿಂದ ಚಿತ್ರದ ಪ್ರಚಾರ ಕಾರ್ಯ ಆರಂಭಿಸಿದ್ದ ತಂಡ, ಚಿತ್ರ ಬಿಡುಗಡೆ ದಿನಾಂಕವನ್ನು ತಿಳಿಸಿರಲಿಲ್ಲ. ಈ ಚಿತ್ರ 2022ರಲ್ಲಿ ಸೆಟ್ಟೇರಿತ್ತು. ಕೆಲವು ಅಡೆತಡೆಗಳನ್ನು ದಾಟಿ ಫೆಬ್ರುವರಿ 27ರಂದು ತೆರೆಗೆ ಬರುತ್ತಿದೆ.

ನಿರ್ದೇಶಕ ವಿನೋದ್ ದೋಂಡಾಳೆ ಅವರ ಅಕಾಲಿಕ ನಿಧನದಿಂದ ಮನು ಶೆಡ್ಗಾರ್ ಚಿತ್ರವನ್ನು ಪೂರ್ಣಗೊಳಿಸಿದ್ದಾರೆ. ವೃದ್ಧಿ ಕ್ರಿಯೇಷನ್ ಹಾಗೂ ಸತೀಶ್ ಪಿಕ್ಚರ್ಸ್ ಹೌಸ್ ಪ್ರೊಡಕ್ಷನ್ ಅಡಿ ವರ್ಧನ್ ನರಹರಿ, ಜೈಷ್ಣವಿ ಜೊತೆ ಸೇರಿ ಸತೀಶ್ ನೀನಾಸಂ ಕೂಡಾ ಸಿನಿಮಾ ನಿರ್ಮಾಣದಲ್ಲಿ ಭಾಗಿಯಾಗಿದ್ದಾರೆ. ಕನ್ನಡ, ತೆಲುಗು ಹಾಗೂ ತಮಿಳು ಭಾಷೆಗಳಲ್ಲಿ ಸಿನಿಮಾ ಬಿಡುಗಡೆಯಾಗುತ್ತಿದೆ.

70ರ ದಶಕದಲ್ಲಿ ಹಾಗೂ ಪ್ರಸ್ತುತ ಕಾಲಘಟ್ಟದಲ್ಲಿ ನಡೆಯುವ ಸಿನಿಮಾವಿದು. ಚಿತ್ರದಲ್ಲಿ ಸತೀಶ್ ನೀನಾಸಂ ಕ್ರಾಂತಿಕಾರಿ ಯುವಕನ ಪಾತ್ರಕ್ಕೆ ಜೀವ ತುಂಬಿದ್ದಾರೆ. ಅನ್ಯಾಯದ ವಿರುದ್ಧ ಹೋರಾಡುವ ಯುವಕನ ಬದುಕು ಹಾಗೂ ಸಂಘರ್ಷದ ಸುತ್ತಾ ಸಾಗುವ ಕಥೆ ಇದಾಗಿದೆ.

ದಯಾನಂದ್ ಟಿ.ಕೆ ಕಥೆ ಬರೆದಿದ್ದು, ಪೂರ್ಣಚಂದ್ರ ತೇಜಸ್ವಿ ಸಂಗೀತ ನಿರ್ದೇಶನ ಮಾಡಿದ್ದಾರೆ. ಲವಿತ್ ಛಾಯಾಚಿತ್ರಗ್ರಹಣ, ಮನು ಶೆಡ್ಗಾರ್ ಸಂಕಲನದ ಜವಾಬ್ದಾರಿ ಹೊತ್ತಿದ್ದಾರೆ.

'ವಿತ್ ಲವ್'ಗೆ ರಜನಿಕಾಂತ್ ಶ್ಲಾಘನೆ

ರಜನಿಕಾಂತ್ ಜತೆ ಅಭಿಶನ್

ಹೊಸಬರ ಸಿನಿಮಾಗಳು ಯಶಸ್ವಿಯಾದಾಗ, ಚಿತ್ರತಂಡವನ್ನು ಮನೆಗೆ ಕರೆಸಿಕೊಂಡು ಅಭಿನಂದಿಸುವ ಕೆಲ ನಟರಲ್ಲಿ ರಜನಿಕಾಂತ್ ಕೂಡ ಒಬ್ಬರು. ಕಳೆದ ವಾರ ತೆರೆಕಂಡ ತಮಿಳಿನ 'ವಿತ್ ಲವ್' ಸಿನಿಮಾ ಯಶಸ್ವಿ ಪ್ರದರ್ಶನ ಕಾಣುತ್ತಿದೆ. ಅದರ ಬೆನ್ನಲ್ಲೇ ರಜನಿಕಾಂತ್ ಚಿತ್ರತಂಡವನ್ನು ಕರೆಸಿಕೊಂಡು ಮೆಚ್ಚುಗೆ ಮಾತುಗಳನ್ನಾಡಿದ್ದಾರೆ. ಇದರ ವಿಡಿಯೊವನ್ನು ಚಿತ್ರತಂಡ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದು, ರಜನಿಕಾಂತ್ ಮೆಚ್ಚುಗೆ ಮಾತುಗಳಿಗೆ ಶ್ಲಾಘನೆ ವ್ಯಕ್ತವಾಗಿದೆ.

ಅಭಿಶನ್ ಜೀವಿತ್ ನಾಯಕನಾಗಿ ನಟಿಸಿರುವ ಸಿನಿಮಾ ಈಗಾಗಲೇ ₹11 ಕೋಟಿ ಗಳಿಕೆ ಕಂಡಿದೆ. 'ಟೂರಿಸ್ಟ್ ಫ್ಯಾಮಿಲಿ' ಚಿತ್ರದಲ್ಲಿ ಸಣ್ಣ ಪಾತ್ರದಲ್ಲಿ ಕಾಣಿಸಿಕೊಂಡಿದ್ದ ಅಭಿಶನ್ ಅವರಿಗೆ ನಾಯಕನಾಗಿ ಚೊಚ್ಚಲ ಸಿನಿಮಾವಿದು. ಅನಸ್ವರ ರಾಜನ್ ಚಿತ್ರದ ನಾಯಕಿ.

ಮದನ್ ನಿರ್ದೇಶನದ ಈ ಚಿತ್ರಕ್ಕೆ ರಜನಿಕಾಂತ್ ಪುತ್ರಿ ಸೌಂದರ್ಯ ರಜನಿಕಾಂತ್ ಕೂಡ ಬಂಡವಾಳ ಹೂಡಿದ್ದಾರೆ. ನವಿರಾದ ಪ್ರೇಮಕಥೆ ಹೊಂದಿರುವ ಚಿತ್ರಕ್ಕೆ ಪ್ರೇಕ್ಷಕರಿಂದ ವ್ಯಾಪಕ ಮೆಚ್ಚುಗೆ ವ್ಯಕ್ತವಾಗುತ್ತಿದೆ.

ಇಂದು 'ಯುವ ಸರ್ಕಾರ್' ಟೀಸರ್

ಸಂತೋಷ್ ಕುಮಾರ್ ಆರ್.ಎಸ್. ನಿರ್ದೇಶನದ 'ಯುವ ಸರ್ಕಾರ್' ಸಿನಿಮಾದ ಟೀಸರ್ ಅನ್ನು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಜಯಮಾಲಾ ಫೆ.12ರ ಗುರುವಾರ ಬಿಡುಗಡೆ ಮಾಡಲಿದ್ದಾರೆ.

ಪ್ಯಾಷನ್ ಮೂವಿ ಮೇಕರ್ಸ್ ಈ ಸಿನಿಮಾ ನಿರ್ಮಾಣ ಮಾಡಿದೆ. 'ತಾಯಿಯೊಬ್ಬಳು ತನ್ನ ಮಗನನ್ನು ಹಿಂಸೆ ಇಲ್ಲದ ಜೀವನ ನಡೆಸಲು ಕಲಿಸಿರುತ್ತಾಳೆ. ಆದರೆ ಆತ ದರೋಡೆಕೋರನಾಗುತ್ತಾನೆ. ನಾಯಕನನ್ನು ಅನುಯಾಯಿಗಳು 'ರಾಬಿನ್‌ಹುಡ್' ಎಂದು ಕರೆಯುತ್ತಾರೆ. ಪೊಲೀಸರು, ಸರ್ಕಾರ ಮತ್ತು ವಿರುದ್ಧ ಇರುವ ರಾಜಕಾರಣಿಗಳ ದಾಳಿಯಿಂದ ಅವನು ಬದುಕುಳಿಯಲು ಸಾಧ್ಯವಾಗುತ್ತದೆಯೇ ಎಂಬುವುದು ಚಿತ್ರದ ಕಥೆಯಾಗಿದೆ' ಎಂದಿದ್ದಾರೆ ಸಂತೋಷ್ ಕುಮಾರ್.

ಚಿತ್ರವು ಕನ್ನಡ, ಹಿಂದಿ ಹಾಗೂ ತಮಿಳಿನಲ್ಲಿ ತೆರೆಗೆ ಬರಲಿದೆ. ಚಿತ್ರಕ್ಕೆ ಮಾರ್ಟಿನ್ ಕ್ಲೆಮೆಂಟ್ ಸಂಗೀತ ನಿರ್ದೇಶನ, ಮ್ಯಾಥ್ಯೂ ರಾಜನ್ ಛಾಯಾಚಿತ್ರಗ್ರಹಣವಿದೆ. ವೀರೇನ್ ಕೇಶವ್ ನಾಯಕನಾಗಿ ನಟಿಸಿದ್ದು, ಅವರಿಗೆ 'ಬಿಗ್‌ಬಾಸ್' ಖ್ಯಾತಿಯ ಜಾಹ್ನವಿ ಜೋಡಿಯಾಗಿದ್ದಾರೆ. ಧರ್ಮ ಕೀರ್ತಿರಾಜ್, ಆಲ್ಫಿಯಾ ಶೇಖ್, ಶ್ರುತಿ ದೇಶಪಾಂಡೆ, ವೈ.ಜಿ.ಮಹೇಂದ್ರ, ರಿತ್ವಿಕಾ ಮತ್ತಿತರರು ತಾರಾಬಳಗದಲ್ಲಿದ್ದಾರೆ.

ಯುವ ಸರ್ಕಾರ್ ಪೋಸ್ಟರ್

ಹುಬ್ಬಳ್ಳಿ ಹಂಟರ್ಸ್ ಮೊದಲ ಹಂತದ ಶೂಟಿಂಗ್ ಪೂರ್ಣ

ರಿಷಬ್ ಶೆಟ್ಟಿ ನಟನೆಯ 'ಬೆಲ್ ಬಾಟಂ' ಸಿನಿಮಾ ನಿರ್ಮಾಣ ಮಾಡಿದ್ದ ಸಂತೋಷ್ ಕುಮಾರ್ ಕೆ.ಸಿ ನಿರ್ಮಾಣದ ಹೊಸ ಸಿನಿಮಾ 'ಹುಬ್ಬಳ್ಳಿ ಹಂಟರ್ಸ್'ನ ಮೊದಲ ಹಂತದ ಚಿತ್ರೀಕರಣ ಪೂರ್ಣಗೊಂಡಿದೆ.

ಗೋಲ್ಡನ್ ಹಾರ್ಸ್ ಸಿನಿಮಾ ಬ್ಯಾನರ್‌ನಡಿ ಈ ಚಿತ್ರಕ್ಕೆ ಸಂತೋಷ್ ಅವರು ಬಂಡವಾಳ ಹೂಡಿದ್ದು, ದಿಗಂತ್ ನಟನೆಯ 'ಎಡಗೈಯೇ ಅಪಘಾತಕ್ಕೆ ಕಾರಣ' ಚಿತ್ರದ ನಿರ್ದೇಶಕ ಸಮರ್ಥ್ ಬಿ. ಕಡಕೊಳ್ 'ಹುಬ್ಬಳ್ಳಿ ಹಂಟರ್ಸ್'ಗೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಹುಬ್ಬಳ್ಳಿಯಲ್ಲಿ ಮುಹೂರ್ತ ನೆರವೇರಿಸಿದ್ದ ಚಿತ್ರತಂಡ 14 ದಿನ ಶೂಟಿಂಗ್ ಮಾಡಿದೆ. ಮಾರ್ಚ್ ತಿಂಗಳಲ್ಲಿ ಎರಡನೇ ಹಂತದ ಶೂಟಿಂಗ್ ಆರಂಭಿಸಲು ಯೋಜನೆ ಹಾಕಿಕೊಂಡಿದೆ.

ಚಿತ್ರದಲ್ಲಿ ಪ್ರಮೋದ್ ಶೆಟ್ಟಿ, 'ಮಹಾನಟಿ' ಖ್ಯಾತಿಯ ಧನ್ಯಶ್ರೀ ಸುಜಿತ್ ಮುಖ್ಯಭೂಮಿಕೆಯಲ್ಲಿದ್ದು, ಭಾರತದಾದ್ಯಂತ ಇರುವ ಖ್ಯಾತ ಕಾಂಟೆಂಟ್ ಕ್ರಿಯೇಟರ್ಸ್ ಈ ಚಿತ್ರದಲ್ಲಿ ನಟಿಸುತ್ತಿರುವುದು ವಿಶೇಷ. ಶೀರ್ಷಿಕೆಯೇ ಹೇಳುವಂತೆ ಇದು ಉತ್ತರ ಕರ್ನಾಟಕ ಸೊಗಡಿನ ಕಥೆ. ಸಮರ್ಥ್ ಅವರು ಕಥೆ ಬರೆದು ರಾಹುಲ್ ವಿ.ಪಾರ್ವತಿಕರ್, ಅಮಿತ್ ಕಾರ್ಕ್ಮರ್ ಮತ್ತು ಚೇತನ್ ಮರಂಬೀದ್ ಅವರೊಂದಿಗೆ ಸಂಭಾಷಣೆ ಜವಾಬ್ದಾರಿ ನಿಭಾಯಿಸಿದ್ದಾರೆ. ಅಭಿಮನ್ಯು ಸದಾನಂದನ್ ಛಾಯಾಚಿತ್ರಗ್ರಹಣ, ಪ್ರಸನ್ನ ಕೇಶವ ಸಂಗೀತ ನಿರ್ದೇಶನ ಚಿತ್ರಕ್ಕಿದೆ.

ಹುಬ್ಬಳ್ಳಿ ಹಂಟರ್ಸ್ ಚಿತ್ರತಂಡ

'ಕೈ' ಸಂಸದರಿಂದ ಬಿರ್ಲಾ ನಿಂದನೆ'

ಘಟನೆಯಿಂದ ಓಂ ಬಿರ್ಲಾ ಬಹಳ ನೊಂದುಕೊಂಡಿದ್ದಾರೆ: ಸಚಿವ

ನವದೆಹಲಿ (ಪಿಟಿಐ): 'ಕಾಂಗ್ರೆಸ್‌ನ 20–25 ಸಂಸದರು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಚೇಂಬರ್‌ಗೆ ತೆರಳಿದ್ದ ವೇಳೆ ಅವರನ್ನು ನಿಂದಿಸಿದ್ದಾರೆ. ಈ ವೇಳೆ, ಹಾಜರಿದ್ದ ಪಕ್ಷದ ಹಿರಿಯ ನಾಯಕರಾದ ಕೆ.ಸಿ. ವೇಣುಗೋಪಾಲ್ ಮತ್ತು ಪ್ರಿಯಾಂಕಾ ಗಾಂಧಿ ವಾದ್ರಾ ಈ ಸಂಸದರನ್ನು ತಡೆಯಲಿಲ್ಲ' ಎಂದು ಕೇಂದ್ರ ಸಚಿವ ಕಿರಣ್ ರಿಜಿಜು ಬುಧವಾರ ಹೇಳಿದ್ದಾರೆ.

ಸಂಸತ್ ಭವನ ಆವರಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಈ ಘಟನೆಯಿಂದ ಬಿರ್ಲಾ ಬಹಳ ನೊಂದುಕೊಂಡಿದ್ದಾರೆ. ಬಿರ್ಲಾ ಅವರು ಮೃದುಸ್ವಭಾವದರಾಗಿದ್ದಾರೆ. ಇಲ್ಲದೇ ಹೋದರೆ ಈ ಸಂಸದರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುತ್ತಿದ್ದರು' ಎಂದಿದ್ದಾರೆ.

ಕಾಂಗ್ರೆಸ್‌ನಲ್ಲಿ ಸಾಕಷ್ಟು ಜನ ಸಮಚಿತ್ತದ ನಾಯಕರಿದ್ದಾರೆ. ಸಂಸತ್‌ನಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬ ಬಗ್ಗೆ ಅವರು ರಾಹುಲ್ ಗಾಂಧಿ ಅವರಿಗೆ ಮಾರ್ಗದರ್ಶನ ಮಾಡಬೇಕು
ಕಿರಣ್ ರಿಜಿಜು, ಕೇಂದ್ರ ಸಚಿವ

'ಲೋಕಸಭೆಯ ಕೆಲ ಸದಸ್ಯರು ಬಿರ್ಲಾ ಅವರ ಚೇಂಬರ್‌ಗೆ ತೆರಳಿ, ಅವರನ್ನು ನಿಂದಿಸಿದರು. ನಂತರ, ಕಾಂಗ್ರೆಸ್‌ನ 20–25 ಸಂಸದರು ಕೂಡ ಚೇಂಬರ್‌ಗೆ ತೆರಳಿ ಅವರನ್ನು ನಿಂದಿಸಿದರು. ನಾನು ಕೂಡ ಅಲ್ಲಿ ಇದ್ದೆ. ಸ್ಪೀಕರ್ ವಿರುದ್ಧ ಕಾಂಗ್ರೆಸ್ ಸಂಸದರು ಬಳಸಿದ ಭಾಷೆ ಹೇಗೆ ಇತ್ತು ಎಂಬುದನ್ನು ಹೇಳಲು ನನಗೆ ಆಗುವುದಿಲ್ಲ' ಎಂದು ಹೇಳಿದ್ದಾರೆ.

'ವೇಣುಗೋಪಾಲ್, ಪ್ರಿಯಾಂಕಾ ಗಾಂಧಿ ವಾದ್ರಾ ಅವರು ತಮ್ಮ ಪಕ್ಷದ ಸಂಸದರನ್ನು ಹುರಿದುಂಬಿಸುತ್ತಿದ್ದರು. ನಮ್ಮ ಸಂಸದರೇನಾದರೂ ಆ ರೀತಿ ವರ್ತಿಸಲು ಮುಂದಾಗಿದ್ದಲ್ಲಿ ನಮ್ಮ ನಾಯಕರು ತಡೆಯುತ್ತಿದ್ದರು. ಆದರೆ, ಜಟಾಪಟಿ ನಡೆಸುವಂತೆ ಕಾಂಗ್ರೆಸ್ ನಾಯಕರೇ ತಮ್ಮ ಸಂಸದರಿಗೆ ಕುಮ್ಮಕ್ಕು ನೀಡುತ್ತಿದ್ದರು' ಎಂದು ರಿಜಿಜು ಹೇಳಿದರು.

'ದೋಷ ಸರಿಪಡಿಸಲು ಸೂಚಿಸಿದ್ದೇ ಸ್ಪೀಕರ್'



ತಮ್ಮನ್ನು ಪದಚ್ಯುತಗೊಳಿಸುವ ಸಂಬಂಧ ವಿರೋಧ ಪಕ್ಷಗಳ ನೋಟಿಸ್‌ನಲ್ಲಿದ್ದ ದೋಷಗಳನ್ನು ಸ್ವತಃ, ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರೇ ಗುರುತಿಸಿದ್ದರು. ದೋಷಗಳನ್ನು ಉಲ್ಲೇಖಿಸಿ ಅವರು ನೋಟಿಸ್‌ಅನ್ನು ತಿರಸ್ಕರಿಸಬಹುದಿತ್ತು. ಆದರೆ, ದೋಷಗಳನ್ನು ನಿವಾರಿಸಿ ನೋಟಿಸ್‌ಅನ್ನು ಸದನದಲ್ಲಿ ಮಂಡಿಸಲು ಕ್ರಮ ಕೈಗೊಳ್ಳುವಂತೆ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಲೋಕಸಭೆಯಲ್ಲಿ ನಡೆದ ಘಟನೆಗಳ ಕುರಿತು ನೋಟಿಸ್‌ನಲ್ಲಿ ವಿವರಿಸುವಾಗ, 'ಫೆಬ್ರುವರಿ 2025ರಂದು ನಡೆದ ಘಟನೆಗಳು' ಎಂಬುದಾಗಿ ನಾಲ್ಕು ಸಲ ಉಲ್ಲೇಖಿಸಲಾಗಿತ್ತು. ಇದೇ ಆಧಾರದಲ್ಲಿ ಬಿರ್ಲಾ ಅವರು ನೋಟಿಸ್ ತಿರಸ್ಕರಿಸಬಹುದಿತ್ತು ಎಂದು ಮೂಲಗಳು ಹೇಳಿವೆ.

'ವಿಪಕ್ಷಗಳು ತಮ್ಮ ವಿರುದ್ಧ ಮಂಡಿಸಿರುವ ಅವಿಶ್ವಾಸ ಗೊತ್ತುವಳಿ ಕುರಿತು ಇತ್ಯರ್ಥವಾಗುವವರೆಗೆ ಸ್ಪೀಕರ್ ಸ್ಥಾನದಲ್ಲಿ ಆಸೀನರಾಗದಿರಲು ನಿರ್ಧರಿಸುವ ಮೂಲಕ ಅವರು ನೈತಿಕತೆ ಎತ್ತಿ ಹಿಡಿದಿದ್ದಾರೆ' ಎಂದು ಲೋಕಸಭಾ ಸಚಿವಾಲಯ ಅಧಿಕಾರಿಗಳು ಹೇಳಿದ್ದಾರೆ.

ಮಾರ್ಚ್ 9ರಂದು ಈ ಅವಿಶ್ವಾಸ ಗೊತ್ತುವಳಿ ಕುರಿತ ಚರ್ಚೆ ನಡೆಯುವ ನಿರೀಕ್ಷೆ ಇದೆ ಎಂದು ಅವರು ಹೇಳಿದ್ದಾರೆ.

'ಜನಪ್ರತಿನಿಧಿ ಸ್ಥಾನದಿಂದ ಕೆಳಗಿಳಿಸುವ ಹಕ್ಕು ನೀಡಿ'

ಭ್ರಷ್ಟಾಚಾರ, ವಂಚನೆ, ಕರ್ತವ್ಯದಲ್ಲಿ ನಿರ್ಲಕ್ಷ್ಯ ಸಾಬೀತಾಗಿದ್ದರೆ ಮಾತ್ರವೇ ಈ ಹಕ್ಕನ್ನು ಬಳಸುವಂತಿರಬೇಕು. ರಾಜಕೀಯ ಭಿನ್ನಾಭಿಪ್ರಾಯಗಳಿಗೆ ಈ ಹಕ್ಕು ಬಳಕೆಯಾಗಬಾರದು
ರಾಘವ ಚಡ್ಡಾ, ಎಎಪಿ ಸಂಸದ

'ಸರಿಯಾಗಿ ಕೆಲಸ ಮಾಡದಿದ್ದರೆ, ಐದು ವರ್ಷ ಪೂರ್ಣಗೊಳ್ಳುವ ಮೊದಲೇ ಶಾಸಕರು ಅಥವಾ ಸಂಸದರನ್ನು 'ಜನಪ್ರತಿನಿಧಿ ಸ್ಥಾನದಿಂದ ಕೆಳಗಿಳಿಸುವ ಹಕ್ಕು' ಇರುವ ವ್ಯವಸ್ಥೆಯನ್ನು ಜಾರಿ ಮಾಡಬೇಕು ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ಸಂಸದ ರಾಘವ ಚಡ್ಡಾ ಅವರು ಬುಧವಾರ ರಾಜ್ಯಸಭೆಯಲ್ಲಿ ಆಗ್ರಹಿಸಿದರು.

'ಜನರಿಗೆ ಈ ರೀತಿಯ ಸಾಂವಿಧಾನಿಕ ಹಕ್ಕು ನೀಡಬೇಕು. ರಾಷ್ಟ್ರಪತಿ, ಉಪ ರಾಷ್ಟ್ರಪತಿ ಮತ್ತು ನ್ಯಾಯಾಧೀಶರನ್ನು ಪದಚ್ಯುತಗೊಳಿಸುವ ಹಕ್ಕು ನೀಡಲಾಗಿದೆ. ಸರ್ಕಾರಗಳ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಬಹುದು. ಅಂತೆಯೇ ಶಾಸಕರು, ಸಂಸದರ ವಿರುದ್ಧವೂ ಇಂಥ ವ್ಯವಸ್ಥೆಯನ್ನು ರೂಪಿಸಬೇಕು' ಎಂದರು.

'ಈ ವ್ಯವಸ್ಥೆಯನ್ನು ರಾಜಕೀಯವಾಗಿ ದುರುಪಯೋಗವಾಗದಂತೆ ನೋಡಿಕೊಳ್ಳಬೇಕು. ಜನಪ್ರತಿನಿಧಿಯನ್ನು ಕೆಳಗಿಳಿಸುವ ಕಾರಣಗಳಿರುವ, ಸೂಕ್ತ ರೀತಿಯಲ್ಲಿ ಪರಿಶೀಲನೆಗೆ ಒಳಪಡಿಸಿದ ಅರ್ಜಿಯನ್ನು ಆಯಾ ಮತಕ್ಷೇತ್ರದ ಶೇ 50ಕ್ಕೂ ಹೆಚ್ಚಿನ ಮತದಾರರು ಒಪ್ಪಿಕೊಳ್ಳಬೇಕು. ಜನಪ್ರತಿನಿಧಿಯೊಬ್ಬರಿಗೆ ಉತ್ತಮವಾಗಿ ಕಾರ್ಯನಿರ್ವಹಿಸುವ ಮೂಲಕ ತನ್ನನ್ನು ತಾನು ಸಾಬೀತುಪಡಿಸಿಕೊಳ್ಳಲು ಮೊದಲ 18 ತಿಂಗಳು ಅವಕಾಶ ನೀಡಬೇಕು' ಎಂದರು.

ಪ್ರತಿಭಟನೆ

ಚಿತ್ರ: ಪಿಟಿಐ

ಅಮಾನತುಗೊಂಡಿರುವ ಲೋಕಸಭಾ ಸಂಸದರಾದ ಕಾಂಗ್ರೆಸ್‌ನ ಪ್ರಶಾಂತ ಪಡೋಲೆ ಹಾಗೂ ಡೀನ್ ಕುರಿಯಾಕೋಸ್ ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಪ್ರಧಾನಿ ಮೋದಿ ಭಾವಚಿತ್ರವಿರುವ ಬ್ಯಾನರ್‌ನೊಂದಿಗೆ ನವದೆಹಲಿಯಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು. ವಿಪಕ್ಷಗಳ ಸಂಸದರು ಕೂಡ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು

'ಭಾರತ ಮಾತೆಯ ಮಾರಿದ್ದೀರಿ'

ಒಂದನೇ ಪುಟದಿಂದ...

'ಇಲ್ಲಿ ಎರಡು ವಿಷಯಗಳಿವೆ. ಮೊದಲನೇದು–ಎಪ್‌ಸ್ಟೈನ್ ಫೈಲ್ಸ್. ಎರಡನೇದು–ಇನ್ನೂ 30 ಲಕ್ಷ ಫೈಲ್‌ಗಳು ಲಾಕ್ ಆಗಿವೆ' ಎಂದು ಹೇಳಿದರು.

'ಮೋದಿ ಸೇರಿ ಭಾರತದ ಯಾವುದೇ ಪ್ರಧಾನಿಯೂ ಒತ್ತಡ ಇಲ್ಲದಿದ್ದರೆ ಇಂತಹ ಒಪ್ಪಂದಕ್ಕೆ ಒಪ್ಪುತ್ತಾರೆ ಎಂಬುದನ್ನು ನಾನು ನಂಬುವುದಿಲ್ಲ' ಎಂದರು.

ಎಪ್‌ಸ್ಟೈನ್ ಫೈಲ್ಸ್‌ನಲ್ಲಿ ಪೆಟ್ರೋಲಿಯಂ ಸಚಿವ ಹರದೀಪ್ ಸಿಂಗ್ ಪುರಿ ಮತ್ತು ಉದ್ಯಮಿ ಅನಿಲ್ ಅಂಬಾನಿ ಅವರ ಹೆಸರುಗಳೂ ಪ್ರಸ್ತಾಪವಾಗಿರುವುದನ್ನು ರಾಹುಲ್ ಉಲ್ಲೇಖಿಸಿದರು. ಸಭಾಧ್ಯಕ್ಷರ ಪೀಠದಲ್ಲಿದ್ದ ಬಿಜೆಪಿ ಸದಸ್ಯ ಜಗದಾಂಬಿಕಾ ಪಾಲ್, 'ಸದನದ ಸದಸ್ಯರಲ್ಲದವರ ಹೆಸರನ್ನು ಹೇಳಬೇಡಿ' ಎಂದು ಸೂಚಿಸಿದರು. 'ಉದ್ಯಮಿ' ಎಂದು ರಾಹುಲ್ 2–3 ಸಲ ಉಲ್ಲೇಖಿಸಿದರು. ಭಾಷಣದ ಕೊನೆಯಲ್ಲಿ 'ಅನಿಲ್ ಅಂಬಾನಿ' ಎಂದೇ ಹೇಳಿದರು.

ಬಿಜೆಪಿ ಸದಸ್ಯರು ಪದೇ ಪದೇ ಎದ್ದು ನಿಂತು, 'ರಾಹುಲ್ ಆಧಾರರಹಿತ ಆರೋಪಗಳನ್ನು ಮಾಡುತ್ತಿದ್ದಾರೆ' ಎಂದು ಆರೋಪಿಸಿದರು. ಆರೋಪಗಳನ್ನು ದೃಢೀಕರಿಸುವಂತೆ ಒತ್ತಾಯಿಸಿದರು. ನನ್ನ ಹೇಳಿಕೆಗಳನ್ನು ದಾಖಲೆ ಸಮೇತ ದೃಢೀಕರಿಸುತ್ತೇನೆ ಎಂದು ವಿಪಕ್ಷ ನಾಯಕ ಪ್ರತಿಕ್ರಿಯಿಸಿದರು. 'ಕೇಂದ್ರ ಬಜೆಟ್‌ಗೆ ಸೀಮಿತವಾಗಿ ವಿಷಯ ಪ್ರಸ್ತಾಪಿಸಿ' ಎಂದು ಪಾಲ್ ಪದೇ ಪದೇ ಮನವಿ ಮಾಡಿದರು.

ರಾಹುಲ್ ಪ್ರಹಾರ

- ಯುದ್ಧದ ಯುಗ ಮುಗಿದಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಮತ್ತು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಬಾಲ್ ಹೇಳಿಕೆ ನೀಡಿದ್ದರು. ವಾಸ್ತವವಾಗಿ, ನಾವು ಯುದ್ಧದ ಯುಗಕ್ಕೆ ಕಾಲಿಡುತ್ತಿದ್ದೇವೆ. ಉಕ್ರೇನ್‌ನಲ್ಲಿ ಯುದ್ಧವಿದೆ, ಗಾಜಾದಲ್ಲಿ ಯುದ್ಧವಿತ್ತು, ಪಶ್ಚಿಮ ಏಷ್ಯಾದಲ್ಲಿ ಯುದ್ಧವಿದೆ, ಇರಾನ್‌ನಲ್ಲಿ ಯುದ್ಧದ ಬೆದರಿಕೆ ಇದೆ, ನಮ್ಮಲ್ಲಿ ಆಪರೇಷನ್ ಸಿಂಧೂರ ನಡೆದಿತ್ತು. ನಾವು ಅಪಾಯಕಾರಿ ಜಗತ್ತಿಗೆ ಕಾಲಿಡುತ್ತಿದ್ದೇವೆ. ನಮ್ಮ ಸಾಮರ್ಥ್ಯಗಳನ್ನು ನಾವು ಅರ್ಥಮಾಡಿಕೊಳ್ಳಬೇಕು. ನಮ್ಮ ದೇಶದ ಕೇಂದ್ರ ಶಕ್ತಿ ನಮ್ಮ ಜನ
- ದೇಶದ ಜನ, ದತ್ತಾಂಶ, ಆಹಾರ ಪೂರೈಕೆ ಮತ್ತು ಇಂಧನ ವ್ಯವಸ್ಥೆಯನ್ನು ರಕ್ಷಿಸುವ ಅಗತ್ಯವಿದೆ. ಆದರೆ, ಇಂತಹ ವಿಷಯಗಳಲ್ಲಿ ಕೇಂದ್ರ ಸರ್ಕಾರ ರಾಜಿ ಮಾಡಿಕೊಂಡಿದೆ
- ಒಂದು ವೇಳೆ, ಅಮೆರಿಕದೊಂದಿಗೆ ವ್ಯಾಪಾರ ಒಪ್ಪಂದದ ಕುರಿತು 'ಇಂಡಿಯಾ ಮೈತ್ರಿಕೂಟದ ಸರ್ಕಾರ' ಮಾತುಕತೆ ನಡೆಸಿದ್ದರೆ, ಭಾರತವನ್ನು ಸಮಾನವಾಗಿ ಪರಿಗಣಿಸಬೇಕು ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಸ್ಪಷ್ಟವಾಗಿ ಹೇಳುತ್ತಿತ್ತು
- ನಾವು ಯಾರಿಂದ ತೈಲ ಖರೀದಿಸಬೇಕು ಎಂಬುದನ್ನು ನಮ್ಮ ಪ್ರಧಾನಿ ನಿರ್ಧರಿಸುವುದಿಲ್ಲ. ಅದನ್ನು ಟ್ರಂಪ್ ನಿರ್ಧಾರ ಮಾಡುತ್ತಾರೆ. ಅವರು ಇಷ್ಟಪಡದ ದೇಶದಿಂದ ತೈಲ ಖರೀದಿಸಿದರೆ ನಮ್ಮನ್ನು ಶಿಕ್ಷಿಸುತ್ತಾರೆ. ಸುಂಕವನ್ನು ಶೇ 50ಕ್ಕೆ ಏರಿಸುತ್ತಾರೆ
- ಅಮೆರಿಕದಲ್ಲಿ ಮೊದಲು ಭಾರತದ ಉತ್ಪನ್ನಗಳಿಗೆ ಶೇ 3 ಸುಂಕ ಇತ್ತು. ಕೆಲವು ತಿಂಗಳ ಹಿಂದೆ ಅದನ್ನು ಶೇ 50ಕ್ಕೆ ಏರಿಸಲಾಗಿತ್ತು. ನಮ್ಮ ಸರ್ಕಾರವು ಸಂಪೂರ್ಣವಾಗಿ ಶರಣಾದ ಬಳಿಕ ಶೇ 18ಕ್ಕೆ ಇಳಿಸಲಾಗಿದೆ. ಈ ಒಪ್ಪಂದದಿಂದ ಭಾರಿ ಲಾಭವಾಗಿರುವುದು ಅಮೆರಿಕಕ್ಕೆ. ಅಮೆರಿಕದಿಂದ ಆಮದು ಮಾಡಿಕೊಳ್ಳುವ ಪ್ರಮಾಣ 46 ಬಿಲಿಯನ್ ಡಾಲರ್‌ನಿಂದ 146 ಬಿಲಿಯನ್ ಡಾಲರ್‌ಗೆ ಏರಿಕೆಯಾಗಿದೆ. ಇದು ಅಸಂಬದ್ಧ

'ಪ್ರಧಾನಿ ಮಾತ್ರವಲ್ಲ ಜನರ ಭವಿಷ್ಯವೂ ಶರಣಾಗಿದೆ'

'ಇದು ಕೇವಲ ಪ್ರಧಾನಿ ಅವರ ಶರಣಾಗತಿಯಲ್ಲ; 150 ಕೋಟಿ ಭಾರತೀಯರ ಭವಿಷ್ಯದ ಶರಣಾಗತಿ. ನಾವು ಪ್ರಕ್ಷುಬ್ಧ ಕಾಲಕ್ಕೆ ಹೋಗುತ್ತಿದ್ದೇವೆ. ರಾಷ್ಟ್ರವೇ ಮಾರಾಟವಾಗಿದೆ. ನಮ್ಮ ದತ್ತಾಂಶಗಳನ್ನು, ರೈತರನ್ನು, ಎಲ್ಲ ಸಾಫ್ಟ್‌ವೇರ್ ಎಂಜಿನಿಯರ್‌ಗಳನ್ನು, ಸಣ್ಣ ಮತ್ತು ಮಧ್ಯಮ ವ್ಯವಹಾರಗಳನ್ನು, ನಮ್ಮ ಪಡೆಗಳು ಮತ್ತು ನಮ್ಮ ಇಂಧನ ಭದ್ರತೆಯನ್ನು ಮಾರಾಟ ಮಾಡಲಾಗಿದೆ' ಎಂದು ರಾಹುಲ್ ಗಾಂಧಿ ಅಭಿಪ್ರಾಯಪಟ್ಟರು.

'ರಾಹುಲ್ ಮಾತುಗಳೆಲ್ಲಾ ಸುಳ್ಳು'

ಸಂಸತ್ ಅಧಿವೇಶನ

'ಲೋಕಸಭೆಯಲ್ಲಿ ವಿಪಕ್ಷ ನಾಯಕರಾಗಿರುವ ರಾಹುಲ್ ಗಾಂಧಿ ಅವರ ಮಾತುಗಳು ಸಂಪೂರ್ಣ ಸುಳ್ಳುಗಳಿಂದ ಕೂಡಿವೆ' ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಆರೋಪಿಸಿದ್ದು, 'ಅವರು ಹೇಳಿರುವ ಈ 'ಸುಳ್ಳು'ಗಳನ್ನು ಕಡತದಿಂದ ತೆಗೆಯುವಂತೆ ಆಡಳಿತಾರೂಢ ಎನ್‌ಡಿಎ ಒಕ್ಕೂಟ ಮನವಿ ಮಾಡಲಿದೆ' ಎಂದು ಬುಧವಾರ ಹೇಳಿದ್ದಾರೆ.

ರಾಹುಲ್ ಗಾಂಧಿ ತಮ್ಮ ಮಾತು ಮುಗಿಸುತ್ತಿದ್ದಂತೆಯೇ ಈ ಕುರಿತು ಪ್ರಸ್ತಾಪಿಸಿದ ರಿಜಿಜು, 'ರಾಹುಲ್ ಅವರು ತಾವು ಮಾಡಿರುವ ಆರೋಪಗಳನ್ನು ಸಾಬೀತುಪಡಿಸಬೇಕು ಎಂದು ಕೋರಿ ಎನ್‌ಡಿಎ ಸಂಸದರು ಸ್ಪೀಕರ್ ಅವರಿಗೆ ನೋಟಿಸ್ ಸಲ್ಲಿಸುವರು' ಎಂದರು. 'ತಾವು ಆಡಿರುವ ಮಾತುಗಳನ್ನು ದೃಢೀಕರಿಸುವುದಾಗಿ ರಾಹುಲ್ ಗಾಂಧಿ ಪ್ರಮಾಣ ಮಾಡಿದ್ದಾರೆ. ಆದರೆ, ಅವರು ಸುಳ್ಳು ಹೇಳಿರುವ ಕಾರಣ ತಾವು ಮಾಡಿರುವ ಆರೋಪಗಳನ್ನು ಸಾಬೀತುಪಡಿಸುವುದು ಅವರಿಂದ ಸಾಧ್ಯ ಇಲ್ಲ ಎಂಬುದು ನನಗೆ ಗೊತ್ತು' ಎಂದು ರಿಜಿಜು ಹೇಳಿದರು.

'ರಾಹುಲ್ ಅವರು ಸಚಿವ ಹರದೀಪ್ ಸಿಂಗ್ ವಿರುದ್ಧ ಗುರುತರವಾದ ಆರೋಪ ಮಾಡಿದ್ದಾರೆ. ಈ ಸಂಬಂಧ ಅವರು ಮುಂಚಿತವಾಗಿ ಯಾವುದೇ ನೋಟಿಸ್ ಅನ್ನೂ ನೀಡಿರಲಿಲ್ಲ. ಇದು ಗಂಭೀರವಾದ ಹಕ್ಕುಚ್ಯುತಿ' ಎಂದೂ ಹೇಳಿದರು.

ಸಲಹೆ ಕೇಳಿದ್ದರೆ ನೀವು ವಿಪಕ್ಷದಲ್ಲಿ ಇರುತ್ತಿರಲಿಲ್ಲ: ಜಗದಾಂಬಿಕಾ ಪಾಲ್

'ನೀವು ಈ ಹಿಂದೆ ನನ್ನ ಸಲಹೆ ಕೇಳಿದ್ದರೆ ಇಂದು ವಿರೋಧ ಪಕ್ಷದ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಿರಲಿಲ್ಲ' ಎಂದು ಸ್ಪೀಕರ್ ಸ್ಥಾನದಲ್ಲಿ ಕುಳಿತಿದ್ದ ಜಗದಾಂಬಿಕಾ ಪಾಲ್ ಅವರು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಬುಧವಾರ ಹೇಳಿದರು.

'ನಮ್ಮ ಪಕ್ಷದ ಮಾಜಿ ನಾಯಕರಾದ ಜಗದಾಂಬಿಕಾ ಪಾಲ್ ಅವರು ಸ್ಪೀಕರ್ ಕುರ್ಚಿಯಲ್ಲಿ ಕುಳಿತಿದ್ದಾರೆ. ಹೀಗಾಗಿ ಇಂದು ನಾನು ಹೆಚ್ಚು ಆಕ್ರಮಣಕಾರಿಯಾಗಿ ಮಾತನಾಡುವುದಿಲ್ಲ' ಎಂದು ರಾಹುಲ್ ಹೇಳಿದರು.

ಅದಕ್ಕೆ ಪಾಲ್ ಅವರು ಪ್ರತಿಕ್ರಿಯಿಸಿ, 'ಬಜೆಟ್‌ಗೆ ಸಂಬಂಧಿಸದೇ ಇರುವ ವಿಷಯವನ್ನು ಎತ್ತಲು ಸಾಧ್ಯವಿಲ್ಲ. ಸರಿಯಾದ ಹಾದಿಯಲ್ಲಿದ್ದ ನೀವು ಏಕೆ ಹಳಿ ತಪ್ಪುತ್ತಿದ್ದೀರಿ' ಎಂದು ರಾಹುಲ್ ಅವರನ್ನು ಪ್ರಶ್ನಿಸಿದರು.

ಅದಕ್ಕೆ ಪ್ರತಿಕ್ರಿಯಿಸಿದ ರಾಹುಲ್, 'ನಮಗೆ ನಿಮ್ಮ ಮೇಲೆ ಪ್ರೀತಿಯಿದೆ. ನೀವು ನಮ್ಮ ಪಕ್ಷದ ಮಾಜಿ ಸದಸ್ಯರು. ಹೀಗಾಗಿ ಇಂದು ನಾನು ಆಕ್ರಮಣಕಾರಿಯಾಗಿ ಮಾತನಾಡುವುದಿಲ್ಲ. ನಿಮ್ಮ ಹೃದಯ ಬಿಜೆಪಿಯಲ್ಲಿ ಇಲ್ಲ ಎಂಬುದು ನನಗೆ ತಿಳಿದಿದೆ ಸರ್' ಎಂದರು.

'ಈಗಲೂ ನಿಮಗೆ ಸಲಹೆ ನೀಡುತ್ತಿದ್ದೇನೆ. ನೀವು ಸರಿಯಾದ ಹಾದಿಯಲ್ಲಿ ಸಾಗಿ. ಇನ್ನೂ ಸಮಯವಿದೆ' ಎಂದು ಪಾಲ್ ಹೇಳಿದರು.

ಲೋಕಸಭೆ: ಗದ್ದಲದ ನಡುವೆಯೇ ಪ್ರಶ್ನೋತ್ತರ

ನವದೆಹಲಿ (ಪಿಟಿಐ): ವಿಪಕ್ಷಗಳ ಸದಸ್ಯರ ಗದ್ದಲ, ಪ್ರತಿಭಟನೆಯ ನಡುವೆಯೇ ಲೋಕಸಭೆಯಲ್ಲಿ ಪ್ರಶ್ನೋತ್ತರ ಕಲಾಪ ಬುಧವಾರ ನಡೆಯಿತು.

ಪ್ರಶ್ನೋತ್ತರದ ಅವಧಿಯಲ್ಲಿ 13 ಪ್ರಶ್ನೆಗಳು ಹಾಗೂ ಅವುಗಳಿಗೆ ಪೂರಕವಾದ ಉಪ ಪ್ರಶ್ನೆಗಳನ್ನು ಕೇಳಲಾಯಿತು.

ಪ್ರಶ್ನೋತ್ತರ ಆರಂಭವಾಗುತ್ತಿದ್ದಂತೆಯೇ ವಿರೋಧ ಪಕ್ಷಗಳ ಸದಸ್ಯರು ಘೋಷಣೆಗಳನ್ನು ಕೂಗಿ ಅಡ್ಡಿಪಡಿಸಲು ಮುಂದಾದರು. ಸ್ಪೀಕರ್ ಸ್ಥಾನದಲ್ಲಿದ್ದ ಪಿ.ಸಿ. ಮೋಹನ್ ಅವರು ಅವಕಾಶ ನೀಡಲಿಲ್ಲ.

ವಿಪಕ್ಷಗಳ ಕೆಲವು ಸದಸ್ಯರು 'ನಮಗೆ ನ್ಯಾಯ ಬೇಕು' ಎಂದು ಘೋಷಣೆ ಹಾಕಿದರು. ಪ್ರತಿಭಟನೆ ಬಳಿಕ ಬೆಳಿಗ್ಗೆ 11.30ರ ಸುಮಾರಿಗೆ ಸದನದಿಂದ ಹೊರನಡೆದರು.

ಕೇಂದ್ರ ಬಜೆಟ್ ಕುರಿತ ಚರ್ಚೆಗಳು ಮಂಗಳವಾರದಿಂದ ಪುನರಾರಂಭಗೊಂಡಿದೆ.

ರಾಹುಲ್ ಬರುತ್ತಿದ್ದಂತೆ ಕಾಲ್ಕಿತ್ತ ಸಚಿವರು

ನವದೆಹಲಿ: ಸಂಸತ್ ಭವನದ ಸಂಕೀರ್ಣದಲ್ಲಿ ಸುದ್ದಿಗಾರರಿಗೆ ಮಾಹಿತಿ ನೀಡುತ್ತಿದ್ದ ಸಚಿವರ ಬಳಿಗೆ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಬರುತ್ತಿದ್ದಂತೆ ಸಚಿವರು ಅಲ್ಲಿಂದ ಕಾಲ್ಕಿತ್ತ ಪ್ರಸಂಗ ಬುಧವಾರ ನಡೆಯಿತು.

ವರದಿಗಾರರ ಜತೆ ಮಾತನಾಡುತ್ತಿದ್ದ ಕೇಂದ್ರ ಸಚಿವರಾದ ಪ್ರಲ್ಹಾದ್ ಜೋಶಿ ಮತ್ತು ಅಶ್ವಿನಿ ವೈಷ್ಣವ್ ಅವರು, 'ಲೋಕಸಭೆಯಲ್ಲಿ ರಾಹುಲ್ ಗಾಂಧಿ ಅವರು ಮಾಡಿದ ಆರೋಪಗಳು ಆಧಾರರಹಿತವಾಗಿವೆ' ಎಂದರು.

ಇದೇ ವೇಳೆ ಅಲ್ಲಿಗೆ ಬಂದ ರಾಹುಲ್ ಗಾಂಧಿ ಅವರು, 'ಬನ್ನಿ ಆ ಕುರಿತು ಒಟ್ಟಿಗೆ ನಿಂತು ಮಾತನಾಡೋಣ' ಎಂದು ಆಹ್ವಾನಿಸಿದರು. ಅದನ್ನು ನಿರಾಕರಿಸಿದ ಸಚಿವರು ಅಲ್ಲಿಂದ ಸಾಗಲು ಮುಂದಾದರು.

ಆಗ ರಾಹುಲ್ ಅವರು ಸಚಿವ ಜೋಶಿ ಅವರ ತೋಳು ಹಿಡಿದು ಮೆತ್ತಗೆ ಎಳೆಯಲು ಪ್ರಯತ್ನಿಸಿದರು. ಆಗ ಕೈಬಿಡಿಸಿಕೊಂಡ ಜೋಶಿ ಅವರು ಸಚಿವ ವೈಷ್ಣವ್ ಅವರೊಂದಿಗೆ ಅಲ್ಲಿಂದ ತೆರಳಿದರು. ಈ ಕುರಿತ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ವ್ಯಾಪಕವಾಗಿ ಹಂಚಿಕೆಯಾಗಿದೆ.

ಡಬ್ಲುಟಿಒಗೆ ಶರಣಾದವರು ನೀವು: ನಿರ್ಮಲಾ

ಒಂದನೇ ಪುಟದಿಂದ...

'ಪ್ರಧಾನಿ ಮೋದಿ ಶರಣಾಗಿದ್ದಾರೆ, ರೈತರನ್ನು ಮಾರಾಟ ಮಾಡಲಾಗಿದೆ ಎಂದೆಲ್ಲಾ ರಾಹುಲ್ ಗಾಂಧಿ ಹೇಳಿದ್ದಾರೆ. ದೇಶದ ಹಿತಾಸಕ್ತಿಗಳನ್ನು ಯಾರು ಬಿಟ್ಟುಕೊಟ್ಟಿದ್ದಾರೆ ಹಾಗೂ ದೇಶವನ್ನು ಯಾರು ಮಾರಾಟ ಮಾಡಿದ್ದಾರೆ ಎಂಬುದನ್ನು ನಾನು ನಿಮಗೆ ಹೇಳುತ್ತೇನೆ' ಎಂದರು.

'2013ರಲ್ಲಿ ಬಾಲಿಯಲ್ಲಿ ವಿಶ್ವ ವ್ಯಾಪಾರ ಸಂಘಟನೆಯ ಸಮಾವೇಶ ನಡೆದಾಗ, ಕಾಂಗ್ರೆಸ್ ನೇತೃತ್ವದ ಅಂದಿನ ಸರ್ಕಾರ ಒಪ್ಪಂದಕ್ಕೆ ಸಹಿ ಹಾಕಿತು' ಎಂದು ಹೇಳಿದರು.

'ಈ ಒಪ್ಪಂದದ ಪ್ರಕಾರ, ಆಹಾರ ಧಾನ್ಯಗಳ ಮೇಲೆ ಸರ್ಕಾರ ನಿಯಂತ್ರಣ ಹೊಂದಿರಲಿಲ್ಲ. 2017ರಿಂದ ಸರ್ಕಾರವು ಕನಿಷ್ಠ ಬೆಂಬಲ ಬೆಲೆ ನೀಡುವ ಮೂಲಕ ರೈತರಿಂದ ಕೃಷಿ ಉತ್ಪನ್ನಗಳನ್ನು ಖರೀದಿ ಮಾಡಲು ಅವಕಾಶ ಇರಲಿಲ್ಲ. ಹಾಗೆಯೇ, ಬಡವರಿಗೆ ಪಡಿತರ ನೀಡುವುದಕ್ಕೂ ಅವಕಾಶ ಇರಲಿಲ್ಲ ಎಂಬುದು 'ಇದರ ಅರ್ಥ' ಎಂದು ವಿವರಿಸಿದರು.

'ಈ ವಿಚಾರ ಮುಂದಿಟ್ಟುಕೊಂಡು ಪ್ರಧಾನಿ ಮೋದಿ ಅವರು 2014ರಲ್ಲಿ ಡಬ್ಲುಟಿಒ ಜೊತೆ ಹೋರಾಟ ನಡೆಸಿದರು. ಹಾಗೆ ಮಾಡದಿದ್ದಲ್ಲಿ, ಈ ದೇಶದ ಬಡವರಿಗೆ ಪಡಿತರ ವ್ಯವಸ್ಥೆಯಡಿ ಆಹಾರ ಧಾನ್ಯ ನೀಡುವುದಕ್ಕೆ ಸಾಧ್ಯವಿರುತ್ತಿರಲಿಲ್ಲ' ಎಂದು ಹೇಳಿದರು.

'2009ರಲ್ಲಿ ಒಪ್ಪಂದ': 'ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪಾಕಿಸ್ತಾನಕ್ಕೆ ಬೆಂಬಲ ನೀಡುತ್ತಿದ್ದರೂ ಕೇಂದ್ರ ಸರ್ಕಾರ ಈ ಕುರಿತು ಚಕಾರ' ಎತ್ತುತ್ತಿಲ್ಲ ಎಂಬ ರಾಹುಲ್ ಆರೋಪ ಪ್ರಸ್ತಾಪಿಸಿದ ಸಚಿವೆ ನಿರ್ಮಲಾ ಸೀತಾರಾಮನ್, 'ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದಾಗ 2009ರಲ್ಲಿ ಈಜಿಪ್ಟ್‌ನ ಶರ್ಮ್ ಎಲ್ ಶೇಖ್‌ನಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಪಾಕಿಸ್ತಾನ ಜೊತೆ ಮಾತುಕತೆ ನಡೆಸುವ ವೇಳೆ ಭಯೋತ್ಪಾದನೆ ಕುರಿತು ಪ್ರಸ್ತಾಪ ಮಾಡಬಾರದು ಎಂಬ ಅಂಶವನ್ನು ಈ ಒಪ್ಪಂದ ಒಳಗೊಂಡಿತ್ತು' ಎಂದು ತಿರುಗೇಟು ನೀಡಿದರು.

ಟಿಎಂಸಿಗೂ ತಿವಿದ ಸಚಿವೆ

ಪಶ್ಚಿಮ ಬಂಗಾಳಕ್ಕೆ ಯಾವುದೇ ಯೋಜನೆಗಳನ್ನು ಘೋಷಿಸಿಲ್ಲ ಎಂಬ ಟಿಎಂಸಿ ಸಂಸದ ಅಭಿಷೇಕ್ ಬ್ಯಾನರ್ಜಿ ಆರೋಪಕ್ಕೆ ತಿರುಗೇಟು ನೀಡಿದ ನಿರ್ಮಲಾ ಸೀತಾರಾಮನ್, 'ಪೂರ್ವ ಭಾಗದ ರಾಜ್ಯಗಳಿಗೆ ಹಲವಾರು ಯೋಜನೆಗಳನ್ನು ಘೋಷಿಸಲಾಗಿದೆ. ಪಶ್ಚಿಮ ಬಂಗಾಳ ಕೂಡ ಈ ಯೋಜನೆಗಳ ಲಾಭ ಪಡೆಯಲು ಪ್ರಯತ್ನಿಸಬೇಕಿತ್ತು' ಎಂದರು.

'ಹಾಲು ಮತ್ತು ಹಾಲಿನ ಉತ್ಪನ್ನಗಳ ಮೇಲೆ ಜಿಎಸ್‌ಟಿ ವಿಧಿಸಲಾಗಿದೆ. ಅಂತ್ಯಕ್ರಿಯೆ ಸೇವೆಗಳ ಮೇಲೂ ಜಿಎಸ್‌ಟಿ ಹೇರಲಾಗಿದೆ ಎಂಬ ಬ್ಯಾನರ್ಜಿ ಅವರ ಆರೋಪದಲ್ಲಿ ಯಾವುದೇ ಹುರುಳಿಲ್ಲ' ಎಂದು ಹೇಳಿದರು.

ಇದಕ್ಕೆ ಆಕ್ಷೇಪಿಸಿದ ಟಿಎಂಸಿ ಸಂಸದರು, ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಇದರ ಮಧ್ಯೆಯೇ ಮಾತು ಮುಂದುವರಿಸಿದ ಸಚಿವೆ, 'ಜನಸಾಮಾನ್ಯರಿಗೆ ಜಿಎಸ್‌ಟಿಯಿಂದ ತೊಂದರೆಯಾಗುತ್ತಿಲ್ಲ. ಟಿಎಂಸಿಯ 'ಕಟ್ ಮನಿ ಸಿಂಡಿಕೇಟ್'ನಿಂದ ಜನರು ತೊಂದರೆ ಅನುಭವಿಸುತ್ತಿದ್ದಾರೆ' ಎಂದರು.

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸಂಪಾದಕೀಯ

ಸಚಿವ ಸ್ಥಾನ ಬೇಕಾಬಿಟ್ಟಿ ಹಂಚಿಕೆ ಸಾರ್ವಜನಿಕ ಹಣದ ದುಂದು ಸಲ್ಲ

ಐವತ್ತನಾಲ್ಕಕ್ಕೂ ಹೆಚ್ಚು ನಿಗಮ, ಮಂಡಳಿ, ಪ್ರಾಧಿಕಾರಗಳ ಅಧ್ಯಕ್ಷರಿಗೆ ರಾಜ್ಯ ಸಚಿವರ ಸ್ಥಾನ ಹಾಗೂ ಸೌಲಭ್ಯವನ್ನು ಕಲ್ಪಿಸಿ ಸರ್ಕಾರ ಈಚೆಗೆ ಆದೇಶ ಹೊರಡಿಸಿದೆ. ಇದು ಆಡಳಿತಾತ್ಮಕವಾಗಿ ಕೆಟ್ಟ ಮೇಲ್ಪಂಕ್ತಿ ಹಾಕಿಕೊಡುವ ಹಾಗೂ ಜನರ ತೆರಿಗೆ ಹಣದ ಅಪಬಳಕೆಯ ಕ್ರಮವಾಗಿದೆ; ಓಲೈಕೆ ರಾಜಕಾರಣ ಮಿತಿ ಮೀರಿರುವುದರ ಫಲಶ್ರುತಿಯಾಗಿದೆ. ಈ ಹಿಂದೆ ನಿಗಮ-ಮಂಡಳಿಗಳ ಅಧ್ಯಕ್ಷರಾಗಿ ನೇಮಕಗೊಂಡಿದ್ದ 25ಕ್ಕೂ ಹೆಚ್ಚು ಶಾಸಕರು, ಪ್ರಾಧಿಕಾರ, ನಿಗಮಗಳ ಅಧ್ಯಕ್ಷರೂ ಸೇರಿದಂತೆ ಕೆಲವರಿಗೆ ಸಂಪುಟ ದರ್ಜೆಯ ಸ್ಥಾನ ನೀಡಲಾಗಿತ್ತು. ಸಚಿವರೂ ಸೇರಿ, ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಸಚಿವ ದರ್ಜೆಯ ಸೌಲಭ್ಯ ಪಡೆಯುವವರ ಸಂಖ್ಯೆ 76ರಷ್ಟಿತ್ತು. ಹೊಸ ಆದೇಶದ ಬಳಿಕ ಈ ಸಂಖ್ಯೆ 120 ಅನ್ನು ದಾಟಿದೆ. ಸಚಿವ ಶ್ರೇಣಿಯ ಸೌಲಭ್ಯಕ್ಕಾಗಿ ಪ್ರತಿಯೊಬ್ಬರಿಗೆ ತಿಂಗಳಿಗೆ ಸರಿಸುಮಾರು ₹10 ಲಕ್ಷವನ್ನು ಬೊಕ್ಕಸದಿಂದ ಭರಿಸಲಾಗುತ್ತಿದೆ. ಈ ಲೆಕ್ಕದಂತೆ ವರ್ಷಕ್ಕೆ ಅಂದಾಜು ₹144 ಕೋಟಿಗೂ ಹೆಚ್ಚು ಮೊತ್ತ ವ್ಯಯವಾಗುತ್ತಿದೆ. ಶಾಸಕರನ್ನು ತೃಪ್ತಿಪಡಿಸಲು ಮೊದಲು ಬೇಕಾಬಿಟ್ಟಿಯಾಗಿ ಸಚಿವ ಸ್ಥಾನ ನೀಡಲಾಗುತ್ತಿತ್ತು. 'ಜಂಬೋ' ಸಚಿವ ಸಂಪುಟವು ಬೊಕ್ಕಸಕ್ಕೆ ಹೊರೆಯಾಗುವುದನ್ನು ತಪ್ಪಿಸಲು, ಆಯಾ ವಿಧಾನಸಭೆಯ ಸದಸ್ಯರ ಸಂಖ್ಯಾಬಲಕ್ಕೆ ಅನುಗುಣವಾಗಿ ಸಚಿವ ಸಂಪುಟಕ್ಕೆ ಮಿತಿ ಹಾಕಲಾಯಿತು. ಕರ್ನಾಟಕದಲ್ಲಿ ಮುಖ್ಯಮಂತ್ರಿಯೂ ಸೇರಿ 34 ಮಂದಿಗೆ ಮಾತ್ರ ಸಚಿವ ಸ್ಥಾನ ನೀಡುವ ಅವಕಾಶ ಇದೆ.

ನಿಗಮ, ಮಂಡಳಿ, ಪ್ರಾಧಿಕಾರಗಳ ಅಧ್ಯಕ್ಷರಿಗೆ ಸಚಿವ ಸ್ಥಾನ ನೀಡಿರುವ ಸರ್ಕಾರದ ನಿರ್ಧಾರ ಜನರ ತೆರಿಗೆ ಹಣದ ಅಪಬಳಕೆ ಹಾಗೂ ಓಲೈಕೆ ರಾಜಕಾರಣದ ಫಲಶ್ರುತಿಯಾಗಿದೆ.

ಸಚಿವ ಸ್ಥಾನ ಹಂಚಿಕೆಯಲ್ಲಿ ಸಾಮಾಜಿಕ ಹಾಗೂ ಪ್ರಾದೇಶಿಕ ನ್ಯಾಯ ನಿರ್ಣಾಯಕವಾಗುವ ಬದಲು ಜಾತಿ, ಹಣಬಲವೇ ಪ್ರಧಾನವಾಗಿರುವುದು ರಹಸ್ಯವೇನಲ್ಲ. ಸಚಿವ ಸ್ಥಾನ ಸಿಗದೇ ಸಿಟ್ಟಿಗೇಳುವ ಶಾಸಕರನ್ನು ತೃಪ್ತಿಪಡಿಸಲು ಆಯಾ ಕಾಲದ ಸರ್ಕಾರಗಳು ಒಳದಾರಿಗಳನ್ನು ಹಿಡಿದವು. ನಿಗಮ-ಮಂಡಳಿಗಳ ಅಧ್ಯಕ್ಷರನ್ನಾಗಿ ನೇಮಿಸಿ, ಅವರಿಗೆ ಸಚಿವ ಶ್ರೇಣಿಯ ಎಲ್ಲ ಸೌಲಭ್ಯಗಳು ದಕ್ಕುವಂತೆ ಮಾಡುವುದು ಕೂಡ ಅಡ್ಡಮಾರ್ಗಗಳಲ್ಲೊಂದು. ಸಚಿವರು ಮಾತ್ರವಲ್ಲದೆ, ಕಾರ್ಯಕರ್ತರನ್ನು ಸಮಾಧಾನಪಡಿಸಲು ನಿಗಮ, ಮಂಡಳಿ, ಪ್ರಾಧಿಕಾರಗಳ ಅಧ್ಯಕ್ಷರಿಗೂ ರಾಜ್ಯ ಸಚಿವ ಸ್ಥಾನ ನೀಡುವ ಕೆಟ್ಟ ಪರಂಪರೆಯೂ ಸೃಷ್ಟಿಯಾಯಿತು. ಕಾಂಗ್ರೆಸ್ ನೇತೃತ್ವದ ಸರ್ಕಾರ ಜಾರಿಗೊಳಿಸಿದ ಐದು 'ಗ್ಯಾರಂಟಿ'ಗಳ ಅನುಷ್ಠಾನದ ಮೇಲುಸ್ತುವಾರಿಗಾಗಿ ಮತ್ತೊಂದು ಪ್ರಾಧಿಕಾರ ಸೃಜಿಸಿ ಅದಕ್ಕೆ ಅಧ್ಯಕ್ಷ-ಉಪಾಧ್ಯಕ್ಷರನ್ನು ನೇಮಕ ಮಾಡಲಾಯಿತು. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲೂ ಸಮಿತಿ ರಚಿಸಿ, ಅವರಿಗೆ ಗೌರವಧನ ಕೊಡುವ ಹೊಸ ಪರಿಪಾಟವನ್ನೂ ಆರಂಭಿಸಲಾಯಿತು. ಕಾರ್ಯಕರ್ತರನ್ನು ಹಿಡಿದಿಟ್ಟುಕೊಳ್ಳಲು ಹೊಸ ತಂತ್ರಗಾರಿಕೆಯನ್ನು ಕಾಂಗ್ರೆಸ್ ಆರಂಭಿಸಿತು. ಎಲ್ಲ ಮಾದರಿಯ ಹೊಸ ಹುದ್ದೆಗಳು ಬೊಕ್ಕಸಕ್ಕೆ ಅನಗತ್ಯ ಹೊರೆ ಎಂಬುದು ನಿರ್ವಿವಾದ.

ಹದಿನೇಳನೇ ಬಾರಿ ಆಯವ್ಯಯ ಮಂಡಿಸಲು ತಯಾರಿ ನಡೆಸುತ್ತಿರುವ ಸಿದ್ದರಾಮಯ್ಯ ಅವರು, ಹಿಂದೆಲ್ಲ ಹಣಕಾಸು ಖಾತೆ ಹಾಗೂ ಮುಖ್ಯಮಂತ್ರಿಯಾಗಿ ಈ ಖಾತೆಯನ್ನು ನಿಭಾಯಿಸಿದಾಗ ಪೈಸೆ-ಪೈಸೆ ವೆಚ್ಚದ ಮೇಲೂ ನಿಗಾ ಇಡುತ್ತಿದ್ದರು. ಸಾರ್ವಜನಿಕರಿಂದ ತೆರಿಗೆ ರೂಪದಲ್ಲಿ ನೇರ-ಪರೋಕ್ಷ ಸಂಗ್ರಹವಾಗುವ ಸಂಪನ್ಮೂಲವನ್ನು ವ್ಯಯಿಸುವಾಗ ವಿವೇಚನೆ, ವಿವೇಕವನ್ನು ಬಳಸುತ್ತಿದ್ದರು. ಈಗಲೂ ಹಣಕಾಸು ಖಾತೆ ಅವರ ಬಳಿಯೇ ಇದೆ. ಸಾರ್ವಜನಿಕ ಹಣವನ್ನು ಬಳಸುವಲ್ಲಿ ಹಿಂದಿನ ಕಾಠಿಣ್ಯವನ್ನು ಬಿಟ್ಟಿರುವ ಅವರು ಈಗ ಧಾರಾಳಿಯಾಗಿದ್ದಾರೆ. ಹಿಂದಿನ ಮತ್ತು ಇಂದಿನ ಅವಧಿಯಲ್ಲಿ ಬದಲಾಗಿರುವ ರಾಜಕೀಯವೂ ಇದಕ್ಕೆ ಕಾರಣ. ಮೊದಲ ಅವಧಿಯಲ್ಲಿ ಪ್ರಶ್ನಾತೀತ ನಾಯಕರಾಗಿದ್ದ ಸಿದ್ದರಾಮಯ್ಯ ಅವರ ದಾರಿ ಈಗ ಅಷ್ಟು ಸಲೀಸಾಗಿಲ್ಲ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಮ್ಮನ್ನು ಬೆಂಬಲಿಸುವ ಶಾಸಕರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲು ಶತಾಯಗತಾಯ ಯತ್ನಿಸುತ್ತಲೇ ಇದ್ದಾರೆ. ಈ ಕಾರಣಕ್ಕಾಗಿ ಸಿದ್ದರಾಮಯ್ಯ ಅವರು ತಮ್ಮಿಂದ ದೂರವಾಗದಂತೆ ಶಾಸಕರನ್ನು ಓಲೈಸಿಕೊಂಡು, ಅಗತ್ಯ ಸಂಖ್ಯಾಬಲವನ್ನು ಹಿಡಿತದಲ್ಲಿಟ್ಟುಕೊಳ್ಳುವ ಅನಿವಾರ್ಯಕ್ಕೆ ಸಿಲುಕಿದ್ದಾರೆ. ಇದೇ ಕಾರಣಕ್ಕಾಗಿಯೇ ಶಾಸಕರಿಗೆ ಸಂಪುಟ ದರ್ಜೆ ಹಾಗೂ ನಿಗಮ-ಮಂಡಳಿಗಳ ಅಧ್ಯಕ್ಷರಾಗಿರುವ ಕಾರ್ಯಕರ್ತರಿಗೆ ರಾಜ್ಯ ಸಚಿವರ ಸೌಲಭ್ಯ ಒದಗಿಸಿದ್ದಾರೆ. ಸಂಪುಟದ ಸಚಿವರಿಗೆ ಸೌಲಭ್ಯ ನೀಡಲು ಎಲ್ಲ ಸೌಲಭ್ಯ ಕಲ್ಪಿಸಲು ಸಾಂವಿಧಾನಿಕವಾಗಿ ಅವಕಾಶ ಇದೆ. ಅದರ ಹೊರತಾಗಿ, ಯಾರನ್ನೋ ಓಲೈಸಲು ಹೀಗೆ ಸಚಿವ ಸ್ಥಾನದ ಸೌಲಭ್ಯ ನೀಡುವುದು, ಅದನ್ನು ವಿವೇಚನಾರಹಿತವಾಗಿ ಬೇಕಾದವರಿಗೆಲ್ಲ ವಿಸ್ತರಿಸುತ್ತಾ ಹೋಗುವುದು ಸರಿಯಾದ ಕ್ರಮವಲ್ಲ. ಅಭಿವೃದ್ಧಿ ಕಾರ್ಯಕ್ರಮಗಳಿಗೆ ಬಳಸಬೇಕಾದ ಸಾರ್ವಜನಿಕರ ಹಣವನ್ನು ಹೀಗೆ ದುಂದುವೆಚ್ಚ ಮಾಡುವುದು ಅರ್ಥವ್ಯವಸ್ಥೆಗೂ ಮಾರಕ. ಇಂತಹ ನಡೆಗಳಿಗೆ ಕಡಿವಾಣ ಹಾಕಲಿ.

ಚಾಟಿ

ಆಯ್ಕೆ ಎಲ್ಲಿದೆ?

ಮಂಡಿಸುವ ಖಂಡಿಸುವ ದಂಡಿಸುವ ಅಧಿಕಾರ ಹುಟ್ಟಿನಿಂದಲೇ ಗಂಡಿಗೆ ದತ್ತವಾಗಿದೆಯೆ? ಅವರಿಗದು ದೈವಿಕ ಕೊಡುಗೆಯೆ? ಜಗತ್ತಿನಲ್ಲಿ ಹೆಣ್ಣು ಜೀವಕ್ಕೆ ಯಾವುದೇ ರೀತಿಯಲ್ಲಿ ಅನ್ಯಾಯ, ಅವಮಾನ ಆಗುತ್ತಿರುವುದಕ್ಕೆ ಈ ಮನಃಸ್ಥಿತಿಯೇ ಕಾರಣವಲ್ಲವೆ?

ಸವಿತಾ ನಾಗಭೂಷಣ, ಕವಯಿತ್ರಿ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಕೇಂದ್ರ ಸರ್ಕಾರವು ಅಮೆರಿಕದೊಂದಿಗೆ ಮಾಡಿಕೊಂಡಿರುವ ವ್ಯಾಪಾರ ಒಪ್ಪಂದವು ದೇಶದ ರೈತರ ಹಿತಾಸಕ್ತಿಯನ್ನು ಸಂಪೂರ್ಣವಾಗಿ ಕಡೆಗಣಿಸಿದೆ. ಅದರಲ್ಲೂ ಸಣ್ಣರೈತರ ಬದುಕನ್ನು ಮೂಲೆಗುಂಪು ಮಾಡಲಿದೆ.

ರಾಹುಲ್ ಗಾಂಧಿ, ಲೋಕಸಭಾ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಸೋಮವಾರ, 12-2-2001

- **ನಾಸ್ಡಾಕ್ ಕಚೇರಿ ಇಂದು ಬೆಂಗಳೂರಿನಲ್ಲಿ ಆರಂಭ**

ಬೆಂಗಳೂರು, ಫೆ. 11– ಬಹಳ ದಿನಗಳಿಂದ ನಿರೀಕ್ಷಿಸಲಾಗಿದ್ದ ಅಮೆರಿಕದ ನಾಸ್ಡಾಕ್ ಷೇರುಪೇಟೆಯ ಭಾರತೀಯ ಕಚೇರಿ ನಾಳೆ ಇಲ್ಲಿ ಆರಂಭವಾಗಲಿದೆ.

ಷೇರುಪೇಟೆಯಲ್ಲಿ ವಿಶ್ವದಲ್ಲೇ ಪ್ರಮುಖ ಸ್ಥಾನ ಹೊಂದಿರುವ ನಾಸ್ಡಾಕ್ ಕಚೇರಿ ಬೆಂಗಳೂರಿನಲ್ಲಿ ಆರಂಭವಾಗುತ್ತಿರುವುದು ರಾಷ್ಟ್ರದ ಗಮನ ಸೆಳೆದಿದೆ.

'ಭಾರತೀಯ ಕಂಪನಿಗಳು ಇನ್ನೂ ಹತ್ತು ವರ್ಷಗಳ ಕಾಲ ಷೇರುಪೇಟೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದನ್ನು ನಾಸ್ಡಾಕ್ ನಿರೀಕ್ಷಿಸುತ್ತಿದೆ' ಎಂದು ಷೇರು ಮಾರುಕಟ್ಟೆಯ ಉಪಾಧ್ಯಕ್ಷ ಆಲ್‌ಫ್ರೆಡ್ ಬರ್ಕ್‌ಲಿ (ಜ್ಯೂನಿಯರ್–3) ಅವರು ಇಂದು ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

- **ಉಗ್ರಗಾಮಿಗಳ ದಾಳಿಗೆ ಬೀರೂರಿನ ಯೋಧ ಬಲಿ**

ಚಿಕ್ಕಮಗಳೂರು, ಫೆ. 11– ಮಣಿಪುರದಲ್ಲಿ ಬೋಡೋ ಉಗ್ರಗಾಮಿಗಳ ಗುಂಡಿಗೆ ಬಲಿಯಾದ ಬೀರೂರು ಬಳಿಯ ಬೋಕಿಕೆರೆಯ ವೀರಯೋಧ ಎಚ್. ಸಣ್ಣಗೋವಿಂದಪ್ಪ (36) ಅವರ ಅಂತ್ಯಕ್ರಿಯೆ ಸಕಲ ಗೌರವಗಳೊಂದಿಗೆ ಶನಿವಾರ ನಡೆಯಿತು.

ಗಡಿಭದ್ರತಾ ಪಡೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಅವರು, ಕಳೆದ ಗುರುವಾರ ಮಣಿಪುರದ ಚಂದ್ರಪುರ ಜಿಲ್ಲೆಯಲ್ಲಿ ಯೋಧರನ್ನು ಗಡಿರಕ್ಷಣಾ ಕಾರ್ಯಕ್ಕೆ ಬಿಟ್ಟುಬರಲು ಹೋಗಿದ್ದಾಗ ಉಗ್ರರ ಗುಂಡಿನ ದಾಳಿಗೆ ಸಿಲುಕಿ ಜೀವತೆತ್ತರು.

75 ವರ್ಷಗಳ ಹಿಂದೆ

ಸೋಮವಾರ, 12-2-1951

- **ಮೂರು ಜಿಲ್ಲೆಗಳಲ್ಲಿ ಕಾಲರಾ: 400 ಮಂದಿ ಮರಣ**

ಬೆಂಗಳೂರು, ಫೆ. 11– ಕಳೆದ 10 ದಿನಗಳಲ್ಲಿ ಬೆಂಗಳೂರು, ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ 700 ಮಂದಿಗೆ ಕಾಲರಾ ರೋಗ ತಗಲಿ, 400 ಮಂದಿ ಮೃತಪಟ್ಟಿದ್ದಾರೆ.

ಇಲ್ಲಿಯವರೆಗೂ ಒಂದು ಲಕ್ಷಕ್ಕಿಂತ ಹೆಚ್ಚು ಜನರಿಗೆ ರೋಗ ನಿರೋಧಕ ಚುಚ್ಚುಮದ್ದು ಹಾಕಲಾಗಿದೆ.

ಮೈಸೂರು ನಗರದಲ್ಲಿ ಸ್ವಲ್ಪ ರೋಗದ ಸೋಂಕು ಇದೆ. ಕಾಲರಾ ರೋಗ ಹರಡಿರುವ 120 ಹಳ್ಳಿಗಳ ಪ್ರದೇಶದಲ್ಲಿ ಮನೆಗಳಿಗೂ, ಬಾವಿಗಳಿಗೂ ಕ್ರಿಮಿನಾಶಕ ಔಷಧಿಗಳನ್ನು ಹಾಕಿರುವುದೇ ಅಲ್ಲದೇ ತುಂಬಾ ಸೋಂಕಿರುವ ಹಳ್ಳಿಗಳನ್ನು ಪ್ರತ್ಯೇಕಿಸಲಾಗಿದೆ.

ನಮ್ಮ ಹೊಟ್ಟೆಯಲ್ಲಿ ಅಮೆರಿಕ!



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಅಮೆರಿಕ ತನ್ನ ಗೋದಾಮುಭರ್ತಿ ಕುಲಾಂತರಿ ಫಸಲನ್ನು ಭಾರತದತ್ತ ತಳ್ಳಲು ಅವಸರ ಮಾಡುತ್ತಿದೆ. ಯುರೋಪ್, ಜಪಾನ್, ದಕ್ಷಿಣ ಕೊರಿಯಾ ದೇಶಗಳಲ್ಲಿ ಗ್ರಾಹಕರೇ ಅಮೆರಿಕದ ಕುಲಾಂತರಿಗೆ ಗಟ್ಟಿ ತಡೆಗೋಡೆ ಆಗಿದ್ದಾರೆ. ನಮ್ಮಲ್ಲಿನ ಗ್ರಾಹಕರಿಗೆ ಈ ಕುರಿತು ಚಿಂತಿಸಲು ಪುರುಸೊತ್ತಿಲ್ಲ.

ಹೆಸರಾಂತ ಸಸ್ಯವಿಜ್ಞಾನಿ ಬಿ.ಜಿ.ಎಲ್. ಸ್ವಾಮಿ ಅವರು ಬರೆದ 'ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕ' ಗ್ರಂಥದ ಬಗ್ಗೆ ಗೊತ್ತಿದೆ ತಾನೆ? ಏಷ್ಯಾ ಖಂಡಕ್ಕೆ ದಕ್ಷಿಣ ಅಮೆರಿಕದಿಂದ ಬಂದ ಸಸ್ಯಗಳನ್ನು ನೆನಪಿಸಿಕೊಳ್ಳಿ. ಟೊಮೆಟೊ, ಬಟಾಟೆ, ಹುಣಿಸೆ, ಹಸಿಮೆಣಸು, ಸೀಬೆ, ಪಪಾಯಾ, ಅನಾನಸ್, ಸೀತಾಫಲ, ಶೇಂಗಾ, ತಂಬಾಕು, ರಬ್ಬರ್... ಈ ದೀರ್ಘ ಪಟ್ಟಿ ನೋಡಿದರೆ 16ನೇ ಶತಮಾನಕ್ಕೂ ಮೊದಲು ಭಾರತೀಯರ ಊಟ-ತೋಟ ಅದೆಷ್ಟು ಮಂಕಾಗಿತ್ತೊ ಎಂದು ನಮಗೇ ಅಚ್ಚರಿಯಾಗುತ್ತದೆ.

ಕೊಲಂಬಸ್ ಅಮೆರಿಕವನ್ನು ಪತ್ತೆ ಹಚ್ಚಿದ ನಂತರದ ಎರಡು ಶತಮಾನಗಳಲ್ಲಿ ಅತ್ತಿಂದ ಇತ್ತ, ಇತ್ತಿಂದತ್ತ ಸಸ್ಯ, ಪ್ರಾಣಿ, ಪಕ್ಷಿ (ಮತ್ತು ರೋಗಾಣು)ಗಳ ಭಾರೀ ವಿನಿಮಯ ನಡೆಯಿತು. ಅದು 'ಕೊಲಂಬಿಯನ್ ಮಹಾ ವಿನಿಮಯ' ಎಂತಲೇ ಹೆಸರು ಪಡೆದಿದೆ. ಅಲ್ಲಿಂದ ಬಂದಷ್ಟೇ ವೈವಿಧ್ಯಮಯ ಜೀವಿಗಳು ಇಲ್ಲಿಂದ ಅಮೆರಿಕ ಖಂಡಕ್ಕೆ ಹೋದವು. ಅವುಗಳಲ್ಲಿ ಕಬ್ಬು, ಭತ್ತ, ಗೋಧಿ, ಕಾಫಿ, ಬನಾನಾ, ಕಿತ್ತಳೆ, ಸೇಬು, ದ್ರಾಕ್ಷಿ, ಸೋಯಾ, ಈರುಳ್ಳಿ ಇತ್ಯಾದಿಗಳ ಸಂಗಡ ಕುದುರೆ, ದನಕರು, ಹಂದಿ, ಕೋಳಿ, ಕುರಿ-ಮೇಕೆಗಳೂ ಹೋದವು. ಜೊತೆಗೆ ಸಿಡುಬು, ಮಲೇರಿಯಾ ಕೂಡ.

ಕಳೆದ ಏಳೆಂಟು ದಶಕಗಳಲ್ಲಿ ಪೂರ್ವ-ಪಶ್ಚಿಮ ದೇಶಗಳ ನಡುವೆ ಏನೆಲ್ಲ ವಿನಿಮಯ ಆಗುತ್ತಿವೆ ಎಂದು ನೋಡಲು ಹೋದರೆ ದೊಡ್ಡ ಮಿಸಳ ಭಾಜಿಯೇ ಕಾಣಬಹುದು. ಅತ್ತಿಂದ ಇತ್ತ ಹೈಬ್ರಿಡ್ ಸಸ್ಯಗಳಿಂದ ಹಿಡಿದು ಕೃಷಿವಿಷಗಳವರೆಗೆ; ಕೆಂಟುಕಿ ಪೀಟ್ಸಾದಿಂದ ಏಡ್ಸ್ ರೋಗಾಣುಗಳವರೆಗೆ ಬಂದರೆ ಇತ್ತಿಂದ ಅತ್ತ ಅಧ್ಯಾತ್ಮ, ಆಯುರ್ವೇದ, ಅರಿಸಿನ, ತುಳಸಿ, ಯೋಗ, ಬೇವಿನತೈಲದ ಮಸಾಜ್‌ವರೆಗೆ ಏನೆಲ್ಲ ಸರಂಜಾಮು ಹೋಗುತ್ತಿವೆ. ಅವೆಲ್ಲ ಒತ್ತಟ್ಟಿಗಿರಲಿ.

ಈಗ ನೋಡಿ: ಟ್ರಂಪ್ ಯಜಮಾನಿಕೆಯಲ್ಲಿ ಅಮೆರಿಕದ ಸಂಯುಕ್ತ ಸಂಸ್ಥಾನದಿಂದ (ಯುಎಸ್‌ನಿಂದ) ನಮ್ಮ ದೇಶಕ್ಕೆ ಹಡಗುಭರ್ತಿ ಕುಲಾಂತರಿ ಸೋಯಾ, ಮೆಕ್ಕೆಜೋಳ, ಕುಸುಬೆ ಎಣ್ಣೆ ಬರಲಿವೆ. ಖಾದ್ಯ ಪದಾರ್ಥಗಳಲ್ಲಿ ಕುಲಾಂತರಿ ಜೀವಿಗಳು ಬೇಡವೇ ಬೇಡವೆಂದು ಇದುವರೆಗೆ ಬಿಗಿಪಟ್ಟು ಹಿಡಿದ ಭಾರತೀಯರಿಗೆ ಇದು ನುಂಗಲಾರದ ತುತ್ತಾಗಲಿದೆ. ಕೇಂದ್ರ ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ಅವರಿಗಂತೂ ಇದು ಬಿಸಿತುಪ್ಪವಾಗಿದೆ. ಒಂದೆಡೆ ಟ್ರಂಪ್ ಸರ್ಕಾರದ ತುಷ್ಟೀಕರಣಕ್ಕೆಂದು ಕುಲಾಂತರಿ ಉತ್ಪನ್ನಗಳ ಆಮದಿಗೆ ಸ್ವಾಗತ ಕೋರಬೇಕಾದ ಒತ್ತಡ; ಇನ್ನೊಂದೆಡೆ, ಕುಲಾಂತರಿ ಬೇಡವೆಂಬ ನಮ್ಮದೇ ರೈತ ಸಮುದಾಯದ ಒತ್ತಡ. ಉಗುಳಲಾಗದ ತುಪ್ಪ ಜಾಸ್ತಿ ಬಿಸಿಯಾಗಿರಲು ಕಾರಣ ಏನೆಂದರೆ, ಸಂಘ ಪರಿವಾರಕ್ಕೆ ಸೇರಿದ 'ಭಾರತೀಯ ಕಿಸಾನ್ ಸಂಘ' ಕೂಡ ಕುಲಾಂತರಿ ಬರಕೂಡದೆಂದು ದನಿಯೆತ್ತಿದೆ. ಅಂತೂ ರೈತರ ಖುಷಿಗೆಂದು ಮೊನ್ನೆ ಶನಿವಾರ ಅವರು ಪತ್ರಿಕಾಗೋಷ್ಠಿ ಕರೆದು, 'ಕುಲಾಂತರಿ ದ್ರವ್ಯಗಳನ್ನು ಸುತರಾಂ ಆಮದು ಮಾಡಿಕೊಳ್ಳುವುದಿಲ್ಲ' ಎಂದು ಘೋಷಿಸಿದರು. ನಮ್ಮ ದೇಶದ ರೈತರ ಹಿತಾಸಕ್ತಿಗಳಿಗೆ ಧಕ್ಕೆ ತರುವ ಯಾವುದಕ್ಕೂ ಪ್ರವೇಶ ಇರುವುದಿಲ್ಲ ಎಂದರು. ಅಮೆರಿಕದಲ್ಲಿ ಎಥೆನಾಲ್ ಮದ್ಯಸಾರವನ್ನು ಬೇರ್ಪಡಿಸಿದ ನಂತರ ಉಳಿಯುವ ಕುಲಾಂತರಿ ಧಾನ್ಯಗಳನ್ನು (ಡಿಡಿಜಿಗಳನ್ನು) ಪಶು ಆಹಾರವಾಗಿ ಆಮದು ಮಾಡಿಕೊಳ್ಳುತ್ತೇವೆ, ಅದರಲ್ಲೇನೂ ಕುಲಾಂತರಿ ಅಂಶ ಇರುವುದಿಲ್ಲ ಎಂತಲೂ ಹೇಳಿದರು. ಅವರ ಮಾತುಗಳು ಅಡ್ಡಗೋಡೆಯ ಮೇಲಿನ ದೀಪವೊ ಅಥವಾ ಬೀಸುವ ದೊಣ್ಣೆಯಿಂದ ಬಚಾವಾಗುವ ಡಕ್ಕಿಂಗೊ ಎಂಬ ಬಗ್ಗೆ ಈಗ ಚರ್ಚೆ ನಡೆಯುತ್ತಿದೆ.

ಕುಲಾಂತರಿ (ತಳಿ ತಿರುಚಿದ ಅಥವಾ ಜೆನೆಟಿಕಲಿ ಮಾಡಿಫೈಡ್ – ಜಿಎಂ/ಬಿಟಿ) ತಂತ್ರಜ್ಞಾನ ಒಳ್ಳೆಯದೋ ಕೆಟ್ಟದ್ದೋ ಎಂಬ ಬಗ್ಗೆ ವಿಜ್ಞಾನಿಗಳ ಸಮುದಾಯದಲ್ಲೂ ಒಮ್ಮತವಿಲ್ಲ; ರಾಷ್ಟ್ರ-ರಾಷ್ಟ್ರಗಳಲ್ಲೂ ಒಮ್ಮತವಿಲ್ಲ. ಸಸ್ಯದ ವರ್ಣತಂತುವಿನಲ್ಲಿ ಪರಜೀವಿಯೊಂದರ (ಏಕಾಣುಜೀವಿಯ) ಡಿಎನ್‌ಎಯನ್ನೂ ಸೇರಿಸಿದ್ದರಿಂದ ಅದು ಮನುಷ್ಯರ ಆರೋಗ್ಯಕ್ಕೆ ಅಪಾಯಕಾರಿ ಆಗಬಹುದು ಎಂದು ಈ ಶತಮಾನದ ಆರಂಭದಲ್ಲಿ ಕೆಲವು ವಿಜ್ಞಾನಿಗಳು ಹೇಳಿದ್ದರಿಂದ ಯುರೋಪಿಯನ್ ರಾಷ್ಟ್ರಗಳ ಜೊತೆಗೆ, ರಷ್ಯಾ, ಚೀನಾ, ಜಪಾನ್, ದಕ್ಷಿಣ ಕೊರಿಯಾ ದೇಶಗಳೆಲ್ಲ ಅಂಥ ತಂತ್ರಜ್ಞಾನವನ್ನು ನಿಷೇಧಿಸಿದವು. ಅದಕ್ಕೆ ತದ್ವಿರುದ್ಧವಾಗಿ, ಕುಲಾಂತರಿ ಅಪಾಯಕಾರಿ ಅಲ್ಲವೆಂದು ಅಮೆರಿಕ, ಕೆನಡಾ, ಬ್ರೆಝಿಲ್ ದೇಶಗಳು ಸೋಯಾ, ಮೆಕ್ಕೆಜೋಳ, ಟೊಮೆಟೊ, ಕಬ್ಬು ಮುಂತಾದವುಗಳ ಕುಲಾಂತರಿ ತಳಿಗಳನ್ನು ದಂಡಿಯಾಗಿ ಬೆಳೆಯುತ್ತಿವೆ. ಈ ಮಧ್ಯೆ ಭಾರತ ಹತ್ತಿಯ ವಿಷಯದಲ್ಲಿ ಮಾತ್ರ ಕುಲಾಂತರಿ ತಳಿಗಳನ್ನು ಬೆಳೆಯಲು ಅನುಮತಿ ನೀಡಿದೆ. ಖಾದ್ಯ ಪದಾರ್ಥಗಳಲ್ಲಿ ಬದನೆಗೆ ಏಕಾಣುಜೀವಿಯನ್ನು ತೂರಿಸುವ ಮೊದಲ ಪ್ರಯತ್ನ ನಮ್ಮಲ್ಲಿ ನಡೆದಾಗ ದೇಶದಾದ್ಯಂತ ರೈತ ಸಮುದಾಯ ವಿರೋಧಿಸಿತ್ತು. ಬಹುರಾಷ್ಟ್ರೀಯ ಬೀಜ ಕಂಪನಿಗಳು ನಾನಾ ಬಗೆಯ ತರಕಾರಿ, ದವಸ ಧಾನ್ಯಗಳ ಕುಲಾಂತರಿ ತಳಿಗಳನ್ನು ಭಾರತದಲ್ಲಿ ನುಗ್ಗಿಸಲು ಯತ್ನಿಸಿ ವಿಫಲವಾಗಿವೆ. ವಿದೇಶಿ ಕಂಪನಿಯ ಬದಲು ಭಾರತೀಯ ವಿಜ್ಞಾನಿಗಳೇ (ವಿದೇಶಿ ನೆರವಿನಿಂದ) ರೂಪಿಸಿದ ಕುಲಾಂತರಿ ಸಾಸಿವೆಯನ್ನೂ ಬಹಿರಂಗ ಬಿತ್ತನೆಗೆ ಬಿಡಲು ಕೇಂದ್ರ ಸರ್ಕಾರ ಧೈರ್ಯ ಮಾಡುತ್ತಿಲ್ಲ.

ಕುಲಾಂತರಿ ತಳಿ ಒಳ್ಳೆಯದೊ ಕೆಟ್ಟದ್ದೊ ಎಂಬುದನ್ನು ವಿಜ್ಞಾನಿಗಳು ಖಚಿತವಾಗಿ ಹೇಳುತ್ತಿಲ್ಲ ಏಕೆ? ಕಾರಣ ಇಷ್ಟೆ: ಕುಲಾಂತರಿ ಬೀಜಗಳ ಪೇಟೆಂಟ್ ಪಡೆದ ಬಹುರಾಷ್ಟ್ರೀಯ ಕಂಪನಿಗಳು ಅಂಥ ಬೀಜಗಳನ್ನು ಪರೀಕ್ಷೆಗೆ ಒಡ್ಡಲು ಅನ್ಯ ವಿಜ್ಞಾನಿಗಳಿಗೆ ಅನುಮತಿ ನೀಡುವುದಿಲ್ಲ. ಪರೀಕ್ಷೆ ಮಾಡಲು ಹೋದರೆ ನ್ಯಾಯಾಲಯಕ್ಕೆ ಅಲೆದಾಟ ತಪ್ಪಿದ್ದಲ್ಲ. ಬೀಜ ಕಂಪನಿಗಳ ಈ ಬಗೆಯ ಬಿಗಿಮುಷ್ಟಿಯ ವಿರುದ್ಧ 2013ರಲ್ಲಿ ಅಮೆರಿಕದಲ್ಲೇ ಕೃಷಿ ವಿಜ್ಞಾನಿಗಳ ತಂಡವೊಂದು ಅಲ್ಲಿನ ಪರಿಸರ ಸಂರಕ್ಷಣಾ ನಿಗಮಕ್ಕೆ ದೂರು ನೀಡಿದ್ದರೂ ಪ್ರಯೋಜನ ಆಗಲಿಲ್ಲ. ಭಾರತೀಯ ವಿಜ್ಞಾನಿಗಳಂತೂ ಈ ವಿಷಯದಲ್ಲಿ ನಗೆಪಾಟಲಿಗೇ ಸಿಲುಕಿದ್ದರು. 'ಕುಲಾಂತರಿ ಫಸಲು ಆರೋಗ್ಯಕ್ಕೆ ಅಪಾಯಕಾರಿ ಹೌದೊ ಅಲ್ಲವೊ?' ಎಂದು ಅಂದಿನ ಪರಿಸರ ಸಚಿವ ಜಯರಾಂ ರಮೇಶ್ ನಮ್ಮ ವಿಜ್ಞಾನಿಗಳನ್ನು ಅದೇ ವರ್ಷ ಕೇಳಿದ್ದರು. 'ಅಪಾಯವೇನೂ ಇಲ್ಲ, ಅದು ಸುರಕ್ಷಿತ' ಎಂದು ನಮ್ಮ ಐದು ಮಹೋನ್ನತ ವಿಜ್ಞಾನ ಸಂಸ್ಥೆಗಳು ನೀಡಿದ ಜಂಟಿ ವರದಿಯಲ್ಲಿ ಅಂದಿನ ಮೊನ್ಸಾಂಟೊ ಕಂಪನಿಯ ವರದಿಯನ್ನೇ ಪುಟಗಟ್ಟಲೆ ನಕಲು ಮಾಡಿದ್ದು ಗೊತ್ತಾಗಿತ್ತು!

ಕಳೆದ 25 ವರ್ಷಗಳಿಂದ ಅಮೆರಿಕದ ಪ್ರಜೆಗಳು 'ಜಿಎಂ' ಸಸ್ಯ ಮತ್ತು ಪ್ರಾಣಿಗಳನ್ನು (ಅಲ್ಲಿ ಸಾಲ್ಮನ್ ಮೀನುಗಳೂ ಕುಲಾಂತರಿ) ಸೇವಿಸುತ್ತಿದ್ದಾರೆ. ಅವರು ತಿಂದು ಮಿಕ್ಕುಳಿದ ಪುಷ್ಕಳ ಕುಲಾಂತರಿ ಫಸಲನ್ನು ಬೇರೆದೇಶಗಳಿಗೆ ಸಾಗಹಾಕಲು ಅಮೆರಿಕಕ್ಕೆ ಕಷ್ಟವಾಗುತ್ತಿದೆ. ಅಲ್ಲಿನ ಸರ್ಕಾರದ ಮತ್ತು ಖಾಸಗಿ ಕಂಪನಿಗಳ ಜಂಟಿ ಒತ್ತಡದಿಂದಾಗಿ ಈಗೀಗ ಕುಲಾಂತರಿ ಬೆಳೆಗಳನ್ನು ಅನೇಕ ದೇಶಗಳು ಒಳಕ್ಕೆ ಬಿಟ್ಟುಕೊಳ್ಳುತ್ತಿವೆ. ಯಾಂತ್ರೀಕೃತ ಬೇಸಾಯದಲ್ಲಿ ತೊಡಗಿದ ಕೆಲವು ದೇಶಗಳು ಮೆಲ್ಲಗೆ ಜಿಎಂ ಬೀಜಗಳ ಬಿತ್ತನೆಗೂ ತೊಡಗಿವೆ. ಯುರೋಪಿನಲ್ಲಿ ಸ್ಪೇನ್ ದೇಶ ಕುಲಾಂತರಿ ಮೆಕ್ಕೆಜೋಳವನ್ನು ಹೊಲಕ್ಕಿಳಿಸಿದೆ. ಚೀನಾ ದಂಡಿಯಾಗಿ ಕುಲಾಂತರಿ ಫಸಲನ್ನು ಬೆಳೆಸತೊಡಗಿದೆ. ನ್ಯೂಜಿಲೆಂಡ್ ಇದೀಗ ಒಪ್ಪಿಗೆ ನೀಡಿದೆ. ಇನ್ನು ಕೆಲವು ದೇಶಗಳು ಅತ್ಯಂತ ಕಟ್ಟುನಿಟ್ಟಾಗಿ ಪರೀಕ್ಷೆ ಮಾಡಿ (ಕುಲಾಂತರಿ ಅಂಶ ಶೇ 1ಕ್ಕಿಂತ ಕಡಿಮೆ ಇದ್ದರೆ ಮಾತ್ರ) ಅಮೆರಿಕದ ಪಶುಆಹಾರವನ್ನು, ಖಾದ್ಯತೈಲವನ್ನು ಆಮದು ಮಾಡಿಕೊಳ್ಳುತ್ತಿವೆ. ದೊಡ್ಡಣ್ಣನ ಒತ್ತಡಕ್ಕೆ ಮಣಿಯುವ ಸರದಿ ಈಗ ಭಾರತದ್ದು.

ಹಾಗೆಂದು ಭಾರತ ಕಟ್ಟಿಕೊಂಡಿದ್ದ ಬೇಲಿ ಅಷ್ಟೇನೂ ಸುಭದ್ರವಾಗಿರಲಿಲ್ಲ. ಹಿಂದೆಯೂ ಕುಲಾಂತರಿ ಸೋಯಾತೈಲ, ಸೆಜ್ಜೆಯಂಥ ಪಶುಆಹಾರಗಳು ಸದ್ದಿಲ್ಲದೆ ಒಳಕ್ಕೆ ಬಂದಿದ್ದವು. ಇಷ್ಟಕ್ಕೂ ನಮ್ಮದೇ ಕುಲಾಂತರಿ ಹತ್ತಿಯ ಬೀಜಗಳ ಪಶು ಆಹಾರ ಮತ್ತು ಖಾದ್ಯ ತೈಲಗಳು ಬಿಡುಬೀಸಾಗಿ ನಮ್ಮಲ್ಲಿ ಬಳಕೆಯಾಗುತ್ತಿವೆ. ನಮ್ಮ ಬಳಕೆದಾರರಾಗಲೀ ವೈದ್ಯವೃಂದವಾಗಲೀ ಆಕ್ಷೇಪ ಎತ್ತುತ್ತಿಲ್ಲವೆಂದರೆ ಕುಲಾಂತರಿ ಸೋಯಾ ಬರಲಿ, ಜೋಳ ಬರಲಿ, ರೇಪ್‌ಸೀಡ್ ತೈಲ ಬರಲಿ ದನಿ ಎದ್ದೀತು ಹೇಗೆ? ಧಾನ್ಯದಿಂದ ತೈಲ ಹಿಂಡುವಾಗ ಅದರಲ್ಲಿ ಕುಲಾಂತರಿ ತಳಿಯ ಶೇ 99ರಷ್ಟು ಪಾಲು ಡಿಎನ್‌ಎ ನಾಶವಾಗಿರುತ್ತದೆ ಎಂದು ಕಂಪನಿಯ ವಿಜ್ಞಾನಿಗಳು ಹೇಳುತ್ತಿದ್ದಾರೆ. ಅಂದಮೇಲೆ ದನಿ ಎತ್ತುವವರು ಯಾರು?

ರೈತಪರ ಸಂಘಟನೆಗಳು ದನಿ ಎತ್ತುತ್ತಿವೆ. ಕುಲಾಂತರಿ ಬೇಡವೆನ್ನಲು ಅವರಿಗೆ ಹತ್ತೊಂದು ಕಾರಣಗಳಿವೆ. ಇಂದು ತೈಲವನ್ನು ಒಳಕ್ಕೆ ಬಿಟ್ಟವರು ನಾಳೆ ಬಿಟಿ ಬೀಜ ಕಂಪನಿಗಳಿಗೂ ಬಾಗಿಲು ತೆರೆಯಬಹುದು. ಅವು ಬಂದುವೆಂದರೆ ನಮ್ಮ ಸ್ಥಳೀಯ ನಾಟಿ ತರಕಾರಿ, ಹಣ್ಣುಹಂಪಲು, ಗೆಡ್ಡೆಗೆಣಸು ಎಲ್ಲವೂ ಕಣ್ಮರೆಯಾಗಿ ಎಲ್ಲೆಡೆ ಒಂದೇ ಸ್ವಾದದ, ಏಕರೂಪ ತಳಿಗಳು ಬೆಳೆಯುತ್ತವೆ. ಈಗ ಬಿಟಿ ಹತ್ತಿ ಬಂದಿದ್ದರಿಂದ ನಾಟಿ ಹತ್ತಿಗಳೆಲ್ಲ ಬಹುತೇಕ ಕಣ್ಮರೆ ಆಗಿವೆ (ಅಮೆರಿಕ, ಕೆನಡಾದಲ್ಲಿ ನಾಟಿ ಫಸಲಿನ ನಡುವೆ ಅಲ್ಲೆಲ್ಲೋ ಗಾಳಿಯ ಮೂಲಕ ಬಿಟಿ ತಳಿಯೂ ಬಂದು ಸೇರಿದ್ದರಿಂದ ಅದಕ್ಕೆ ಪೇಟೆಂಟ್ ಶುಲ್ಕ ತೆರಬೇಕೆಂದು ಬೀಜ ಕಂಪನಿಗಳು ರೈತರ ಮೇಲೆ ಖಟ್ಲೆ ಹಾಕಿದ್ದಾರೆ). ಎಲ್ಲಕ್ಕಿಂತ ಮಿಗಿಲಾಗಿ, ಬೀಜಗಳ ಜೊತೆಗೆ ಕಳೆನಾಶಕ ದ್ರವ್ಯಗಳೂ ಲಂಗುಲಗಾಮಿಲ್ಲದೆ ಬಳಕೆಯಾಗಿ ರೈತ ಮಹಿಳೆಯರ ಉದ್ಯೋಗವನ್ನೂ ಕಸಿದು, ನಮ್ಮ ಕೆರೆ ಕೊಳ್ಳಗಳ ಜೀವಿವೈವಿಧ್ಯ ನಾಶಕ್ಕೆ ಕಾರಣವಾಗುತ್ತವೆ. ಆಯುರ್ವೇದ ಗಿಡಮೂಲಿಕೆಗಳೂ ರೋಗಗ್ರಸ್ತ ಆಗುತ್ತವೆ.

ಭಾರತ ಸರ್ಕಾರವೇನೊ ಸಾವಯವ ಕೃಷಿಗೆ ಆದ್ಯತೆ ನೀಡುವುದಾಗಿ ಹೇಳಿಕೊಳ್ಳುತ್ತಿದೆ. ಸರಿಯಾಗಿ ನಿರ್ವಹಿಸಿದರೆ ನಾವು ಸಾವಯವ ಉತ್ಪನ್ನಗಳ ಭರ್ಜರಿ ರಫ್ತುದಾರ ಆಗಲು ಸಾಧ್ಯವಿತ್ತು. ಅಮೆರಿಕದಲ್ಲೂ ಸ್ವಲ್ಪಮಟ್ಟಿಗೆ (ಶೇ 2ರಷ್ಟು) ಕುಲಾಂತರಿ ಅಲ್ಲದ ಸೋಯಾ, ಶೇಂಗಾ, ಮೆಕ್ಕೆಜೋಳ ಬೆಳೆದು ಜಪಾನ್, ದಕ್ಷಿಣ ಕೊರಿಯಾದಂಥ ದೇಶಗಳಿಗೆ ವಿಶೇಷ ದರದಲ್ಲಿ ರಫ್ತು ಮಾಡುತ್ತಿದ್ದಾರೆ. ನಮ್ಮಲ್ಲಿ ಅಂಥ ರೈತಪರ ವಿಜ್ಞಾನಕ್ಕಂತೂ ಪ್ರೋತ್ಸಾಹವಿಲ್ಲ; ಕೀಟನಾಶಕ ವಿಷಗಳ ದುರ್ಬಳಕೆ, ಅತಿಬಳಕೆಯ ನಿಯಂತ್ರಣವೂ ಕಟ್ಟುನಿಟ್ಟಾಗಿ ಆಗುತ್ತಿಲ್ಲವಾದ ಕಾರಣ ಪದೇ ಪದೇ ನಮ್ಮ ಫಸಲು ವಿದೇಶಗಳಲ್ಲಿ ತಿರಸ್ಕೃತ ಆಗುತ್ತಿದೆ.

ಈ ಮಧ್ಯೆ ಟ್ರಂಪ್ ಸಾಹೇಬರ ನಿವಾಸದಿಂದ ಭಾರೀ ಅವಸರದಲ್ಲಿ ರಫ್ತು ಪಟ್ಟಿ ಹೊರಟಿದೆ. ಎಂಥ ವಿಪರ್ಯಾಸ ನೋಡಿ: ಅಮೆರಿಕ ತನ್ನ ಹಿಂಗದ ಹಸಿವೆಯನ್ನು ನೀಗಿಸಲೆಂದು ನಮ್ಮ ಗಂಟಲಿಗೆ ಸೋಯಾ ಸುರಿಯುತ್ತಿದೆ!



ಸುಭಾಷಿತ

ನಮ್ಮ ಜ್ಞಾನವು ನಮ್ಮ ಗ್ರಹಿಕೆಯನ್ನು ಅವಲಂಬಿಸಿರುತ್ತದೆ.

–ಲಿಯೋನಾರ್ಡೋ ಡಾವಿಂಚಿ

ವಾಚಕರ ವಾಣಿ

ಹಳೆ ಪಿಂಚಣಿ ಮರುಜಾರಿಗೆ ವಿಳಂಬವೇಕೆ?

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಚುನಾವಣಾ ಪ್ರಣಾಳಿಕೆಯಲ್ಲಿ ಎನ್‌ಪಿಎಸ್ ರದ್ದತಿ ಬಗ್ಗೆ ಘೋಷಿಸಿತ್ತು. ಹಳೆ ಪಿಂಚಣಿ ವ್ಯವಸ್ಥೆಯ ಮರುಜಾರಿಗೆ ಸಂಬಂಧಿಸಿದಂತೆ ಐಎಎಸ್ ಅಧಿಕಾರಿಗಳ ಸಮಿತಿ ರಚಿಸಲಾಗಿದೆ. ಸಮಿತಿಯು ಇನ್ನೂ ಸರ್ಕಾರಕ್ಕೆ ವರದಿ ಸಲ್ಲಿಸಿಲ್ಲ. ಸರ್ಕಾರ ನೀಡಿದ್ದ ಭರವಸೆಯು ಆಶಾಗೋಪುರದಂತೆ ಕಾಣಿಸುತ್ತಿದೆಯೇ ಹೊರತು ಕೈಗೆಟಕುವಂತೆ ಕಾಣುತ್ತಿಲ್ಲ. ಈಗಾಗಲೇ, ಕೆಲವು ರಾಜ್ಯಗಳು ಹಳೆ ಪಿಂಚಣಿ ವ್ಯವಸ್ಥೆಯನ್ನು ಮರುಜಾರಿಗೊಳಿಸಿವೆ. ಇತ್ತೀಚೆಗೆ ಮಹಾರಾಷ್ಟ್ರ ಸರ್ಕಾರವು ಒಪಿಎಸ್ ಮರುಜಾರಿಗೊಳಿಸುವುದಾಗಿ ಘೋಷಿಸಿದೆ. ಸರ್ಕಾರಿ ನೌಕರರು ನಿವೃತ್ತಿ ನಂತರ ಆರ್ಥಿಕ ಭದ್ರತೆ ಇಲ್ಲದೆ ತೊಂದರೆಗೆ ಸಿಲುಕಲಿದ್ದಾರೆ. ಅವರಿಗೆ ಸಂಧ್ಯಾಕಾಲದಲ್ಲಿ ಘನತೆಯಿಂದ ಬದುಕುವ ವಾತಾವರಣ ಕಲ್ಪಿಸುವುದು ಸರ್ಕಾರದ ಜವಾಬ್ದಾರಿ.

ಪಲ್ಲವಿ ಶಿವಕುಮಾರ್, ಶಿಕಾರಿಪುರ

ಪ್ರಚೋದಿತ ಪೋಸ್ಟರ್ ಅಳವಡಿಕೆ ಬೇಡ

ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ 'ಬಾಯಲ್ಲಿ ಹೇಳಿ ಕೇಸರಿ' ಎಂಬ ಪಾನ್ ಮಸಾಲದ ಪೋಸ್ಟರ್‌ಗಳು ರಾರಾಜಿಸುತ್ತಿವೆ. ಬಸ್‌ಗಳು ಒಳಗೊಂಡಂತೆ ಸಾರ್ವಜನಿಕ ಸ್ಥಳಗಳಲ್ಲಿ ಉತ್ತಮ ಸಂದೇಶ ಸಾರುವ ಜಾಹೀರಾತು ಇರಬೇಕೇ ಹೊರತು ಆರೋಗ್ಯಕ್ಕೆ ಹಾನಿಕಾರಕವಾಗುವ ಪೋಸ್ಟರ್ ಅಳವಡಿಕೆ ತಪ್ಪು. ವಿದ್ಯಾರ್ಥಿಗಳು ನಿತ್ಯವೂ ಬಸ್‌ಗಳಲ್ಲಿಯೇ ಶಾಲಾ-ಕಾಲೇಜಿಗೆ ಹೋಗುತ್ತಾರೆ. ಇಂತಹ ಪೋಸ್ಟರ್‌ಗಳು ಅವರಿಗೆ ಪ್ರಚೋದನೆ ನೀಡುತ್ತವೆ. ಇದರ ಬದಲು ಶಿಕ್ಷಣ, ಆರೋಗ್ಯ, ಕಾನೂನಿನ ಬಗ್ಗೆ ಅರಿವು ಮೂಡಿಸುವ ಪೋಸ್ಟರ್ ಅಳವಡಿಸುವುದು ಉತ್ತಮ. ಬಸ್‌ನಲ್ಲಿ ವಿದ್ಯಾರ್ಥಿಗಳು ಮೊಬೈಲ್ ಬಳಸುವುದು ಹೆಚ್ಚು. ಅತಿಯಾದ ಮೊಬೈಲ್ ಬಳಕೆಯಿಂದಾಗುವ ಅನಾಹುತ ಕುರಿತು ಜಾಗೃತಿ ಮೂಡಿಸುವ ಮಾಹಿತಿಯೂ ಪೋಸ್ಟರ್‌ಗಳಲ್ಲಿ ಇರಲಿ.

ಕಾವ್ಯ ಡಿ.ಎಂ., ಚಿಕ್ಕಮಗಳೂರು

ಕವಿಗೋಷ್ಠಿ: ಪಾರದರ್ಶಕ ಆಯ್ಕೆ ಇರಲಿ

ಸರ್ಕಾರದಿಂದ ನಡೆಯುವ ಕನ್ನಡ ಸಾಹಿತ್ಯ ಸಮ್ಮೇಳನ, ಉತ್ಸವಗಳಲ್ಲಿ ಕವಿಗೋಷ್ಠಿ ನಡೆಯುವುದು ವಾಡಿಕೆ. ಗೋಷ್ಠಿಯಲ್ಲಿ ಭಾಗವಹಿಸಲು ಕೆಲವರು ಏನೆಲ್ಲಾ ಲಾಬಿ ನಡೆಸುವುದು ಗುಟ್ಟೇನಲ್ಲ. ಶಿಷ್ಟಾಚಾರದ ಹೆಸರಿನಲ್ಲಿ ಕಾಟಾಚಾರಕ್ಕೆ ಸ್ವರಚಿತ ಕವನಗಳನ್ನು ಆಹ್ವಾನಿಸುವ ಉದಾಹರಣೆಯೂ ಉಂಟು. ಇದಕ್ಕೆ ಹಂಪಿ ಉತ್ಸವ–2026ರ ಕವಿಗೋಷ್ಠಿಯೇ ಸಾಕ್ಷಿ. ಕವಿಗೋಷ್ಠಿಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕವನಗಳನ್ನು ಪ್ರತ್ಯೇಕವಾಗಿ ಸ್ವೀಕರಿಸಲಾಗಿದೆ. ಇದರಿಂದ ಪಾರದರ್ಶಕ ಆಯ್ಕೆ ಬಗ್ಗೆ ಗೊಂದಲ ಎದುರಾಗಿರುವುದು ಸಹಜ. ಮುಂದಿನ ವರ್ಷವಾದರೂ ಇಂತಹ ಗೊಂದಲಗಳಿಗೆ ತೆರೆ ಎಳೆಯಲಿ.

ದಿನೇಶ್ ಎಸ್., ಪಾವಗಡ

ನಲಿ-ಕಲಿ: ವಿದ್ಯಾರ್ಥಿಗಳ ಕಲಿಕೆಗೆ ಭಾರವೆ?

ಶಾಲೆಗಳಲ್ಲಿ 'ನಲಿ-ಕಲಿ' ಅನುಷ್ಠಾನಗೊಂಡು ಎರಡು ದಶಕವಾಗಿದೆ. ಇದರ ಅನುಷ್ಠಾನ ವಿಫಲವಾಗಿರುವ ಬಗ್ಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಶಿಕ್ಷಣ ಸಚಿವರಿಗೆ ಸಲ್ಲಿಸಿರುವ ವರದಿ ಆಂಶಿಕವಾಗಿದೆ. ಕ್ಷೇತ್ರ ಕಾರ್ಯದಲ್ಲಿರುವ ಶಿಕ್ಷಕರನ್ನು ಪ್ರಶ್ನೋತ್ತರಕ್ಕೆ ಒಳಪಡಿಸಿದಂತಿಲ್ಲ. ವರದಿಯಲ್ಲಿ ಉಲ್ಲೇಖಿಸಿದಂತೆ ಕಲಿಕಾ ಪೂರಕ ಸಾಮಗ್ರಿಗಳು ಪ್ರತಿವರ್ಷ ಬರುವುದಿಲ್ಲ. ಹಾಗೆಯೇ ಅನುದಾನದ ಕೊರತೆಯು 'ನಲಿ-ಕಲಿ'ಯನ್ನು ಬಾಧಿಸುತ್ತಿದೆ. 80 ನಿಮಿಷದ ಅವಧಿ ಶಿಕ್ಷಕರಿಗೆ ಹೊರೆಯಾಗಿರಬಹುದು. ಮತ್ತೊಂದೆಡೆ ಸರ್ಕಾರಿ ಶಾಲೆಗಳಲ್ಲಿ ಹೊಸದಾಗಿ ಶಿಕ್ಷಕರ ನೇಮಕಾತಿ ನಡೆದಿಲ್ಲ. 'ನಲಿ-ಕಲಿ' ಶಿಕ್ಷಕರು ನಿವೃತ್ತಿಯ ಅಂಚಿನಲ್ಲಿದ್ದರೆ, ಕೆಲವರು ಮುಖ್ಯಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಕಲಿಕಾ ಗುಣಮಟ್ಟ ನಿರೀಕ್ಷಿಸಲು ಸಾಧ್ಯವೆ? ಇಂದಿನ ಕೃತಕ ಬುದ್ಧಿಮತ್ತೆ ಯುಗದ ಮಕ್ಕಳ ಬೆಳವಣಿಗೆಗೆ ತಕ್ಕಂತೆ ಹೊಸ ಕಲಿಕಾ ವಿನ್ಯಾಸ ರೂಪಿಸುವ ಜರೂರಿದೆ.

ರಾಜೇಂದ್ರಕುಮಾರ್ ಮುದ್ನಾಳ್, ಯಾದಗಿರಿ

ಬೆಳೆ ಸಮೀಕ್ಷೆಗಾರರ ಸಂಭಾವನೆ ಹೆಚ್ಚಲಿ

ಕೃಷಿ ಇಲಾಖೆಯಡಿ ಸೀಮಿತ ಅವಧಿಯ ಋತುಮಾನ ಆಧಾರಿತ ಬೆಳೆ ಸಮೀಕ್ಷೆಗಾರರಾಗಿ ವಿದ್ಯಾವಂತ ಯುವಕ, ಯುವತಿಯರು ರಾಜ್ಯದಾದ್ಯಂತ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರಿಗೆ ಪ್ರತಿ ಬೆಳೆ ಸಮೀಕ್ಷೆಗೆ ಬರೀ ಹನ್ನೊಂದು ರೂಪಾಯಿ ಸಂಭಾವನೆ ಕೊಡಲಾಗುತ್ತಿದೆ. ಈ ಸಂಭಾವನೆಯು ಇತರೆ ರಾಜ್ಯಗಳಿಗೆ ಹೋಲಿಸಿದರೆ ತೀರಾ ಕಡಿಮೆ. ಬೆಳೆ ಸಮೀಕ್ಷೆ ನಡೆಸುವಾಗ ಎದುರಾಗುವ ಸವಾಲುಗಳು ಒಂದೆರಡಲ್ಲ. ಹಾಗಾಗಿ, ರಾಷ್ಟ್ರ ಮಟ್ಟದಲ್ಲಿ ಸೂಕ್ತವಾದ ಸಂಭಾವನೆಯನ್ನು ನಿಗದಿಪಡಿಸಬೇಕಿದೆ.

ದಿವಾಕರ್ ಡಿ., ಮದ್ದೂರು

ಸ್ಪೀಕರ್ ಹುದ್ದೆ ಮತ್ತು ಜನತಂತ್ರದ ಗೌರವ

ಲೋಕಸಭೆಯ ಸ್ಪೀಕರ್ ಎಂದರೆ ಯಾವುದೇ ಪಕ್ಷದ ಪ್ರತಿನಿಧಿಯಲ್ಲ. ಅದು ಸಂಪೂರ್ಣವಾಗಿ ನಿಷ್ಪಕ್ಷಪಾತ ಮತ್ತು ಸಂವಿಧಾನದ ಮೌಲ್ಯಗಳನ್ನು ಪ್ರತಿಬಿಂಬಿಸುವ ಸಾಂವಿಧಾನಿಕ ಹುದ್ದೆ. ಆದರೆ, ಓಂ ಬಿರ್ಲಾ ಅವರದ್ದು ಪಕ್ಷಪಾತದ ಧೋರಣೆ. ವಿಪಕ್ಷದ ನಾಯಕರು ಹಾಗೂ ಸದಸ್ಯರು ತಮ್ಮ ಅಭಿಪ್ರಾಯ ಮಂಡಿಸಲು ಪ್ರಯತ್ನಿಸಿದಾಗ ಅವರಿಗೆ ಸೂಕ್ತ ಅವಕಾಶ ನೀಡದಿರುವುದನ್ನು ದೇಶದ ಜನರು ನೇರ ಪ್ರಸಾರಗಳಲ್ಲಿ ಕಂಡಿದ್ದಾರೆ. ಮತ್ತೊಂದೆಡೆ ಆಡಳಿತಾರೂಢ ಪಕ್ಷದ ಸದಸ್ಯರಿಗೆ ಹೆಚ್ಚಿನ ಅವಕಾಶ ನೀಡುವುದು ಪ್ರಜಾಪ್ರಭುತ್ವದ ಮೂಲತತ್ತ್ವಗಳಿಗೆ ಧಕ್ಕೆ ತರುತ್ತದೆ. ಜನರ ವಿಶ್ವಾಸ ಉಳಿಸುವುದು ಮತ್ತು ಪ್ರಜಾಪ್ರಭುತ್ವದ ಗೌರವ ಕಾಪಾಡುವುದು ಸ್ಪೀಕರ್ ಕರ್ತವ್ಯ. ನಿಷ್ಪಕ್ಷಪಾತವಾಗಿ ವರ್ತಿಸಬೇಕೆಂದು ಸ್ಪೀಕರ್ ಅವರಿಗೆ ಜನ ಸಾಮಾನ್ಯರು ಸಲಹೆ ನೀಡುವ ಪರಿಸ್ಥಿತಿ ನಿರ್ಮಾಣವಾಗಿರುವುದು ದುರದೃಷ್ಟಕರ.

ಎಂ.ಎಸ್. ಅಲ್ಲಮ ಪ್ರಭು, ಬೆಂಗಳೂರು

ಚುರುಮುರಿ

ಎಐ ನಿರುದ್ಯೋಗ!

• ಗುರು ಪಿ.ಎಸ್.

'ಲೈಫ್ ಏನಾಗುತ್ತೋ' ಆತಂಕದಲ್ಲಿ ಹೇಳಿದಳು ಹೆಂಡತಿ.

'ಯಾಕಮ್ಮ ಏನಾಯ್ತು, ಯಾಕೆ ಡಿಪ್ರೆಶನ್‌ನಲ್ಲಿದ್ದಂಗೆ ಇದ್ದೀಯಾ?' ಕೇಳಿದೆ.

'ಸಾಫ್ಟ್‌ವೇರ್ ಎಂಜಿನಿಯರ್ಸ್ ಅಂದ್ರೆ ಐಟಿ ಸೆಕ್ಟರ್‌ನಲ್ಲಿರೋರೆಲ್ಲ ಕೆಲಸ ಕಳ್ಕೊಳ್ತಾರಂತೆ, ಕಂಪ್ಯೂಟರ್ ಸೈನ್ಸ್ ಓದುತ್ತಿರೋರಿಗೆಲ್ಲ ಕೆಲಸಾನೇ ಸಿಗಲ್ವಂತೆ'.

'ಯಾರು ಹೇಳಿದರು ನಿಂಗೆ'.

'ಬಿಲ್ ಗೇಟ್ಸ್ ಹೇಳಿದಾರಂತ್ರೀ... ಅಂಥ್ರೊಪಿಕ್ ಎಐ ಬಂದ ನಂತರ ಐಟಿ ಕಂಪನಿಗಳೆಲ್ಲ ಕ್ಲೋಸ್ ಆಗ್ತಾವಂತೆ'.

'ಅದ್ ಸರಿ, ನೀನೇನು ಐಟಿ ಕಂಪನಿಯಲ್ಲಿ ಕೆಲಸ ಮಾಡ್ತಿದೀಯ?' ಕೇಳಿದೆ.

'ಇಲ್ಲ'.

'ಕಂಪ್ಯೂಟರ್ ಸೈನ್ಸ್ ಓದಿದೀಯ?'

'ಇಲ್ಲ ರೀ, ಇದೆಲ್ಲ ಯಾಕ್ ಕೇಳ್ತಿದಿರಾ?'

'ಮತ್ಯಾಕ್ ನೀನು ಇಷ್ಟು ತಲೆ ಕೆಡಿಸಿಕೊಳ್ತಿದೀಯ?'

'ಪ್ರಪಂಚದ ಮೇಲಾಗುವ ಪರಿಣಾಮ ನಮ್ಮ ಮೇಲೂ ಆಗಲ್ವೇನ್ರೀ... ಒಬ್ಬೊಬ್ಬರ ಕೆಲಸ ಹೋದರೂ ಒಂದೊಂದು ಕುಟುಂಬ ಬೀದಿಗೆ ಬೀಳಲ್ವೇನ್ರೀ' ಆತಂಕದಲ್ಲೇ ಹೇಳಿದಳು.

'ನೀನೇನಿಷ್ಟು ಟೆನ್ಷನ್ ಮಾಡ್ಕೊತೀಯ, ನೀನು ಹಿಂಗೆ ನೆಗೆಟಿವ್ ಮಾತಾಡಿ, ಮಾತಾಡಿ ನನ್ನನ್ನೇ ಡಿಪ್ರೆಶನ್‌ಗೆ ಕಳಿಸಿಬಿಡ್ತೀಯ' ಎನ್ನುತ್ತಲೇ ಮುಂದುವರಿದು, 'ಈ ಎಐ ಮಾಡಿದೋರೆಲ್ಲ ಯಾರ್ ಹೇಳು' ಎಂದೆ.

'ಮನುಷ್ಯರು' ಎಂದಳು.

'ಎಐ ಮಾಡಿದ ಮನುಷ್ಯರಿಗೆ ಅದನ್ನು ಕಂಟ್ರೋಲ್ ಮಾಡೋಕೆ, ನಾಶ ಮಾಡೋಕೆ ಬರಲ್ವ?'

'ಅದು ಹೇಗೆ ಸಾಧ್ಯ ರೀ?'

'ಅಂಥ್ರೊಪಿಕ್ ಬಂದ್ರೆ ಐಟಿ ಉದ್ಯಮದಲ್ಲಿ ಉದ್ಯೋಗಿಗಳ ಸಂಖ್ಯೆ ಕಡಿಮೆಯಾಗುತ್ತೆ ಅನ್ನೋ ಬದಲು, ರಾಜಕಾರಣಿಗಳ ಸಂಖ್ಯೆ ಕಡಿಮೆ ಆಗುತ್ತೆ. ಯಾರಿಗೆ ವೋಟ್ ಹಾಕ್ಬೇಕು, ಹಾಕಬಾರ್ದು ಅಂತ ಈ ಎಐ ಹೇಳುತ್ತೆ. ಕೆಟ್ಟ ರಾಜಕಾರಣಕ್ಕೆ ಇನ್ನು ಉಳಿಗಾಲವಿಲ್ಲ ಎಂದು ಹಬ್ಬಿಸಿ ಬಿಡೋಣ'.

'ಆಗ ಏನಾಗುತ್ತೆ ರೀ?' ಕುತೂಹಲದಿಂದ ಕೇಳಿದಳು.

'ಆಗ, ನಮ್ಮನ್ನು ಆಳುವವರೇ ಅದನ್ನ ನಿಲ್ಲಿಸಿಬಿಡ್ತಾರೆ, ಇಂಥದ್ದೊಂದು ಎಐ ಇತ್ತು ಅನ್ನೋ ಕುರುಹೂ ಇಲ್ಲದಂಗೆ ಮಾಡ್ತಾರೆ' ಎಂದೆ.

'ಮಾಡಬಹುದು, ಮಾಡಬಹುದು, ಯಾವ್ಯಾವುದನ್ನೋ ಇಲ್ಲದಂಗೆ ಮಾಡೋರಿಗೆ, ಎಐ ಇಲ್ಲದಂಗೆ ಮಾಡೋಕಾಗಲ್ವ' ಎಂದು ನಕ್ಕಳು.

ಸಂಗತ

ಕಾರ್ಮಿಕ ಸಂಹಿತೆ: ಶ್ರಮಿಕ ವರ್ಗಕ್ಕೆ ಸುಣ್ಣ!

ಕೇಂದ್ರದ ನೂತನ ಕಾರ್ಮಿಕ ಸಂಹಿತೆಗಳು ಶ್ರಮಿಕರ ಹಿತ ರಕ್ಷಿಸುವಂತಿಲ್ಲ ಹಾಗೂ ಕಾರ್ಮಿಕರ ಬದುಕಿನ ಸಂಕಷ್ಟಗಳನ್ನು ಮತ್ತಷ್ಟು ಅಸಹನೀಯಗೊಳಿಸುವಂತಿವೆ.

• ಕೆ. ಮಹಾಂತೇಶ್

ಕೇಂದ್ರ ಸರ್ಕಾರ ರೂಪಿಸಿರುವ ನಾಲ್ಕು ಹೊಸ ಕಾರ್ಮಿಕ ಸಂಹಿತೆಗಳು ಏಪ್ರಿಲ್ 1ರಿಂದ ಜಾರಿಗೆ ಬರಲಿವೆ. ಇವು ಜಾರಿಗೆ ಬಂದರೆ ಈಗಾಗಲೇ ಸಂಕಷ್ಟದಲ್ಲಿರುವ ಕಾರ್ಮಿಕರ ಬದುಕು ಮತ್ತಷ್ಟು ದುರ್ಬರವಾಗಲಿದೆ.

2014ರಲ್ಲಿ ಅಧಿಕಾರಕ್ಕೆ ಬಂದ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ದೇಶದಲ್ಲಿ ಜಾರಿಯಲ್ಲಿದ್ದ ಕಾರ್ಮಿಕ ಕಾನೂನುಗಳನ್ನು ನಾಲ್ಕು ಕೋಡ್‌ಗಳನ್ನಾಗಿ ರೂಪಿಸುವ ಘೋಷಣೆ ಮಾಡಿತ್ತು. ಅದಕ್ಕೆ, ಕಾರ್ಮಿಕ ವರ್ಗದಿಂದ ಪ್ರತಿರೋಧ ಎದುರಾಗಿತ್ತು. ಆದರೂ, ಕಾರ್ಪೊರೇಟ್ ವಲಯದ ಒತ್ತಾಯದ ಮೇರೆಗೆ, ಕೇಂದ್ರ ಸರ್ಕಾರ 2019–20ರಲ್ಲಿ 29 ಕಾರ್ಮಿಕ ಕಾನೂನುಗಳನ್ನು– ವೇತನ ಸಂಹಿತೆ, ಕೈಗಾರಿಕಾ ಸಂಬಂಧಗಳ ಸಂಹಿತೆ, ಸಾಮಾಜಿಕ ಭದ್ರತಾ ಸಂಹಿತೆ ಹಾಗೂ ವೃತ್ತಿ ಸುರಕ್ಷತೆ ಮತ್ತು ಕೆಲಸದ ಪರಿಸ್ಥಿತಿ ಹೆಸರಿನಲ್ಲಿ ನಾಲ್ಕು ಸಂಹಿತೆಗಳನ್ನು ರೂಪಿಸಿ ಸಂಸತ್ತಿನಲ್ಲಿ ಅಂಗೀಕರಿಸಿತ್ತು.

ನೂತನ ಸಂಹಿತೆಗಳನ್ನು ದೇಶದ ಅಭಿವೃದ್ಧಿ ಹಾಗೂ ಬೆಳವಣಿಗೆ ದೃಷ್ಟಿಯಿಂದ ಮಹತ್ತರ ಹೆಜ್ಜೆ ಎಂದು ಸರ್ಕಾರ ಹೇಳುತ್ತಿದೆ. ಆದರೆ, ಕಾರ್ಮಿಕರು ಹಲವು ದಶಕಗಳಿಂದ ಪಡೆದಿರುವ ಸಾಮಾಜಿಕ ಭದ್ರತೆಗಳು ಹಾಗೂ 'ಸಂಘಟನೆ ಕಟ್ಟುವ' ಸ್ವಾತಂತ್ರ್ಯ ಸೇರಿ ಹಲವು ಹಕ್ಕುಗಳನ್ನು ಕಳೆದುಕೊಳ್ಳಲಿದ್ದಾರೆ.

ಕೇಂದ್ರ ಸರ್ಕಾರದ ನೂತನ ವೇತನ ಸಂಹಿತೆ ಎಲ್ಲ ಕೆಲಸಗಾರರಿಗೂ ಕನಿಷ್ಠ ವೇತನವನ್ನು ಖಾತರಿಪಡಿಸುತ್ತದೆ. ಅಸಂಘಟಿತರು ಸೇರಿ ಎಲ್ಲ ನೌಕರರು/ಕಾರ್ಮಿಕರಿಗೆ ಕನಿಷ್ಠ ವೇತನದ ಹಕ್ಕನ್ನು ನೀಡುತ್ತದೆ. ಆದರೆ, ವೇತನ ಸಂಹಿತೆಯ ಸೆಕ್ಷನ್ 2 (ಜೆಡ್) (ಡಿ) ಪ್ರಕಾರ, 'ಕಾರ್ಮಿಕ' ಪದವು ಮಾಸಿಕ ₹15 ಸಾವಿರಕ್ಕಿಂತ ಹೆಚ್ಚು ವೇತನ ಪಡೆಯುವ ಮೇಲ್ವಿಚಾರಣಾ ಹುದ್ದೆಯಲ್ಲಿರುವ ಯಾವುದೇ ನೌಕರನನ್ನು ಒಳಗೊಳ್ಳುವುದಿಲ್ಲ. ಹಾಗಾಗಿ, ವೇತನ ಸಂಹಿತೆಯ ವ್ಯಾಪ್ತಿಯಿಂದ ಬಹುಸಂಖ್ಯೆಯ ಕಾರ್ಮಿಕರು ಹೊರಗುಳಿಯುತ್ತಾರೆ. ವಿದ್ಯುತ್ ಸಹಾಯವಿಲ್ಲದೆ ನಡೆಯುವ ಮತ್ತು 20ಕ್ಕೂ ಕಡಿಮೆ ಕಾರ್ಮಿಕರನ್ನು ಹೊಂದಿರುವ ಕಾರ್ಖಾನೆ ವೇತನ ಸಂಹಿತೆಯ ವ್ಯಾಪ್ತಿಗೆ ಬರುವುದಿಲ್ಲ. ವಾರ್ಷಿಕ ಕೈಗಾರಿಕಾ ಸಮೀಕ್ಷಾ ವರದಿ 2017–18ರ ಪ್ರಕಾರ, ಶೇ 48ರಷ್ಟು ಕಾರ್ಖಾನೆಗಳು ವೇತನ ಸಂಹಿತೆಯ ವ್ಯಾಪ್ತಿ ಯಿಂದ ಹೊರಗುಳಿಯುತ್ತವೆ. ಹಾಗಾಗಿ, ಎಲ್ಲರಿಗೂ ಕಾನೂನುಬದ್ಧ ಕನಿಷ್ಠ ವೇತನದ ಹಕ್ಕು ಎಂಬ ಸರ್ಕಾರದ ಹೇಳಿಕೆ ಸುಳ್ಳಾಗಿದೆ.

ಕನಿಷ್ಠ ವೇತನಕ್ಕೆ ಸಂಬಂಧಿಸಿದಂತೆಯೂ ಕಾರ್ಮಿಕರಿಗೆ ನ್ಯಾಯ ಮರೀಚಿಕೆಯಾಗಿದೆ. ಕೇಂದ್ರ ಸರ್ಕಾರದ ತಜ್ಞರ ಸಮಿತಿ 2019ರಲ್ಲಿ ₹375ನ್ನು 'ರಾಷ್ಟ್ರೀಯ ಕನಿಷ್ಠ ವೇತನ' ಎಂದು ಶಿಫಾರಸು ಮಾಡಿತ್ತು. ಅದು, 7ನೇ ವೇತನ ಆಯೋಗ ಶಿಫಾರಸು ಮಾಡಿದ ₹18 ಸಾವಿರಕ್ಕಿಂತ ಬಹಳ ಕಡಿಮೆ ಎಂದು ಕಾರ್ಮಿಕ ಸಂಘಗಳು ತಿರಸ್ಕರಿಸಿದ್ದವು. ಪ್ರಸ್ತುತ ದಿನಕ್ಕೆ ₹178 ಮೊತ್ತ ನಿಗದಿಪಡಿಸಲಾಗಿದೆ. ಈ ಮೂಲಕ, ಉತ್ತಮ ಜೀವನಮಟ್ಟವನ್ನು ಒದಗಿಸುತ್ತೇವೆ ಎನ್ನುವ ಮೋದಿ ಆಡಳಿತದ ಭರವಸೆ ದೇಶದ ದುಡಿಯುವ ಜನರಿಗೆ ಎಸಗಿದ ವಂಚನೆಯಾಗಿ ಕಾಣುತ್ತದೆ.



ಸಾಮಾಜಿಕ ಭದ್ರತೆ ಸಂಹಿತೆ–2020ರ ಸೆಕ್ಷನ್ 109–114, ಗಿಗ್ ಕಾರ್ಮಿಕರನ್ನು ಒಳಗೊಂಡಂತೆ ಎಲ್ಲ ಕಾರ್ಮಿಕರಿಗೆ ಜೀವನ,ಆರೋಗ್ಯ, ಮಾತೃತ್ವ ಸವಲತ್ತು ಮತ್ತು ಭವಿಷ್ಯ ನಿಧಿ ಸೌಲಭ್ಯ ಗಳನ್ನು ಒಳಗೊಂಡ ಸಾಮಾಜಿಕ ಭದ್ರತೆಯನ್ನು ವಿಸ್ತರಿಸುತ್ತದೆ ಎನ್ನುತ್ತಲೇ, ಅಗ್ರಿಗೇಟರ್ ಸಂಸ್ಥೆಗಳ ಕೊಡುಗೆಯ ಮೊತ್ತವನ್ನು ಶೇ 1ರಿಂದ 2ರಷ್ಟಕ್ಕೆ ಸೀಮಿತಗೊಳಿಸಲಾಗಿದೆ. ಇದರಿಂದ ಯಾವ ಸೌಲಭ್ಯಗಳೂ ಸಿಗುವ ಖಾತರಿಯಿಲ್ಲ. ಸುಮಾರು 50 ಕೋಟಿ ಕಾರ್ಮಿಕರಿಗೆ ಸಾರ್ವತ್ರಿಕವಾಗಿ ಸಾಮಾಜಿಕ ಭದ್ರತೆ ಒದಗಿಸುತ್ತೇವೆ ಎನ್ನುವ ಕೇಂದ್ರದ ವಾದದಲ್ಲಿ ಸತ್ಯಾಂಶವಿಲ್ಲ.

ನೂತನ ಸಂಹಿತೆಯಲ್ಲಿ 'ನಿಗದಿತ ಅವಧಿ'ಯ ನೌಕರರ ನೇಮಕಕ್ಕೆ ಅವಕಾಶ ನೀಡಲಾಗಿದೆ. ಇದರಿಂದ ಮಾಲೀಕರು ನೌಕರರನ್ನು ಒಂದು ವರ್ಷಕ್ಕಿಂತ ಮೊದಲೇ ಮನೆಗೆ ಕಳಿಸಿ, ಗ್ರ್ಯಾಚ್ಯುಟಿ ಪಾವತಿಯಿಂದ ತಪ್ಪಿಸಿಕೊಳ್ಳಬಹುದು. ಇದಲ್ಲದೆ ಕಾರ್ಮಿಕರು ಸಂಘ ಕಟ್ಟಿಕೊಳ್ಳುವ ಹಕ್ಕು, ನ್ಯಾಯಬದ್ಧ ಬೇಡಿಕೆಗಳಿಗಾಗಿ 'ಮುಷ್ಕರ' ನಡೆಸುವ ಹಕ್ಕು, ನಿಗದಿತ ಅವಧಿಯ ಕೆಲಸದ ಹಕ್ಕು ಮತ್ತು ಹೆಚ್ಚುವರಿ ಭತ್ಯೆಗಳಿಂದ ವಂಚಿತರನ್ನಾಗಿಸುವ ನಿಯಮಾವಳಿಗಳನ್ನು ಸಂಹಿತೆಗಳಲ್ಲಿ ರೂಪಿಸಲಾಗಿದೆ. ಮೂಲ ಕಾಯ್ದೆಯಲ್ಲಿ ಇದ್ದ ಲಿಂಗಾಧಾರಿತ ಸಮಾನತೆಯ ವಿಧಿಗಳನ್ನು ಕ್ಷೀಣಗೊಳಿಸಿ, ಅಪಾಯಕಾರಿ ಮತ್ತು ಹಾನಿಕಾರಕ ಕೆಲಸಗಳು ಸೇರಿ ಮಹಿಳಾ ಕಾರ್ಮಿಕರನ್ನು ಸಂಜೆ 7ರಿಂದ ಬೆಳಗ್ಗೆ 6 ಗಂಟೆಯವರೆಗೂ ದುಡಿಸಲು ಅನುಮತಿ ನೀಡಿವೆ.

ಕೈಗಾರಿಕಾ ಸಂಬಂಧ ಸಂಹಿತೆ (ಐಆರ್ ಕೋಡ್) ನಿಯಮವು 300 ಜನರಿಗಿಂತಲೂ ಕಡಿಮೆ ಕಾರ್ಮಿಕರನ್ನು ಹೊಂದಿರುವ ಸಂಸ್ಥೆ-ಉದ್ಯಮಗಳು ಲೇಆಫ್ ಘೋಷಿಸಿಕೊಳ್ಳಲು, ಸರ್ಕಾರದ ಪೂರ್ವಾನುಮತಿ ಪಡೆಯದೆ ಕಾರ್ಮಿಕರನ್ನು ವಜಾಗೊಳಿಸಲು ಅವಕಾಶ ನೀಡಿದೆ. ಕಾರ್ಮಿಕರನ್ನು ನೇಮಿಸಲು, ವಜಾಗೊಳಿಸಲು ಸಂಪೂರ್ಣ ಹಕ್ಕಿರಬೇಕು ಎನ್ನುವ ಮಾಲೀಕರ ವಾದವನ್ನು ಸರ್ಕಾರ ಮಾನ್ಯ ಮಾಡಿದೆ. ಹೀಗಾಗಿ, ಈಗಾಗಲೇ ತೀವ್ರ ಶೋಷಣೆ ಅನುಭವಿಸುವ ಶ್ರಮಜೀವಿಗಳು ನ್ಯಾಯಸಮ್ಮತ ಹಕ್ಕು ಸೌಲಭ್ಯಗಳ ಉಳಿವಿಗಾಗಿ, ಕೇಂದ್ರ ಕಾರ್ಮಿಕ-ನೌಕರ ಸಂಘಟನೆಗಳು ಇಂದು ದೇಶವ್ಯಾಪಿ ಮುಷ್ಕರ ನಡೆಸುತ್ತಿವೆ. ಶ್ರಮಜೀವಿಗಳ ನ್ಯಾಯಯುತ ಬೇಡಿಕೆಗಳನ್ನು ಸರ್ಕಾರ ಮನ್ನಿಸಬೇಕು.

ಲೇಖಕ: 'ಸಿಐಟಿಯು' ರಾಜ್ಯ ಕಾರ್ಯದರ್ಶಿ

ಈ ಲೇಖನದ ಪೂರ್ಣ ಪಠ್ಯ prajavani.netನಲ್ಲಿ ಲಭ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಎಐ ದುರ್ಬಳಕೆ ತಡೆಗೆ ನಿಯಮ

ಕೃತಕ ಬುದ್ಧಿಮತ್ತೆಯ ನೆರವಿನಿಂದ ಸೃಷ್ಟಿಸಲಾದ ವಿಷಯಗಳಿಗೆ (ಕಂಟೆಂಟ್) ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಮಾಹಿತಿ ತಂತ್ರಜ್ಞಾನ ಕಾಯ್ದೆಯ (2021) ಅಡಿಯಲ್ಲಿ ಬರುವ ನಿಯಮಗಳಿಗೆ ತಿದ್ದುಪಡಿ ಮಾಡಿ, ಹೊಸ ನಿಯಮಗಳನ್ನು ರೂಪಿಸಿದೆ. ಇದೇ 20ರಿಂದ ಜಾರಿಗೆ ಬರಲಿದೆ. ವಿಷಯದ ವರ್ಗೀಕರಣವು ಕಡ್ಡಾಯವಾಗಿದ್ದು, ಆಕ್ಷೇಪಾರ್ಹ ವಿಡಿಯೊ, ಆಡಿಯೊ, ಗ್ರಾಫಿಕ್ ವಿಷಯಗಳನ್ನು ಸಾಮಾಜಿಕ ಜಾಲತಾಣಗಳಿಂದ ತೆಗೆದುಹಾಕಲು ಇದ್ದ ಸಮಯದ ಮಿತಿಯನ್ನು ಕಡಿತಗೊಳಿಸಲಾಗಿದೆ. ಎಐ ದುರ್ಬಳಕೆಯನ್ನು ತಡೆಯಲು ಹೊಸ ನಿಯಮಗಳನ್ನು ರೂಪಿಸಿದ್ದಾಗಿ ಕೇಂದ್ರ ಸರ್ಕಾರ ಹೇಳಿದೆ. ಆದರೆ, ಇದು ಆನ್‌ಲೈನ್ ಸೆನ್ಸಾರ್‌ಶಿಪ್‌ನ ಕ್ರಮವಾಗಿದೆ ಎಂಬ ಆಕ್ಷೇಪವೂ ವ್ಯಕ್ತವಾಗಿದೆ

ಪ್ರಜಾವಾಣಿ ವಾರ್ತೆ

ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಯೂಟ್ಯೂಬ್, ಎಕ್ಸ್, ವಾಟ್ಸ್‌ಆ್ಯಪ್‌ನಂತಹ ಸಾಮಾಜಿಕ ಜಾಲತಾಣ/ಡಿಜಿಟಲ್ ವೇದಿಕೆಗಳಲ್ಲಿ ಪ್ರತಿ ದಿನವೂ ಆಡಿಯೊ, ವಿಡಿಯೊ, ಆಡಿಯೊ–ವಿಡಿಯೊಗಳನ್ನೊಳಗೊಂಡ ವಿಷಯಗಳು (ಕಂಟೆಂಟ್) ಅಪ್‌ಲೋಡ್ ಆಗುತ್ತಲೇ ಇರುತ್ತವೆ. ರಾಜಕೀಯ, ಸಿನಿಮಾ ಹೀಗೆ ವಿವಿಧ ವಿಷಯಗಳಿಗೆ ಸಂಬಂಧಿಸಿದ ವಾಸ್ತವಿಕ ಆಡಿಯೊ/ವಿಡಿಯೊಗಳ ಜತೆಗೆ ಕೃತಕ ಬುದ್ಧಿಮತ್ತೆಯಿಂದ (ಎಐ) ಸೃಷ್ಟಿಸಿದವೂ ಇತ್ತೀಚೆಗೆ ಗಮನಾರ್ಹ ಸಂಖ್ಯೆಯಲ್ಲಿ ಕಾಣಸಿಗುತ್ತಿವೆ. ಬಹುತೇಕ ಸಂದರ್ಭಗಳಲ್ಲಿ ಯಾವುದು ನೈಜ ಮತ್ತು ಯಾವುದು ಎಐನಿಂದ ಸೃಷ್ಟಿಸಿದ್ದು ಎನ್ನುವುದನ್ನು ಪತ್ತೆಹಚ್ಚುವುದೂ ಕಷ್ಟವಾಗುತ್ತದೆ.

ಶಿಕ್ಷಣ, ಉದ್ಯೋಗ, ಮಾಹಿತಿ ಮತ್ತು ಸಾರ್ವಜನಿಕ ಸೇವೆಗಳನ್ನು ನೀಡುವ ದಿಸೆಯಲ್ಲಿ ಡಿಜಿಟಲ್ ಮಾಧ್ಯಮಗಳು ಉಪಯುಕ್ತವಾಗಿವೆ. ಆದರೆ, ಸಾಮಾಜಿಕ ಜಾಲತಾಣಗಳು ಸೇರಿದಂತೆ ವಿವಿಧ ರೀತಿಯ ಡಿಜಿಟಲ್ ಮಾಧ್ಯಮಗಳಲ್ಲಿ ನಕಲಿ ಖಾತೆಗಳು, ಮಹಿಳೆಯರಂತೆ ಬಿಂಬಿಸಿಕೊಳ್ಳುವುದು, ಸೈಬರ್ ಕಿರುಕುಳ, ಡೀಪ್‌ಫೇಕ್, ಸಲುಗೆಯ–ಆಪ್ತ ಚಿತ್ರಗಳನ್ನು ಒಪ್ಪಿಗೆಯಿಲ್ಲದೇ ಹಂಚಿಕೊಳ್ಳುವುದು ಮುಂತಾದ ಪ್ರವೃತ್ತಿಗಳು ಹೆಚ್ಚುತ್ತಿದ್ದು, ಅವು ಜನರ, ವಿಶೇಷವಾಗಿ ಮಹಿಳೆಯರು ಮತ್ತು ಮಕ್ಕಳ ಘನತೆ, ಖಾಸಗಿತನ ರಕ್ಷಣೆಗೆ ತೊಡಕಾಗಿ ಪರಿಣಮಿಸಿವೆ. ಇಂಥ ಆಕ್ಷೇಪಾರ್ಹವಾದ, ನಿಂದನಾತ್ಮಕವಾದ ಆಡಿಯೊ, ವಿಡಿಯೊ, ಚಿತ್ರಗಳನ್ನು ತಡೆಯುವ ದಿಸೆಯಲ್ಲಿ ಕೇಂದ್ರ ಸರ್ಕಾರದ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಹೊಸ ನಿಯಮಗಳನ್ನು ರೂಪಿಸಿದೆ.

ಮಾಹಿತಿ ತಂತ್ರಜ್ಞಾನ ಕಾಯ್ದೆಗೆ (2021) ಇದುವರೆಗೆ ಹಲವು ತಿದ್ದುಪಡಿಗಳನ್ನು ಮಾಡಲಾಗಿದೆ. ಈಗ ಅದರ ನಿಯಮಗಳಿಗೆ ತಿದ್ದುಪಡಿ ತಂದು, ‘ಮಾಹಿತಿ ತಂತ್ರಜ್ಞಾನ (ಮಧ್ಯವರ್ತಿ ಮಾರ್ಗಸೂತ್ರಗಳು ಮತ್ತು ಡಿಜಿಟಲ್ ಮೀಡಿಯಾ ನೀತಿಸಂಹಿತೆ) ತಿದ್ದುಪಡಿ ನಿಯಮಗಳು–2026’ ರೂಪಿಸಿದೆ. ಇದೇ 20ರಿಂದ ಈ ನಿಯಮಗಳು ಜಾರಿಗೆ ಬರಲಿವೆ. ಎಕ್ಸ್, ಇನ್‌ಸ್ಟಾಗ್ರಾಂ, ಫೇಸ್‌ಬುಕ್, ಯೂಟ್ಯೂಬ್‌ನಂಥ ವೇದಿಕೆಗಳ ಜತೆಗೆ ಅವುಗಳ ಬಳಕೆದಾರರೂ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಯಾವುದೇ ಬಳಕೆದಾರ ನಿಯಮ ಉಲ್ಲಂಘಿಸಿದರೆ, ಮಾಹಿತಿ ತಂತ್ರಜ್ಞಾನ ಕಾಯ್ದೆ–2021, ಭಾರತೀಯ ನ್ಯಾಯ ಸಂಹಿತೆ–2023, ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012, ಸ್ಫೋಟಕ ವಸ್ತುಗಳ ಕಾಯ್ದೆ–1908 ಮುಂತಾದ, ಅಸ್ತಿತ್ವದಲ್ಲಿರುವ ಕಾಯ್ದೆಗಳ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ.



ಎಐ ಚಿತ್ರ: ಈಶ್ವರ ಬಡಿಗೇರ

ಪ್ರಮುಖ ನಿಯಮಗಳು

- ಬಳಕೆದಾರನು ಆಡಿಯೊ/ವಿಡಿಯೊ, ಚಿತ್ರ ಎಐನಿಂದ ಸೃಷ್ಟಿಸಿದ್ದೇ ಅಲ್ಲವೇ ಎನ್ನುವುದನ್ನು ಸ್ಪಷ್ಟವಾಗಿ ಕಾಣುವಂತೆ ನಮೂದಿಸಬೇಕು. ವೇದಿಕೆಯು ಅದನ್ನು ಮರೆಮಾಚಬಾರದು, ತೆಗೆದುಹಾಕಬಾರದು. ಬಳಕೆದಾರ ನಮೂದಿಸದೇ ಇದ್ದರೆ ವೇದಿಕೆಯೇ ಆ ಕೆಲಸ ಮಾಡಬೇಕು ಇಲ್ಲವೇ ಅದನ್ನು ತೆಗೆದುಹಾಕಬೇಕು
- ಮಧ್ಯವರ್ತಿಯು (ವೇದಿಕೆ) ಕನಿಷ್ಠ ಮೂರು ತಿಂಗಳಿಗೆ ಒಮ್ಮೆ ಖಾಸಗಿ ನೀತಿ, ಬಳಕೆದಾರ ಒಪ್ಪಂದ ಅಥವಾ ಸೂಕ್ತ ವಿಧಾನದ ಮೂಲಕ ನಿಯಮಗಳ ಬಗ್ಗೆ ಇಂಗ್ಲಿಷ್‌ನಲ್ಲಿ ಅಥವಾ ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿರುವ ಯಾವುದೇ ಭಾಷೆಯ ಮೂಲಕ ನಿಯಮಗಳ ಬಗ್ಗೆ ಮಾಹಿತಿ ನೀಡಬೇಕು (ಪ್ರಸ್ತುತ ನಿಯಮಗಳ ಅನ್ವಯ, ವರ್ಷಕ್ಕೆ ಒಮ್ಮೆ ಮಾಹಿತಿ ನೀಡಿದರೆ ಸಾಕು)
- ಯಾವುದೇ ಆಡಿಯೊ/ವಿಡಿಯೊ/ಚಿತ್ರ ಆಕ್ಷೇಪಾರ್ಹವಾಗಿದ್ದು, ನಿಯಮ ಉಲ್ಲಂಘಿಸುವಂತಿದ್ದರೆ, ನ್ಯಾಯಾಲಯ/ಸರ್ಕಾರಿ ಆದೇಶದ ಮೂರು ಗಂಟೆಗಳಲ್ಲಿ ಅದನ್ನು ವೇದಿಕೆಯಿಂದ ತೆಗೆಯಬೇಕು. ಪ್ರಸ್ತುತ ಅಂಥ ವಿಷಯಗಳನ್ನು ತೆಗೆಯಲು 36 ಗಂಟೆ ನೀಡಲಾಗುತ್ತಿದೆ
- ಯಾವುದೇ ಪೋಸ್ಟ್/ವಿಷಯ ಆಕ್ಷೇಪಾರ್ಹ ಎಂದು ಸಂಬಂಧಿಸಿದವರು ದೂರು ನೀಡಿದರೆ, ಅದನ್ನು 36 ಗಂಟೆಗಳಲ್ಲಿ ಇತ್ಯರ್ಥಪಡಿಸಿ, ತೆಗೆದುಹಾಕಬೇಕು. ಪ್ರಸ್ತುತ ಈ ಅವಧಿಯು 72 ಗಂಟೆಗಳು
- ಲೈಂಗಿಕ ಕ್ರಿಯೆ/ವರ್ತನೆ/ನಗ್ನತೆ ಬಗ್ಗೆ ಸಂಬಂಧಿಸಿದವರು ದೂರು ನೀಡಿದರೆ, ಅದನ್ನು 2 ಗಂಟೆಗಳಲ್ಲಿ ವೇದಿಕೆಯಿಂದ ತೆಗೆದುಹಾಕಬೇಕು. ಪ್ರಸ್ತುತ ಇದಕ್ಕೆ 24 ಗಂಟೆಗಳವರೆಗೆ ಅವಕಾಶ ಇದೆ
- ಸಂತ್ರಸ್ತರಿಂದ ದೂರು ಪಡೆದ 7 ದಿನಗಳ ಒಳಗಾಗಿ ಸಂಬಂಧಪಟ್ಟ ಅಧಿಕಾರಿಯು ಅದನ್ನು ಪರಿಹರಿಸಬೇಕು. ಪ್ರಸ್ತುತ ದೂರನ್ನು ವಿಲೇವಾರಿ ಮಾಡಲು 15 ದಿನಗಳವರೆವಿಗೂ ಅವಕಾಶವಿದೆ

ಕೃತಕವಾಗಿ ಸೃಷ್ಟಿಸಿದ ಮಾಹಿತಿ ಎಂದರೆ...

ಪರಿಷ್ಕೃತ ನಿಯಮಗಳ ಅಧಿಸೂಚನೆಯಲ್ಲಿ ಕೃತಕ ಬುದ್ಧಿಮತ್ತೆಯಿಂದ (ಎಐ) ಸೃಷ್ಟಿಸಿದ ವಿಷಯ ಎಂದು ಎಲ್ಲೂ ಉಲ್ಲೇಖಿಸಲಾಗಿಲ್ಲ. ಬದಲಿಗೆ ‘ಕೃತಕವಾಗಿ ಸೃಷ್ಟಿಸಿದ ಮಾಹಿತಿ’ (ಸಿಂಥೆಟಿಕಲಿ ಜನರೇಟೆಡ್ ಇನ್‌ಫರ್ಮೇಷನ್) ಎಂದು ಹೇಳಲಾಗಿದೆ.

ಅಧಿಸೂಚನೆಯಲ್ಲಿ ಕೃತಕವಾಗಿ ಸೃಷ್ಟಿಸಿದ ಮಾಹಿತಿಯನ್ನು ಈ ರೀತಿ ವ್ಯಾಖ್ಯಾನಿಸಿದೆ: ಕಂಪ್ಯೂಟರ್ ವ್ಯವಸ್ಥೆಯನ್ನು ಬಳಸಿಕೊಂಡು ಕೃತಕವಾಗಿ ಅಥವಾ ಕಂಪ್ಯೂಟಿಂಗ್/ಸೂತ್ರಗಳು/ಗಣನವಿಧಾನದ ಮೂಲಕ (ಆಲ್ಗರಿದಮಿಕಲಿ) ಸೃಷ್ಟಿಸಿದ, ಮಾರ್ಪಡಿಸಿದ ಅಥವಾ ತಿರುಚಿದ ಆಡಿಯೊ, ವಿಡಿಯೊ ಅಥವಾ ಆಡಿಯೊ–ವಿಡಿಯೊ ಎರಡನ್ನೂ ಒಳಗೊಂಡ ಮಾಹಿತಿ. ಆ ಮಾಹಿತಿಗಳು ವಾಸ್ತವ, ಅಧಿಕೃತ ಅಥವಾ ನಿಜ ಎಂಬಂತೆ ಬಿಂಬಿತವಾಗಿರುವಂತೆ ಇದ್ದರೆ ಮತ್ತು ಯಾವುದೇ ವ್ಯಕ್ತಿ ನಿಜವಾದ ವ್ಯಕ್ತಿ ಎಂಬಂತೆ ಅಥವಾ ಘಟನೆಯನ್ನು ವಾಸ್ತವ ಜಗತ್ತಿನಲ್ಲಿ ನಡೆದಿರುವ ನೈಜ ಘಟನೆಯಂತೆ ಚಿತ್ರಿಸಲಾಗಿದ್ದರೆ ಅಂತಹದ್ದು ಕೃತಕವಾಗಿ ಸೃಷ್ಟಿಸಿದ ಮಾಹಿತಿಯಾಗುತ್ತದೆ.

ಕಂಪ್ಯೂಟರ್ ವ್ಯವಸ್ಥೆಯ ಮೂಲಕ ಸೃಷ್ಟಿಸಿದ ಮಾಹಿತಿಗಳು ಚಿತ್ರ, ಗ್ರಾಫಿಕ್, ವಿಡಿಯೊ, ಚಲಿಸುತ್ತಾ ಚಿತ್ರೀಕರಿಸಿರುವ ವಿಡಿಯೊ, ಧ್ವನಿ ಮುದ್ರಣ ಅಥವಾ ಬೇರೆ ಯಾವುದೇ ಆಡಿಯೊ, ಆಡಿಯೊ–ವಿಡಿಯೊ ಎರಡನ್ನೂ ಒಳಗೊಂಡ ಅಥವಾ ಆಡಿಯೊ ಇಲ್ಲದೆ ಕೇವಲ ವಿಡಿಯೊ ರೂಪದಲ್ಲಿ ಇರಬಹುದು

ಯಾವುದಕ್ಕೆಲ್ಲ ವಿನಾಯಿತಿ?

ಒಂದು ವೇಳೆ ಆಡಿಯೊ, ವಿಡಿಯೊ ಅಥವಾ ಆಡಿಯೊ–ವಿಡಿಯೊ ಮಾಹಿತಿಗಳು ಕೆಲವು ನಿರ್ದಿಷ್ಟ ಉದ್ದೇಶಗಳ ಕಾರಣಕ್ಕೆ ಸೃಷ್ಟಿಸಿದ್ದರೆ ಅಂತಹ ಮಾಹಿತಿಗಳು ‘ಕೃತಕವಾಗಿ ಸೃಷ್ಟಿಸಿದ ಮಾಹಿತಿಗಳು’ ಎಂದು ಪರಿಗಣಿತವಾಗುವುದಿಲ್ಲ

- ಸಾಮಾನ್ಯ ಅಥವಾ ಸದುದ್ದೇಶದಿಂದ ಮಾಡಿದ ಎಡಿಟಿಂಗ್, ಇರುವ ಮಾಹಿತಿಯನ್ನು ಸುಧಾರಿಸಲು, ತಾಂತ್ರಿಕ ತಿದ್ದುಪಡಿ, ಬಣ್ಣದ ಹೊಂದಾಣಿಕೆ, ಆಡಿಯೊದಲ್ಲಿರುವ ಅನಗತ್ಯ ಗದ್ದಲವನ್ನು ಕಡಿಮೆ ಮಾಡಲು, ವಿಷಯವನ್ನು ಬದಲಾಯಿಸದ, ನಕಲು ಮಾಡಿದ ಅಥವಾ ಮಾಹಿತಿ, ಸಂದರ್ಭಗಳನ್ನು ತಿದ್ದುಪಡಿ/ತಿರುಚದ ಅಥವಾ ತಪ್ಪಾಗಿ ನಿರೂಪಿಸದ ಆಡಿಯೊ, ವಿಡಿಯೊ ಅಥವಾ ಆಡಿಯೊ–ವಿಡಿಯೊ ಮಾಹಿತಿಗಳು
- ಸಾಮಾನ್ಯವಾದ ಅಥವಾ ಒಳ್ಳೆಯ ಉದ್ದೇಶದಿಂದ ಸೃಷ್ಟಿಸಿದ ಮಾಹಿತಿಗಳು ಅಥವಾ ದಾಖಲೆಗಳು, ಪಿಡಿಎಫ್ ದಾಖಲೆಗಳು, ಶೈಕ್ಷಣಿಕ ಅಥವಾ ತರಬೇತಿ ಉದ್ದೇಶದ ವಿಷಯಗಳು, ಸಂಶೋಧನಾ ಫಲಿತಾಂಶಗಳು, ಸಚಿತ್ರ, ಕಲ್ಪಿತ ವಿವರಣೆಗೆ ಬಳಸಿದ ಮಾಹಿತಿಗಳು, ಟೆಂಪ್ಲೇಟ್ ಆಧಾರಿತ ಅಥವಾ ಪರಿಕಲ್ಪನೆ ಆಧಾರಿತ ವಿಷಯಗಳು, ವಿವರಗಳು
- ಆಡಿಯೊ–ವಿಡಿಯೊ ಮಾಹಿತಿಗಳಲ್ಲಿ ಯಾವುದೇ ಭಾಗವನ್ನು ತಿರುಚುವ ಉದ್ದೇಶ ಇಲ್ಲದೇ, ಬಳಕೆಯ ಅವಕಾಶ, ಸ್ಪಷ್ಟತೆ, ಭಾಷಾಂತರ, ವಿವರಣೆ, ಮಾಹಿತಿಗಳ ಹುಡುಕಾಟ ಅಥವಾ ಅನ್ವೇಷಣೆಯನ್ನು ಸುಧಾರಿಸುವುದಕ್ಕಾಗಿ ಕಂಪ್ಯೂಟರ್ ವ್ಯವಸ್ಥೆಯನ್ನು ಬಳಸುವುದಕ್ಕೂ ಈ ನಿಯಮ ಅವಕಾಶ ನೀಡುತ್ತದೆ.

ಸೆನ್ಸಾರ್‌ಶಿಪ್: ಆಕ್ಷೇಪ

ಪರಿಷ್ಕೃತ ನಿಯಮಗಳಿಗೆ ಆಕ್ಷೇಪವೂ ವ್ಯಕ್ತವಾಗಿದೆ. ಕೇಂದ್ರವು ಡಿಜಿಟಲ್ ಮಾಹಿತಿಗಳನ್ನು ಸೆನ್ಸಾರ್ ಪ್ರಕ್ರಿಯೆಗೆ ಒಳಪಡಿಸಲು ಹೊರಟಿದೆ ಎಂದು ದೂರಲಾಗಿದೆ.

ನಿಯಮಗಳ ಬಗ್ಗೆ ಪ್ರತಿಕ್ರಿಯಿಸಿರುವ ಇಂಟರ್‌ನೆಟ್ ಫ್ರೀಡಂ ಫೌಂಡೇಷನ್, ‘ಆಕ್ಷೇಪಾರ್ಹ ಮಾಹಿತಿಗಳನ್ನು ಮೂರು ಗಂಟೆಗಳ ಒಳಗೆ ತೆಗೆದು ಹಾಕಬೇಕು ಎಂದು ಹೇಳಿರುವುದರಿಂದ ಡಿಜಿಟಲ್ ವೇದಿಕೆಗಳಿಗೆ ಆಕ್ಷೇಪಾರ್ಹ ಎಂದು ಹೇಳಲಾದ ಮಾಹಿತಿಗಳನ್ನು ಪರಿಶೀಲನೆಗೆ ಒಳಪಡಿಸುವುದು ಕಷ್ಟವಾಗಬಹುದು. ಹೀಗಾದಲ್ಲಿ ಅವುಗಳು ಸ್ವಯಂಚಾಲಿತವಾಗಿ ಅಂತಹ ವಿಷಯಗಳನ್ನು ತೆಗೆದುಹಾಕುವ ಅಥವಾ ನಿರ್ಬಂಧಿಸುವ ವ್ಯವಸ್ಥೆ ಜಾರಿಗೆ ತರಬಹುದು. ಹಾಗಾದಲ್ಲಿ ಇದು ಸಂವಿಧಾನ ನೀಡಿದ ವಾಕ್ ಸ್ವಾತಂತ್ರ್ಯಕ್ಕೆ ಧಕ್ಕೆ ತರಲಿದೆ’ ಎಂದು ಹೇಳಿದೆ.

ಕೃತಕವಾಗಿ ಸೃಷ್ಟಿಸಿದ ಆಡಿಯೊ–ವಿಡಿಯೊ ಮಾಹಿತಿಗಳನ್ನು ಎಐ ಸೃಷ್ಟಿ ಎಂಬುದನ್ನು ಸ್ಪಷ್ಟವಾಗಿ ನಮೂದಿಸಬೇಕು ಎಂದು ಸೂಚಿಸಿರುವುದನ್ನು ತಜ್ಞರು ಸ್ವಾಗತಿಸಿದ್ದಾರೆ. ಆದರೆ, ಆಕ್ಷೇಪಾರ್ಹ ವಿಚಾರಗಳನ್ನು ತೆಗೆದು ಹಾಕಲು ನೀಡಿರುವ ಗಡುವನ್ನು 3 ಗಂಟೆಗಳಿಗೆ ಇಳಿಸಿರುವ ಬಗ್ಗೆ ಅವರು ಕಳವಳ ವ್ಯಕ್ತಪಡಿಸಿದ್ದಾರೆ.

‘ಪ್ರಕಟವಾಗಿರುವ ಮಾಹಿತಿಗಳು ತಿರುಚಿದ್ದೇ ಅಥವಾ ಆಕ್ಷೇಪಾರ್ಹವಾಗಿದೆಯೇ ಎಂಬುದನ್ನು ಮನುಷ್ಯರೇ ಪರಿಶೀಲಿಸಬೇಕು. ಆನ್‌ಲೈನ್ ವೇದಿಕೆಗಳಿಗೆ ಈಗ ನೀಡಿರುವ 36 ಗಂಟೆಗಳಲ್ಲೂ ಆ ಕೆಲಸ ಮಾಡಲು ಕಷ್ಟವಾಗುತ್ತಿದೆ. ಹೀಗಿರುವಾಗ 3 ಗಂಟೆಗಳಲ್ಲಿ ತೆಗೆದುಹಾಕುವುದು ಸಾಧ್ಯವಾಗದ ಮಾತು. ಭವಿಷ್ಯದಲ್ಲಿ ಆನ್‌ಲೈನ್ ವೇದಿಕೆಗಳು ಅಂತಹ ಮಾಹಿತಿ ತೆಗೆದುಹಾಕಲು ಸ್ವಯಂಚಾಲಿತ ವ್ಯವಸ್ಥೆ ಜಾರಿಗೆ ತರಬಹುದು. ಇದು ಮಾಹಿತಿಗಳ ಸೆನ್ಸಾರ್‌ಗೆ ಕಾರಣವಾಗಬಹುದು’ ಎಂದು ಅವರು ಎಚ್ಚರಿಸಿದ್ದಾರೆ.

ರಾಷ್ಟ್ರೀಯ

ರಾಷ್ಟ್ರಗೀತೆಗೂ ಮುನ್ನ ಹಾಡಲು ಆದೇಶ

‘ವಂದೇ ಮಾತರಂ’ನ ಎಲ್ಲ 6 ಚರಣ ಹಾಡುವುದು ಕಡ್ಡಾಯ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಎಲ್ಲ ಸರ್ಕಾರಿ ಕಾರ್ಯಕ್ರಮಗಳಲ್ಲಿ ‘ವಂದೇ ಮಾತರಂ’ನ ಎಲ್ಲ ಆರು ಚರಣಗಳನ್ನು ಹಾಡುವುದು ಕಡ್ಡಾಯ. ರಾಷ್ಟ್ರ ಗೀತೆಯೊಂದಿಗೆ ಹಾಡುವುದಿದ್ದಲ್ಲಿ ಮೊದಲಿಗೆ ‘ವಂದೇ ಮಾತರಂ’ ಹಾಡಬೇಕು ಎಂದು ಗೃಹ ಸಚಿವಾಲಯ ಸೂಚಿಸಿದೆ.

‘ವಂದೇ ಮಾತರಂ’ ಹಾಡುವುದಕ್ಕೆ ಮತ್ತು ನುಡಿಸುವುದಕ್ಕೆ ಸಂಬಂಧಿಸಿದಂತೆ ಸಚಿವಾಲಯವು ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ.

ಸಚಿವಾಲಯವು ಜನವರಿ 28ರಂದು ಈ ಸಂಬಂಧ ಆದೇಶ ಹೊರಡಿಸಿದೆ. ಸರ್ಕಾರಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ರಾಷ್ಟ್ರಪತಿ ಮತ್ತು ರಾಜ್ಯಪಾಲರು ಆಗಮಿಸುವ ವೇಳೆ ಇಲ್ಲವೇ ಕಾಯಕ್ರಮ ಮುಗಿಸಿ ನಿರ್ಗಮಿಸುವ ವೇಳೆ, ಆಕಾಶವಾಣಿ ಮತ್ತು ಟಿ.ವಿಗಳ ಮೂಲಕ ದೇಶವನ್ನು ಉದ್ದೇಶಿಸಿ ರಾಷ್ಟ್ರಪತಿಯವರು ಭಾಷಣ ಮಾಡುವುದಕ್ಕೂ ಮೊದಲು ಹಾಗೂ ನಂತರ, ರಾಷ್ಟ್ರ ಧ್ವಜಾರೋಹಣ ಮಾಡುವ ವೇಳೆ ‘ವಂದೇ ಮಾತರಂ’ನ ಎಲ್ಲ ಆರು ಚರಣಗಳನ್ನು ಹಾಡುವುದು ಕಡ್ಡಾಯ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಯಾವ ಯಾವ ಸಂದರ್ಭಗಳಲ್ಲಿ ‘ವಂದೇ ಮಾತರಂ’ ಗೀತೆಯನ್ನು ಹಾಡಬೇಕು ಅಥವಾ ಇದನ್ನು ಹಾಡಬೇಕಾದ ಕಾರ್ಯಕ್ರಮಗಳ ಪಟ್ಟಿಯನ್ನು ಒದಗಿಸಲು ಸಾಧ್ಯ ಇಲ್ಲ. ರಾಷ್ಟ್ರ ಗೀತೆಯನ್ನು ಹಾಡುವ ಸಂದರ್ಭಗಳಲ್ಲೆಲ್ಲಾ ‘ವಂದೇ ಮಾತರಂ’ನ ಅಧಿಕೃತ ಶೈಲಿಯಲ್ಲಿ ಹಾಡಬೇಕು ಎಂದೂ ಆದೇಶದಲ್ಲಿ ತಿಳಿಸಲಾಗಿದೆ.

‘ವಂದೇ ಮಾತರಂ’ ಗೀತೆಗೆ 150 ವರ್ಷ ತುಂಬಿದ ಕಾರಣಕ್ಕೆ ಕಳೆದ ವರ್ಷ ಸಂಸತ್‌ನ ಚಳಿಗಾಲದ ಅಧಿವೇಶನದಲ್ಲಿ ವ್ಯಾಪಕ ಚರ್ಚೆಗಳು ನಡೆದಿದ್ದವು. ಈಗ, ‘ವಂದೇ ಮಾತರಂ’ ಗೀತೆಯನ್ನು ಪೂರ್ಣವಾಗಿ ಹಾಡುವುದಕ್ಕೆ ಸಂಬಂಧಿಸಿ ಮಾರ್ಗಸೂಚಿ ಬಿಡುಗಡೆ ಮಾಡಲಾಗಿದೆ.

ಸ್ವಾತಂತ್ರ್ಯಪೂರ್ವದಲ್ಲಿ ಕಾಂಗ್ರೆಸ್ ಕೈಗೊಂಡಿದ್ದ ನಿರ್ಧಾರದಂತೆ ಪ್ರಸ್ತುತ, ‘ವಂದೇ ಮಾತರಂ’ನ ಮೊದಲ ಎರಡು ಚರಣಗಳನ್ನು ಮಾತ್ರ ಹಾಡಲಾಗುತ್ತಿದೆ. ಈ ಗೀತೆ ಕುರಿತು ಸಂವಿಧಾನ ರಚನಾ ಸಭೆಯಲ್ಲಿಯೂ ಚರ್ಚೆ ನಡೆದಿತ್ತು. ಇದರಲ್ಲಿ ‘ಕೋಮುವಾದಿ’ ಅಂಶಗಳಿವೆ ಎಂದು ಒಂದು ವರ್ಗದ ಜನರಿಂದ ಆಕ್ಷೇಪ ವ್ಯಕ್ತವಾಗಿತ್ತು. ಹೀಗಾಗಿ, ಈ ಗೀತೆಯ ಮೊದಲ ಎರಡು ಚರಣಗಳನ್ನು ಮಾತ್ರ ಹಾಡುವ ಕುರಿತು ಸಭೆಯಲ್ಲಿಯೂ ಆಗ ನಿರ್ಣಯ ಕೈಗೊಳ್ಳಲಾಗಿತ್ತು.

ಆದೇಶದ ಪ್ರಮುಖ ಅಂಶಗಳು

- ‘ವಂದೇ ಮಾತರಂ’ ಅನ್ನು ಅಧಿಕೃತ ಶೈಲಿಯಲ್ಲಿ ಹಾಡುವುದಕ್ಕೆ ಅಂದಾಜು 3 ನಿಮಿಷ 10 ಸೆಕೆಂಡುಗಳು ಬೇಕು. ಈ ಗೀತೆಯನ್ನು ಹಾಡುವ/ ನುಡಿಸುವ ವೇಳೆ ಸಭಿಕರು /ಪ್ರೇಕ್ಷಕರು ಎದ್ದು ನಿಂತು ಗೌರವ ಸಲ್ಲಿಸಬೇಕು
- ಯಾವುದೇ ನ್ಯೂಸ್‌ರೀಲ್ ಅಥವಾ ಸಾಕ್ಷ್ಯಚಿತ್ರ ಇಲ್ಲವೇ ಚಲನಚಿತ್ರದ ಪ್ರದರ್ಶನದ ವೇಳೆ ‘ವಂದೇ ಮಾತರಂ’ ಗೀತೆಯನ್ನು ಬಿತ್ತರಿಸುತ್ತಿದ್ದರೆ, ಪ್ರೇಕ್ಷಕರು ನಿಲ್ಲುವ ಅಗತ್ಯ ಇಲ್ಲ. ಈ ರೀತಿ ಮಾಡುವುದರಿಂದ ಚಿತ್ರದ ಪ್ರದರ್ಶನಕ್ಕೆ ಅಡ್ಡಿಯನ್ನುಂಟು ಮಾಡಿದಂತಾಗಲಿದೆ. ಅಲ್ಲದೇ, ಈ ಗೀತೆಗೆ ಗೌರವ ತರುವುದಕ್ಕಿಂತ ಗೊಂದಲಕ್ಕೆ ಕಾರಣವಾಗುವುದು
- ರಾಷ್ಟ್ರ ಗೀತೆ ಮತ್ತು ‘ವಂದೇ ಮಾತರಂ’ ನುಡಿಸುವ/ಹಾಡುವ ವಿಚಾರ ಬಂದಾಗ, ಮೊದಲಿಗೆ ‘ವಂದೇ ಮಾತರಂ’ ಹಾಡಬೇಕು ಇಲ್ಲವೇ ನುಡಿಸಬೇಕು
- ‘ವಂದೇ ಮಾತರಂ’ ಹಾಡುವುದರೊಂದಿಗೆ ಶಾಲಾ ಚಟುವಟಿಕೆಗಳು ಆರಂಭಿಸಬೇಕು. ಶಾಲೆಗಳು ಹಮ್ಮಿಕೊಳ್ಳುವ ಕಾರ್ಯಕ್ರಮಗಳಲ್ಲಿ ರಾಷ್ಟ್ರ ಗೀತೆ ಮತ್ತು ‘ವಂದೇ ಮಾತರಂ’ ಹಾಡುವುದನ್ನು ಜನಪ್ರಿಯಗೊಳಿಸುವುದಕ್ಕೆ ಶಾಲಾ ಆಡಳಿತಗಳು ಕ್ರಮ ತೆಗೆದುಕೊಳ್ಳಬೇಕು
- ಸಚಿವರು ಪಾಲ್ಗೊಳ್ಳುವ ಸಮಾರಂಭಗಳಲ್ಲಿ ಕೂಡ ‘ವಂದೇ ಮಾತರಂ’ ಹಾಡುವುದಕ್ಕೆ ಒತ್ತು ನೀಡಬೇಕು. ಇಂತಹ ಕಾರ್ಯಕ್ರಮಗಳಲ್ಲಿ ಸಾಮೂಹಿಕವಾಗಿ ಹಾಡುವುದು ಅಪೇಕ್ಷಣೀಯ
- ಸಭಾಂಗಣದಂತಹ ಸ್ಥಳಗಳಲ್ಲಿ ಎಲ್ಲರೂ ಒಟ್ಟಿಗೆ ಹಾಡುವುದಕ್ಕೆ ಅನುಕೂಲವಾಗುವಂತೆ ಧ್ವನಿವರ್ಧಕ ವ್ಯವಸ್ಥೆ ಇರಬೇಕು. ಅಗತ್ಯ ಕಂಡುಬಂದಲ್ಲಿ, ‘ವಂದೇ ಮಾತರಂ’ ಗೀತೆಯ ಮುದ್ರಿತ ಪ್ರತಿಗಳನ್ನು ಸಭಿಕರಿಗೆ/ಪ್ರೇಕ್ಷಕರಿಗೆ ಹಂಚಬೇಕು
- ತಾಯ್ನಾಡಿಗೆ ಗೌರವ ತೋರುವುದಕ್ಕಾಗಿ ಹಾಗೂ ಸಮರ್ಪಕ ಶಿಷ್ಟಾಚಾರ ಪಾಲನೆಯೊಂದಿಗೆ ‘ವಂದೇ ಮಾತರಂ’ ಅನ್ನು ಸಾಮೂಹಿಕವಾಗಿ ಹಾಡಬಹುದು. ಈ ವೇಳೆ, ಅದರ ಘನತೆಗೆ ಚ್ಯುತಿಯಾಗದಂತೆ ನೋಡಿಕೊಳ್ಳಬೇಕು

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಕಾಶ್ಮೀರದ ಜಮ್ಮು ವಲಯದಲ್ಲಿ ಏಕಾಏಕಿ ಹಿಮಕುಸಿತ ಸಂಭವಿಸಿದೆ ಎಂದು ಪ್ರತಿಪಾದಿಸುತ್ತಾ ಡಿಆರ್‌ಎಕ್ಸ್ ಮೊಹಮ್ಮದ್ ರಿಜ್ವಾನ್ ಎಂಬ ಫೇಸ್‌ಬುಕ್ ಬಳಕೆದಾರ ಇದೇ 7ರಂದು ಪೋಸ್ಟ್ ಮಾಡಿದ್ದರು. ‘6ರಂದು ಈ ಭೀಕರ ಹಿಮಕುಸಿತ ಸಂಭವಿಸಿದೆ. ಬೆಟ್ಟದಿಂದ ದಿಢೀರ್ ಆಗಿ ಕುಸಿದ ಭಾರಿ ಪ್ರಮಾಣದ ಹಿಮ ಮನೆಗಳನ್ನು ಮುಚ್ಚಿ ಹಾಕಿತು. ಪ್ರಕೃತಿಯ ಮುಂದೆ ಮನುಷ್ಯ ಎಷ್ಟು ಚಿಕ್ಕವನು ಎಂಬುದನ್ನು ಈ ಹಿಮ ಬೆಟ್ಟಗಳು ತೋರಿಸಿವೆ’ ಎಂದು ಪೋಸ್ಟ್‌ನಲ್ಲಿ ಪ್ರತಿಪಾದಿಸಲಾಗಿದೆ. ಆದರೆ, ಇದು ಸುಳ್ಳು.

ಇನ್‌ವಿಡ್ ಟೂಲ್ ಮೂಲಕ ವಿಡಿಯೊದ ಕೀ ಫ್ರೇಮ್‌ಗಳನ್ನು ಪ್ರತ್ಯೇಕಿಸಿ, ಒಂದು ಕೀ ಫ್ರೇಮ್ ಅನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಿದಾಗ ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ಈ ವಿಡಿಯೊ ಹಂಚಿಕೊಂಡಿರುವುದು ಕಂಡು ಬಂತು. 6ರಂದು ಹಿಮಕುಸಿತ ಸಂಭವಿಸಿದೆಯೇ ಎಂಬ ಬಗ್ಗೆ ನಿರ್ದಿಷ್ಟ ಪದಗಳನ್ನು ಬಳಸಿ ಹುಡುಕಾಟ ನಡೆಸಿದಾಗ, ವಿಶ್ವಾಸಾರ್ಹ ಸುದ್ದಿಗಳು ಸಿಗಲಿಲ್ಲ. ವಿಡಿಯೊವನ್ನು ಕೂಲಂಕಷವಾಗಿ ಪರಿಶೀಲನೆಗೆ ಒಳಪಡಿಸಿದಾಗ ಕೆಲವು ಅನುಮಾನಗಳು ಬಂದವು. ಉದಾಹರಣೆ, ಗುಡ್ಡದಿಂದ ಹಿಮ ಭಾರಿ ಪ್ರಮಾಣದಲ್ಲಿ ಕುಸಿಯುತ್ತಿದ್ದರೂ ರಸ್ತೆಯಲ್ಲಿ ಇದ್ದ ಜನರು ಆತಂಕಗೊಂಡಿರಲಿಲ್ಲ. ಅವರು ಭಯ ಬಿದ್ದು ಓಡುತ್ತಿರಲಿಲ್ಲ. ಇದರ ಆಧಾರದಲ್ಲಿ ವಿಡಿಯೊದ ಅಸಲಿತನವನ್ನು ಪತ್ತೆ ಮಾಡುವುದಕ್ಕಾಗಿ ಹೈವ್ ಮಾಡರೇಷನ್ ಎಂಬ ಎಐ ಪತ್ತೆ ಟೂಲ್ ಬಳಸಿ ವಿಡಿಯೊವನ್ನು ಪರಿಶೀಲಿಸಿದಾಗ, ಅದು ನೈಜ ವಿಡಿಯೊ ಅಲ್ಲ ಎಂಬುದು ತಿಳಿದು ಬಂತು. ಸೈಟ್ ಎಂಜಿನ್ ಎಂಬ ಮತ್ತೊಂದು ಎಐ ಪತ್ತೆ ಟೂಲ್ ಮೂಲಕ ಪರಿಶೀಲಿಸಿದಾಗ, ಅದು ಎಐ ಮೂಲಕ ಸೃಷ್ಟಿಸಿದ ವಿಡಿಯೊ ಎಂಬುದು ದೃಢಪಟ್ಟಿತು ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಪದಬಂಧ 6313

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಪುಷ್ಪದ ಸಿಹಿರಸದೊಡಗೂಡಿದ ತಿಂಗಳು (4)
3.ಅಭಾವ ಕಾಲದಲ್ಲಿ ಆಗಿರುವ ಸೋಲು (4)
5.ಸಿರಿತನವಲ್ಲ! ದುಡ್ಡಿಲ್ಲದಿರುವಿಕೆ! (4)
7.ಆಭರಣಿಯ ತುಂಬಾ ಇರುವ ಒಡವೆ (4)
9.ಈತ ಅರಣ್ಯವನ್ನು ಕಾಪಾಡುವವನು (5)
12.ಕೊಬ್ಬಿದ ಆನೆಯಿದು (4)
13.ದೇವಸ್ಥಾನದ ಸಭಾಮಂಟಪ (4)
15.ಉತ್ತರದವರ ಸೋಪು (4)
16.ಈತ ಗುರುತುಳ್ಳವನು (4)

ಮೇಲಿಂದ ಕೆಳಕ್ಕೆ

1.ಮನಸ್ಸಿನ ಶಕ್ತಿಯಿದು (4)
2.ಗಜಪಡೆಯನ್ನು ನಡೆಸುವಾತ (3)
4.ನೀರಿನ ಅಧಿದೇವತೆ (3)
6.ನಯನಕ್ಕೆ ಕಂಡದ್ದು ಬಲು ಹೊಸತು! (3)
8.ತಿನ್ನುವವನು ಇಲ್ಲಿದ್ದಾನೆ (3)
9.ವರ್ತಮಾನ ತಿಳಿಸಿದ ವ್ಯಾಪಾರಿ (3)
10.ಶುನಕ ಮೂಸಿದ ಬೆಳ್ಳುಳ್ಳಿ! (3)
11.ಅಜಗಜಾಂತರದಲ್ಲೇ ಮನ್ಮಥನಿದ್ದಾನೆ (4)
12.ಎರು ತಗ್ಗಿಲ್ಲದಿರುವುದು (3)
14.ವೈರಿಯಲ್ಲಿರುವ ಈಕೆ ಬಿಂಕ ತೋರುತ್ತಿಹಳಲ್ಲಾ? (3)



6312ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಕಪ್ಪಡಿ 4.ಡಾಮರ 5.ಅನುಭೂತಿ 6.ತಾಪತ್ರಯ 7.ನಜ 9.ತಮ 13.ತಳಮಳ 14.ಪ್ರತೀಹಾರ 15.ಗರಜಲ 16.ಪವಾಡ

ಮೇಲಿಂದ ಕೆಳಕ್ಕೆ:
1.ಗಂಡಾಗುಂಡಿ 2.ಕರತಾಡನ 3.ವಿಭೂತಿ 5.ಅಯಸ್ಕಾಂತ 8.ಜನ್ಮಾಂತರ 10.ಮಗಳಗಂಡ 11.ತರುಲತೆ 12.ಪ್ರತೀಕ

ಸುಡೊಕು 6697

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

7		4		5			9	3
			1		9	6		5
6		5		3				
2					4	1		9
9	7	1		8			4	
4			9		2	3		7
	4		3		7		2	
						7		
1	3			2			6	

6696 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1

ಪರಿಶ್ರಮದ ಹಾದಿ

ನುಡಿ ಬೆಳಗು



ಪಿ.ಚಂದ್ರಿಕಾ

ಸೂಫಿಯೊಬ್ಬನ ಬಳಿಬಂದ ವ್ಯಕ್ತಿ ಆವೇಶದಿಂದ ಕೂಗಿದ, ‘ನಿನ್ನ ದೇವರೂ ಈ ಜನರ ಹಾಗೇ ದುರಹಂಕಾರಿ, ಅವನಿಗೆ ಹೇಳು ನನ್ನನ್ನು ಏನೂ ಮಾಡಲಿಕ್ಕಾಗುವುದಿಲ್ಲ’ ಎಂದು. ಅವನ ಮೊಂಡುತನದ ಬಗ್ಗೆ ಸೂಫಿಗೆ ಗೊತ್ತಾಯಿತು. ಇವನಿಗೆ ಹೇಗೆ ಹೇಳಿದರೆ ಪರಿಣಾಮಕಾರಿಯೆಂದು ಯೋಚಿಸತೊಡಗಿದ. ಬಂದವನ ಆವೇಶ ಮಿತಿ ಮೀರುತ್ತಿತ್ತು. ಆಗ ಸೂಫಿ, ‘ಆಯಿತು, ನನ್ನ ದೇವರಿಗೆ ಹೇಳುವೆ. ನಿನ್ನ ಸಮಸ್ಯೆ ಏನು ಎನ್ನುವುದಾದರೂ ಹೇಳು’ ಎಂದು ಸಮಾಧಾನಪಡಿಸಿದ. ‘ನಾನು ಹಲವು ಒಳ್ಳೆಯ ಕೆಲಸಗಳನ್ನು ಮಾಡಿದ್ದೇನೆ, ಕಷ್ಟಪಟ್ಟು ದುಡಿದ ಹಣವನ್ನು ದಾನ ಕೊಟ್ಟಾಗ ಸ್ವೀಕಾರ ಮಾಡಿದ ಜನ ಹರಸಿದ್ದಾರೆ. ನನ್ನ ಬಗ್ಗೆ ಇವರಿಗಲ್ಲದೆ ಬೇರೆ ಯಾರಿಗೆ ಕಾಳಜಿ ಎಂದು ನಾನೇ ಕೇಳಿಕೊಂಡಿದ್ದೇನೆ. ಆದರೆ ಬೆನ್ನ ಹಿಂದೆ ಇವನೆಂಥಾ ಮನುಷ್ಯ ಎಂದು ಆಡಿಕೊಳ್ಳುತ್ತಾರಲ್ಲಾ’ ಎಂದ. ಸೂಫಿ ಕುತೂಹಲದಿಂದ ಕೇಳಿದ: ‘ಹೌದಪ್ಪ, ಅವರು ನಿನ್ನ ಬೈದರು ಆಡಿಕೊಂಡರು. ಆದರೆ ಅದಕ್ಕೆ ಒಂದು ಕಾರಣ ಬೇಕಲ್ಲಾ! ಅದೇನೆಂದು ಹೇಳದಿದ್ದರೆ ಅರ್ಥವಾದರೂ ಹೇಗಾಗಬೇಕು’.

ಸೂಫಿಯ ಮಾತಲ್ಲಿದ್ದ ಸಾಂತ್ವನದಿಂದ ಆವೇಶ ತಗ್ಗಿಸಿಕೊಂಡ ವ್ಯಕ್ತಿ, ‘ನಾನು ಎಷ್ಟು ಒಳ್ಳೆಯವನು ಎಂದರೆ ಯಾರ ಮನಸ್ಸನ್ನೂ ನೋಯಿಸಬಾರದು ಎಂದು ನನ್ನ ಹತ್ತಿರ ಇದ್ದದ್ದನ್ನು ನನಗೆಂದು ಉಳಿಸಿಕೊಳ್ಳಲಿಲ್ಲ. ಕೇಳಿದವರಿಗೆ ಕೇಳಿದ್ದನ್ನು ಕೊಡುತ್ತಾ ಬಂದೆ. ಹಣದ ಕೊರತೆ ಎದುರಾಯಿತು. ಸರಿದೂಗಿಸಿಕೊಳ್ಳಲು ದಾರಿಗಳಿಲ್ಲದೆ ಸ್ವಲ್ಪ ಜೂಜಿಗೆ ಬಿದ್ದೆ. ಒಳ್ಳೆಯತನಕ್ಕೆ ಸ್ವಲ್ಪವೂ ಬೆಲೆಯಿಲ್ಲ. ದೇವರು ನನ್ನನ್ನು ಅಲ್ಲಿ ಸೋಲಿಸಿದ. ನಾನೀಗ ನಿರ್ಗತಿಕನಾಗಿರುವೆ. ಜನ, ‘ಇದ್ದಾಗ ಮೆರೆದ ಈಗ ನೋಡು ಹೇಗಾದ’ ಎನ್ನುತ್ತಿದ್ದಾರೆ. ನಾನೇನು ಮಾಡಲಿ, ಇದಕ್ಕೆಲ್ಲಾ ಕಾರಣ ದೇವರೇ ಅಲ್ಲವೇ? ಅವನಿಗೆ ಕರುಣೆಯೇ ಇಲ್ಲ, ನನ್ನೆಲ್ಲಾ ಸಂತೋಷ ನೆಮ್ಮದಿಯನ್ನು ಕಸಿದುಕೊಂಡುಬಿಟ್ಟ’ ಎಂದು ಅಳಲಿಕ್ಕೆ ಶುರು ಮಾಡಿದ.

ಸೂಫಿಗೆ ಎಲ್ಲವೂ ಅರ್ಥವಾಯಿತು. ಏರುಧ್ವನಿಯಲ್ಲಿ, ‘ಮೊದಲು ಹಡಗಿನಲ್ಲಾದ ರಂಧ್ರವನ್ನು ಮುಚ್ಚು’ ಎಂದ. ಅಳುತ್ತಿದ್ದ ವ್ಯಕ್ತಿಗೆ ಅಚ್ಚರಿಯಾಯಿತು. ಸೂಫಿ ಹೇಳಿದ, ‘ಸಮುದ್ರದ ಅಗಾಧವಾದ ನೀರು ಹಡಗನ್ನು ಮುಳುಗಿಸಲಾರದು. ಆದರೆ ಸಣ್ಣ ಸಣ್ಣ ರಂಧ್ರಗಳು ಮಾತ್ರವೇ ಮುಳುಗಿಸಿ ತಳಸೇರಿಸಿಬಿಡುತ್ತವೆ. ನೀನು ದೇವರನ್ನು, ಜನಗಳನ್ನೂ ಬಯ್ಯುತ್ತಿರುವೆ. ದೇವರು ನಿನಗೆ ಎಲ್ಲವನ್ನೂ ಕೊಟ್ಟ. ನಿನಗಾಗಿ ಏನನ್ನೂ ಉಳಿಸಿಕೊಳ್ಳದೆ ಎಲ್ಲವನ್ನೂ ಹಂಚಿದೆ. ಒಳ್ಳೆಯದೆ, ಆದರೆ ಅದಕ್ಕಾಗಿ ಹಿಡಿದ ಜೂಜಿನ ದಾರಿ ಕೆಟ್ಟದ್ದು. ನಿನ್ನ ಸುತ್ತಲಿನ ಜನ ಆಡಿಕೊಳ್ಳುತ್ತಾರೆ ಅಂದರೆ, ಅದು ನಿನ್ನ ಮೇಲಿನ ದ್ವೇಷದಿಂದ ಮಾತ್ರ ಅಲ್ಲ. ಸಂಕಟದಿಂದ ಕೂಡ. ದೇವರು ತಾನೇ ಮಾತಾಡಲಾರ ಆದ್ದರಿಂದ ಜನರಿಂದ ಆಡಿಸುತ್ತಾನೆ. ಅದು ದೇವರ ಮಾತು. ಗಮನ ಇಟ್ಟು ಕೇಳು ನಿನ್ನ ತಪ್ಪು ಅರ್ಥವಾಗುತ್ತದೆ. ಅದನ್ನು ಸರಿಪಡಿಸಿಕೋ. ನೀನು ಮುಳುಗಲು ಕಾರಣವಾದ ಜೂಜನ್ನು ಮೊದಲು ಬಿಡು. ನಮ್ಮ ಸುತ್ತಲಿನ ಯಾವುದೇ ಸಂಗತಿಗಳು ನಮ್ಮ ಸಂತೋಷ ನೆಮ್ಮದಿ ನಗುವನ್ನು ಕಸಿದುಕೊಳ್ಳಲಾರವು. ನಮ್ಮ ಬಗ್ಗೆ ನಮಗಿರುವ ಸಂದೇಹ, ಸಣ್ಣಪುಟ್ಟ ದುರಭ್ಯಾಸಗಳು ಇವು ರಂಧ್ರಗಳಾಗಿ ನಮ್ಮನ್ನು ಮುಳುಗಿಸುತ್ತವೆ’ ಎಂದ.

ಬಂದವನಿಗೆ ತಪ್ಪಿನ ಅರಿವಾಗಿತ್ತು. ತಲೆ ತಗ್ಗಿಸಿ ಸೂಫಿಗೆ ನಮಸ್ಕರಿಸಿದ. ಸೂಫಿ ಹೇಳಿದ: ‘ಅರ್ಥ ಮಾಡಿಕೋ ಜೀವನದ ಬೆಲೆ ಎಲ್ಲಕ್ಕಿಂತ ದೊಡ್ಡದು. ಅದರಲ್ಲೂ ಪರಿಶ್ರಮದ ಹಾದಿ ಫಲಿತದಷ್ಟೇ ಮುಖ್ಯ’.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

12 ಫೆಬ್ರವರಿ 2026 ಗುರುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣ ದಶಮಿ ಗಂ 12-23 ನಕ್ಷತ್ರ: ಜ್ಯೇಷ್ಠ ಗಂ. 13-43 ಯೋಗ: ಹರ್ಷಣ ಗಂ. 27-06 ಕರಣ: ವಿಷ್ಟಿ ಗಂ 12-23 ಮಕರ ಮಾಸದ 29 ನೇ ದಿನ. ಮಳೆ ನಕ್ಷತ್ರ : ಧನಿಷ್ಠ 2 ನೇ ಪಾದ. ರಾಹುಕಾಲ : ಮಧ್ಯಾಹ್ನ 01-30 - 03-00 ಸೂರ್ಯೋದಯ : 06-58 ಸೂರ್ಯಾಸ್ತ : 06-32, ಮುಸ್ಲಿಂ ದಿನಾಂಕ : 23 ಶಬನ್, **ಅದೃಷ್ಟ ಸಂಖ್ಯೆ :** 9, 5

ಮೇಷ: ಕುಟುಂಬದವರೊಡನೆ ಸಂತೋಷದಲ್ಲಿ ಇರಬೇಕೆಂಬ ಆಲೋಚನೆಗೆ ಒಂದು ಅಡ್ಡಿ ಎದುರಾಗಲಿದೆ. ವರ್ಚಸ್ಸಿನ ಪ್ರಭಾವದಿಂದ ವಿನೂತನ ಅವಕಾಶಗಳು ದೊರೆಯಲಿವೆ.

ವೃಷಭ: ಮಗನ ಸಹಾಯದಿಂದ ಸಂಬಂಧಿಕರೊಬ್ಬರ ಕೆಲಸ ಕೈಗೂಡುವುದರಿಂದ ಹೆಚ್ಚಿನ ಸಂತಸವಿರುವುದು. ಕೆಲಸಗಳನ್ನು ಶ್ರದ್ಧೆಯಿಂದ ಮಾಡಿ ಮುಗಿಸುವಿರಿ. ಸಾಲ ತೆಗೆದುಕೊಳ್ಳಬೇಡಿ.

ಮಿಥುನ: ಕೆಲವು ಸವಾಲುಗಳನ್ನು ಎದುರಿಸುವ ಸಂದರ್ಭಗಳು ನಿಮಗೆ ಎದುರಾಗಬಹುದು ಮತ್ತು ಅದರಲ್ಲಿ ಸಮ್ಮಿಶ್ರ ಫಲಿತಾಂಶವನ್ನು ಪಡೆಯುವಂತಾಗಲಿದೆ. ವ್ಯಾಪಾರಿಗಳಿಗೆ ಸಾಧಾರಣ ಲಾಭ.

ಕರ್ಕಾಟಕ: ನಿರುದ್ಯೋಗಸ್ಥರಿಗೆ ಹೊರರಾಜ್ಯವೊಂದರಲ್ಲಿ ಕೆಲಸ ನಿರ್ವಹಿಸುವ ಅವಕಾಶ ಎದುರಾದರೆ ಒಪ್ಪಿಕೊಳ್ಳಿ. ಸಹೋದರ ಸಹೋದರಿಯರ ಬಾಂಧವ್ಯ ಗಟ್ಟಿಯಾಗುವ ಘಟನೆ ನಡೆಯಲಿದೆ.

ಸಿಂಹ: ಚಿತ್ರಕಲೆಯಲ್ಲಿನ ಆಸಕ್ತಿಯಿಂದಾಗಿ ಕಲಿಕೆಗಾಗಿ ವಿಶೇಷ ತರಗತಿಗೆ ಕಳುಹಿಸಲು ತಂದೆಯವರಿಂದ ಒಪ್ಪಿಗೆ ದೊರೆಯುವುದು. ಹೋಮ-ಹವನಾದಿ ಧಾರ್ಮಿಕ ಕೆಲಸದಲ್ಲಿ ಪಾಲ್ಗೊಳ್ಳುವ ಅವಕಾಶ ಸಿಗಲಿದೆ.

ಕನ್ಯಾ: ಸತ್ಯನಾರಾಯಣ ಸ್ವಾಮಿಯ ಸೇವೆ ಮಾಡುವುದರಿಂದ ಜಟಿಲ ಸಮಸ್ಯೆಗಳು ಸೌಹಾರ್ದಯುತವಾಗಿ ಬಗೆಹರಿಯಲಿವೆ. ಮಹಿಳೆಯರಿಗೆ ಮನ್ನಣೆ ಹೆಚ್ಚಲಿದ್ದು ಲಾಭ ಪಡೆದುಕೊಳ್ಳುವಿರಿ.

ತುಲಾ: ವೈದ್ಯರು ಅದರಲ್ಲೂ ನರರೋಗ ತಜ್ಞರು ಅಭ್ಯಾಸದಲ್ಲಿ ತೋರಿದ ಬೇಜವಬ್ದಾರಿತನ ತೋರದಿರಿ. ಬಹುದಿನಗಳಿಂದ ಕೂಡಿಟ್ಟ ಹಣದಿಂದ ಬಂಗಾರ ಖರೀದಿಸುವ ಮನಸ್ಸಾಗಲಿದೆ.

ವೃಶ್ಚಿಕ: ವ್ಯವಹಾರಗಳಲ್ಲಿ ಸಲಹೆಗಳನ್ನು ಪಡೆದುಕೊಂಡಲ್ಲಿ ಯಶಸ್ವಿಯಾಗುವಿರಿ. ಕಾರ್ಮಿಕ ಜನರಿಗೆ ಆಡಳಿತ ವರ್ಗದವರಿಂದ ಅನುಕೂಲಗಳು ಉಂಟಾಗಲಿವೆ. ಪ್ರವಾಸಿ ಯೋಜನೆಗಳಿಗೆ ಯಶಸ್ಸು.

ಧನು: ವಿದೇಶದ ಶಿಕ್ಷಣವನ್ನು ಪಡೆದುಕೊಳ್ಳುವ ಪ್ರಯತ್ನ ನಡೆಸಿದಲ್ಲಿ ಅವಕಾಶ ಪ್ರಾಪ್ತಿ. ಹೊಸ ಮನೆಯನ್ನು ಭೋಗ್ಯಕ್ಕೆ ಕೊಡಲು ಮಾತುಕತೆ ನಡೆಯುವುದು. ಧ್ಯಾನ ಪ್ರವಚನ ಕೇಳಿ.

ಮಕರ: ಯೋಗ್ಯವಯಸ್ಕರಿಗೆ ಆಲೋಚನೆಗೆ ಸರಿಸಮಾನ ರೀತಿಯಲ್ಲಿ ವಿವಾಹ ಭಾಗ್ಯ ಒದಗಿ ಬರಲಿದೆ. ದಂತವೈದ್ಯ ವೃತ್ತಿಯವರಿಗೆ ಹಾಗೂ ದಂತ ಸಮಸ್ಯೆಗೆ ಚಿಕಿತ್ಸೆ ಪಡೆಯಲು ಅನುಕೂಲವಾದ ದಿನ.

ಕುಂಭ: ಸಂಗೀತ ಕಲಿಕೆಯಲ್ಲಿ ಅತೀವ ಆಸಕ್ತಿಗೆ ತಂದೆ-ತಾಯಿಯವರಿಂದ ಪ್ರೋತ್ಸಾಹ ಸಿಗಲಿದೆ. ಕಷ್ಟದ ದಿನಗಳಲ್ಲಿ ಸಹಕರಿಸಿದವರೊಂದಿಗೆ ನಮ್ರತೆಯಿಂದ, ವಿನಯದಿಂದ ಇರುವುದನ್ನು ಮರೆಯಬೇಡಿ.

ಮೀನ: ಕೆಲವು ಕೆಲಸಗಳನ್ನು ಯಾರ ನೆರವೂ ಇಲ್ಲದೆ ಸ್ವಯಂ ನಿರ್ವಹಿಸುವುದು ಉತ್ತಮ. ಸಹೋದರನ ಮೂಲಕ ಜಮೀನಿನ ಖರೀದಿ ವಿಚಾರದ ಮಾತುಕತೆಗಳು ನಡೆಯಲಿವೆ.

ಷೇರುಪೇಟೆ ವಹಿವಾಟು	ಎನ್‌ಎಸ್‌ಇ ನಿಫ್ಟಿ		ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು		ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)		ರಾಮನಗರ ರೇಷ್ಮೆಗೂಡು		ಮುದ್ರೆಮನೆ ಕಾಫಿ		ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಿಂದಿನ ವಹಿವಾಟಿನ ದರ)	
84,233 ಇಂದಿನ ಅಂತ್ಯ; 84,273 ಹಿಂದಿನ ಅಂತ್ಯ; 40	ಹಿಂದಿನ ಅಂತ್ಯ:	25,935	100 ಕ್ಕೆ	₹560	ಆರ್‌ಎಸ್‌ಎಸ್-4	₹205	ಮಿಶ್ರತಳಿ(ಸಿ.ಬಿ)	₹635-795	ಎಪಿ	₹23500	ಶೇಂಗಾ (ಕ್ವಿಂಟಲ್)	₹1740 (1740)
	ಇಂದಿನ ಅಂತ್ಯ:	25,953	12 ಕ್ಕೆ	₹80	ಆರ್‌ಎಸ್‌ಎಸ್-5	₹200	ದ್ವಿತಳಿ (ಬಿ.ವಿ)	₹392-985	ಎಸಿ	₹12600	ಸೋಯಾ (ಕ್ವಿಂಟಲ್)	₹1405 (1410)
	ದಿನದ ಗರಿಷ್ಠ:	26,009	ಮೈಸೂರು: 100 ಕ್ಕೆ	₹562	ಗುಡ್ ಲಾಟ್	₹188			ಆರ್‌ಪಿ	₹18000	ಸೂರ್ಯಕಾಂತಿ (ಕ್ವಿಂಟಲ್)	₹1615 (1630)
		18							ಆರ್‌ಸಿ	₹10000	ವಾಡೋಲೀನ್	₹1320 (1320)

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಅಮ್ಮಾ
ಶ್ರೀಮತಿ ಗಿರಿಜಮ್ಮ ನರಸಿಂಗಪ್ಪ, ತಂಡಿರ

ನಾವು ನಿಮ್ಮನ್ನು ಕಳೆದುಕೊಂಡು ಇಂದಿಗೆ 11 ವರ್ಷಗಳಾದರೂ ನಿಮ್ಮ ಪ್ರೀತಿ ನಮ್ಮೊಂದಿಗಿದೆ.
ನಿಮ್ಮ ಮಕ್ಕಳು, ಅಳಿಯಂದಿರು ಮೊಮ್ಮಕ್ಕಳು ಹಾಗೂ ಮರಿಮಕ್ಕಳು

ಮುಂಬೈ ಧಾರಣೆ (ಶೇಂಗಾ)	
11-02-2026	
ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800
ಶೇಂಗಾ ಎಣ್ಣೆ (10ಕೆಜಿಗೆ)	
ಕಚ್ಚಾ (ತಿರಿ ಬಿಟ್ಟು)	1750 (1750)
ಒಂದು ವಾರದ ಡೆಲಿವರಿ	1745 (1745)
ಶಾಮ್ ವಾರದ ಡೆಲಿವರಿ	1318 (1318)
ಸೂರ್ಯಕಾಂತಿ ಎಣ್ಣೆ ಕಚ್ಚಾ	1525 (1530)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,55,900 (1,55,900)
ಬೆಳ್ಳಿ ಕೆ.ಜಿಗೆ	2,64,000 (2,58,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

‘ದ್ವಿದಳ ಧಾನ್ಯ’ ಕೈಬಿಟ್ಟ ಅಮೆರಿಕ

ಭಾರತದೊಂದಿಗಿನ ವ್ಯಾಪಾರ ಒಪ್ಪಂದ: ಪರಿಷ್ಕೃತ ಫ್ಯಾಕ್ಟ್ ಶೀಟ್ ಪ್ರಕಟ

ಪ್ರಜಾವಾಣಿ ವಾರ್ತೆ/ ಪಿಟಿಐ

ವಾಷಿಂಗ್ಟನ್ / ನವದೆಹಲಿ: ಭಾರತ–ಅಮೆರಿಕ ನಡುವಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದಕ್ಕೆ (ಬಿಟಿಎ) ಸಂಬಂಧಿಸಿದಂತೆ ಟ್ರಂಪ್ ಆಡಳಿತವು ಮಂಗಳವಾರ, ಒಪ್ಪಂದದ ರೂಪುರೇಷೆ ಒಳಗೊಂಡ ಪರಿಷ್ಕೃತ ಫ್ಯಾಕ್ಟ್‌ಶೀಟ್ ಪ್ರಕಟಿಸಿದೆ.

ಸುಂಕ ಕಡಿತಗೊಳಿಸಿ ಅಥವಾ ಸುಂಕ ರಹಿತವಾಗಿ ಭಾರತವು ಆಮದು ಮಾಡಿಕೊಳ್ಳಲಿದೆ ಎಂದು ಅಮೆರಿಕ ಹೇಳಿದ್ದ ಕೃಷಿ ಉತ್ಪನ್ನಗಳ ಪಟ್ಟಿಯಲ್ಲಿ ‘ದ್ವಿದಳ ಧಾನ್ಯ’ವನ್ನು ಕೈಬಿಡಲಾಗಿದೆ.

ಫೆಬ್ರುವರಿ 9ರಂದು ಶ್ವೇತಭವನ ಪ್ರಕಟಿಸಿದ್ದ ಫ್ಯಾಕ್ಟ್‌ಶೀಟ್‌ನಲ್ಲಿ, ಅಮೆರಿಕದಿಂದ ಸುಂಕ ಕಡಿತವಾಗಿ ಅಥವಾ ಸುಂಕ ರಹಿತವಾಗಿ ಭಾರತದ ಮಾರುಕಟ್ಟೆ ಪ್ರವೇಶಿಸಲಿರುವ ಕೃಷಿ ಉತ್ಪನ್ನಗಳಲ್ಲಿ ಮುಖ್ಯವಾಗಿ ‘ದ್ವಿದಳ ಧಾನ್ಯ’ವನ್ನು ಉಲ್ಲೇಖಿಸಲಾಗಿತ್ತು.

ಪರಿಷ್ಕೃತ ಫ್ಯಾಕ್ಟ್‌ಶೀಟ್‌ನಲ್ಲಿ ಡಿಸ್ಟಿಲರ್ಸ್ ಧಾನ್ಯಗಳು (ಡಿಡಿಜಿಎಸ್), ಕೆಂಪು ಜೋಳ, ಡ್ರೈಫ್ರೂಟ್‌ಗಳು, ತಾಜಾ ಮತ್ತು ಸಂಸ್ಕರಿಸಿದ ಹಣ್ಣು, ಸೋಯಾಬೀನ್ ಎಣ್ಣೆ, ವೈನ್ ಮತ್ತು ಮದ್ಯವನ್ನು ಹಾಗೆಯೇ ಉಳಿಸಿಕೊಂಡು, ‘ದ್ವಿದಳ ಧಾನ್ಯ’ ಮತ್ತು ‘ಇತರ ಕೃಷಿ ಉತ್ಪನ್ನ’ಗಳನ್ನು ತೆಗೆದುಹಾಕಲಾಗಿದೆ.

ಜತೆಗೆ, ಈ ಉತ್ಪನ್ನಗಳನ್ನು ಖರೀದಿಸಲು ಭಾರತ ‘ಬದ್ಧ’ವಾಗಿದೆ ಎಂಬ ಪದವನ್ನು ಕೈಬಿಟ್ಟು, ಖರೀದಿಸಲು ‘ಬಯಸಿದೆ’ ಎಂದು ಬದಲಿಸಲಾಗಿದೆ.

ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಒಪ್ಪಂದದ ಮಧ್ಯಂತರ ಚೌಕಟ್ಟು ರೂಪುಗೊಂಡ ಬೆನ್ನಲ್ಲೇ ಫ್ಯಾಕ್ಟ್ ಶೀಟ್ ಅನ್ನು ಶ್ವೇತಭವನ ಪ್ರಕಟಿಸಿತ್ತು. ‘ಭಾರತವು ಅಮೆರಿಕದಿಂದ ಮುಂದಿನ 5 ವರ್ಷಗಳ ಅವಧಿಗೆ, ಇಂಧನ, ವಿಮಾನ ಮತ್ತು ವಿಮಾನದ ಬಿಡಿಭಾಗಗಳು, ಅಮೂಲ್ಯ ಲೋಹಗಳು, ಸಾಫ್ಟ್‌ವೇರ್, ಹಾರ್ಡ್‌ವೇರ್, ಡಿಜಿಟಲ್ ಉಪಕರಣಗಳು, ಕಲ್ಲಿದ್ದಲನ್ನು ಖರೀದಿಸಲು ಒಪ್ಪಂದ ಮಾಡಿಕೊಂಡಿದೆ’ ಎಂದು ಉಭಯ ದೇಶಗಳ ಜಂಟಿ ಪ್ರಕಟಣೆ ತಿಳಿಸಿತ್ತು.

ಆದರೆ, ಪರಿಷ್ಕೃತ ಫ್ಯಾಕ್ಟ್‌ಶೀಟ್ ನಲ್ಲಿ, ಅಮೆರಿಕದಿಂದ ಇಂಧನ, ಸಂವಹನ ಮತ್ತು ಮಾಹಿತಿ ತಂತ್ರಜ್ಞಾನ, ಕಲ್ಲಿದ್ದಲು, ಕೃಷಿ ಮತ್ತು ಇತರ ವಲಯಗಳ ಉತ್ಪನ್ನಗಳು ಸೇರಿ ಒಟ್ಟು 500 ಬಿಲಿಯನ್ ಡಾಲರ್‌ನಿಂತ (ಸರಿಸುಮಾರು ₹45.28 ಲಕ್ಷ ಕೋಟಿ) ಹೆಚ್ಚಿನ ಮೊತ್ತದ ಸರಕುಗಳನ್ನು ಖರೀದಿಸಲು ಭಾರತ ಉದ್ದೇಶಿಸಿದೆ. ಎಲ್ಲ ಕೈಗಾರಿಕಾ ಸರಕುಗಳು, ವಿಶಾಲ ಶ್ರೇಣಿಯ ಆಹಾರ ಮತ್ತು ಕೃಷಿ ಉತ್ಪನ್ನಗಳ ಮೇಲಿನ ಸುಂಕವನ್ನು ಭಾರತ ಕಡಿಮೆ ಮಾಡಬಹುದು ಅಥವಾ ತೆಗೆದುಹಾಕಬಹುದು ಎಂದು ಹೇಳಲಾಗಿದೆ. ಅಂತಿಮ ಒಪ್ಪಂದದಲ್ಲಿ ಅಮೆರಿಕವು ಭಾರತಕ್ಕೆ ಸುಂಕ ರಹಿತವಾಗಿ ರಫ್ತು ಮಾಡುವ ಸರಕುಗಳ ಪಟ್ಟಿಯನ್ನು ಹೆಚ್ಚಿಸುವ ಸಾಧ್ಯತೆ ಇದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

‘ಸೀಮಿತಗೊಳಿಸುತ್ತೇವೆ’

‘ಅಮೆರಿಕದ ಕೃಷಿ ಉತ್ಪನ್ನಗಳ ಭಾರತ ಮಾರುಕಟ್ಟೆ ಪ್ರವೇಶವನ್ನು ಸೀಮಿತಗೊಳಿಸುತ್ತೇವೆ. ಅದಕ್ಕಾಗಿ, ಸುಂಕ ರಿಯಾಯಿತಿಯನ್ನು ನಮ್ಮದೇ ಕಾರ್ಯವಿಧಾನ ಬಳಸುತ್ತೇವೆ. ಹಾಗಾಗಿ ಇದು ನಮ್ಮ ಕೃಷಿಕರ ಮೇಲೆ ಪರಿಣಾಮ ಬೀರುವುದಿಲ್ಲ’ ಎಂದು ವಾಣಿಜ್ಯ ಕಾರ್ಯದರ್ಶಿ ರಾಜೇಶ್ ಅಗರ್‌ವಾಲ್ ಹೇಳಿದ್ದಾರೆ.

ಭಾರತ-ಅಮೆರಿಕ ನಡುವಿನ ಅಂತಿಮ ವ್ಯಾಪಾರ ಒಪ್ಪಂದಕ್ಕೆ ಮಾರ್ಚ್ ಅಂತ್ಯದ ವೇಳೆಗೆ ಸಹಿ ಹಾಕುವ ಸಾಧ್ಯತೆ ಇದೆ ಎಂದಿದ್ದಾರೆ.

ನಕ್ಷೆ ಅಳಿಸಿ ಹಾಕಿದ ಯುಎಸ್‌ಟಿಆರ್

ಪಾಕ್ ಆಕ್ರಮಿತ ಕಾಶ್ಮೀರ (ಪಿಒಕೆ) ಸೇರಿದಂತೆ ಜಮ್ಮು ಮತ್ತು ಕಾಶ್ಮೀರದ ಸಂಪೂರ್ಣ ಪ್ರದೇಶ ಹಾಗೂ ಅಕ್ಸಾಯ್ ಚಿನ್ ಅನ್ನು ಭಾರತದ ಭಾಗವಾಗಿ ತೋರಿಸಿದ ನಕ್ಷೆಯನ್ನು ಅಮೆರಿಕದ ವ್ಯಾಪಾರ ಪ್ರತಿನಿಧಿ ಕಚೇರಿ (ಯುಎಸ್‌ಟಿಆರ್) ‘ಎಕ್ಸ್’ ಪೋಸ್ಟ್‌ನಿಂದ ತೆಗೆದುಹಾಕಿದೆ.

ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಒಪ್ಪಂದದ ಮಧ್ಯಂತರ ಚೌಕಟ್ಟು ರೂಪುಗೊಂಡ ಬೆನ್ನಲ್ಲೇ, ಯುಎಸ್‌ಟಿಆರ್ ಈ ನಕ್ಷೆಯೊಂದಿಗೆ ಸಾಮಾಜಿಕ ಜಾಲತಾಣದಲ್ಲಿ ಒಪ್ಪಂದ ಮಾಹಿತಿ ಹಂಚಿಕೊಂಡಿತ್ತು. ಇದೀಗ ನಕ್ಷೆಯನ್ನು ಯುಎಸ್‌ಟಿಆರ್‌ನ ‘ಎಕ್ಸ್’ ಹ್ಯಾಂಡಲ್‌ನಿಂದ ಅಳಿಸಿ ಹಾಕಲಾಗಿದೆ.

ಈ ಹಿಂದೆಯೆಲ್ಲಾ ಪಿಒಕೆ ಮತ್ತು ಅಕ್ಸಾಯ್ ಚಿನ್ ಪ್ರದೇಶವನ್ನು ಪ್ರತ್ಯೇಕವಾಗಿ ತೋರಿಸುವ ರೇಖೆಯೊಂದಿಗೆ ಭಾರತದ ನಕ್ಷೆಯನ್ನು ಪ್ರಕಟಿಸಿತ್ತು.

ಬಜೆಟ್ ಮೇಲಿನ ಚರ್ಚೆಗೆ ಉತ್ತರ ನೀಡಿದ ಸಚಿವೆ ನಿರ್ಮಲಾ

2026–27ರಲ್ಲಿ ₹53 ಲಕ್ಷ ಕೋಟಿ ವೆಚ್ಚ

ನವದೆಹಲಿ (ಪಿಟಿಐ): 2026–27ನೇ ಹಣಕಾಸು ವರ್ಷದಲ್ಲಿ ಕೇಂದ್ರ ಸರ್ಕಾರದ ಕಡೆಯಿಂದ ಆಗುವ ವೆಚ್ಚಗಳ ಒಟ್ಟು ಮೊತ್ತವು ₹53.47 ಲಕ್ಷ ಕೋಟಿಯಾಗಲಿದೆ ಎಂಬ ಅಂದಾಜು ಮಾಡಲಾಗಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಲೋಕಸಭೆಗೆ ಬುಧವಾರ ತಿಳಿಸಿದರು.

ಇದು ಮಾರ್ಚ್ 31ಕ್ಕೆ ಕೊನೆಗೊಳ್ಳಲಿರುವ ಪ್ರಸಕ್ತ ಹಣಕಾಸು ವರ್ಷದಲ್ಲಿನ ವೆಚ್ಚಕ್ಕೆ ಹೋಲಿಸಿದರೆ ಶೇ 7.7ರಷ್ಟು ಹೆಚ್ಚು.

ಪರಿಷ್ಕೃತ ಅಂದಾಜಿನ ಪ್ರಕಾರ ಪ್ರಸಕ್ತ ಹಣಕಾಸು ವರ್ಷದ ಬಜೆಟ್ ಗಾತ್ರವು ₹49.64 ಲಕ್ಷ ಕೋಟಿ. ಇದು 2025ರ ಫೆಬ್ರುವರಿಯಲ್ಲಿ ಮಾಡಿದ್ದ ಅಂದಾಜು ಮೊತ್ತವಾದ ₹50.65 ಲಕ್ಷ ಕೋಟಿಗೆ ಹೋಲಿಸಿದರೆ ಕಡಿಮೆ. 2024–25ನೇ ಸಾಲಿನಲ್ಲಿ ₹46.52 ಲಕ್ಷ ಕೋಟಿ ವೆಚ್ಚ ಮಾಡಲಾಗಿತ್ತು.

2026–27ನೇ ಸಾಲಿನ ವೆಚ್ಚಗಳ ಅಂದಾಜು ಕೇಂದ್ರ ಸರ್ಕಾರದ ತೆರಿಗೆ ವರಮಾನಕ್ಕಿಂತ ಹೆಚ್ಚು ಎಂದು ನಿರ್ಮಲಾ ಅವರು ಬಜೆಟ್ ಮೇಲಿನ ಚರ್ಚೆಗೆ ಉತ್ತರಿಸುವ ಸಂದರ್ಭದಲ್ಲಿ ತಿಳಿಸಿದರು. ತೆರಿಗೆ ವರಮಾನದ ಮೂಲಕ ಒಟ್ಟು ₹44.04 ಲಕ್ಷ ಕೋಟಿ ಸಂಗ್ರಹಿಸುವ ಉದ್ದೇಶವನ್ನು ಸರ್ಕಾರ ಹೊಂದಿದೆ.

ಈ ಬಾರಿ ಬಜೆಟ್‌ನಲ್ಲಿ ಬಂಡವಾಳ ವೆಚ್ಚಗಳಿಗೆ ನಿಗದಿ ಮಾಡಿರುವ ₹12.2 ಲಕ್ಷ ಕೋಟಿಯು ಈವರೆಗಿನ ಅತಿಹೆಚ್ಚಿನ ಮೊತ್ತ ಎಂದರು.

2026–27ರಲ್ಲಿ ವಿತ್ತೀಯ ಕೊರತೆಯು ₹16.95 ಲಕ್ಷ ಕೋಟಿ ಆಗಲಿದೆ ಎಂದು ಅಂದಾಜು ಮಾಡಲಾಗಿದೆ. ಮಾರುಕಟ್ಟೆಯಿಂದ ಸಾಲ ಪಡೆಯುವ ಮೂಲಕ ₹11.7 ಲಕ್ಷ ಕೋಟಿ ಸಂಗ್ರಹಿಸಲಾಗುತ್ತದೆ. ಇನ್ನುಳಿದ ಮೊತ್ತವು ಸಣ್ಣ ಉಳಿತಾಯ ಯೋಜನೆಗಳಿಂದ ಹಾಗೂ ಇತರ ಮೂಲಗಳಿಂದ ಬರಲಿದೆ.

ಸುದ್ದಿ 2 ನಿಮಿಷ

ವಂಚನೆ ತಡೆಗೆ ಏರ್‌ಟೆಲ್ ಕ್ರಮ

ಬೆಂಗಳೂರು: ಒಂದು ಬಾರಿಗೆ ಬಳಕೆಗೆ ಬರುವ ಪಾಸ್‌ವರ್ಡ್ (ಒಟಿಪಿ) ಆಧರಿಸಿದ ನಡೆಯುವ ಬ್ಯಾಂಕಿಂಗ್ ವಂಚನೆ ಕೃತ್ಯಗಳನ್ನು ತಡೆಯುವ ಉದ್ದೇಶದಿಂದ ಏರ್‌ಟೆಲ್ ಕಂಪನಿಯು ಹೊಸ ಸೇವೆಯೊಂದನ್ನು ಆರಂಭಿಸಿದೆ.

ಯಾವುದೋ ನೆಪದಲ್ಲಿ ಅವಸರದ ಸನ್ನಿವೇಶ ಸೃಷ್ಟಿಸುವ ವಂಚಕರು, ಅಮಾಯಕರಿಂದ ಬ್ಯಾಂಕಿಂಗ್ ವಹಿವಾಟಿನ ಒಟಿಪಿ ಕೇಳುತ್ತಾರೆ. ಅದನ್ನು ಪಡೆದು ಅವರು ಅಮಾಯಕರ ಹಣವನ್ನು ಬೇರೊಂದು ಖಾತೆಗೆ ವರ್ಗಾವಣೆ ಮಾಡುತ್ತಾರೆ.

ಅಪಾಯ ಸೃಷ್ಟಿಯಾಗಬಹುದಾದ ಇಂತಹ ಸನ್ನಿವೇಶಗಳನ್ನು ಏರ್‌ಟೆಲ್‌ನ ಎ.ಐ. ಆಧಾರಿತ ವ್ಯವಸ್ಥೆಯು ಗುರುತಿಸುತ್ತದೆ. ತನ್ನ ಗ್ರಾಹಕರನ್ನು ಅದರ ಬಗ್ಗೆ ಎಚ್ಚರಿಸುವ ಕೆಲಸ ಮಾಡುತ್ತದೆ. ಅಪಾಯಕಾರಿ ಆಗಬಹುದಾದ ಕರೆಯೊಂದರ ಸಂದರ್ಭದಲ್ಲಿ ಬ್ಯಾಂಕ್ ಒಟಿಪಿ ಮೊಬೈಲ್‌ಗೆ ಬಂದರೆ, ಅದನ್ನು ಬೇರೊಬ್ಬರಿಗೆ ನೀಡುವುದರ ಅಪಾಯದ ಬಗ್ಗೆ ಏರ್‌ಟೆಲ್‌ನ ವ್ಯವಸ್ಥೆಯು ಎಚ್ಚರಿಕೆ ನೀಡುತ್ತದೆ ಎಂದು ಪ್ರಕಟಣೆ ವಿವರಿಸಿದೆ.

‘ಎ.ಐ. ಆಧಾರವಾಗಿ ಇರಿಸಿಕೊಂಡು ಹೊಸದಾಗಿ ಅಭಿವೃದ್ಧಿಪಡಿಸಲಾಗಿರುವ ವ್ಯವಸ್ಥೆಯನ್ನು ವಂಚನೆಯ ಉದ್ದೇಶದ ಕೃತ್ಯಗಳನ್ನು ಗುರುತಿಸಿ, ಎಚ್ಚರಿಸುವಂತೆ ರೂಪಿಸಲಾಗಿದೆ. ಇದನ್ನು ವ್ಯಾಪಕವಾಗಿ ಪರೀಕ್ಷೆಗೆ ಒಳಪಡಿಸಲಾಗಿದೆ. ಇದು ಗಣನೀಯ ಪ್ರಮಾಣದ ನಿಖರತೆಯನ್ನು ತೋರಿಸಿದೆ’ ಎಂದು ಕಂಪನಿಯ ಸಿಇಒ ಶಾಶ್ವತ್ ಶರ್ಮ ಹೇಳಿದ್ದಾರೆ.

ಮಹೀಂದ್ರ: ₹5,021 ಕೋಟಿ ಲಾಭ

ನವದೆಹಲಿ (ಪಿಟಿಐ): ವಾಹನ ತಯಾರಿಕಾ ಕಂಪನಿ ಮಹೀಂದ್ರ ಆ್ಯಂಡ್ ಮಹೀಂದ್ರ ಪ್ರಸಕ್ತ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ₹5,021 ಕೋಟಿ ತೆರಿಗೆ ನಂತರದ ಲಾಭ (ಪಿಎಟಿ) ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹3,624 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದ ಪ್ರಮಾಣದಲ್ಲಿ ಶೇ 38.54ರಷ್ಟು ಹೆಚ್ಚಳವಾಗಿದೆ ಎಂದು ಕಂಪನಿಯು ಬುಧವಾರ ಷೇರುಪೇಟೆಗೆ ತಿಳಿಸಿದೆ.

ಪ್ರಯಾಣಿಕ ವಾಹನ ಮತ್ತು ಕೃಷಿ ವಲಯದ ವಾಹನಗಳ ಮಾರಾಟದಲ್ಲಿ ಹೆಚ್ಚಳವಾಗಿದೆ. ಇದು ಒಟ್ಟಾರೆ ವಾಹನಗಳ ಮಾರಾಟ ಹೆಚ್ಚಳವಾಗಲು ಕಾರಣ ಎಂದು ತಿಳಿಸಿದೆ.

ಕಂಪನಿಯ ವರಮಾನವು ₹41,464 ಕೋಟಿಯಿಂದ ₹51,579 ಕೋಟಿಗೆ ಹೆಚ್ಚಳವಾಗಿದೆ. ಇದೇ ಮೊದಲ ಬಾರಿಗೆ ಕಂಪನಿಯ ವರಮಾನವು ₹50 ಸಾವಿರ ಕೋಟಿ ದಾಟಿದೆ. ವೆಚ್ಚವು ₹37,096 ಕೋಟಿಯಿಂದ ₹41,464 ಕೋಟಿಗೆ ಏರಿಕೆಯಾಗಿದೆ.

ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯ ಪ್ರಯಾಣಿಕ ವಾಹನಗಳ ಮಾರಾಟದಲ್ಲಿ ಶೇ 23ರಷ್ಟು ಹೆಚ್ಚಳವಾಗಿದ್ದು, 3.02 ಲಕ್ಷ ವಾಹನಗಳು ಮಾರಾಟವಾಗಿವೆ. ಕೃಷಿ ವಾಹನಗಳ ಮಾರಾಟದಲ್ಲಿ ಸಹ ಶೇ 23ರಷ್ಟು ಏರಿಕೆಯಾಗಿದ್ದು, 1.5 ಲಕ್ಷ ವಾಹನಗಳು ಮಾರಾಟವಾಗಿವೆ ಎಂದು ತಿಳಿಸಿದೆ.

ಅಡಿಕೆ ಧಾರಣೆ

ಪುತ್ತೂರು		ಕೋಕ	15090-35099	ಸಿದ್ದಾಪುರ	
ಕೋಕ	28000-36500	ಫ್ಯಾಕ್ಟರಿ	10172-28669	ಬಿಳೆಗೋಟು	27911-40389
ಹೊಸತು	26000-46000	ಹೊಸಚಾಲಿ	43110-49301	ಚಾಲಿ	46755-49309
ಹಳತು	50000-53500	ಶಿವಮೊಗ್ಗ		ಕೋಕ	22699-33699
ಕುಮಟಾ		ಬೆಟ್ಟೆ	52009-66689	ಹೊಸಚಾಲಿ	41509-47609
ಚಿಪ್ಪು	36899-54009	ಗೊರಬಲು	19192-42999	ಕೆಂಪುಗೋಟು	34289-34469
ಚಾಲಿ	48569-51299	ರಾಶಿ	46199-57699	ರಾಶಿ	48700-54599
ಚಿಪ್ಪು	32569-39999	ಸರಕು	62699-99170	ತಟ್ಟಿಬೆಟ್ಟೆ	38689-52319

ಪುಣ್ಯಸ್ಮರಣೆ
ಶ್ರೀಮತಿ ನರಸಮ್ಮ 13-06-1982
ಶ್ರೀಯುತ ಬಾಲಪ್ಪರೆಡ್ಡಿ 12-02-2012
ನೀವು ನಮ್ಮನ್ನು ಅಗಲಿ ವರ್ಷಗಳು ಕಳೆದರೂ, ನಿಮ್ಮ ನೆನಪು ನಮ್ಮ ಹೃದಯಾಂತರಾಳದಲ್ಲಿ ಹಚ್ಚಹಸುರಾಗಿ ಉಳಿದಿದೆ. ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥನೆ
ಬಿ ರಾಮಕೃಷ್ಣರೆಡ್ಡಿ, ಮಕ್ಕಳು, ಮೊಮ್ಮೊಕ್ಕಳು, ಮರಿಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು ಕೋಡಿಹಳ್ಳಿ, ಬೆಂಗಳೂರು.

TRAVEL CORNER
Orchid ಆರ್ಕಿಡ್ ಟ್ರಾವಲ್ ಅಂಡ್ ಟೂರ್ಸ್
ನಂ 98, 1ನೇ ಮಹಡಿ ಡಿವಿಜಿ ರಸ್ತೆ, ಬಸವನಗುಡಿ, ಬೆಂಗಳೂರು – 560 004.
ರಿಯಾಯಿತಿ ದರದಲ್ಲಿ ಪ್ರವಾಸಗಳು–2026
99000 99252 / 9880079588
ಆಸ್ಟ್ರೇಲಿಯ ಮತ್ತು ನ್ಯೂಜಿಲ್ಯಾಂಡ್ 20 ದಿನಗಳು
6 ದಿನಗಳ ದುಬೈ–ಅಬುಧಾಬಿ–ಶಾರ್ಜ
11 ದಿನಗಳ ವಿಯೇಟ್ನಾಮ್–ಕಾಂಬೋಡಿಯಾ
9 ದಿನಗಳ ಕಾಶಿ–ಪ್ರಯಾಗ್‌ರಾಜ್–ಅಯೋಧ್ಯ
8 ದಿನಗಳ ಭೂತಾನ್ ಸ್ಪೆಷಲ್
7/11 ದಿನಗಳ ಸಿಂಗಾಪುರ–ಮಲೇಶಿಯ–ಥೈಲ್ಯಾಂಡ್
6 ದಿನಗಳ ಬಾಲಿ

ಅಶೋಕ್ ಲೇಲ್ಯಾಂಡ್‌ಗೆ ₹862 ಕೋಟಿ ಲಾಭ

ನವದೆಹಲಿ (ಪಿಟಿಐ): ವಾಣಿಜ್ಯ ವಾಹನ ತಯಾರಿಕಾ ಕಂಪನಿ ಅಶೋಕ್ ಲೇಲ್ಯಾಂಡ್‌ನ ನಿವ್ವಳ ಲಾಭವು ಪ್ರಸಕ್ತ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಶೇ 5.19ರಷ್ಟು ಏರಿಕೆಯಾಗಿದ್ದು, ₹862 ಕೋಟಿ ಆಗಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹819 ಕೋಟಿ ಲಾಭ ಗಳಿಸಿತ್ತು. ವರಮಾನವು ₹11,995 ಕೋಟಿಯಿಂದ ₹14,830 ಕೋಟಿಗೆ ಹೆಚ್ಚಳವಾಗಿದೆ. ಒಟ್ಟು ವೆಚ್ಚವು ₹10,937 ಕೋಟಿಯಿಂದ ₹13,490 ಕೋಟಿಗೆ ತಲುಪಿದೆ ಎಂದು ಕಂಪನಿ ಷೇರುಪೇಟೆಗೆ ಬುಧವಾರ ತಿಳಿಸಿದೆ.

ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯ ಮಧ್ಯಮ ಮತ್ತು ಭಾರಿ ಗಾತ್ರದ ವಾಣಿಜ್ಯ ವಾಹನಗಳ (ಎಂಎಚ್‌ಸಿವಿ) ಮಾರಾಟದಲ್ಲಿ ಶೇ 23ರಷ್ಟು ಹೆಚ್ಚಳವಾಗಿದ್ದು, 32,929 ವಾಹನಗಳು ಮಾರಾಟವಾಗಿವೆ. ಸಣ್ಣ ಗಾತ್ರದ ವಾಣಿಜ್ಯ ವಾಹನಗಳ (ಎಲ್‌ಸಿವಿ) ಮಾರಾಟದಲ್ಲಿ ಶೇ 30ರಷ್ಟು ಏರಿಕೆಯಾಗಿದ್ದು, 20,518 ವಾಹನಗಳು ಮಾರಾಟವಾಗಿವೆ.

ವಾಹನಗಳ ರಫ್ತಿನಲ್ಲಿ ಶೇ 20ರಷ್ಟು ಹೆಚ್ಚಳವಾಗಿದ್ದು, 4,965 ವಾಹನಗಳು ರಫ್ತಾಗಿವೆ ಎಂದು ತಿಳಿಸಿದೆ.

9 ಸಾವು, 27 ಮಂದಿಗೆ ಗಾಯ

ಕೆನಡಾ: ಶಾಲೆಗೆ ನುಗ್ಗಿ ಗುಂಡಿನ ದಾಳಿ ನಡೆಸಿದ ಮಹಿಳೆ

ಟೊರಾಂಟೊ (ಎಎಫ್‌ಪಿ): ಕೆನಡಾದ ಬ್ರಿಟಿಷ್ ಕೊಲಂಬಿಯಾ ಪ್ರಾಂತ್ಯದ ಟಂಬ್ಲರ್ ರಿಡ್ಜ್ ನಗರದಲ್ಲಿರುವ ‘ಟಂಬ್ಲರ್ ರಿಡ್ಜ್ ಹೈಸ್ಕೂಲ್’ಗೆ ಮಹಿಳೆಯೊಬ್ಬರು ನುಗ್ಗಿ ಗುಂಡಿನ ದಾಳಿ ನಡೆಸಿರುವ ಘಟನೆ ಮಂಗಳವಾರ ಮಧ್ಯಾಹ್ನ ನಡೆದಿದೆ. ಇದೇ ವೇಳೆ, ಶಾಲೆ ಹತ್ತಿರದ ಮನೆಯೊಂದರಲ್ಲಿ ಎರಡು ಶವ ಪತ್ತೆಯಾಗಿವೆ.

ಎರಡೂ ಘಟನೆ ಸೇರಿ ಒಟ್ಟು 9 ಮಂದಿ ಮೃತಪಟ್ಟಿದ್ದು, 27 ಮಂದಿ ಗಾಯಗೊಂಡಿದ್ದಾರೆ. ಈ ಪೈಕಿ ಇಬ್ಬರ ಸ್ಥಿತಿ ಗಂಭೀರವಾಗಿದೆ. ‘ಈ ಎರಡೂ ಘಟನೆಗಳೂ ಸಂಬಂಧಿಸಿವೆ’ ಎಂದು ಪೊಲೀಸರು ತಿಳಿಸಿದ್ದಾರೆ. ಮೃತರಲ್ಲಿ ಎಷ್ಟು ಮಂದಿ ವಿದ್ಯಾರ್ಥಿಗಳು ಇದ್ದಾರೆ ಎಂಬ ಬಗ್ಗೆ ಪೊಲೀಸರು ಯಾವುದೇ ಮಾಹಿತಿ ನೀಡಿಲ್ಲ.

‘ಮಹಿಳೆಯ ಗುರುತು ಪತ್ತೆಯಾಗಿದೆ. ಈ ಕೃತ್ಯದ ಹಿಂದಿನ ಕಾರಣ ತಿಳಿದುಬಂದಿಲ್ಲ. ಆದ್ದರಿಂದ, ಮಹಿಳೆಯ ಗುರುತು ಬಹಿರಂಗ ಮಾಡುವುದಿಲ್ಲ’ ಎಂದು ಪೊಲೀಸರು ಹೇಳಿದ್ದಾರೆ. ಕೆನಡಾದಲ್ಲಿ ಶಾಲೆಯ ಮೇಲೆ ಗುಂಡಿನ ದಾಳಿ ನಡೆದ ಘಟನೆಗಳು ಅತ್ಯಂತ ವಿರಳ. ಕಳೆದ ವರ್ಷಗಳಲ್ಲಿ ನಡೆದಿಲ್ಲ. 7ರಿಂದ 12ನೇ ತರಗತಿಯ 160 ವಿದ್ಯಾರ್ಥಿಗಳು ಈ ಶಾಲೆಯಲ್ಲಿದ್ದಾರೆ.

ಶವವಾಗಿ ಪತ್ತೆಯಾದ ಮಹಿಳೆ: ಘಟನೆ ಕುರಿತು ಮಾಹಿತಿ ಬಂದ ಎರಡು ನಿಮಿಷದಲ್ಲಿ ಪೊಲೀಸರು ಶಾಲೆಗೆ ತಲುಪಿದ್ದಾರೆ. ‘ಶಾಲೆಯಲ್ಲಿ ಆರು ಶವಗಳು ಪತ್ತೆಯಾಗಿವೆ. ಜೊತೆಗೆ, ಗುಂಡಿನ ದಾಳಿ ನಡೆಸಿದ ಮಹಿಳೆಯ ಶವವೂ ಪತ್ತೆಯಾಗಿದೆ. ಆಕೆ ಸ್ವಯಂ ಗುಂಡು ಹಾರಿಸಿಕೊಂಡಿರುವ ಸಾಧ್ಯತೆಯಿದೆ. ಘಟನೆಗೆ ಸಂಬಂಧಿಸಿ ಬೇರೆ ಯಾರ ಮೇಲೆಯೂ ಅನುಮಾನವಿಲ್ಲ’ ಎಂದು ಪೊಲೀಸರು ಮಾಹಿತಿ ನೀಡಿದರು.

‘ಮಹಿಳೆಯಿಂದ ಕೃತ್ಯ: ಇದೇ ಮೊದಲು’

‘ಸಾರ್ವಜನಿಕರ ಮೇಲೆ ಗುಂಡಿನ ದಾಳಿ ನಡೆಸುವಂಥ ಘಟನೆಗಳು ನೆರೆಯ ಅಮೆರಿಕದಲ್ಲಿ ಪದೇ ಪದೇ ನಡೆಯುತ್ತಲೇ ಇರುತ್ತವೆ. ಕೆನಡಾದಲ್ಲಿ ಬಂದೂಕು ಇಟ್ಟುಕೊಳ್ಳುವುದಕ್ಕೆ ಸಂಬಂಧಿಸಿ ಕಠಿಣ ಕಾನೂನುಗಳಿವೆ. ಆದ್ದರಿಂದ ಇಲ್ಲಿ ಇಂಥ ಘಟನೆಗಳು ವಿರಳ. ಮಹಿಳೆಯೊಬ್ಬರು ಗುಂಡಿನ ದಾಳಿ ನಡೆಸಿದ ಘಟನೆ ದೇಶದಲ್ಲಿ ನಡೆದೇ ಇಲ್ಲ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಬಾಗಿಲಿಗೆ ಟೇಬಲ್ ಜೋಡಿಸಿಟ್ಟೆವು’

ಏನು ನಡೆಯುತ್ತಿದೆ ಎಂಬುದು ಅರ್ಥವಾಗಲೇ ಇಲ್ಲ. ನಮಗೆ ತಿಳಿಯಿತು, ಬಳಿಕ, ಗುಂಡಿನ ದಾಳಿಯ ದೃಶ್ಯಗಳಿರುವ ಪೋಸ್ಟ್‌ಗಳು ನಮ್ಮ ಮೊಬೈಲ್‌ಗೆ ಬರತೊಡಗಿದವು. ತಕ್ಷಣವೇ ನಾವು ನಮ್ಮ ಕೊಠಡಿಯ ಬಾಗಿಲಿಗೆ ಅಡ್ಡಲಾಗಿ ಬ್ಯಾರಿಕೇಡ್ ರೀತಿಯಲ್ಲಿ ಟೇಬಲ್‌ಗಳನ್ನು ಜೋಡಿಸಿಟ್ಟೆವು. ಎರಡು ತಾಸುಗಳ ಬಳಿಕ ಪೊಲೀಸರು ನಮ್ಮನ್ನು ಕೊಠಡಿಯಿಂದ ಹೊರಗೆ ಕರೆತಂದರು

ಡ್ಯಾರಿಯನ್ ಕ್ವಿನ್, 12ನೇ ತರಗತಿ ವಿದ್ಯಾರ್ಥಿ

ಐಎಫ್‌ಐಎ ಭಾರತ್ ಸಲಹಾ ಮಂಡಳಿಗೆ ಸಂಜಯ್ ಕೊಪ್ಪಿಕರ್

ಪ್ರಜಾವಾಣಿ ವಾರ್ತೆ



ಸಂಜಯ್ ಕೊಪ್ಪಿಕರ್

ಬೆಂಗಳೂರು: ಇಂಟರ್‌ನ್ಯಾಷನಲ್ ಫೆಡರೇಷನ್ ಆಫ್ ಇನ್ಶೂರರ್ಸ್ ಅಸೋಸಿಯೇಷನ್ಸ್ (ಐಎಫ್‌ಐಎ) ಭಾರತ ವಿಭಾಗದ ಸಲಹಾ ಮಂಡಳಿಯ ಸದಸ್ಯರಾಗಿ ಉದ್ಯಮಿ ಸಂಜಯ್ ಕೊಪ್ಪಿಕರ್ ನೇಮಕವಾಗಿದ್ದಾರೆ.

ಈ ನೇಮಕಾತಿಯು ದೇಶದ ಗ್ರಾಮೀಣ ಭಾಗದ ನವೋದ್ಯಮಿಗಳು, ಸಂಶೋಧಕರು, ನೀತಿನಿರೂಪಕರು ಮತ್ತು ಜಾಗತಿಕ ನವೋದ್ಯಮ ವೇದಿಕೆಗಳ ನಡುವಿನ ಪಾಲುದಾರಿಕೆಯನ್ನು ಇನ್ನಷ್ಟು ಸದೃಢಗೊಳಿಸಲಿದೆ ಎಂದು ಪ್ರಕಟಣೆ ತಿಳಿಸಿದೆ.

‘ಐಎಫ್‌ಐಎ ಭಾರತ್ ಸಂಘಟನೆಯ ಜೊತೆಗೂಡಿ ನವೋದ್ಯಮಿಗಳಿಗೆ ಜಾಗತಿಕ ಅವಕಾಶವನ್ನು ಸೃಷ್ಟಿಸುವ ಮತ್ತು ನವೋದ್ಯಮಿಗಳ ಸುಲಲಿತಕಾರಕ್ಕೆ ಪೂರಕವಾದ ವಾತಾವರಣ ನಿರ್ಮಿಸಲು ಉತ್ಸುಕನಾಗಿದ್ದೇನೆ’ ಎಂದು ಸಂಜಯ್ ಕೊಪ್ಪಿಕರ್ ತಿಳಿಸಿದ್ದಾರೆ.

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹29500-29500
ತುಮಕೂರು	₹6000-22000
ಸಣ್ಣ	₹15000-22000

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1500-2200
ಮಧ್ಯಮ	₹1000-1500
ಸಣ್ಣ	₹400-1000

ಶೇಖ್ ಹಸೀನಾ ಸರ್ಕಾರದ ಪತನದ ಬಳಿಕ ಮೊದಲ ಚುನಾವಣೆ

ಬಾಂಗ್ಲಾದೇಶ: ಇಂದು ಮತದಾನ

12.77 ಕೋಟಿ	42,659	9.58 ಲಕ್ಷ	2,028
ಒಟ್ಟು ಮತದಾರರು	ಮತದಾನ ಕೇಂದ್ರಗಳು	ಭದ್ರತಾ ಸಿಬ್ಬಂದಿ ನಿಯೋಜನೆ	ಕಣದಲ್ಲಿರುವ ಅಭ್ಯರ್ಥಿಗಳು

ಢಾಕಾ (ಪಿಟಿಐ): ಬಾಂಗ್ಲಾದೇಶದ ಸಾರ್ವತ್ರಿಕ ಚುನಾವಣೆಗೆ ಮತದಾನ ಗುರುವಾರ ನಡೆಯಲಿದ್ದು, 12.77 ಕೋಟಿ ಮತದಾರರು ತಮ್ಮ ಹಕ್ಕು ಚಲಾಯಿಸಲಿದ್ದಾರೆ. ಮತದಾನ ಪ್ರಕ್ರಿಯೆ ಸುಸೂತ್ರವಾಗಿ ನಡೆಯಲು ಸಕಲ ಸಿದ್ಧತೆ ಕೈಗೊಳ್ಳಲಾಗಿದೆ.

ಮಾಜಿ ಪ್ರಧಾನಿ ಶೇಖ್ ಹಸೀನಾ ಅವರು ಅಧಿಕಾರದಿಂದ ಕೆಳಗಿಳಿದ ಬಳಿಕ ನಡೆಯುತ್ತಿರುವ ಮೊದಲ ಚುನಾವಣೆ ಇದು. 2024ರ ಆಗಸ್ಟ್‌ನಲ್ಲಿ ವಿದ್ಯಾರ್ಥಿಗಳು ದೇಶಾದ್ಯಂತ ಪ್ರತಿಭಟನೆ ನಡೆಸಿ ಹಸೀನಾ ನೇತೃತ್ವದ ಸರ್ಕಾರವನ್ನು ಕಿತ್ತುಹಾಕಿದ್ದರು.

ಶೇ 50ಕ್ಕೂ ಅಧಿಕ ಮತದಾನ ಕೇಂದ್ರಗಳನ್ನು ‘ಸೂಕ್ಷ್ಮ’ ಅಥವಾ ‘ಅತಿಸೂಕ್ಷ್ಮ’ ಎಂದು ಗುರುತಿಸಲಾಗಿದ್ದು, ಭದ್ರತೆಗಾಗಿ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿದೆ. ‘ಸೂಕ್ಷ್ಮ’ ಮತದಾನ ಕೇಂದ್ರಗಳಲ್ಲಿ ಶೇ 90ರಷ್ಟು ಕೂಡಾ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲಾಗಿದೆ’ ಎಂದು ಚುನಾವಣಾ ಆಯುಕ್ತ ಅಬುಲ್ ಫಜಲ್ ಮೊಹಮ್ಮದ್ ಸನಾವುಲ್ಲಾ ತಿಳಿಸಿದರು.

‘ಮುಕ್ತ, ನ್ಯಾಯಯುತ ಮತ್ತು ನಿಷ್ಪಕ್ಷಪಾತ ಚುನಾವಣೆಯನ್ನು ಖಚಿತಪಡಿಸಿಕೊಳ್ಳಲು ದೇಶದಾದ್ಯಂತ ಸುಮಾರು 9.58 ಲಕ್ಷ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಇದೇ ಮೊದಲ ಬಾರಿಗೆ, ಚುನಾವಣಾ ಭದ್ರತೆಗಾಗಿ ಯುಎವಿಗಳು (ಮಾನವರಹಿತ ವೈಮಾನಿಕ ವಾಹನ), ಡ್ರೋನ್‌ಗಳು ಮತ್ತು ಬಾಡಿ ವೋರ್ನ್ ಕ್ಯಾಮೆರಾಗಳನ್ನು ಬಳಸಲಾಗುತ್ತಿದೆ’ ಎಂದು ಮಾಹಿತಿ ನೀಡಿದರು.

300 ಕ್ಷೇತ್ರಗಳ ಪೈಕಿ 299 ಕ್ಷೇತ್ರಗಳಿಗೆ ಗುರುವಾರ ಮತದಾನ ನಡೆಯಲಿದೆ. ಶೇರ್‌ಪುರ್-3 ಕ್ಷೇತ್ರದ ಅಭ್ಯರ್ಥಿಯೊಬ್ಬರು ಮೃತಪಟ್ಟಿರುವ ಕಾರಣ ಮತದಾನ ಮುಂದೂಡಲಾಗಿದೆ.

ಬೆಳಿಗ್ಗೆ 7.30ರಿಂದ ಸಂಜೆ 4.30ರವರೆಗೆ ಮತದಾನ ನಡೆಯಲಿದೆ. ಮತದಾನ ಕೊನೆಗೊಂಡ ಬೆನ್ನಲ್ಲೇ ಮತ ಎಣಿಕೆ ಪ್ರಕ್ರಿಯೆ ನಡೆಯಲಿದೆ. ಶುಕ್ರವಾರ ಬೆಳಿಗ್ಗೆ ಅಧಿಕೃತ ಫಲಿತಾಂಶ ಹೊರಬೀಳುವ ಸಾಧ್ಯತೆಯಿದೆ. ಒಟ್ಟು ಮತದಾರರಲ್ಲಿ ಹೊಸ ಮತದಾರರ ಪ್ರಮಾಣ ಶೇ 3.58ರಷ್ಟಿದೆ ಎಂದು ಚುನಾವಣಾ ಆಯೋಗದ ಮಾಹಿತಿ ತಿಳಿಸಿದೆ.

ಈ ಬಾರಿಯ ಚುನಾವಣೆಯಲ್ಲಿ ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿ (ಬಿಎನ್‌ಪಿ) ಮತ್ತು ಜಮಾತ್-ಎ-ಇಸ್ಲಾಮಿ ನಡುವೆ ಪೈಪೋಟಿ ಏರ್ಪಟ್ಟಿದೆ. ಶೇಖ್ ಹಸೀನಾ ಅವರ ಅವಾಮಿ ಲೀಗ್ ಪಕ್ಷಕ್ಕೆ ಸ್ಪರ್ಧಿಸಲು ಅವಕಾಶ ನೀಡಿಲ್ಲ.

50 ರಾಜಕೀಯ ಪಕ್ಷಗಳಿಂದ 1,755 ಅಭ್ಯರ್ಥಿಗಳು ಮತ್ತು 273 ಪಕ್ಷೇತರ ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಬಿಎನ್‌ಪಿಯು ಅತಿಹೆಚ್ಚು ಅಂದರೆ 291 ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ.

ಢಾಕಾದ ಮತದಾನ ಕೇಂದ್ರವೊಂದಕ್ಕೆ ಬುಧವಾರ ಮತಪೆಟ್ಟಿಗೆಗಳನ್ನು ಪೊಲೀಸ್ ಭದ್ರತೆಯಲ್ಲಿ ಸಾಗಿಸಲಾಯಿತು —ಎಎಫ್‌ಪಿ ಚಿತ್ರ

ಬೆಳ್ಳಿ ₹4 ಸಾವಿರ ಹೆಚ್ಚಳ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಏರಿಕೆ ಆಗಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹600 ಹೆಚ್ಚಳವಾಗಿ, ₹1,61,300ರಂತೆ ಮಾರಾಟವಾಯಿತು. ಬೆಳ್ಳಿ ಧಾರಣೆಯು ಕೆ.ಜಿಗೆ ₹4 ಸಾವಿರ ಏರಿಕೆಯಾಗಿ, ₹2,68,500ಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

‘ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರ ಕಡಿತಗೊಳಿಸುವ ನಿರೀಕ್ಷೆ ಹೆಚ್ಚಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಉಂಟಾಗಿರುವ ರಾಜಕೀಯ ಬಿಕ್ಕಟ್ಟಿನಿಂದ ಹೂಡಿಕೆದಾರರು ಚಿನ್ನ ಮತ್ತು ಬೆಳ್ಳಿ ಖರೀದಿಯತ್ತ ಮುಂದಾಗಿದ್ದರಿಂದ ದರವು ಏರಿಕೆ ಆಗಿದೆ’ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ತಿಳಿಸಿದ್ದಾರೆ.

ಎಂಎಸ್‌ಎಂಇ ಉದ್ದಿಮೆಗಳಿಗೆ ಚಿನ್ನದ ಸಾಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಎಸ್‌ಎಂಇ ವಲಯದ ಉದ್ಯಮಗಳಿಗಾಗಿ ಎಸ್ಐಬಿ ಬ್ಯಾಂಕ್ ಚಿನ್ನದ ಸಾಲ ಯೋಜನೆ ಆರಂಭಿಸಿದೆ. ಸಣ್ಣ ಉದ್ದಿಮೆಗಳು ತಮ್ಮಲ್ಲಿನ ಚಿನ್ನವನ್ನು ಅಡಮಾನವಾಗಿ ಬಳಸಿ ಈ ಯೋಜನೆಯ ಅಡಿ ಒ.ಡಿ. ಸೌಲಭ್ಯ ಪಡೆಯಬಹುದು.

ಅತ್ಯಂತ ಕಡಿಮೆ ದಾಖಲೆಗಳನ್ನು ಪಡೆದು ಈ ಸಾಲ ನೀಡಲಾಗುತ್ತದೆ. ಅರ್ಜಿ ಸಲ್ಲಿಸಿದ ಒಂದೇ ದಿನದಲ್ಲಿ ಸಾಲ ಮಂಜೂರು ಮಾಡಲಾಗುತ್ತದೆ. ಹಣವನ್ನು ಅವರ ಖಾತೆಗೆ ನೇರವಾಗಿ ವರ್ಗಾವಣೆ ಮಾಡಲಾಗುತ್ತದೆ. ಕನಿಷ್ಠ ₹50 ಸಾವಿರದಿಂದ ₹1 ಕೋಟಿಯವರೆಗೆ ಸಾಲ ನೀಡಲಾಗುತ್ತದೆ ಎಂದು ಬ್ಯಾಂಕ್‌ನ ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಸೌಂದರ್ಯ-ಆರೋಗ್ಯ
Health Clinic
5 ದಿನಗಳ ಶಿಬಿರ 10-02-26 ರಿಂದ 14-02-26 ಮಂಡಿನೋವು, ಬೆನ್ನುನೋವು, ಕೀಲುನೋವು, ಕತ್ತುನೋವು, ಲಕ್ವಾ, ವೆರಿಕೋಸ್ ವೆಯಿನ್ಸ್, ಯಾವುದೇ ರೀತಿಯ ದೀರ್ಘ ಕಾಲಿಕ ನೋವುಗಳಿಗೆ ಪ್ರಾಕೃತಿಕ ಚಿಕಿತ್ಸೆ ಇಲ್ಲದೆ ಹೈಡ್ರೋಥೆರಪಿಯಿಂದ ಚಿಕಿತ್ಸೆ ಮಾಡಲಾಗುವುದು. ಶೇಷಾದ್ರಿಪುರಂ, ಬೆಂಗಳೂರು 9739986737

ವ್ಯಾಪಾರ
Business Offers
Agents Wanted
WANTED MARKETING Executives For A Toiletry Company For Selling Products at Bangalore. 8618825981

ಉದ್ಯೋಗಾವಕಾಶ
Part-Time Jobs
ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ, ಪುರುಷರಿಗೆ ಆದ್ಯತೆ. 19,000 -25,000 ಸಂಪಾದಿಸಿ. ಕೆಲಸದ ಸೌಲಭ್ಯವಿದೆ. 9964311522, 9742133993

General
ಸಂಸ್ಥೆಯಿಂದ ಉದ್ಯೋಗಾವಕಾಶ: ಆಸ್ಪತ್ರೆ, ಮನೆ, ವೃದ್ಧಾಶ್ರಮ ಮುಂತಾದೆಡೆ ಸೇವೆ ಮಾಡಲು ನಮ್ಮ ಸಂಸ್ಥೆಯಿಂದ ಉಚಿತ ತರಬೇತಿ ಕೊಟ್ಟು ಸಂಸ್ಥೆ ವತಿಯಿಂದ ಉದ್ಯೋಗಾವಕಾಶ ಮಾಡಿಕೊಡಲಾಗುವುದು. ಪ್ರಾರಂಭದಲ್ಲಿ 18,000 ರಿಂದ 25,000 ತನಕ ಸಂಬಳ ಹಾಗೂ ಹಾಸ್ಟೆಲ್ ಊಟ, ವಸತಿ ಉಚಿತ. ಈಗಾಗಲೇ ಅನುಭವವುಳ್ಳ ನರ್ಸ್ ಹೋಮ್ ನರ್ಸ್ ಗಳಿಗೆ ಮತ್ತು ಮಗು ಪಾಲನೆ ಆಲ್ಲದೆ ದಾದಿಯರಿಗೆ ಉತ್ತಮ ಸಂಬಳ ಇರುತ್ತದೆ. ಸಂಪರ್ಕಿಸಿರಿ ದೂರ ಹೋಮ್ ಹೆಲ್ತ್ ಕೇರ್ ಬೆಂಗಳೂರು: 080-23342559/ 9242730143, ಮಂಗಳೂರು:9343568915, 9845495055, ಮೈಸೂರು:0821-2439990/ 9243306815, ಹುಬ್ಬಳ್ಳಿ:8050646321/ 9242302918, ಬೆಳಗಾವಿ:8867356219/ 9242096219, ಹಾಸನ:08172-260000/ 9241324003, ಶಿವಮೊಗ್ಗ:08182-220120/ 9241127545, ದಾವಣಗೆರೆ: 7760164111

Walk-in
ಅಸೆಂಬ್ಲಿ ಲೈನ್ ಆಪರೇಟರ್ ಹುದ್ದೆಗೆ ನೇಮಕಾತಿ ಅರ್ಹತೆ: SSLC/PUC/ITI /ಯಾವುದೇ ಪದವಿ ವಯಸ್ಸು: 18 ರಿಂದ 28 ವರ್ಷದೊಳಗಿನ ಮಹಿಳೆಯರು ವೇತನ: ₹18,100/ ಪ್ರತಿ ತಿಂಗಳು ಸೌಲಭ್ಯಗಳು: ಉಚಿತ ವಸತಿ ಮತ್ತು ಆಹಾರ ಕೆಲಸದ ಸ್ಥಳ: ದೇವನಹಳ್ಳಿ ಸಂಪರ್ಕ: 7019660476 / 8073496142

ಪ್ರವಾಸ
Travel
26.02.2016 ರಿಂದ 15 ದಿನಗಳ ನೇಪಾಳ,ಕಾಶಿ ಮುಕ್ತಿನಾಥ. 20.02.2026 ರಿಂದ 15 ದಿನಗಳ ಛಿಮಾಲಯಶರ್ ಶಿರಡಿ ಒಂಕಾರೇಶ್ವರ ಮಹಾಕಾಳೇಶ್ವರ ದ್ವಾರಕಾ,ಸೋಮನಾಥ್. 13.02.2026 01.04.2026 ರಿಂದ 6 ದಿನಗಳು ಕಾಶಿ,ಗಯಾ,ಅಯೋಧ್ಯ ಪ್ರಯಾಗ್‌ರಾಜ್. 10.04.2026 ರಿಂದ 10 ದಿನಗಳ ಸಿಕ್ಕಿಂ ಡಾರ್ಜಲಿಂಗ್ ಗ್ಯಾಂಗ್‌ಟಾಕ್ ಅಸ್ಸಾಂ,ಗೌಹಾಟಿ ಕಾಮಾಕ್ಯ ಶಕ್ತಿಪೀಠ. 23.04.2026 ಚಾರ್ ಧಾಮ್ ಪ್ರವಾಸ. ಸಂಪರ್ಕಿಸಿ, ಎಕ್ಸ್‌ಪ್ರೆಸ್ ಟೂರ್ಸ್ ಅಂಡ್ ಟ್ರಾವೆಲ್ಸ್, ಬೆಂಗಳೂರು. 9342287551 9986244447 9986254573
★ಶ್ರೇಯಸ್ ಟೂರ್ಸ್★ 22.03.2026 10ದಿನಗಳು ಅಮೃತ ಉದ್ದತಿ ಚೋಳಗಂಗಾ ರಾಜ್ಯಪ್ರವಾಸ.08.03.2026 4ದಿನಗಳು ರಾಮೇಶ್ವರಂ ಕನ್ಯಾಕುಮಾರಿ,ಮಧುರೈ,ತಂಜಾವೂರು. 22.03.2026 7ದಿನಗಳು ಭುವನೇಶ್ವರ್ ರಾಷ್ಟ್ರದ ಪ್ರಸಿದ್ಧ ಪುರಿ ಕೋನಾರ್ಕ್ ದೇವಾಲಯ,ಪೂನಾ,ಪಂಡರಪುರ. 21.03.2026 7ದಿನಗಳು ಅಸ್ಸಾಂ,ಮೇಘಾಲಯ, ಕಾಜಿರಂಗ.8073824856 9206979202

ಓದುಗರ ಗಮನಕ್ಕೆ
ಪ್ರಜಾವಾಣಿ ಕ್ಲಾಸಿಫೈಡ್ಸ್ ಜಾಹೀರಾತುಗಳು ಓದುಗರ ಅನುಕೂಲಕ್ಕಾಗಿ ಮಾತ್ರ. ಜಾಹೀರಾತುಗಳಲ್ಲಿನ ಅಂಶಗಳನ್ನು ಪರಿಶೀಲಿಸಿ ಓದುಗರು ವ್ಯವಹರಿಸಬೇಕು.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸೂಪರ್ ಓವರ್ ಗೆದ್ದ ದಕ್ಷಿಣ ಆಫ್ರಿಕಾ

ಅಫ್ಗಾನಿಸ್ತಾನ ತಂಡದ ದಿಟ್ಟ ಹೋರಾಟ ಟೈ ಪಂದ್ಯದಲ್ಲಿ ಮಿಂಚಿದ ರೆಹಮಾನುಲ್ಲಾ

ಅಹಮದಾಬಾದ್ (ಪಿಟಿಐ): ಎರಡು ಸೂಪರ್ ಓವರ್‌ಗಳ ರೋಚಕ ಹಣಾಹಣಿಯಲ್ಲಿ ದಕ್ಷಿಣ ಆಫ್ರಿಕಾ ತಂಡವು ಅಫ್ಗಾನಿಸ್ತಾನವನ್ನು ಮಣಿಸುವಲ್ಲಿ ಯಶಸ್ವಿಯಾಯಿತು.

ರಿಯಾನ್ ರಿಕೆಲ್ಟನ್ (61; 28ಎ) ಮತ್ತು ಕ್ವಿಂಟನ್ ಡಿ ಕಾಕ್ (59; 41ಎ) ಅವರ ಶತಕದ ಜೊತೆಯಾಟದ ಬಲದಿಂದ ದಕ್ಷಿಣ ಆಫ್ರಿಕಾ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 187 ರನ್ ಗಳಿಸಿತು. ಅದಕ್ಕೆ ತಿರುಗೇಟು ನೀಡಿದ ರೆಹಮಾನುಲ್ಲಾ ಗುರ್ಬಾಜ್ (84; 42ಎ) ಅವರು ಏಕಾಂಗಿ ಹೋರಾಟ ಮಾಡಿದರು. ಬಿರುಸಾದ ಹೊಡೆತಗಳ ಮೂಲಕ ಗಮನ ಸೆಳೆದರು. ಕೆಳಕ್ರಮಾಂಕದ ಕೆಲವು ಬ್ಯಾಟರ್‌ಗಳು ಅವರಿಗೆ ಉತ್ತಮ ಬೆಂಬಲ ನೀಡಿದರು. ಅದರಿಂದಾಗಿ ನಿಗದಿಯ ಓವರ್‌ಗಳಲ್ಲಿ ಪಂದ್ಯ ಟೈ ಆಯಿತು. ಆದರೆ ಇಲ್ಲಿಂದ ಹಣಾಹಣಿಯು ಮತ್ತಷ್ಟು ರೋಚಕವಾಯಿತು. ಎರಡು ಸೂಪರ್ ಓವರ್‌ಗಳ ನಂತರ ಫಲಿತಾಂಶ ನಿರ್ಧಾರವಾಯಿತು.

ಮೊದಲ ಸೂಪರ್ ಓವರ್‌ನಲ್ಲಿ ಲುಂಗಿ ಎನ್‌ಗಿಡಿ ಬೌಲಿಂಗ್ ಮಾಡಿದರು. ಅವರ ಓವರ್‌ನಲ್ಲಿ ಬ್ಯಾಟರ್ ಅಜ್ಮತ್‌ವುಲ್ಲಾ ಒಮರ್‌ಝೈ ಎರಡು ಬೌಂಡರಿ ಮತ್ತು ಒಂದು ಸಿಕ್ಸರ್ ಹೊಡೆದರು. ಒಟ್ಟು 17 ರನ್ ಗಳಿಸಿದರು. ಇದಕ್ಕುತ್ತರವಾಗಿ ದಕ್ಷಿಣ ಆಫ್ರಿಕಾದ ಟ್ರಿಸ್ಟನ್ ಸ್ಟಬ್ಸ್ ಅವರು ಫಜಲ್ ಹಕ್ ಫಾರೂಕಿ ಅವರು ಹಾಕಿದ ಓವರ್‌ನಲ್ಲಿ ಎರಡು ಸಿಕ್ಸರ್ ಹೊಡೆದರು.

ಅರ್ಧಶತಕ ದಾಖಲಿಸಿದ ರೆಹಮಾನುಲ್ಲಾ ಗುರ್ಬಾಜ್

ಅದರಲ್ಲೊಂದು ಸಿಕ್ಸರ್ ಓವರ್‌ನ ಕೊನೆಯ ಎಸೆತದಲ್ಲಿ ದಾಖಲಾಯಿತು. ಓವರ್ ಸಮಬಲಗೊಂಡಿತು.

ಎರಡನೇ ಸೂಪರ್ ಓವರ್‌ನಲ್ಲಿ ದಕ್ಷಿಣ ಆಫ್ರಿಕಾದ ಡೇವಿಡ್ ಮಿಲ್ಲರ್ ಮತ್ತು ಟ್ರಿಸ್ಟನ್ ಸ್ಟಬ್ಸ್ ಅವರು ಒಟ್ಟು ಮೂರು ಸಿಕ್ಸರ್ ಸಹಿತ 23 ರನ್ ಸೇರಿಸಿದರು. ಈ ಸವಾಲಿಗೂ ಅಫ್ಗನ್ ಪಡೆ ಬೆಚ್ಚಲಿಲ್ಲ. ರೆಹಮಾನುಲ್ಲಾ ಗುರ್ಬಾಜ್ ಅವರು ಅನುಭವಿ ಸ್ಪಿನ್ನರ್ ಕೇಶವ್ ಮಹಾರಾಜ್ ಅವರ ಓವರ್‌ನಲ್ಲಿ ಸತತ 3 ಸಿಕ್ಸರ್ ಬಾರಿಸಿದರು. ಆರಂಭಿಕ ಬ್ಯಾಟರ್ ಮೊಹಮ್ಮದ್ ನಬಿ ಮೊದಲೆರಡು ಎಸೆತ ಎದುರಿಸಿ ಒಂದೂ ರನ್ ಗಳಿಸದೇ ಔಟಾದರು. ನಂತರದ ನಾಲ್ಕು ಎಸೆತಗಳಲ್ಲಿ ಗುರ್ಬಾಜ್ ಅಬ್ಬರಿಸಿದರು. ಆದರೆ ಕೊನೆಯ ಎಸೆತದಲ್ಲಿ ಅವರು ಔಟಾಗುವುದರೊಂದಿಗೆ ದಕ್ಷಿಣ ಆಫ್ರಿಕಾ ಜಯದ ಸಂಭ್ರಮ ಆಚರಿಸಿತು.

ಅಫ್ಗಾನಿಸ್ತಾನ ವಿರುದ್ಧ ಗೆದ್ದ ಸಂಭ್ರಮದಲ್ಲಿ ದಕ್ಷಿಣ ಆಫ್ರಿಕಾ ತಂಡದ ಆಟಗಾರರು ಎಪಿ ಚಿತ್ರ

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 20 ಓವರ್‌ಗಳಲ್ಲಿ 6ಕ್ಕೆ187 (ಕ್ವಿಂಟನ್ ಡಿ ಕಾಕ್ 59, ರಿಯಾನ್ ರಿಕೆಲ್ಟನ್ 61, ಡಿವಾಲ್ಡ್ ಬ್ರೆವಿಸ್ 23, ಡೇವಿಡ್ ಮಿಲ್ಲರ್ ಔಟಾಗದೇ 20, ಮಾರ್ಕೊ ಯಾನ್ಸೆನ್ 16, ಅಜ್ಮತ್‌ವುಲ್ಲಾ ಒಮರ್‌ಝೈ 41ಕ್ಕೆ3, ರಶೀದ್ ಖಾನ್ 28ಕ್ಕೆ2) ಅಫ್ಗಾನಿಸ್ತಾನ: 19.4 ಓವರ್‌ಗಳಲ್ಲಿ 187 (ರೆಹಮಾನುಲ್ಲಾ ಗುರ್ಬಾಜ್ 84, ಇಬ್ರಾಹಿಂ ಜದ್ರಾನ್ 12, ಅಜ್ಮತ್‌ವುಲ್ಲಾ ಒಮರ್‌ಝೈ 22, ರಶೀದ್ ಖಾನ್ 20, ನೂರ್ ಅಹಮದ್ ಔಟಾಗದೇ 15, ಲುಂಗಿ ಗಿಡಿ 26ಕ್ಕೆ3)

ಮೊದಲ ಸೂಪರ್ ಓವರ್: ಅಫ್ಗಾನಿಸ್ತಾನ: 1 ಓವರ್‌ನಲ್ಲಿ ವಿಕೆಟ್ ನಷ್ಟವಿಲ್ಲದೇ 17 (ಅಜ್ಮತ್‌ವುಲ್ಲಾ ಒಮರ್‌ಝೈ 16, ರೆಹಮಾನುಲ್ಲಾ ಗುರ್ಬಾಜ್ ಔಟಾಗದೇ 1) ದಕ್ಷಿಣ ಆಫ್ರಿಕಾ: 1 ಓವರ್‌ನಲ್ಲಿ 1 ವಿಕೆಟ್‌ಗೆ 17 (ಟ್ರಿಸ್ಟನ್ ಸ್ಟಬ್ಸ್ ಔಟಾಗದೇ 10, ಡಿವಾಲ್ಡ್ ಬ್ರೆವಿಸ್ 6, ಫಜಲ್‌ಹಕ್ ಫರೂಖಿ 17ಕ್ಕೆ1).

2ನೇ ಸೂಪರ್ ಓವರ್ : ದಕ್ಷಿಣ ಆಫ್ರಿಕಾ: 1 ಓವರ್‌ನಲ್ಲಿ ವಿಕೆಟ್ ನಷ್ಟವಿಲ್ಲದೇ 23 (ಟ್ರಿಸ್ಟನ್ ಸ್ಟಬ್ಸ್ ಅಜೇಯ 7, ಡೇವಿಡ್ ಮಿಲ್ಲರ್ ಅಜೇಯ 16) ಅಫ್ಗಾನಿಸ್ತಾನ: 1 ಓವರ್‌ನಲ್ಲಿ 2 ವಿಕೆಟ್‌ಗಳಿಗೆ 19 (ರೆಹಮಾನುಲ್ಲಾ ಗುರ್ಬಾಜ್ 18, ಕೇಶವ್ ಮಹಾರಾಜ್ 19ಕ್ಕೆ2) **ಫಲಿತಾಂಶ:** ದಕ್ಷಿಣ ಆಫ್ರಿಕಾಕ್ಕೆ 2ನೇ ಸೂಪರ್ ಓವರ್‌ನಲ್ಲಿ ಜಯ. **ಪಂದ್ಯದ ಆಟಗಾರ:** ಲುಂಗಿ ಎನ್‌ಗಿಡಿ.

ಆಸ್ಪತ್ರೆಯಿಂದ ತಂಡಕ್ಕೆ ಮರಳಿದ ಅಭಿಷೇಕ್ ಶರ್ಮಾ

ಸೂರ್ಯ ಪಡೆಗೆ ಸುಲಭ ಜಯ ನಿರೀಕ್ಷೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಭಾರತ ತಂಡವು ಗುರುವಾರದ ಪಂದ್ಯದಲ್ಲಿ ನಮಿಬಿಯಾ ವಿರುದ್ಧ ಆಡಲಿದೆ. ಆದರೆ ಸೂರ್ಯ ಕುಮಾರ್ ಯಾದವ್ ಬಳಗಕ್ಕೆ ನಮಿಬಿಯಾ ತಂಡದ ಬಗ್ಗೆ ಆತಂಕವಿಲ್ಲ. ಆದರೆ ಅಭಿಷೇಕ್ ಶರ್ಮಾ ಅವರ ಹೊಟ್ಟೆನೋವು ಇಡೀ ತಂಡದಲ್ಲಿ ಆತಂಕ ತರಿಸಿದೆ.

ಸ್ಫೋಟಕ ಶೈಲಿಯ ಬ್ಯಾಟರ್ ಅಭಿಷೇಕ್ ಅವರು ಎರಡು ದಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ನಂತರ ಬುಧವಾರ ತಂಡಕ್ಕೆ ಮರಳಿದ್ದಾರೆ. ಅವರು ನಮಿಬಿಯಾ ಎದುರು ಕಣಕ್ಕಿಳಿಯುವ ಕುರಿತು ಪಂದ್ಯದ ಆರಂಭಕ್ಕೂ ಮುನ್ನ ನಿರ್ಧರಿಸಲಾಗುವುದು ಎಂದು ಭಾರತ ತಂಡದ ಬ್ಯಾಟರ್ ತಿಲಕ್ ವರ್ಮಾ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಟಿ20 ವಿಶ್ವಕಪ್ ಟೂರ್ನಿಯ ಮೊದಲ ಪಂದ್ಯದಲ್ಲಿ ಅಮೆರಿಕ ಎದುರು ಅಗ್ರ ಕ್ರಮಾಂಕದ ಬ್ಯಾಟರ್‌ಗಳು ಎಡವಿದ್ದರು. ಸೂರ್ಯ ಏಕಾಂಗಿ ಹೋರಾಟದಿಂದಾಗಿ ಗೆಲುವು ಸಾಧ್ಯವಾಗಿತ್ತು. ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಅಭಿಷೇಕ್ ಆಡದಿದ್ದರೆ ಸಂಜು ಸ್ಯಾಮ್ಸನ್ ಸ್ಥಾನ ಪಡೆಯುವುದು ಖಚಿತ. ಆದರೆ ಇದೇ 15ರಂದು ಕೊಲಂಬೊದಲ್ಲಿ ನಡೆಯಲಿರುವ ಪಾಕಿಸ್ತಾನ ಎದುರಿನ ಪಂದ್ಯಕ್ಕೆ ಶರ್ಮಾ ಫಿಟ್ ಆಗಿ ಬರುವ ನಿರೀಕ್ಷೆ ಇದೆ.

ಸಾಮರ್ಥ್ಯ ಮತ್ತು ಅನುಭವದಲ್ಲಿ ನಮಿಬಿಯಾ ಮತ್ತು ಭಾರತ ತಂಡಗಳಿಗೆ ಅಜಗಜಾಂತರವಿದೆ. ಹಾಲಿ ಚಾಂಪಿಯನ್ ಕೂಡ ಆಗಿರುವ ಆತಿಥೇಯ ಭಾರತ ತಂಡವನ್ನು ಎದುರಿಸುವುದು ಜೆರಾರ್ಡ್ ಎರಸ್‌ಮಸ್ ಬಳಗಕ್ಕೆ ಸುಲಭವಲ್ಲ. ಅದರಲ್ಲೂ ಭಾರತದ ಬಲಿಷ್ಠ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕುವುದು ಬೌಲರ್‌ಗಳಿಗೆ ಒಂದು ಕಠಿಣ ಪರೀಕ್ಷೆಯೇ ಸರಿ. ಅಲ್ಲದೇ ನಮಿಬಿಯಾ ಬ್ಯಾಟರ್‌ಗಳು ವಿಶ್ವಶ್ರೇಷ್ಠ ಬೌಲರ್ ಜಸ್‌ಪ್ರೀತ್ ಬೂಮ್ರಾ, ಅರ್ಷದೀಪ್ ಸಿಂಗ್ ಮತ್ತು ಸ್ಪಿನ್ನರ್ ವರುಣ್ ಚಕ್ರವರ್ತಿ ಅವರನ್ನು ಎದುರಿಸುವುದು ಕೂಡ ಸವಾಲಾಗಬಹುದು.

ನಮಿಬಿಯಾದ ಆಲ್‌ರೌಂಡರ್ ಜೆಜೆ ಸ್ಮಿತ್ ಅವರು 140ರ ಸ್ಟ್ರೈಕ್‌ರೇಟ್ ಹೊಂದಿದ್ದಾರೆ. ಉಳಿದ ಐವರು ಅಗ್ರ-ಕ್ರಮಾಂಕದ ಬ್ಯಾಟರ್‌ಗಳು ಇದಕ್ಕಿಂತ ಕಡಿಮೆ ಸ್ಟ್ರೈಕ್‌ರೇಟ್ ಹೊಂದಿದ್ದಾರೆ.

ಪ್ರಸಕ್ತ ಟೂರ್ನಿಯಲ್ಲಿ ಉಭಯ ತಂಡಗಳೂ ತಲಾ ಒಂದು ಪಂದ್ಯ ಆಡಿವೆ. ಭಾರತ ತಂಡವು ಅಮೆರಿಕ ವಿರುದ್ಧ ಜಯಿಸಿದೆ. ಆದರೆ ನಮಿಬಿಯಾ ನೆದರ್ಲೆಂಡ್ಸ್ ವಿರುದ್ಧ ಪರಾಭವಗೊಂಡಿತ್ತು. ದೆಹಲಿಯಲ್ಲಿ ರಾತ್ರಿಯ ಹೊತ್ತು ಇಬ್ಬನಿ ಸುರಿಯುವ ನಿರೀಕ್ಷೆ ಇದೆ. ಆದ್ದರಿಂದ ಟಾಸ್ ಗೆದ್ದವರು ಮೊದಲು ಬೌಲಿಂಗ್ ಮಾಡುವ ಸಾಧ್ಯತೆಯೇ ಹೆಚ್ಚು.

ಭಾರತ ತಂಡದ ಸಂಜು ಸ್ಯಾಮ್ಸನ್ ಮತ್ತು ರಿಂಕು ಸಿಂಗ್ ಪಿಟಿಐ ಚಿತ್ರ

ಇಂದಿನ ಪಂದ್ಯಗಳು

ಶ್ರೀಲಂಕಾ	V/s	ಒಮಾನ್
ಬೆಳಿಗ್ಗೆ 11ರಿಂದ: ಪಲ್ಲೆಕೆಲೆ		
ಇಟಲಿ	V/s	ನೇಪಾಳ
ಮಧ್ಯಾಹ್ನ 3ರಿಂದ: ವಾಂಖೆಡೆ		
ಭಾರತ	V/s	ನಮಿಬಿಯಾ
ರಾತ್ರಿ 7ರಿಂದ: ದೆಹಲಿ		

ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್

ನಮಿಬಿಯಾ ಅಸಮಾಧಾನ

ನವದೆಹಲಿ (ಪಿಟಿಐ): ತಮ್ಮ ತಂಡಕ್ಕೆ ಹೊನಲು ಬೆಳಕಿನಲ್ಲಿ ತಾಲೀಮು ನಡೆಸುವ ಅವಕಾಶವನ್ನು ನೀಡಿಲ್ಲ. ಆಯೋಜಕರ ಈ ಧೋರಣೆ ಸರಿಯಲ್ಲ ಎಂದು ನಮಿಬಿಯಾ ಕ್ರಿಕೆಟ್ ತಂಡದ ನಾಯಕ ಜೆರಾರ್ಡ್ ಎರಸ್‌ಮಸ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಗುರುವಾರ ಭಾರತ ಎದುರು ನಮಿಬಿಯಾ ಆಡುವ ಪಂದ್ಯವು ರಾತ್ರಿ ನಡೆಯಲಿದೆ. ಆದರೆ ಈ ಪಂದ್ಯಕ್ಕೂ ಮುನ್ನಾದಿನ ಅಭ್ಯಾಸ ನಡೆಸಲು ಹೊನಲು ಬೆಳಕಿನ ವೇಳೆಯಲ್ಲಿ ಅವಕಾಶವನ್ನು ಕಲ್ಪಿಸಲಾಗಿಲ್ಲ ಎಂದು ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಹೇಳಿದರು.

67 ರನ್‌ಗಳ ಗೆಲುವಿನೊಡನೆ ಆಸ್ಟ್ರೇಲಿಯಾ ಶುಭಾರಂಭ

ಎಲಿಸ್, ಜಂಪಾ ದಾಳಿ: ಐರ್ಲೆಂಡ್ ತತ್ತರ

ಕೊಲಂಬೊ (ಪಿಟಿಐ): ವೇಗದ ಬೌಲರ್ ನೇಥನ್ ಎಲಿಸ್ (3.5–1–12–4) ಅವರ ಅಮೋಘ ಬೌಲಿಂಗ್ ದಾಳಿಯ ನೆರವಿನಿಂದ ಆಸ್ಟ್ರೇಲಿಯಾ ತಂಡ ಬುಧವಾರ 67 ರನ್‌ಗಳಿಂದ ಐರ್ಲೆಂಡ್ ತಂಡವನ್ನು ಸದೆಬಡಿದು ಶುಭಾರಂಭ ಮಾಡಿತು. ತಂಡ ಪೂರ್ಣ ಸಾಮರ್ಥ್ಯ ಹೊಂದಿಲ್ಲದಿದ್ದರೂ, 'ಬಿ' ಗುಂಪಿನ ಈ ಪಂದ್ಯದಲ್ಲಿ ಗೆಲುವಿಗೆ ಪರದಾಡಲಿಲ್ಲ.

ಮೊದಲ ಎಲ್ಲಿಸ್ (3.5–1–12–4) ಅವರು ಐರ್ಲೆಂಡ್ ತಂಡದ ಬ್ಯಾಟಿಂಗ್ ಬೆನ್ನೆಲುಬು ಮುರಿದರೆ, ಲೆಗ್ ಸ್ಪಿನ್ನರ್ ಆ್ಯಡಂ ಜಂಪಾ (4–0–23–4) ಅವರು ಕೆಳಕ್ರಮಾಂಕವನ್ನು ಧ್ವಂಸ ಮಾಡಿದರು. 183 ರನ್‌ಗಳ ಗುರಿಯನ್ನು ಎದುರಿಸಿದ ಐರ್ಲೆಂಡ್ 16.5 ಓವರುಗಳಲ್ಲಿ 9 ವಿಕೆಟ್‌ಗೆ 115 ರನ್ ಗಳಿಸಲಷ್ಟೇ ಶಕ್ತವಾಯಿತು. ನಾಯಕ, ಆರಂಭ ಆಟಗಾರ ಪಾಲ್ ಸ್ಟರ್ಲಿಂಗ್ ಸ್ನಾಯು ಸೆಳೆತದ ಕಾರಣ ಬ್ಯಾಟಿಂಗ್ ಪೂರ್ಣಗೊಳಿಸಲಾಗಲಿಲ್ಲ

ನಾಯಕ ಮಿಚೆಲ್ ಮಾರ್ಷ್ ತೊಡೆಯ ನೋವಿನಿಂದ ಈ ಪಂದ್ಯದಲ್ಲಿ ಕಣಕ್ಕಿಳಿಯಲಿಲ್ಲ. ಮಿಚೆಲ್ ಸ್ಟಾರ್ಕ್ (ಟಿ20ಗೆ ನಿವೃತ್ತಿ), ಪ್ಯಾಟ್ ಕಮಿನ್ಸ್ ಮತ್ತು ಜೋಶ್ ಹ್ಯಾಜಲ್‌ವುಡ್ (ಇಬ್ಬರೂ ಗಾಯಾಳುಗಳು) ಅವರು ತಂಡದಲ್ಲಿರಲಿಲ್ಲ. ಆದರೆ ಅವರ ಗೈರಿನಲ್ಲಿ ಪ್ರಮುಖ ವೇಗದ ಬೌಲರ್ ಹೊಣೆಯನ್ನು ಎಲಿಸ್ ಸಮರ್ಥವಾಗಿ ನಿಭಾಯಿಸಿದರು.

ನೇಥನ್ ಎಲಿಸ್ ಎಪಿ/ಪಿಟಿಐ ಚಿತ್ರ

ಎಲಿಸ್ ಬೌಲಿಂಗ್‌ನಲ್ಲಿ ವೇಗವಾಗಿ ಕೆಳಮಟ್ಟದಲ್ಲಿ ಧಾವಿಸಿ ಬಂದ ಚೆಂಡಿಗೆ ಆರಂಭ ಆಟಗಾರ ರಾಸ್ ಅಡೇರ್ ಅವರು ಬೌಲ್ಡ್ ಆದರು. ಬೆನ್ ಕ್ಯಾಲಿಟ್ಜ್ ಅವರು ಎದೆಯ ಮಟ್ಟಕ್ಕೆ ಎಗರಿದ ಚೆಂಡನ್ನು ಆಡಲು ಹೋಗಿ ವಿಕೆಟ್‌ಗೆ ಎಳೆದುಕೊಂಡರು. ಆರಂಭದಲ್ಲೇ ದಾಳಿಗಿಳಿದ ಎಡಗೈ ಸ್ಪಿನ್ನರ್ ಕುನ್ಹೆಮನ್ ಕೂಡ ವಿಕೆಟ್ ಪಡೆದರು. ಹೀಗಾಗಿ ಐರ್ಲೆಂಡ್ ಆಘಾತಕ್ಕೆ ಒಳಗಾಯಿತು. ಜಾರ್ಜ್ ಡಾಕ್ರೆಲ್ (41, 29 ಎಸೆತ) ಅವರ ಆಟದಿಂದಾಗಿ ತಂಡ ನೂರರ ಗಡಿ ದಾಟಲು ಸಾಧ್ಯವಾಯಿತು.

ಇದಕ್ಕೆ ಮೊದಲು, ಬ್ಯಾಟಿಂಗ್ ಮಾಡಲು ನಿರ್ಧರಿಸಿದ್ದ ಆಸ್ಟ್ರೇಲಿಯಾ ತಂಡ 88 ರನ್‌ಗಳಾಗುವಷ್ಟರಲ್ಲಿ 4 ವಿಕೆಟ್ (9.3 ಓವರ್) ಕಳೆದುಕೊಂಡಿತ್ತು. ಈ ವೇಳೆ ಮ್ಯಾಥ್ಯೂ ರೆನ್ಶಾ (37, 33 ಎಸೆತ) ಮತ್ತು ಮಾರ್ಕಸ್ ಸ್ಟೊಯಿನಿಸ್ (45, 29ಎ) ಐದನೇ ವಿಕೆಟ್‌ಗೆ 61 ರನ್ ಜೊತೆಯಾಟದ ಮೂಲಕ ಚೇತರಿಕೆ ನೀಡಿದ್ದರಿಂದ ತಂಡ 20 ಓವರುಗಳಲ್ಲಿ 6 ವಿಕೆಟ್‌ಗೆ 182 ರನ್‌ಗಳ ಸವಾಲಿನ ಮೊತ್ತ ಗಳಿಸಿತು.

ನಿಧಾನಗತಿಯ ಪಿಚ್‌ನಲ್ಲಿ ಐರ್ಲೆಂಡ್ ಸ್ಪಿನ್ನರ್‌ಗಳು ಮಿತವ್ಯಯಿಗಳಾದರು. ಆದರೆ ಕೆಲವು ಕ್ಯಾಚುಗಳನ್ನು ಬಿಟ್ಟಿದ್ದು ದುಬಾರಿಯಾಯಿತು. ಹಂಗಾಮಿ ನಾಯಕ ಟ್ರಾವಿಸ್ ಹೆಡ್ (1), ಕ್ಯಾಮರಾನ್ ಗ್ರೀನ್ (21) ಮತ್ತು ಮ್ಯಾಕ್ಸ್‌ವೆಲ್ (9) ವಿಫಲರಾದರು. ಆದರೆ ಐರ್ಲೆಂಡ್ ತಂಡ ಕೊನೆಯ ಐದು ಓವರುಗಳಲ್ಲಿ 53 ರನ್ ಬಿಟ್ಟುಕೊಟ್ಟಿತು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 20 ಓವರುಗಳಲ್ಲಿ 6ಕ್ಕೆ 182 (ಜೋಶ್ ಇಂಗ್ಲಿಸ್ 37, ಮ್ಯಾಥ್ಯೂ ರೆನ್ಶಾ 37, ಮಾರ್ಕಸ್ ಸ್ಟೊಯಿನಿಸ್ 45; ಮಾರ್ಕ್ ಅಡೇರ್ 44ಕ್ಕೆ2); ಐರ್ಲೆಂಡ್: 16.5 ಓವರುಗಳಲ್ಲಿ 115 (ಲೋರ್ಕನ್ ಟಕರ್ 24, ಜಾರ್ಜ್ ಡಾಕ್ರೆಲ್ 41; ನೇಥನ್ ಎಲಿಸ್ 12ಕ್ಕೆ4, ಆ್ಯಡಂ ಜಂಪಾ 23ಕ್ಕೆ4). ಪಂದ್ಯದ ಆಟಗಾರ: ನೇಥನ್ ಎಲಿಸ್

ಟಿ20 ವಿಶ್ವಕಪ್: ಪಾಯಿಂಟ್ಸ್ ಪಟ್ಟಿ

	ತಂಡಗಳು	ಪಂದ್ಯಗಳು	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ಗುಂಪು ಎ						
1	ಪಾಕಿಸ್ತಾನ	2	2	0	4	0.932
2	ಭಾರತ	1	1	0	2	1.450
3	ನೆದರ್ಲೆಂಡ್ಸ್	2	1	1	2	0.356
4	ನಮೀಬಿಯಾ	1	0	1	0	-1.033
5	ಅಮೆರಿಕ	2	0	2	0	-1.525
ಗುಂಪು ಬಿ						
1	ಆಸ್ಟ್ರೇಲಿಯಾ	1	1	0	2	3.350
2	ಜಿಂಬಾಬ್ವೆ	1	1	1	2	2.702
3	ಶ್ರೀಲಂಕಾ	1	1	0	2	1.000
4	ಐರ್ಲೆಂಡ್	2	0	2	0	-2.175
5	ಒಮಾನ್	1	0	1	0	-2.702
ಗುಂಪು ಸಿ						
1	ವೆಸ್ಟ್ ಇಂಡೀಸ್	2	2	0	4	1.424
2	ಸ್ಕಾಟ್ಲೆಂಡ್	2	1	1	2	0.950
3	ಇಂಗ್ಲೆಂಡ್	2	1	1	2	-0.426
4	ನೇಪಾಳ	1	0	1	0	-0.200
5	ಇಟಲಿ	1	0	1	0	-3.650
ಗುಂಪು ಡಿ						
1	ನ್ಯೂಜಿಲೆಂಡ್	2	2	0	4	1.919
2	ದಕ್ಷಿಣ ಆಫ್ರಿಕಾ	2	2	0	4	1.425
3	ಅಫ್ಗಾನಿಸ್ತಾನ	2	0	2	0	-0.555
4	ಯುಎಇ	1	0	1	0	-2.763
5	ಕೆನಡಾ	1	0	1	0	-2.850

ಶೆರ್ಫೇನ್ ಆಟಕ್ಕೆ ಒಲಿದ ಜಯ

ಮುಂಬೈ (ಪಿಟಿಐ): ಶೆರ್ಫೇನ್ ರುದರ್‌ಫೋರ್ಡ್ ಅವರ ಆಕ್ರಮಣಕಾರಿ ಅರ್ಧಶತಕದ ಬಳಿಕ ಗುಡಕೇಶ್ ಮೋತಿ ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ನೆರವಿನಿಂದ ವೆಸ್ಟ್ ಇಂಡೀಸ್ ತಂಡವು ಟಿ20 ವಿಶ್ವಕಪ್ 'ಸಿ' ಗುಂಪಿನ ಪಂದ್ಯದಲ್ಲಿ ಇಂಗ್ಲೆಂಡ್ ತಂಡವನ್ನು 30 ರನ್‌ಗಳಿಂದ ಮಣಿಸಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಶೆರ್ಫೇನ್ (ಔಟಾಗದೇ 76;42ಎ, 4x2, 6x7) ಅವರ ಬ್ಯಾಟಿಂಗ್ ಬಲದಿಂದ ವಿಂಡೀಸ್ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 196 ರನ್ ಗಳಿಸಿತು. ಈ ಗುರಿಯನ್ನು ಬೆನ್ನಟ್ಟಿದ ಇಂಗ್ಲೆಂಡ್ 19 ಓವರ್‌ಗಳಲ್ಲಿ 166 ರನ್‌ಗಳಿಗೆ ಹೋರಾಟ ಮುಗಿಸಿತು. ಇದರೊಂದಿಗೆ ವಿಂಡೀಸ್ ಸತತ ಎರಡನೇ ಗೆಲುವು ದಾಖಲಿಸಿತು.

ಸ್ಪಿನ್ನರ್‌ಗಳಾದ ಗುಡಕೇಶ್ (33ಕ್ಕೆ 3) ಮತ್ತು ರೋಸ್ಟನ್ ಚೇಸ್ (29ಕ್ಕೆ 2) ಇಂಗ್ಲೆಂಡ್ ತಂಡವನ್ನು ಕಟ್ಟಿ ಹಾಕಲು ನೆರವಾದರು. ಫಿಲ್ ಸಾಲ್ಟ್ (30), ಜೇಕಬ್ ಬೆಥೆಲ್ (33) ಮತ್ತು ಸ್ಯಾಮ್ ಕರನ್ (ಔಟಾಗದೆ 43) ಹೊರತುಪಡಿಸಿ ಉಳಿದ ಬ್ಯಾಟರ್‌ಗಳು ಕ್ರೀಸ್‌ನಲ್ಲಿ ಹೆಚ್ಚು ಹೊತ್ತು ನಿಲ್ಲಲಿಲ್ಲ.

ಇದಕ್ಕೂ ಮೊದಲು ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ವಿಂಡೀಸ್ ತಂಡದ ಆರಂಭ ಉತ್ತಮವಾಗಿರಲಿಲ್ಲ. ಎಂಟು ರನ್‌ಗಳಾಗುವಷ್ಟರಲ್ಲಿ ಆರಂಭ ಆಟಗಾರರಾದ ಶಾಯ್ ಹೋಪ್ (0) ಮತ್ತು ಬ್ರ್ಯಾಂಡನ್ ಕಿಂಗ್ (1) ಪೆವಿಲಿಯನ್ ಸೇರಿದ್ದರು. ಮೊದಲ 10 ಓವರುಗಳ ನಂತರ 4 ವಿಕೆಟ್‌ಗೆ 79 ರನ್ ಗಳಿಸಿತ್ತು.

ಈ ಹಂತದಲ್ಲಿ ಎಡಗೈ ಬ್ಯಾಟರ್ ಶೆರ್ಫೇನ್ ನೆರವಿಗೆ ಬಂದು ತಂಡಕ್ಕೆ ಆಸರೆಯಾದರು. ಐದನೇ ವಿಕೆಟ್‌ಗೆ ರೋವ್ಮನ್ ಪಾವೆಲ್ (14) ಜೊತೆ 51 ರನ್ ಸೇರಿಸಿದರು. ನಂತರ, ಮಾಜಿ ನಾಯಕ ಜೇಸನ್ ಹೋಲ್ಡರ್ (33;17ಎ) ಜೊತೆ ಕೇವಲ 32 ಎಸೆತಗಳಲ್ಲಿ 61 ರನ್ ಸೇರಿಸಿ ತಂಡದ ಮೊತ್ತವನ್ನು 200ರ ಸನಿಹ ತಲುಪಿಸಿದರು. ಕೊನೆಯ 10 ಓವರುಗಳಲ್ಲಿ 117 ರನ್‌ಗಳು ಹರಿದುಬಂದವು. ಎರಡು ವಿಕೆಟ್ ಪಡೆದ ಸ್ಪಿನ್ನರ್ ಅದಿಲ್ ರಶೀದ್ ಟಿ20 ಮಾದರಿಯಲ್ಲಿ ಒಟ್ಟು 400 ವಿಕೆಟ್ ಪೂರೈಸಿದರು.

ಶೆರ್ಫೇನ್ ರುದರ್‌ಫೋರ್ಡ್ ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸ್ಕೋರು: ವೆಸ್ಟ್ ಇಂಡೀಸ್: 20 ಓವರುಗಳಲ್ಲಿ 6ಕ್ಕೆ 196 (ಹೆಟ್ಮೆಯರ್ 23, ರೋಸ್ಟನ್ ಚೇಸ್ 34, ಶೆರ್ಫೇನ್ ರುದರ್‌ಫೋರ್ಡ್ ಔಟಾಗದೇ 76, ಜೇಸನ್ ಹೋಲ್ಡರ್ 33; ಜೇಮಿ ಓವರ್ಟನ್ 33ಕ್ಕೆ2, ಅದಿಲ್ ರಶೀದ್ 16ಕ್ಕೆ2); ಇಂಗ್ಲೆಂಡ್: 19 ಓವರುಗಳಲ್ಲಿ 166 (ಫಿಲ್ ಸಾಲ್ಟ್ 30, ಜೇಕಬ್ ಬೆಥೆಲ್ 33, ಸ್ಯಾಮ್ ಕರನ್ ಔಟಾಗದೇ 43; ರೋಸ್ಟನ್ ಚೇಸ್ 29ಕ್ಕೆ2, ಗುಡಕೇಶ್ ಮೋತಿ 33ಕ್ಕೆ3). ಪಂದ್ಯದ ಆಟಗಾರ: ಶೆರ್ಫೇನ್ ರುದರ್‌ಫೋರ್ಡ್

ಗಾಯಕ ಉದಿತ್ ವಿರುದ್ಧ ಮೊದಲ ಪತ್ನಿ ದೂರು

ಪಟ್ನಾ: ಗಾಯಕ ಉದಿತ್ ನಾರಾಯಣ್ ಅವರ ಮೊದಲ ಪತ್ನಿ ರಂಜನಾ ಝಾ ಅವರು, ಉದಿತ್ ವಿರುದ್ಧ ಮತ್ತೊಂದು ಪ್ರಕರಣ ದಾಖಲಿಸಿದ್ದಾರೆ.

ರಂಜನಾ ಝಾ ವಾಸವಿರುವ ಬಿಹಾರದ ಸುಪಾಲ್ ಪ್ರದೇಶದ ಮಹಿಳಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 'ನನ್ನ ಒಪ್ಪಿಗೆ ಇಲ್ಲದೆ ನವದೆಹಲಿಯ ಆಸ್ಪತ್ರೆಯೊಂದರಲ್ಲಿ ಶಸ್ತ್ರಚಿಕಿತ್ಸೆ ನಡೆಸಿ ಗರ್ಭಕೋಶವನ್ನು ತೆಗೆದುಹಾಕಲಾಗಿದೆ' ಎಂದು ಅವರು ಆರೋಪಿಸಿದ್ದಾರೆ.

ಉದಿತ್ ನಾರಾಯಣ್ ರಂಜನಾ ಅವರನ್ನು 1984ರಲ್ಲಿ ವಿವಾಹವಾಗಿದ್ದರು. ದೀಪಾ ನಾರಾಯಣನ್ ಅವರನ್ನು ಮದುವೆಯಾಗಿರುವ ಉದಿತ್ ಸದ್ಯ ಅವರೊಂದಿಗೆ ನೆಲಸಿದ್ದಾರೆ ಎಂದು ಮಾಧ್ಯಮ ವರದಿ ತಿಳಿಸಿದೆ.

ಕಾಂಗ್ರೆಸ್ ಸಂಸದ ಗೌರವ್ ಗೊಗೊಯ್‌ಗೆ ಪಾಕ್ ನಂಟು ಆರೋಪ

ಕೇಂದ್ರಕ್ಕೆ ಶೀಘ್ರ ಎಸ್‌ಐಟಿ ವರದಿ: ಹಿಮಂತ ಬಿಸ್ವ

ಗುವಾಹಟಿ (ಪಿಟಿಐ): 'ಕಾಂಗ್ರೆಸ್ ಸಂಸದ ಗೌರವ್ ಗೊಗೊಯ್ ಅವರ ವಿರುದ್ಧದ ಪಾಕಿಸ್ತಾನ ನಂಟಿನ ಆರೋಪಕ್ಕೆ ಸಂಬಂಧಿಸಿದ ವಿಶೇಷ ತನಿಖಾ ತಂಡದ (ಎಸ್‌ಐಟಿ) ವರದಿಯನ್ನು ಹೆಚ್ಚಿನ ತನಿಖೆಗಾಗಿ ಕೇಂದ್ರಕ್ಕೆ ಕಳುಹಿಸಲಾಗುವುದು' ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಬುಧವಾರ ಹೇಳಿದ್ದಾರೆ.

ಪಾಕಿಸ್ತಾನದ ರಾವಲ್ಪಿಂಡಿಗೆ ಗೊಗೊಯ್ ಭೇಟಿ ನೀಡಿದ್ದನ್ನು ಸಹ ಎಸ್‌ಐಟಿ ವರದಿಯಲ್ಲಿ ಸೇರ್ಪಡೆ ಮಾಡಲಾಗುವುದು ಎಂದು ಅವರು ತಿಳಿಸಿದ್ದಾರೆ.

'ಪಾಕ್ ಭೇಟಿ ಕುರಿತಂತೆ ಇತ್ತೀಚೆಗಷ್ಟೇ ನಡೆದ ಪತ್ರಿಕಾಗೋಷ್ಠಿಯಲ್ಲಿ ಗೊಗೊಯ್ ಮಾತನಾಡಿದ್ದರು. ಈ ವೇಳೆ ಗೊಗೊಯ್ ಅವರ ಪತ್ನಿ ಪಾಕಿಸ್ತಾನದಿಂದ ನೇರವಾಗಿ ವೇತನ ಪಡೆಯುತ್ತಿದ್ದರು ಮತ್ತು ವೀಸಾದಲ್ಲಿ ರಾವಲ್ಪಿಂಡಿ ಭೇಟಿಗೆ ಅವಕಾಶ ಇಲ್ಲದಿದ್ದರೂ ಪಾಕ್ ಸೇನಾ ಕೇಂದ್ರ ಕಚೇರಿ ಇರುವ ರಾವಲ್ಪಿಂಡಿಗೆ ಗೊಗೊಯ್ ಭೇಟಿ ನೀಡಿದ್ದರು ಎಂಬ ವಿಚಾರ ಬಹಿರಂಗಗೊಂಡಿದೆ. ಈ ಮಾಹಿತಿಯನ್ನು ವರದಿಯಲ್ಲಿ ಸೇರಿಸಲಾಗುವುದು' ಎಂದೂ ಶರ್ಮಾ ತಿಳಿಸಿದ್ದಾರೆ.

ಎಲ್ಲಾ ಮಾಹಿತಿಗಳ ಸೇರ್ಪಡೆ ಬಳಿಕ ಶೀಘ್ರ ವರದಿಯನ್ನು ದೆಹಲಿಗೆ ಕಳುಹಿಸಲಾಗುವುದು ಎಂದೂ ಮಾಹಿತಿ ನೀಡಿದ್ದಾರೆ.



ಹಿಮಂತ ಬಿಸ್ವ ಶರ್ಮಾ

ಪ್ರಕರಣವನ್ನು ಕೇಂದ್ರ ಹೇಗೆ ಪರಿಗಣಿಸಲಿದೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಶರ್ಮಾ, 'ಪಾಕಿಸ್ತಾನದ ವಿಚಾರ ಆಗಿರುವುದರಿಂದ ಯಾರೂ ಪ್ರಕರಣವನ್ನು ಸುಮ್ಮನೆ ಬಿಟ್ಟುಬಿಡುವುದಿಲ್ಲ. ಅಲ್ಲದೇ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಾತನಾಡುವ ವ್ಯಕ್ತಿಯಲ್ಲ, ಕೆಲಸವನ್ನು ಮಾಡಿ ತೋರಿಸುವ ವ್ಯಕ್ತಿ. ಅವರು ಮೌನವಾಗಿದ್ದಾರೆ ಎಂದರೆ ಅದು ಬಿರುಗಾಳಿ ಬೀಸುವ ಸೂಚನೆ' ಎಂದೂ ಶರ್ಮಾ ಹೇಳಿದ್ದಾರೆ.

ಚುನಾವಣೆ ಗಿಮಿಕ್ ಅಲ್ಲ: ಗೊಗೊಯ್ ಅವರ ಪಾಕಿಸ್ತಾನ ನಂಟಿನ ವಿಚಾರಕ್ಕೂ ಮುಂಬರಲಿರುವ ವಿಧಾನಸಭಾ ಚುನಾವಣೆಗೂ ಯಾವ ಸಂಬಂಧವೂ ಇಲ್ಲ ಎಂದು ಶರ್ಮಾ ಪ್ರತಿಪಾದಿಸಿದ್ದಾರೆ.

'ಚುನಾವಣೆ ಗೆಲ್ಲಲು ಈ ವಿಚಾರದ ಅಗತ್ಯ ಇಲ್ಲ. ನಾವು ಈಗಾಗಲೇ ಬಹಳ ಮುಂದೆ ಇದ್ದೇವೆ. ಈ ಹೋರಾಟವೇನಿದ್ದರೂ ಅಸ್ಸಾಂಗೆ ಪಾಕಿಸ್ತಾನ ಹೆಜ್ಜೆ ಇಡದಂತೆ ತಡೆಯುವ ಪ್ರಯತ್ನವಷ್ಟೇ. ರಾಹುಲ್ ಗಾಂಧಿ ಎಂಥವರನ್ನು ಬೆಂಬಲಿಸುತ್ತಾರೆ ಎಂಬುದನ್ನು ನಾವು ಬಯಲಿಗೆಳೆದಿದ್ದೇವೆ' ಎಂದೂ ಶರ್ಮಾ ಹೇಳಿದ್ದಾರೆ.

ಜತೆಗೆ 'ಕಾಂಗ್ರೆಸ್‌ನ ಕೆಲವು ಸದಸ್ಯರಿಗೂ ಗೊಗೊಯ್ ಅವರ ಪಾಕ್ ನಂಟಿನ ವಿಚಾರದ ಬಗ್ಗೆ ಅಸಮಾಧಾನವಿದೆ. ಪಾಕಿಸ್ತಾನವನ್ನು ಸೋಲಿಸಲು ರಾಜೀವ ಭವನ (ರಾಜ್ಯ ಕಾಂಗ್ರೆಸ್ ಕೇಂದ್ರ ಕಚೇರಿ) ಕೂಡ ನಮ್ಮೊಂದಿಗೆ ಕೆಲಸ ಮಾಡುತ್ತಿದೆ' ಎಂದೂ ಹೇಳಿದ್ದಾರೆ.

₹2 ಕೋಟಿ ಕೇಳಿದ್ದ ಮಹಿಳೆ, ₹25 ಲಕ್ಷಕ್ಕೆ ಇಳಿಕೆ

ಕೂದಲಿಗೆ ಕತ್ತರಿ: ಪರಿಹಾರ ಕಡಿತ

ನವದೆಹಲಿ (ಪಿಟಿಐ): 'ನಾನು ಮನವಿ ಮಾಡಿದ್ದಕ್ಕಿಂತ ಹೆಚ್ಚಿಗೆ ಕೂದಲು ಕತ್ತರಿಸಿದ್ದರಿಂದ ನನ್ನ ವೃತ್ತಿಗೆ ತೊಂದರೆಯಾಗಿ ನನಗೆ ನಷ್ಟವಾಗಿದೆ. ಆದ್ದರಿಂದ ನನಗೆ ₹2 ಕೋಟಿ ಪರಿಹಾರ ಕೊಡಿಸಿ' ಎಂಬ ಮಹಿಳೆಯ ಬೇಡಿಕೆಯನ್ನು ತಿರಸ್ಕರಿಸಿರುವ ಸುಪ್ರೀಂ ಕೋರ್ಟ್, 'ಇಷ್ಟೊಂದು ದೊಡ್ಡ ಮೊತ್ತ ಆಗ್ರಹಿಸುತ್ತಿರುವುದಕ್ಕೆ ಆಧಾರವಿಲ್ಲ' ಎಂದಿದೆ.

ನ್ಯಾಯಮೂರ್ತಿಗಳಾದ ರಾಜೇಶ್ ಬಿಂದಾಲ್ ಮತ್ತು ಮನಮೋಹನ್ ಅವರ ಪೀಠವು ಪರಿಹಾರ ಮೊತ್ತವನ್ನು ₹25 ಲಕ್ಷಕ್ಕೆ ಇಳಿಕೆ ಮಾಡಿದೆ. 'ದೂರುದಾರರು ಮನಸ್ಸಿಗೆ ಬಂದಂತೆ ಪರಿಹಾರ ರೂಪದಲ್ಲಿ ಕೋಟ್ಯಂತರ ರೂಪಾಯಿ ಕೇಳಬಾರದು. ಕೋಟಿಗಟ್ಟಲೆ ಪರಿಹಾರ ಕೇಳುತ್ತಿದ್ದೀರಿ ಎಂದಾದರೆ ಅದಕ್ಕೆ ತಕ್ಕ ದಾಖಲೆಗಳು, ಸಾಕ್ಷ್ಯಗಳು ಇರಬೇಕು' ಎಂದು ಪೀಠ ಹೇಳಿದೆ. ಫೆ.6ರಂದು ಪೀಠವು ಈ ತೀರ್ಪು ನೀಡಿದೆ.



'ದೊಡ್ಡ ಮೊತ್ತದ ಪರಿಹಾರಕ್ಕೆ ಬೇಡಿಕೆ ಇಡಬೇಕಿದ್ದರೆ, ಇಷ್ಟು ದೊಡ್ಡ ಮೊತ್ತದ ಪರಿಹಾರ ಯಾಕೆ ಬೇಕು ಎಂಬುದನ್ನು ಸಾಬೀತು ಮಾಡಬೇಕು. ಊಹೆಗಳ ಮೇಲೆ, ದಾಖಲೆಗಳ ಛಾಯಾಚಿತ್ರಗಳನ್ನು ಮಾತ್ರವೇ ಇಟ್ಟುಕೊಂಡು ಪರಿಹಾರ ಕೇಳಬಾರದು. ತೀರ್ಪು ನೀಡುವಲ್ಲಿ ರಾಷ್ಟ್ರೀಯ ಗ್ರಾಹಕ ವಿವಾದ ಪರಿಹಾರ ಆಯೋಗ ಎಡವಿದೆ' ಎಂದು ಪೀಠ ಅಭಿಪ್ರಾಯಪಟ್ಟಿದೆ.

ಪ್ರಕರಣವೇನು?

ಆಶ್ನಾ ರಾಯ್ ಎಂಬ ಮ್ಯಾನೇಜ್ಮೆಂಟ್ ವೃತ್ತಿಯಲ್ಲಿರುವವರು 2018ರಲ್ಲಿ ದೆಹಲಿಯಲ್ಲಿರುವ ಐಟಿಸಿ ಮೌರ್ಯ ಹೋಟೆಲ್‌ಗೆ ಕೂದಲು ಕತ್ತರಿಸಿಕೊಳ್ಳಲು ತೆರಳಿದ್ದರು.

'ನಾನು ಸೂಚಿಸಿದ್ದಕ್ಕಿಂತ ಹೆಚ್ಚಿಗೆ ಕೂದಲು ಕತ್ತರಿಸಲಾಗಿದೆ. ಇದರಿಂದ ನನಗೆ ಮಾನಸಿಕ ಹಿಂಸೆಯಾಗಿದೆ. ಮಾಡೆಲಿಂಗ್ ಕೆಲಸಗಳು ನಿಂತುಹೋಗಿದ್ದರಿಂದ ನನಗೆ ಬಹಳ ನಷ್ಟವಾಗಿದೆ. ಭವಿಷ್ಯದ ನನ್ನ ವೃತ್ತಿ ಅವಕಾಶಗಳಿಗೆ ತೊಂದರೆಯಾಗಿದೆ' ಎಂದು ಆಶ್ನಾ ಅವರು ರಾಷ್ಟ್ರೀಯ ಗ್ರಾಹಕ ವಿವಾದ ಪರಿಹಾರ ಆಯೋಗಕ್ಕೆ ದೂರು ಸಲ್ಲಿಕೆ ಮಾಡಿದ್ದರು.

₹2 ಕೋಟಿ ಪರಿಹಾರ ನೀಡುವಂತೆ ತೀರ್ಪು ನೀಡಿತ್ತು. ಇದರ ವಿರುದ್ಧ ಐಟಿಸಿ ಕಂಪನಿಯು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು.

ಅಸ್ಸಾಂ ಸಿ.ಎಂ ವಿರುದ್ಧ ಅರ್ಜಿ: ವಿಚಾರಣೆಗೆ ಅಸ್ತು

ನವದೆಹಲಿ (ಪಿಟಿಐ): ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಹೊಸದಾಗಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ವಿಚಾರಣೆಗೆ ನಿಗದಿಪಡಿಸಲು ಸುಪ್ರೀಂ ಕೋರ್ಟ್ ಬುಧವಾರ ಸಮ್ಮತಿಸಿದೆ.

ಶರ್ಮಾ ಅವರು ಮುಸ್ಲಿಂ ಸಮುದಾಯ ಗುರಿಯಾಗಿಸಿ ದ್ವೇಷ ಭಾಷಣಗಳನ್ನು ಮಾಡಿದ್ದಾರೆ ಎಂದು ಆರೋಪಿಸಿ ಮಾಜಿ ಪ್ರಾಧ್ಯಾಪಕರಾದ ಹಿರೇನ್ ಗೊಹೈನ್, ಅಸ್ಸಾಂನ ಮಾಜಿ ಡಿಜಿಪಿ ಹರೇಕೃಷ್ಣ ದೇಕಾ, ಹಿರಿಯ ಪತ್ರಕರ್ತರಾದ ಪರೇಶ್ ಚಂದ್ರ ಹಾಗೂ ಹಿರಿಯ ವಕೀಲರಾದ ಶಾಂತನು ಬೋರ್‌ಠಾಕೂರ್ ಈ ಅರ್ಜಿಗಳನ್ನು ಸಲ್ಲಿಸಿದ್ದಾರೆ.

ಶರ್ಮಾ ಅವರು ರೈಫಲ್ ಹಿಡಿದು ಅಲ್ಪಸಂಖ್ಯಾತ ಸಮುದಾಯದವನ್ನು ಬಿಂಬಿಸುವ ಇಬ್ಬರು ವ್ಯಕ್ತಿಗಳ ಮೇಲೆ ಸಾಂಕೇತಿಕವಾಗಿ ಗುಂಡು ಹಾರಿಸುತ್ತಿರುವ ದೃಶ್ಯವನ್ನು ಒಳಗೊಂಡ ವಿಡಿಯೊ ಬಗ್ಗೆ ಇತ್ತೀಚೆಗೆ ಭಾರಿ ಆಕ್ಷೇಪವೂ ವ್ಯಕ್ತವಾಗಿತ್ತು.

ಬಾಬರಿ ಮಾದರಿ ಮಸೀದಿ ನಿರ್ಮಾಣ ಆರಂಭ

ರೆಜಿನಗರ (ಪಿಟಿಐ): ಅಯೋಧ್ಯೆಯ ಬಾಬರಿ ಮಸೀದಿ ಮಾದರಿಯಲ್ಲಿ ಪಶ್ಚಿಮ ಬಂಗಾಳದ ಮುರ್ಷಿದಾಬಾದ್ ಜಿಲ್ಲೆಯಲ್ಲಿ ಮಸೀದಿ ನಿರ್ಮಾಣ ಕಾರ್ಯಕ್ಕೆ ಟಿಎಂಸಿಯಿಂದ ಅಮಾನತುಗೊಂಡಿರುವ ಶಾಸಕ ಹುಮಾಯೂನ್ ಕಬೀರ್ ಬುಧವಾರ ಚಾಲನೆ ನೀಡಿದರು.

ಕಬೀರ್ ಅವರು, ಇತ್ತೀಚೆಗೆ ಜನತಾ ಉನ್ನಯನ್ ಪಕ್ಷವನ್ನು (ಜೆಯುಪಿ) ಸ್ಥಾಪಿಸಿದ್ದಾರೆ. 'ಮುರ್ಷಿದಾಬಾದ್ ಜಿಲ್ಲೆಯ ಬೆಲ್ದಂಗದ ರೆಜಿನಗರದಲ್ಲಿ ಸುಮಾರು ₹ 50 ಕೋಟಿಯಿಂದ ₹ 55 ಕೋಟಿ ವೆಚ್ಚದಲ್ಲಿ ಮಸೀದಿ ನಿರ್ಮಾಣಗೊಳ್ಳಲಿದ್ದು, ಎರಡು ವರ್ಷಗಳಲ್ಲಿ ಅದರ ಕಾಮಗಾರಿ ಪೂರ್ಣಗೊಳ್ಳಲಿದೆ' ಎಂದು ಅವರು ಘೋಷಿಸಿದರು.

ಕಬೀರ್ ಅವರ ಅನೇಕ ಬೆಂಬಲಿಗರು ತಮ್ಮ ತಲೆಯ ಮೇಲೆ ಇಟ್ಟಿಗೆಗಳನ್ನು ಹೊತ್ತುಕೊಂಡು ಮಸೀದಿ ನಿರ್ಮಾಣ ಕಾರ್ಯಕ್ಕೆ ಸಾಥ್ ನೀಡಿದರು.

'ಮಸೀದಿ ನಿರ್ಮಾಣ ಕಾರ್ಯವನ್ನು ವಿರೋಧಿಸುವವರು ಪಕ್ಕಕ್ಕೆ ಸರಿಯಿರಿ. ಜನರಿಗೆ ತಮ್ಮದೇ ಆದ ಧರ್ಮಗಳನ್ನು ಆಚರಿಸಲು, ದೇಗುಲ, ಚರ್ಚ್ ಅಥವಾ ಬಯಸಿದ ಯಾವುದೇ ಕಟ್ಟಡಗಳನ್ನು ನಿರ್ಮಿಸಲು ಸ್ವತಂತ್ರರಿದ್ದಾರೆ. ಇಸ್ಲಾಂ ಹೆಸರಿನಲ್ಲಿ ನಾನು ಯಾರನ್ನೂ ವಿರೋಧಿಸುವುದಿಲ್ಲ. ಅಲ್ಲಾಹನನ್ನು ಮೆಚ್ಚಿಸಲು ನಾನು ಪ್ರಯತ್ನಿಸುತ್ತೇನೆ' ಎಂದು ಅವರು ಹೇಳಿದರು.

'ಈ ಮಸೀದಿ ನಿರ್ಮಾಣ ಕಾರ್ಯವನ್ನು ತಡೆಯಲು ಭೂಮಿ ಮೇಲಿನ ಯಾವುದೇ ಶಕ್ತಿಗಿಲ್ಲ. ದೇವರ ದಯೆಯಿಂದ 2 ವರ್ಷಗಳಲ್ಲಿ ಇದನ್ನು ಪೂರ್ಣಗೊಳಿಸಲಾಗುವುದು' ಎಂದು ತಿಳಿಸಿದರು.

ಉಸ್ಮಾನ್ ತಾರಿಕ್ ಬೆಂಬಲಕ್ಕೆ ಅಶ್ವಿನ್

ಕೊಲಂಬೊ (ಪಿಟಿಐ): ಅಮೆರಿಕ ವಿರುದ್ಧದ ಟಿ20 ವಿಶ್ವಕಪ್ ಪಂದ್ಯದಲ್ಲಿ ಮೂರು ವಿಕೆಟ್ ಕಬಳಿಸಿ ಗಮನ ಸೆಳೆದ ಪಾಕಿಸ್ತಾನದ ಆಫ್ ಸ್ಪಿನ್ನರ್ ಉಸ್ಮಾನ್ ತಾರಿಕ್ ಅವರ ಬೌಲಿಂಗ್ ಶೈಲಿಯ ಬಗ್ಗೆ ಚರ್ಚೆ ಆರಂಭವಾಗಿದೆ.

ತಾರಿಕ್ ಅವರು ನಾಲ್ಕು ಟಿ20 ಪಂದ್ಯಗಳನ್ನು ಆಡಿ 11 ವಿಕೆಟ್‌ಗಳನ್ನು ಕಬಳಿಸಿದ್ದಾರೆ. ಈಗ ಅವರ ವಿಭಿನ್ನ ಬೌಲಿಂಗ್ ಶೈಲಿಯ ಬಗ್ಗೆ ಜಾಲತಾಣಗಳಲ್ಲಿ ಟೀಕೆಗಳು ವ್ಯಕ್ತವಾಗಿವೆ. ಆದರೆ, ಭಾರತದ ಸ್ಪಿನ್ ದಿಗ್ಗಜ ಆರ್. ಅಶ್ವಿನ್ ಅವರು ತಾರಿಕ್ ಬೆಂಬಲಕ್ಕೆ ನಿಂತಿದ್ದಾರೆ.

'ನಾನು ಒಂದು ವಿಷಯವನ್ನು ಸ್ಪಷ್ಟಪಡಿಸಲು ಬಯಸುತ್ತೇನೆ; ತಾರಿಕ್ ಅವರ ಬೌಲಿಂಗ್ ಶೈಲಿ ಕಾನೂನುಬದ್ಧವಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಐಸಿಸಿ ಬೌಲಿಂಗ್ ಶೈಲಿ ಪರೀಕ್ಷಾ ಕೇಂದ್ರದಲ್ಲಿ ಮಾತ್ರ ಪರೀಕ್ಷಿಸಬಹುದು. ಕ್ರಿಕೆಟ್‌ನಲ್ಲಿ 15 ಡಿಗ್ರಿ ನಿಯಮವಿದ್ದು, ಬೌಲರ್ ತನ್ನ ಮೊಣಕೈಯನ್ನು ಅಷ್ಟು ಮಾತ್ರ ಬಾಗಿಸಬೇಕು. ಆ ನಿಮಯ ಉಲ್ಲಂಘಿಸಿದ್ದಾನೆಯೇ ಎಂಬುದನ್ನು ಫೀಲ್ಡ್ ಅಂಪೈರ್ ನಿರ್ಣಯಿಸುವುದು ಅಸಾಧ್ಯ' ಎಂದು ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ.

ಬೆಲ್ಜಿಯಂ ಜಯಭೇರಿ: ಭಾರತಕ್ಕೆ ನಿರಾಸೆ

ಎಫ್‌ಐಎಚ್ ಪುರುಷರ ಹಾಕಿ ಪ್ರೊ ಲೀಗ್ ಪ್ರವಾಸಿ ತಂಡಕ್ಕೆ 3–1 ಅಂತರದ ಗೆಲುವು

ಗೆಲುವಿನ ಸಂಭ್ರಮದಲ್ಲಿ ಬೆಲ್ಜಿಯಂ ತಂಡದ ಆಟಗಾರರು ಎಕ್ಸ್ ಚಿತ್ರ

ರೂರ್ಕೆಲಾ (ಪಿಟಿಐ): ಅಂತಿಮ ಕ್ವಾರ್ಟರ್ ಅವಧಿಯಲ್ಲಿ ಎರಡು ಗೋಲು ಗಳಿಸುವಲ್ಲಿ ಯಶಸ್ವಿಯಾದ ಬೆಲ್ಜಿಯಂ ತಂಡವು ಬುಧವಾರ ನಡೆದ ಎಫ್‌ಐಎಚ್ ಪ್ರೊ ಲೀಗ್ ಪಂದ್ಯದಲ್ಲಿ 3–1 ಗೋಲುಗಳಿಂದ ಆತಿಥೇಯ ಭಾರತ ತಂಡವನ್ನು ಸೋಲಿಸಿತು. ಇದು ಈ ಋತುವಿನಲ್ಲಿ ಭಾರತಕ್ಕೆ ಮೊದಲ ಪಂದ್ಯವಾಗಿದ್ದು ಉತ್ತಮ ಆರಂಭ ಪಡೆಯುವಲ್ಲಿ ವಿಫಲವಾಯಿತು.

ಬಿರ್ಸಾ ಮುಂಡಾ ಹಾಕಿ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ನೆಲ್ಸನ್ ಒನಾನ (23ನೇ ನಿಮಿಷ), ಥಾಮಸ್ ಕ್ರೋಲ್ಸ್ (53ನೇ ನಿಮಿಷ) ಮತ್ತು ಅರ್ನೊ ವಾನ್ ಡೆಸೆಲ್ (57ನೇ ನಿಮಿಷ) ಅವರು ಪ್ರಬಲ ಬೆಲ್ಜಿಯಂ ಪರ ಗೋಲು ಗಳಿಸಿದರು. ಭಾರತದ ಪರ ಶಿಲಾನಂದ ಲಾಕ್ರಾ ಅವರು 29ನೇ ನಿಮಿಷ ಏಕೈಕ ಗೋಲು ಗಳಿಸಿದರು.

ಉಭಯ ತಂಡಗಳು ವಿರಾಮದ ವೇಳೆಗೆ 1–1 ಸಮ ಮಾಡಿಕೊಂಡಿದ್ದವು. ಮೂರನೇ ಕ್ವಾರ್ಟರ್‌ವರೆಗೂ ಇದೇ ಸ್ಕೋರ್ ಮುಂದುವರಿಯಿತು. ಆದರೆ ಬೆಲ್ಜಿಯಂ ಕೊನೆಯ 15 ನಿಮಿಷಗಳಲ್ಲಿ ಎರಡು ಗೋಲುಗಳನ್ನು ಗಳಿಸಿ ಮೇಲುಗೈ ಸಾಧಿಸಿತು.

ಬೆಲ್ಜಿಯಂ ತಂಡಕ್ಕೆ ನಾಲ್ಕನೇ ನಿಮಿಷದಲ್ಲಿ ಮೊದಲ ಪೆನಾಲ್ಟಿ ಕಾರ್ನರ್ ದೊರೆಯಿತು. ಆದರೆ ಅಲೆಕ್ಸಾಂಡರ್ ಹೆಂಡ್ರಿಕ್ಸ್ ಅವರ ಡ್ರ್ಯಾಗ್‌ಫ್ಲಿಕ್ ಅನ್ನು ವಿವೇಕ್ ಸಾಗರ್ ಪ್ರಸಾದ್ ಯಶಸ್ವಿಯಾಗಿ ತಡೆದರು. ನಾಲ್ಕು ನಿಮಿಷಗಳ ನಂತರ ಭಾರತಕ್ಕೂ ಪೆನಾಲ್ಟಿ ಕಾರ್ನರ್ ದೊರೆತರೂ ಪ್ರಯೋಜನವಾಗಲಿಲ್ಲ.

ಎರಡನೇ ಕ್ವಾರ್ಟರ್‌ನಲ್ಲಿ ಗೋಲಿಗೆ ಗಂಭೀರ ಯತ್ನಗಳು ನಡೆದವು. 23ನೇ ನಿಮಿಷ ಕ್ರೋಲ್ಸ್ ಚೆಂಡನ್ನು ನಿಯಂತ್ರಣಕ್ಕೆ ಪಡೆದು ಒನಾನಾ ಅವರಿಗೆ ಕಳುಹಿಸಿದರು. ಒನಾನಾ ಹೆಚ್ಚಿನ ಪ್ರಯಾಸವಿಲ್ಲದೇ ಗುರಿ ತಲುಪಿಸಿದರು. 29ನೇ ನಿಮಿಷ ಅಮಿತ್ ರೋಹಿದಾಸ್ ಎದುರಾಳಿ ಗೋಲಿನತ್ತ ಕಳುಹಿಸಿದ ಚೆಂಡು, ಬೆಲ್ಜಿಯಂ ತಂಡದ ರಕ್ಷಣೆ ಆಟಗಾರನೊಬ್ಬನಿಂದ ಹಿಂದಕ್ಕೆ ಬಂದಾಗ ಲಾಕ್ರಾ ತಮಗೆ ದೊರೆತ ಅವಕಾಶದಲ್ಲಿ ಎಡವಲಿಲ್ಲ. ಸ್ಕೋರ್ ಸಮನಾಯಿತು.

ಮೂರನೇ ಕ್ವಾರ್ಟರ್‌ನಲ್ಲಿ ಬೆಲ್ಜಿಯಂ ಮೇಲುಗೈ ಸಾಧಿಸಿದರೂ ಮುನ್ನಡೆ ಪಡೆಯಲಾಗಲಿಲ್ಲ. ಆದರೆ, ಕೊನೆಯ ಕ್ವಾರ್ಟರ್‌ನಲ್ಲಿ ಥಾಮಸ್ ಕ್ರೋಲ್ಸ್ ಮತ್ತು ಅರ್ನೊ ವಾನ್ ಡೆಸೆಲ್ ಅವರು ನಾಲ್ಕು ನಿಮಿಷಗಳ ಅಂತರದಲ್ಲಿ ಎರಡು ಗೋಲು ಬಾರಿಸಿ ಬೆಲ್ಜಿಯಂ ತಂಡಕ್ಕೆ ಗೆಲುವು ತಂದಿತ್ತರು.

ಭಾರತ ಗುರುವಾರ ಅರ್ಜೆಂಟೀನಾ ತಂಡವನ್ನು ಎದುರಿಸಲಿದೆ.

ಕ್ರಿಕೆಟ್‌ಗೆ ಅನುಮತಿ ಪರಿಶೀಲನೆ: ಪರಮೇಶ್ವರ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕ್ರಿಕೆಟ್ ಆಡಲು ಅನುಮತಿ ನೀಡುವ ಸಂಬಂಧ ಕೂಲಂಕಷವಾಗಿ ಪರಿಶೀಲನೆ ನಡೆಸಲಾಗುವುದು ಎಂದು ಗೃಹ ಸಚಿವ ಜಿ.ಪರಮೇಶ್ವರ ತಿಳಿಸಿದರು.

ನ್ಯಾಯಮೂರ್ತಿ ಮೈಕಲ್ ಕುನ್ಹಾ ಸಮಿತಿ ವರದಿಯ ಶಿಫಾರಸುಗಳು ಅನುಷ್ಠಾನ ಆಗಿದೆಯೇ ಎಂಬುದರ ಪರಿಶೀಲನೆ ನಡೆಸಲು ಸಮಿತಿಯನ್ನು ರಚಿಸಲಾಗಿದೆ. ಆ ಸಮಿತಿ ಈಗಾಗಲೇ ಪರಿಶೀಲನೆ ನಡೆಸಿದೆ ಎಂದು ಅವರು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

ಕುನ್ಹಾ ಸಮಿತಿ ವರದಿಯ ಶಿಫಾರಸು ಆಧರಿಸಿ ಏನೆಲ್ಲ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದನ್ನು ಪರಿಶೀಲಿಸಿ ಅನುಮತಿ ನೀಡುವ ಕುರಿತು ತೀರ್ಮಾನಿಸಲಾಗುವುದು. ಅಲ್ಪಾವಧಿಯ ಕ್ರಮಗಳ ಪರಿಶೀಲನೆಗೆ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರರಾವ್, ಬೆಂಗಳೂರು ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ನೇತೃತ್ವದ ಸಮಿತಿ ಈಗಾಗಲೇ ಎರಡು ಬಾರಿ ಕ್ರೀಡಾಂಗಣಕ್ಕೆ ಭೇಟಿ ನೀಡಿದೆ. ಅಲ್ಪಾವಧಿಯಲ್ಲಿ ಕೈಗೊಂಡಿರುವ ಕ್ರಮಗಳು ಸಮಾಧಾನ ಎನಿಸಿದರೆ ಅನುಮತಿ ನೀಡುತ್ತೇವೆ. ಇಲ್ಲವಾದರೆ ನೀಡುವುದಿಲ್ಲ ಎಂದು ಪರಮೇಶ್ವರ ಹೇಳಿದರು.

ಕಾಲ್ತುಳಿತ ದುರಂತಕ್ಕೆ ಸಂಬಂಧಿಸಿ ಪೊಲೀಸ್ ಅಧಿಕಾರಿಗಳನ್ನು ಬೇರೆ ಕಡೆಗೆ ವರ್ಗಾಯಿಸಲಾಗಿದೆ. ಈ ಬಗ್ಗೆ ತನಿಖೆ ನಡೆಯುತ್ತಿದೆ ಎಂದರು.

ಭಾರತದ ಪದಕಗಳ ಸಂಖ್ಯೆ 75ಕ್ಕೆ ಏರಿಕೆ

ಏಷ್ಯನ್ ಶೂಟಿಂಗ್: ಅನೀಶ್‌ಗೆ ಕಂಚು

ಕಂಚು ಗೆದ್ದ ಅನೀಶ್ ಭನ್ವಾಲಾ

ನವದೆಹಲಿ (ಪಿಟಿಐ): ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತ ಅನೀಶ್ ಭನ್ವಾಲಾ ಅವರು ಇಲ್ಲಿ ನಡೆಯುತ್ತಿರುವ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್ ಪುರುಷರ 25 ಮೀಟರ್ ರ‍್ಯಾಪಿಡ್ ಫೈರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದರು.

ಕಜಾಕಸ್ತಾನದ ಶೂಟರ್‌ಗಳು ಸ್ಪರ್ಧೆಯ ಎಂಟನೇ ದಿನವಾದ ಬುಧವಾರ ನಾಲ್ಕು ಚಿನ್ನದ ಪದಕಗಳೊಂದಿಗೆ ಪ್ರಾಬಲ್ಯ ಮೆರೆದರು. ಹರಿಯಾಣದ 23 ವರ್ಷದ ಅನೀಶ್ ಕೂಟದಲ್ಲಿ ಮೂರನೇ ಪದಕ ಗೆದ್ದರು.

ಜೂನಿಯರ್ ಪುರುಷರ 50 ಮೀ. ರೈಫಲ್ ಪ್ರೋನ್ (ಅಂಗಾತ ಸ್ಥಿತಿಯಲ್ಲಿ ಶೂಟ್ ಮಾಡುವ) ಸ್ಪರ್ಧೆಯಲ್ಲಿ ಅಡ್ರಿಯನ್ ಕರ್ಮಾಕರ್ ಚಿನ್ನದ ಸಾಧನೆ ಮೆರೆದರೆ, 25 ಮೀ. ಆರ್‌ಎಫ್‌ಪಿ ಸ್ಪರ್ಧೆಯಲ್ಲಿ ಆತಿಥೇಯ ತಂಡ ಸ್ವರ್ಣ ಗೆದ್ದಿತು. ಇನ್ನೂ ಎರಡು ದಿನಗಳ ಸ್ಪರ್ಧೆಗಳು ಬಾಕಿ ಇರುವಾಗ ಭಾರತ 75 ಪದಕಗಳೊಂದಿಗೆ ಅಗ್ರಸ್ಥಾನದಲ್ಲಿ ಮುಂದುವರಿದಿದೆ. ಅದರಲ್ಲಿ 41 ಚಿನ್ನ, 19 ಬೆಳ್ಳಿ ಮತ್ತು 15 ಕಂಚು ಒಳಗೊಂಡಿವೆ.

ಅರ್ಹತಾ ಸುತ್ತಿನಲ್ಲಿ ಏಳನೇ ಸ್ಥಾನ ಗಳಿಸಿದ್ದ ಅನೀಶ್ (23) ಫೈನಲ್‌ನಲ್ಲಿ ನಿಖರ ಗುರಿಯಿಟ್ಟು ಮೂರನೇ ಸ್ಥಾನ ಪಡೆದರು. ವಿಶ್ವಕಪ್ ಚಾಂಪಿಯನ್ ಜಪಾನಿನ ಡೈ ಯೋಶಿಯೋಕಾ (31) ವಿಶ್ವ ಮತ್ತು ಏಷ್ಯನ್ ದಾಖಲೆಯೊಂದಿಗೆ ಚಿನ್ನದ ಪದಕ ಗೆದ್ದರು. ಮಾಜಿ ಚಾಂಪಿಯನ್ ಕಜಾಕಸ್ತಾನದ ನಿಕಿತಾ ಚಿರ್ಯುಕಿನ್ (28) ಬೆಳ್ಳಿ ತಮ್ಮದಾಗಿಸಿಕೊಂಡರು.

ಇದಕ್ಕೂ ಮೊದಲು ಕಜಾಕಸ್ತಾನದ ರೈಫಲ್ ಶೂಟರ್ ಇಸ್ಲಾಂ ಸತ್ಪಾಯೆವ್ (622.5) ಅವರು 50 ಮೀ. ರೈಫಲ್ ಪ್ರೋನ್ ಪುರುಷರ ಸ್ಪರ್ಧೆಗಳಲ್ಲಿ ಅವಳಿ ಚಿನ್ನದ ಸಾಧನೆ ಮಾಡಿದರು. ಅವರು ವೈಯಕ್ತಿಕ ಮತ್ತು ತಂಡ ವಿಭಾಗದಲ್ಲಿ ಸ್ವರ್ಣ ಗೆದ್ದರು. ವೈಯಕ್ತಿಕ ಸ್ಪರ್ಧೆಯಲ್ಲಿ ಅವರದೇ ದೇಶದ ನಿಕಿತಾ ಶಕ್ರೋರಿನ್ (622.5), ಭಾರತದ ಬಾಬು ಸಿಂಗ್ ಪನ್ವಾರ್ (621.3) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು. ಪನ್ವಾರ್ ಅವರು ಸಮರವೀರ್ ಸಿಂಗ್ ಮತ್ತು ಸರ್ತಾಜ್ ಸಿಂಗ್ ತಿವಾನಾ ಅವರೊಂದಿಗೆ ತಂಡ ವಿಭಾಗದಲ್ಲಿ ಬೆಳ್ಳಿ ಗೆದ್ದರು.

ಬ್ಯಾಸ್ಕೆಟ್‌ಬಾಲ್: ಜೈನ್ ತಂಡಕ್ಕೆ ಎರಡನೇ ಗೆಲುವು

ಬೆಂಗಳೂರು: ಹರ್ಷಿತಾ ಮತ್ತು ಆದ್ಯಾ ಗೌಡ ಅವರ ಆಟದ ನೆರವಿನಿಂದ ಆತಿಥೇಯ ಜೈನ್ ವಿಶ್ವವಿದ್ಯಾಲಯ ತಂಡವು ಬುಧವಾರ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಮಹಿಳಾ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಎರಡನೇ ಗೆಲುವು ದಾಖಲಿಸಿತು.

ಕನಕಪುರ ರಸ್ತೆಯಲ್ಲಿರುವ ಜೈನ್ ವಿ.ವಿಯ ಗ್ಲೋಬಲ್ ಕ್ಯಾಂಪಸ್‌ನಲ್ಲಿ ನಡೆಯುತ್ತಿರುವ ಟೂರ್ನಿಯ ಎರಡನೇ ದಿನದ ಪಂದ್ಯದಲ್ಲಿ ಜೈನ್ ತಂಡವು 65–25ರಿಂದ ಕಲ್ಕತ್ತಾ ವಿಶ್ವವಿದ್ಯಾಲಯ ತಂಡವನ್ನು ಮಣಿಸಿತು. ಜೈನ್ ವಿ.ವಿಯ ಹರ್ಷಿತಾ 13 ಮತ್ತು ಆದ್ಯಾ 10 ಅಂಕ ಗಳಿಸಿದರು.

ಎರಡನೇ ದಿನ ಫಲಿತಾಂಶಗಳು: ಚಂಡೀಗಢ ವಿ.ವಿ 70–59ರಿಂದ ಡಿಎವಿ ಇಂದೋರ್ ವಿರುದ್ಧ; ಜೈನ್ ವಿ.ವಿ 65–25ರಿಂದ ಕಲ್ಕತ್ತಾ ವಿ.ವಿ ವಿರುದ್ಧ; ಎಸ್‌ಆರ್‌ಎಂ ವಿ.ವಿ ಚೆನ್ನೈ 58–15ರಿಂದ ಎಂಬಿಎಸ್‌ಪಿಎಸ್‌ಯು ಪಟಿಯಾಲ ವಿರುದ್ಧ; ಲವ್ಲಿ ಪ್ರೊಫೆಷನಲ್ ವಿ.ವಿ 63–58ರಿಂದ ಕ್ರೈಸ್ಟ್ ವಿ.ವಿ ವಿರುದ್ಧ; ಐಟಿಎಂ ವಿ.ವಿ 65–30 ಎಸ್‌ಜಿಜಿವಿವಿ ವಿ.ವಿ ವಿರುದ್ಧ; ಎಲ್‌ಎನ್‌ಐಪಿಇ ವಿ.ವಿ 68–28ರಿಂದ ಪಿಟಿ ರವಿಶಂಕರ್ ವಿ.ವಿ ವಿರುದ್ಧ ಗೆಲುವು ಸಾಧಿಸಿದವು.